
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


10 ಜೂನ್ 2015 ಪುಟ 20 ರೂ. 15/-



ಅಪ್ರತಿಮ ಗಣಿತಜ್ಞ ಜಾನ್‌ನ್ಯಾಶ್



ಲಾಟರಿ ಭೂತ!




ಮರ್ಮ ಗೊತ್ತಾ?



ಅಂಕೋಲ
ರಾಮಿ
ಹೆಗಡೆಗೆ
ಡಪಾಯಿ
ಬಲಿ


ಹುಬ್ಬಳ್ಳಿ-ಧಾರವಾಡ
ದಗಲ್ಬಾಜಿ ಕಾರ್ಪೋರೇಟರ್‌ಗಳ ಅಡ್ಡೆ





ಶರಣ್
ವಿಲನ್ ಕಾಮಿಡಿಯನ್ ಹೀರೋ

ಕೊಳಗೇರಿ ಅಲ್ಲ; ಶ್ರಮಿಕ ನಗರ - ಹೀಗೊಂದು ವಾ[…]



ಡಾ.ವಾಸು ಎಚ್.ವಿ.

ದಲಿತ ಚಳವಳಿಯಿಂದ ಎಷ್ಟರಮಟ್ಟಿಗೆ ಆರ್ಥಿಕ ಸ್ವಾವಲಂಬನೆಯನ್ನು ದಲಿತ ಸಮುದಾಯ ಪಡೆದುಕೊಂಡಿತೆಂಬುದು ಚರ್ಚಾರ್ಹ ಸಂಗತಿ. ಆದರೆ, ಚಳವಳಿ ಬಲಶಾಲಿಯಾಗಿದ್ದ ಎಲ್ಲೆಡೆ ದಮನಿತ ಸಮುದಾಯಗಳು ಸ್ವಾಭಿಮಾನವನ್ನು ಗಳಿಸಿಕೊಂಡಿದ್ದರಲ್ಲಿ ಯಾವುದೇ ಸಂದೇಹವಿಲ್ಲ. ಅದರ ಒಂದು ಅಭಿವ್ಯಕ್ತಿಯಾಗಿ ಅಸ್ಪೃಶ್ಯ ಸಮುದಾಯಗಳ ವ್ಯಕ್ತಿಗಳು ಹೆಸರಿನ ಜೊತೆ ಜಾತಿ ಹೆಸರನ್ನೂ ಸೇರಿಸಿಕೊಳ್ಳುವುದೂ ನಡೆಯಿತು. ಹೊಲೆಯಾರ್, ಮಾದರ್, ಮಾದಿಗ ಇತ್ಯಾದಿ. ಇದಕ್ಕೆ ಒಂದು ಸ್ಪಷ್ಟ ಕಾರಣವೂ ಇತ್ತು, 'ತಮ್ಮ ಜಾತಿಯ ಬಗ್ಗೆ ನಾಚಿಕೆ ಪಟ್ಟುಕೊಳ್ಳಬೇಕಾದ್ದು ಯಾರು ಇದುವರೆಗೂ ಇನ್ನೊಬ್ಬರನ್ನು ಶೋಷಿಸುತ್ತಾ ಇದ್ದಾರೋ ಅವರು. ಇನ್ನೊಬ್ಬರನ್ನು ವಂಚಿಸದ, ಈ ಸಮಾಜ ಕಟ್ಟಲು ಕೊಡುಗೆ ನೀಡಿದ ತಳಸಮುದಾಯಗಳು ತಮ್ಮ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬೇಕೇ ಹೊರತು ಕೀಳರಿಮೆ ಅನುಭವಿಸಲು ಕಾರಣಗಳಿಲ್ಲ' ಎಂಬುದೇ ಆ ಕಾರಣವಾಗಿತ್ತು.

ಜಾತಿಯ ಕಾರಣಕ್ಕಾಗಿ, ವರ್ಗದ ಕಾರಣಕ್ಕಾಗಿ ಇಡೀ ಸಮುದಾಯವನ್ನು ಕೀಳಾಗಿ ಕಾಣುವ 'ಮೇಲಿನವರ' ಮನಸ್ಥಿತಿಯಲ್ಲೇ ಒಂದು ಕೊಳಕಿದೆ. ಆದರೆ ಅದನ್ನು ತಮ್ಮ ಗರಿಮೆ ಎಂದು ಅವರು ಭಾವಿಸುತ್ತಿರುತ್ತಾರೆ. ಅಂಥವರ ಪ್ರಕಾರ ಅದು ಸಹಜ. ಶೋಷಿತ ಸಮುದಾಯಗಳ ಬದುಕಿನ ಶೈಲಿ, ಮಾತು, ಆಹಾರ ಪದ್ಧತಿ ಎಲ್ಲವೂ ಅವರುಗಳಿಗೆ ಆಡಿಕೊಳ್ಳುವ ಸರಕಾಗಿರುತ್ತದೆ. ಬಹಳ ದೊಡ್ಡವರೆನಿಸಿಕೊಂಡ ಕೆಲವರು, ಪ್ರಗತಿಪರ ಚಳವಳಿಗಳಲ್ಲೂ ಭಾಗವಹಿಸುತ್ತಿರುವ ವಿದ್ವಾಂಸರು 'ಭಾಷಾ ಶುದ್ಧತೆ'ಯ ಕುರಿತು ಹೊಂದಿರುವ ಅಭಿಪ್ರಾಯವನ್ನು ನೋಡಿ ಆಶ್ಚರ್ಯವಾಗುತ್ತದೆ. ಭಾಷೆಯು 'ಶುದ್ಧ'ವಾಗಿಯೇ ಏಕಿರಬೇಕು ಎಂಬ ಪ್ರಶ್ನೆಯನ್ನು ಬದಿಗಿಡೋಣ. ಆದರೆ ಕೆಲವರು ಮಾತನಾಡುವ ಮಾತಿನ ರೀತಿ ಶುದ್ಧವೆಂದು ತೀರ್ಮಾನಿಸಿದವರು ಯಾರು ಮತ್ತು ಹೇಗೆ ಎಂಬ ಪ್ರಶ್ನೆ ಏಕೆ ಏಳುವುದಿಲ್ಲ? ಈ ಭಾಷೆಯೇ ಬರವಣಿಗೆಯಲ್ಲೂ ಬಳಕೆಯಲ್ಲಿರುವುದರಿಂದ ಮತ್ತು ಇದೇ ಈಗ 'ಅಧಿಕೃತ' ಭಾಷೆಯಾಗಿರುವುದರಿಂದ, ಇದೇ ಸರಿಯಾದ್ದು ಎಂಬುದು ಅವರ ಮಟ್ಟಿಗೆ 'ಸಹಜ'ವಾದದ್ದು.

ಇಂತಹುದೇ ಒಂದು 'ಸಹಜ' ತಿಳಿವಳಿಕೆ ಮಾತೃಭಾಷೆಗೆ ಸಂಬಂಧಿಸಿದ ಒಂದು ಮಹತ್ವದ ವಿಚಾರಗೋಷ್ಠಿಯಲ್ಲಿ ವ್ಯಕ್ತವಾಯಿತು. ಮಿಕ್ಕಂತೆ ತಾರ್ಕಿಕವಾಗಿ, ಜನಪರವಾಗಿ ತಮ್ಮ ನಿಲುವನ್ನು ನಿರೂಪಿಸಿದ ಗಣ್ಯಮಾನ್ಯರೊಬ್ಬರು ಬಹಳ ವಿವಾದಾಸ್ಪದವಾಗಬೇಕಿದ್ದ ಮಾತೊಂದನ್ನು ಅಲ್ಲಿ ಆಡಿದರು. ಶಿಕ್ಷಣ ಹಾಗೂ ಮಾತೃಭಾಷೆಯ ಕುರಿತಾಗಿ ಸರ್ಕಾರದ ಧೋರಣೆಯ ಕುರಿತು ಸಭಿಕರೊಬ್ಬರು ತಮ್ಮ ಅಭಿಪ್ರಾಯವನ್ನು ಚರ್ಚೆಯ ಭಾಗವಾಗಿ ಮುಂದಿಟ್ಟರು. ಆಗ ಭಾಷಣ ಮಾಡಿದ್ದ ಈ ಗಣ್ಯಮಾನ್ಯರು ಪ್ರತಿಕ್ರಿಯಿಸಿದ್ದು ಹೀಗೆ, 'ಹೌದ್ರೀ, ಅದಕ್ಕೇ ಹೇಳೋದು. ನಿಮ್ಮಂಥವರು ಇದರ ಬಗ್ಗೆ ಮಾತನಾಡಬೇಕು ಅಂತ. ನೀವು ಮಾತಾಡಲ್ಲ, ಬದಲಿಗೆ ಗೂಂಡಾಗಳು, ಕಳ್ಳಭಟ್ಟಿ ಮಾರುವವರು ಮತ್ತು ಸ್ಲಂ ನಿವಾಸಿಗಳು ಮಾತನಾಡುತ್ತಿದ್ದಾರೆ. ಅದಕ್ಕೆ ನಮ್ಮ ದೇಶ ಹೀಗೆ ಆಗಿರೋದು'. ಒಂದೇ ಉಸಿರಿನಲ್ಲಿ ಸ್ಲಂ ನಿವಾಸಿಗಳನ್ನು ಗೂಂಡಾಗಳು ಮತ್ತು ಕಳ್ಳಭಟ್ಟಿ ಮಾರುವವರ ಜೊತೆ ಆತ ಸಮೀಕರಿಸುತ್ತಿದ್ದರು.

ಆ ತಕ್ಷಣ ಇಡೀ ಸಭೆಯಲ್ಲಿ ತಲ್ಲಣವುಂಟಾಯಿತು, ಕೋಲಾಹಲವುಂಟಾಯಿತು ಎಂದೇನಾದರೂ ನೀವು ಅಂದುಕೊಂಡಿದ್ದರೆ, ನಿಮ್ಮ ಎಣಿಕೆ ತಪ್ಪು, ಇಡೀ ಸಭೆ ಅದನ್ನೊಂದು ತಮಾಷೆಯೆಂಬಂತೆ ಸ್ವೀಕರಿಸಿತು. ಇಬ್ಬರು ಮಾತ್ರ ಎದ್ದು ನಿಂತು ಕೂಗಾಡಿದರು. 'ಸ್ಲಂ ನಿವಾಸಿಗಳೆಂದರೆ ನೀವೇನೆಂದುಕೊಂಡಿದ್ದೀರಿ? ಅದ್ಹೇಗೆ ಗೂಂಡಾಗಳು ಮತ್ತು ಕಳ್ಳಭಟ್ಟಿ ಮಾರುವವರ ಜೊತೆ ಅವರನ್ನು ಸಮೀಕರಿಸುತ್ತೀರಿ?' 'ಅದರಲ್ಲೇನು ಸಮಸ್ಯೆ, ನಾನು ಹೇಳಿದ್ದು, ಯಾರು ಮಾತಾಡಬೇಕೋ ಅವರು ಮಾತಾಡುತ್ತಿಲ್ಲ; ಯಾರು ಮಾತಾಡಲು ಅನರ್ಹರೋ ಅವರು ಮಾತಾಡುತ್ತಿದ್ದಾರೆ'. ಮಾತನಾಡುತ್ತಿದ್ದ ವ್ಯಕ್ತಿ ತಮ್ಮ ಅಂತರಾತ್ಮಕ್ಕೆ ನಿಷ್ಠರಾಗಿದ್ದರು. ಬಹಳ ಪ್ರಾಮಾಣಿಕವಾಗಿ ಮನದಾಳದ ನಂಬಿಕೆಯನ್ನೇ ಅವರು ಹೊರಗೆ ಹಾಕುತ್ತಿದ್ದರು. ಅವರ ಮಟ್ಟಿಗೆ ಅದು ಸಹಜ.

ನಿಜಕ್ಕೂ ಆಶ್ಚರ್ಯವಾಗಿದ್ದು ಸಭೆಯಲ್ಲಿದ್ದ ಇತರ ಹೋರಾಟಗಾರರು ಮತ್ತು ಚಿಂತಕರ ಪ್ರತಿಕ್ರಿಯೆಯಿಂದ. ಅವರುಗಳಲ್ಲಿ ಕೆಲವರು ಎದ್ದು ಕೂಗಾಡಿದ ಈ ಇಬ್ಬರೇ ಅತಿ ಮಾಡುತ್ತಿದ್ದಾರೆಂದು ಸೂಚಿಸಿದರು. ಈ ರೀತಿ ಭಾವಿಸಿದವರಲ್ಲಿ ಮಹಿಳಾ ಹೋರಾಟಗಾರ್ತಿಯರು ಮತ್ತು ದಲಿತಪರ ಚಿಂತಕರೂ ಇದ್ದರು! ಹಕ್ಕಿನ ಪ್ರಜ್ಞೆ ಮತ್ತು ಸ್ವಾಭಿಮಾನದ ಪ್ರಜ್ಞೆ ಇಷ್ಟೊಂದು ಸ್ವಕೇಂದ್ರಿತವಾ? ಅಡಿಗೆ ಮನೆಯಲ್ಲಿರಬೇಕಾದವರು ಇಂದು ಬೀದಿಯಲ್ಲಿ ಠಳಾಯಿಸುತ್ತಿರುವುದರಿಂದಲೇ ದೇಶ ಕೆಟ್ಟು ಹೋಗಿದೆ ಎಂಬ ಮಾತು ಎಷ್ಟು ಆಕ್ಷೇಪಣೀಯವೋ, ಇದೂ ಸಹಾ ಅಷ್ಟೇ ಆಕ್ಷೇಪಣೀಯ ಎಂದು ಅವರ್‍ಯಾರಿಗೂ ಏಕೆ ಅನ್ನಿಸಲಿಲ್ಲ?

ಜಾತಿ ಮತ್ತು ಜೆಂಡರ್ ನೆಲೆಯಲ್ಲಿ ನಡೆದ ಸ್ವಾಭಿಮಾನೀ ಚಳವಳಿಯಷ್ಟು ಬಿರುಸಾಗಿ ವರ್ಗದ ನೆಲೆಯಿಂದ ಚಳವಳಿ ನಡೆದಿಲ್ಲದಿರುವುದೂ ಇದಕ್ಕೆ ಕಾರಣವಿರಬಹುದು. ಮಧ್ಯಮವರ್ಗದ ಹೋರಾಟಗಾರರು ಮತ್ತು ಚಿಂತಕರು ಸ್ಲಂ ಜನರ ಜೊತೆಗೆ ಜೀವಂತ ಸಂಬಂಧ ಇಟ್ಟುಕೊಂಡಿಲ್ಲದಿರುವುದೂ ಕಾರಣವಿರಬಹುದು. ಇದೇ ಸ್ಲಂಗಳಲ್ಲೂ ದಮನಿತ ಜಾತಿ ಹಾಗೂ ಧರ್ಮಗಳಿಗೆ ಸೇರಿದವರೇ ಅತ್ಯಂತ ಹೆಚ್ಚಿನವರು ಇರುತ್ತಾರೆಂಬುದನ್ನು ಮರೆಮಾಚುವ ರೀತಿಯಲ್ಲಿ ಅವರ ವಾಸಸ್ಥಳದ ಐಡೆಂಟಿಟಿಯೇ ಪ್ರಧಾನವಾಗಿ ಮಿಕ್ಕವರಿಗೆ ಕಣ್ಣು ಕುಕ್ಕಬಹುದು. ಆ ವಾಸಸ್ಥಳದ ಐಡೆಂಟಿಟಿಯಲ್ಲಿ - ಅಂದರೆ ಸ್ಲಂ ಅಥವಾ ಕೊಳಗೇರಿ ಎಂಬುದರಲ್ಲಿ - ಸ್ವಾಭಿಮಾನಕ್ಕೆ ಕಾರಣವಾಗುವ ಅಂಶಕ್ಕಿಂತ ಕೊಳಕು ಎಂಬುದೇ ಇಂಥವರ ಗಮನಕ್ಕೆ ಬರುವುದೂ ಸಹ ಒಂದು ಕಾರಣವಿರಬಹುದು.

ಇಲ್ಲದಿದ್ದರೆ ಇದೇ ನಾಡಿನಲ್ಲಿ ಸ್ಲಂ ಮಕ್ಕಳನ್ನಿಟ್ಟುಕೊಂಡು ಕಾರ್ಯಕ್ರಮವೊಂದನ್ನು ಮಾಡಿ, ಅದಕ್ಕೆ 'ಕೊಳಕು - ಬೆಳಕು' ಎಂಬ ಟೈಟಲ್ ಕೊಡಲು ಸಾಧ್ಯವಾಗುತ್ತಿರಲಿಲ್ಲ. 'ಅಲ್ಲಿನ ಜನರು ಕೊಳಕೇ ಆದರೂ, ಅವರಲ್ಲಿ ಬೆಳಕೂ ಇದೆ. ಅವರಲ್ಲಿನ ಪ್ರತಿಭೆಯನ್ನು ನಾವು ಹೊರತೆಗೆಯುತ್ತಿದ್ದೇವೆ' ಎಂಬ ತಿಳಿವಳಿಕೆಯಲ್ಲೇ ಕೊಳಕಿದೆ ಎಂಬುದು ಕಾರ್ಯಕ್ರಮ ಮಾಡಿದವರಿಗೂ ತಿಳಿದಿಲ್ಲ; ಮೌನವಾಗಿರುವ ನಾಗರಿಕ ಸಮಾಜದ ಅರಿವಿನಲ್ಲೂ ಹಾಸುಹೊಕ್ಕಾಗಿಲ್ಲ. ಸ್ಲಂಗಳಲ್ಲಿನ ಕೊಳಕು ಅಲ್ಲಿ ವಾಸಿಸುವ ಜನರ ಮನಸ್ಥಿತಿಯ ಪ್ರತೀಕವಲ್ಲ; ಅದು ಈ ಸಮಾಜ ಕೊಳೆತು ನಾರುತ್ತಿರುವುದರ ದ್ಯೋತಕ. ಈ ಸಮಾಜದ ಅಗತ್ಯಗಳಿಗಾಗಿ ಸ್ಲಂಗಳು ಸೃಷ್ಟಿಯಾಗಿವೆಯೇ ಹೊರತು, ಅಲ್ಲಿನ ಜನರ ಬಯಕೆಯಿಂದಲ್ಲ.

ಇಂತಹುದೇ ಒಂದು ಕಾರ್ಯಕ್ರಮದ ಕುರಿತು ಇಂದಿನ (ಮೇ 27, 2015 ಪ್ರಜಾವಾಣಿ ಮೆಟ್ರೋ) ಪತ್ರಿಕೆಯಲ್ಲಿ ವರದಿಯಾಗಿದೆ. 'ಬಡ ಮಕ್ಕಳ ಬೆಕ್ಕಿನ ನಡಿಗೆ' ಎಂಬುದು ಆ ಕಾರ್ಯಕ್ರಮ. ಓರಿಯಾನ್ ಮಾಲ್, ಪ್ರಸಾದ್ ಬಿದ್ದಪ್ಪ, ಸ್ಮೈಲ್ ಫೌಂಡೇಷನ್ ಇತ್ಯಾದಿಗಳು ಅದರ ಆಯೋಜಕರು. ಸ್ಲಂ ಮಕ್ಕಳ ಫ್ಯಾಷನ್‌ಶೋವನ್ನು 'ರ್‍ಯಾಂಪ್ ಫಾರ್ ಚಾಂಪ್ಸ್' ಎಂಬ ಹೆಸರಿನಲ್ಲಿ ಇವರೆಲ್ಲರೂ ಸೇರಿ ಸಂಘಟಿಸಿದ್ದರು. ಬ್ರಿಗೇಡ್ ಗ್ರೂಪ್‌ನ ವಿಶಾಲ್ ಮೀರ್‌ಚಂದಾನಿ ಎಂಬುವವರು 'ಶಾಪಿಂಗ್ ಮಾಲ್‌ಗಳು ಸಮುದಾಯ ನಿರ್ಮಾಣಕ್ಕೆ ಒಂದು ವೇದಿಕೆ ಒದಗಿಸುವ ಜವಾಬ್ದಾರಿ ಹೊಂದಿವೆ ಎಂಬುದರಲ್ಲಿ ನಾವು ನಂಬಿಕೆ ಇಟ್ಟಿದ್ದೇವೆ. ಒರಾಯನ್ ಮಾಲ್‌ಗೆ ಪ್ರತಿ ತಿಂಗಳು ಸುಮಾರು 1.5 ದಶಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಸೌಲಭ್ಯವಂಚಿತರನ್ನು ಮೇಲೆತ್ತುವ ಕಾರ್ಯಕ್ಕೆ ಹೇಗೆ ಕೊಡುಗೆ ನೀಡಬಹುದು ಎಂಬ ಬಗ್ಗೆ ಜಾಗೃತಿ ಮೂಡಿಸುವ ಇಂತಹ ಕಾರ್ಯಕ್ಕೆ ಕೈಜೋಡಿಸಿದ್ದೇವೆ' ಎಂದು ಅಲ್ಲಿ ಹೇಳಿದ್ದಾರೆ.



ಮಾಡಲಿ, ಒಳ್ಳೆಯದು. ಬಡವರು ಇರುವ ತನಕ ಧರ್ಮಾರ್ಥ ಕಾರ್ಯ ಮಾಡುವವರೂ ಇರುತ್ತಾರೆ. ಅಂಥವರಿಂದ ಒಳ್ಳೆಯದೂ ಆಗುತ್ತದೆ. ಕೆಲವರಿಗೆ ಅನುಕೂಲವಾಗುತ್ತದೆ ಮತ್ತು ಸಮಾಜದಲ್ಲಿ ಒಳ್ಳೆಯ ಮೌಲ್ಯಗಳು ಉಳಿದುಕೊಳ್ಳುತ್ತವೆ. ಆದರೆ 'ನಾವು ಮೇಲೆತ್ತುತ್ತಿದ್ದೇವೆ. ಅವರು ಅಭಾಗ್ಯರು, ನಮ್ಮಿಂದ ಉದ್ಧಾರವಾಗುತ್ತಿದ್ದಾರೆ' ಎಂದು ತಿಳಿಯುವುದರಲ್ಲಿ ಸಮಸ್ಯೆ ಇದೆ. 'ಅವರ ಪಾಲನ್ನು ನಾವು ಕಿತ್ತುಕೊಂಡು ದುಂಡಗಾಗಿದ್ದೇವೆ. ಈ ಸಮಾಜ ಬದಲಾಗಬೇಕು. ಈ ಕೂಡಲೇ ಸಂಪೂರ್ಣ ಬದಲಾಗದು, ಅಲ್ಲಿಯವರೆಗೆ ನನ್ನ ಕೈಲಿ ಇಷ್ಟೇ ಆಗೋದು' ಅಂದುಕೊಂಡರೆ ಪರವಾಗಿಲ್ಲ.


ಇದಕ್ಕಿಂತ ಮುಂದಿನ ಹಂತವೆಂದರೆ, ಪ್ರತಿಭೆಯೆನ್ನುವುದು ಹುಟ್ಟಿನಿಂದ ವರ್ಗಾವಣೆ ಆಗುವ ಜೀನ್ಸ್ ಅಲ್ಲ; ಅವಕಾಶ ಸಿಕ್ಕರೆ ಎಲ್ಲರೂ ಮಹತ್ತರವಾದ್ದನ್ನು ಸಾಧಿಸಲು ಸಾಧ್ಯ ಎಂಬ ತಿಳಿವಳಿಕೆಯನ್ನು ಹೊಂದುವುದು ಮತ್ತು ಆ ಮನಸ್ಥಿತಿಯೊಂದಿಗೆ ಅವಕಾಶವಂಚಿತರನ್ನು ಪ್ರೋತ್ಸಾಹಿಸುವುದು. ಕರ್ನಾಟಕ ವಿದ್ಯಾರ್ಥಿ ಸಂಘಟನೆ ಎಂಬ ವಿದ್ಯಾರ್ಥಿ ಯುವಜನರ ಸಂಘಟನೆಯೊಂದು ಸ್ಲಂ ನಿವಾಸಿಗಳು ಮತ್ತು ಕಾರ್ಮಿಕ ಸಂಘಟನೆಯ ಜೊತೆಗೂಡಿ ಅಂತಹ ಕೆಲಸವನ್ನು ಕಳೆದ 5 ವರ್ಷಗಳಿಂದ ಮಾಡಿ[…] ಬರುತ್ತಿದೆ. (ಈ ವರ್ಷ ಈ ಕಾರ್ಯಕ್ರಮವು […] ರಂದು ನಡೆಯಿತು) ಯಾರನ್ನೂ ಉದ್ಧಾರ ಮಾಡಿದ[…] ಅಲ್ಲಿಲ್ಲ, ಅಲ್ಲಿ ಕಾಸು ಕೊಟ್ಟವರಿಗೆ ಓರಿಯಾನ್ ಮಾ[…] ಡಿಸ್ಕೌಂಟ್ ವೋಚರ್ ಸಹ ಸಿಗುವುದಿಲ್ಲ ಮತ್ತು[…] ಮಕ್ಕಳನ್ನು ಮ್ಯೂಸಿಯಂ ಪೀಸುಗಳಂತೆ ರ್‍ಯಾಂಪ್[…] ಓಡಾಡಿಸುವುದಿಲ್ಲ, ಬದಲಿಗೆ ಮಕ್ಕಳಿಗೆ ಅಭಿನಂದನೆ[…] ನಂತರ, ಅವರಿಗೆ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ[…] ಮುಂದೆ ಇರುವ ಸಾಧ್ಯತೆಗಳ ಬಗ್ಗೆ ಮಾರ್ಗ[…] ಮಾಡಲಾಗುತ್ತದೆ; ಅಗತ್ಯವಿರುವವರಿಗೆ ಟ್ಯೂಷನ್, […] ಶುಲ್ಕ ಇತ್ಯಾದಿ ವ್ಯವಸ್ಥೆ ಮಾಡಲಾಗುತ್ತದೆ. ಅ[…] ಜೊತೆಗೆ, 'ನೀನು ಓದಿ ಸ್ವಂತ ಕಾಲ ಮೇಲೆ ನಿ[…] ಜೊತೆಗೆ ಸಮಾಜದ ಬದಲಾವಣೆಗೂ ಕೆಲಸ ಮಾ[…] ಎಂದು ಹೇಳಲಾಗುತ್ತದೆ.

ಈ ಕಾರ್ಯಕ್ರಮದ ಆಯೋಜನೆಯಲ್ಲಿ ಪಾಲ್[…] ಸ್ಲಂ ನಿವಾಸಿಗಳ ಸಂಘಟನೆಯು ಈಗ ಹೊಸ[…] ಚರ್ಚೆಯನ್ನು ಹುಟ್ಟು ಹಾಕಿದೆ. ತಮ್ಮೂರಿನ ಎಲ್ಲ[…] ಹೆಸರನ್ನು ಬದಲಿಸುವುದು. ಉದಾಹರಣೆಗೆ ಸುಂಕೇ[…] ಸ್ಲಂ ಎಂದಿರುವ ಕಡೆ, ಸುಂಕೇನಹಳ್ಳಿ ಶ್ರಮಿಕನಗರ[…] ಬದಲಿಸುವುದು. ಒಂದು ವೇಳೆ ಅಲ್ಲಿನ ನಿವಾ[…] ಬಯಸುವುದಾದರೆ, ಅದನ್ನು ಅಂಬೇಡ್ಕರ್ ಶ್ರಮಿ[…] ಟಿಪ್ಪುಸುಲ್ತಾನ್ ಶ್ರಮಿಕನಗರ ಅಥವಾ ಭಗತ್[…] ಶ್ರಮಿಕನಗರ ಎಂದು ಇಟ್ಟುಕೊಳ್ಳಬಹುದ[…] ಬದಲಾವಣೆಗೆ ಕಾರಣ ಸ್ಲಂ ಎಂದು ಕರೆದುಕೊ[…] ಅವಮಾನವೆಂದೇನಲ್ಲ. ಲೇಖನದ ಆರಂ[…] ಹೇಳಿರುವಂತೆ, ನಾಚಿಕೆ ಪಟ್ಟುಕೊಳ್ಳಬೇಕಾದ್ದು ಇನ[…] ವಂಚಿಸಿದವರು, ಶೋಷಿಸುತ್ತಿರುವವರು. ಈ […] ಕಟ್ಟುವ ಕೆಲಸ ಮಾಡಿದವರಿಗೆ ತಮ್ಮ ಸಮು[…] ಕುರಿತು ಹೆಮ್ಮೆಯೇ ಇರಬೇಕು. ಆದರೆ ಸ್ಲಂ […] ಕೊಳಗೇರಿ ಎಂಬ ಹೆಸರನ್ನು ಅಲ್ಲಿ ವಾಸಿಸುವ[…] ಇಟ್ಟುಕೊಂಡಿದ್ದಲ್ಲ; ಇದು ಕೊಳಕು ಎಂಬುದನ್ನು ಸ[…] ಸಮಾಜದ ಇತರರು ಇಟ್ಟದ್ದು.

ಎರಡನೆಯದಾಗಿ, ಇಲ್ಲಿ ವಾಸಿಸುವವರು ಶ್ರಮಿ[…] ಹಾಗೂ ಇವರ ಶ್ರಮದಿಂದ ಈ ಸಮಾಜದಲ್ಲಿ[…] ಸೃಷ್ಟಿಯಾಗಿದೆ ಎಂಬುದನ್ನು ಸೂಚಿಸಬೇಕಿದೆ. […] ಉದ್ಧಾರ ಮಾಡಲು ಕಾದು ಕುಳಿತುಕೊಂಡಿರುವ […] ನಾವಲ್ಲ ಎಂಬುದನ್ನೂ ಅದರ ಮೂಲಕ ಬಿಂಬಿ[…] ಇದಕ್ಕೆ ನೀವೇನಂತೀರಿ? ಸರಿಯೋ, ತಪ್ಪೋ[…] ಮಾತುಗಳಲ್ಲಿ ನಿಮ್ಮ ಅಭಿಪ್ರಾಯವನ್ನೂ ಹೇಳಿ[…]


ಕೆರೆ ಒತ್ತುವರಿ ಮತ್ತು ಬೆಂಗಳೂರಿನ ಬೆಳವಣಿಗೆ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಈಗ ರಾಜಧಾನಿ ಬೆಂಗಳೂರಿನಲ್ಲಿ ಲಾಟರಿ ಮತ್ತು ಒತ್ತುವರಿಯಾಗಿರುವ ಕೆರೆಗಳನ್ನು ...ಗೊಳಿಸುವುದೇ ದೊಡ್ಡ ಸುದ್ದಿಗಳಾಗಿವೆ. ಇದೇ ...ಕೆಯಲ್ಲಿ ಮೊದಲನೆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟಗೊಂಡಿರುವುದರಿಂದ ಇಲ್ಲಿ ಕೆರೆಗಳ ಬಗ್ಗೆ ...ಯುತ್ತಿದ್ದೇನೆ. ಹಲವು ದಿನಗಳಿಂದ ಹಿರಿಯ ...ತ್ಯ ಹೋರಾಟಗಾರರಾದ ...ಎಸ್.ದೊರೆಸ್ವಾಮಿಯವರ ನೇತೃತ್ವದಲ್ಲಿ ...ವಾರು ಜನ ಬೆಂಗಳೂರಿನಲ್ಲಿ ಒತ್ತುವರಿಯಾಗಿರುವ ಕೆರೆಗಳನ್ನು ತೆರವುಗೊಳಿಸಬೇಕೆಂದು ...ರವನ್ನು ಒತ್ತಾಯಿಸುತ್ತಿದ್ದಾರೆ. ಆದರೆ ಅದು ...ವಾಗಲೂ ಸಾಧ್ಯವೇ ಎಂಬುದೇ ಮುಖ್ಯ ಪ್ರಶ್ನೆ. ...ಬೆಂಗಳೂರಿಗೂ, ಕೆರೆಗಳಿಗೂ ಶತಶತಮಾನಗಳ ...ಬಂಧವಿದೆ. ಈ ನಗರವನ್ನು ಸ್ಥಾಪಿಸಿದ ...ಗೌಡರಿಗೆ ನೀರಿನ ಅವಶ್ಯಕತೆ ಚೆನ್ನಾಗಿ ಗೊತ್ತಿತ್ತು. ...ಬೆಂಗಳೂರಿನ ಸುತ್ತಮುತ್ತ ಅರ್ಕಾವತಿ ಮತ್ತು ...ಭಾವತಿ ಎಂಬ ಎರಡು ಸಣ್ಣ ನದಿಗಳನ್ನು ಬಿಟ್ಟರೆ ...ನೀರಿನ ಮೂಲ ಇರಲಿಲ್ಲ. ಆದ್ದರಿಂದ ...ಗೌಡ ಬೆಂಗಳೂರಿನ ಉಬ್ಬುತಗ್ಗು ಮತ್ತು ...ಗಳನ್ನು ಉಪಯೋಗಿಸಿಕೊಂಡು ಹಲವಾರು ...ಳ ನೆಟ್‌ವರ್ಕ್ ವ್ಯವಸ್ಥೆಯನ್ನು ನಿರ್ಮಿಸಿದರು. ಆ ...ರ್ಕ್‌ವನ್ನು ಆಮೇಲೆ ಮೈಸೂರಿನ ಒಡೆಯರು,



...ಮೋರಿ ಆಗಿರುವ ವೃಷಭಾವತಿ ನದಿ

...ಸುಲ್ತಾನ್ ಮತ್ತು ಬ್ರಿಟಿಷರೂ ...ಮುಂದುವರೆಸಿದರು. ಈ ನೆಟ್‌ವರ್ಕ್ ಹೇಗಿತ್ತೆಂದರೆ ...ದು ಕೆರೆ ಮಳೆ ನೀರಿನಿಂದ ತುಂಬಿಕೊಂಡ ನಂತರ ...ನ ನೀರು ಕಾಲುವೆಗಳ ಮೂಲಕ ಇನ್ನೊಂದು ...ರೆಯನ್ನು ತುಂಬುತ್ತಿತ್ತು. ಹೀಗೆ ಬೆಂಗಳೂರಿನ ...ಯೊಂದು ವಿಭಾಗವೂ ಒಂದೊಂದು 'ಲೇಕ್ ...ನೆಟ್‌ವರ್ಕ್' ಹೊಂದಿದ್ದರಿಂದ ಬೆಂಗಳೂರಿನಲ್ಲಿ ...ತ್ತೊಂಬತ್ತನೆ ಶತಮಾನದ ತನಕ ನೀರಿನ ಕೊರತೆ ...ರಲಿಲ್ಲ.

...ಬೆಂಗಳೂರಿಗೆ ಈಗ 'ಹೈಟೆಕ್ ಸಿಟಿ' ಎಂಬ ...ತಿ ಬಂದಿರಬಹುದು. ಅದಕ್ಕೂ ಮುಂಚೆ ಈ ...ರಕ್ಕೆ ಇದ್ದ ಹೆಸರು 'ಗಾರ್ಡನ್ ಸಿಟಿ' ಮತ್ತು 'ಏರ್ ...ಕಂಡೀಷನ್ಡ್ ಸಿಟಿ' ಎಂದು; ಅದಕ್ಕೂ ಹಿಂದೆ ಇದ್ದ ...ರು 'ಸಿಟಿ ಆಫ್ ಲೇಕ್ಸ್' ಅಥವಾ 'ಕೆರೆಗಳ ನಗರ' ...ದು. ಈ ಕೆರೆಗಳು ಬೆಂಗಳೂರಿನ ಕುಡಿಯುವ ...ರಿನ ಅಗತ್ಯವನ್ನು ಮಾತ್ರ ಪೂರೈಸುತ್ತಿರಲಿಲ್ಲ, ಇಲ್ಲಿನ ...ವಾಮಾನವೂ ಉತ್ತಮವಾಗಿದ್ದಕ್ಕೆ ಮೂಲ ಕಾರಣವೂ ...ದ್ದವು.

...ಈಗ ಇಲ್ಲಿ ಪುಟ್ಟ ಗಾರ್ಡನ್‌ಗಳು ಮಾಯವಾಗಿ ...ಫ್ಲೈಓವರ್‌ಗಳು ಬಂದಿವೆ; ಪಾರ್ಕ್‌ಗಳು ...ವಶಕ್ಕೆಗಳಾಗಿವೆ. ಇನ್ನು ಏರ್‌ಕಂಡೀಷನರ್ ...ಇಲ್ಲದಿದ್ದರೆ ಬೇಸಿಗೆ ದಿನಗಳು ನರಕಯಾತನೆ ಆಗಿವೆ. ...ಗಳು ಬತ್ತಿಹೋಗಿ ಸ್ಟೇಡಿಯಂ, ಲೇಔಟ್, ಶಾಲೆ, ...ಕ್ಕೆ ಅಥವಾ ಬಸ್‌ಸ್ಟ್ಯಾಂಡ್‌ಗಳಾಗಿ ...ಮಾರ್ಪಾಡುಗೊಂಡಿವೆ.

...ಬೆಂಗಳೂರಿನ ಕೆರೆಗಳು ಮತ್ತು ಅವುಗಳ ನಡುವೆ ...ಕಾಲುವೆಗಳ ನೆಟ್‌ವರ್ಕ್ ಯಾಕೆ ಬತ್ತಿಹೋದವು ...ದು ನೋಡಿದರೆ ಇವತ್ತಿನ ಸಮಸ್ಯೆ ...ರ್ಥವಾಗುತ್ತದೆ. ಅದಕ್ಕೆ ಉದಾಹರಣೆಯಾಗಿ ...ವೃಷಭಾವತಿ ನದಿಯನ್ನೇ ತೆಗೆದುಕೊಳ್ಳಬಹುದು. ನಮ್ಮ ...ಗರಿಯ ಹತ್ತಿರದ ಐತಿಹಾಸಿಕ ಬಸವನ ...ಗುಡಿಯನ್ನು, 17ನೇ ಶತಮಾನದಲ್ಲಿ ಕಟ್ಟಿರುವ ...ಕರ ಪ್ರಕಾರ ಈ ವೃಷಭಾವತಿ ನದಿಯ ಮೂಲ

ಇರುವುದೇ ಈ ದೇವಸ್ಥಾನದ ಆವರಣದಲ್ಲಿ. ಆದ್ದರಿಂದಲೇ ಈ ನದಿಗೆ 'ವೃಷಭ' ಎಂದು ಹೆಸರು ಬಂದದ್ದು.


ಇಲ್ಲಿ ಉಗಮಿಸುತ್ತಿದ್ದ ವೃಷಭಾವತಿ ನಾಲೆಗಳ ಮೂಲಕ ಹರಿದು ಅರ್ಕಾವತಿ ನದಿಯನ್ನು ಬಿಡದಿ ಆಚೆ ಸೇರುತ್ತಿತ್ತಲ್ಲದೆ, ಆಮೇಲೆ ಅರ್ಕಾವತಿ ನದಿಯು ಕನಕಪುರದ ಹತ್ತಿರ ಕಾವೇರಿ ನದಿಯನ್ನು ಸೇರುತ್ತಿತ್ತು. ಒಂದಾನೊಂದು ಕಾಲದಲ್ಲಿ ಈ ವೃಷಭಾವತಿ ನದಿ ಅದೆಷ್ಟು ಸುಂದರವಾಗಿತ್ತೆಂದರೆ ಚನ್ನಪಟ್ಟಣದ ವ್ಯಾಸರಾಯ ಎಂಬುವವರು ಇದಕ್ಕೆ ಮಾರುಹೋಗಿ 14ನೇ ಶತಮಾನದಲ್ಲಿ ಗಾಳಿ ಆಂಜನೇಯ ದೇವಸ್ಥಾನವನ್ನು ಸ್ಥಾಪಿಸಿದರು. ಆಗೆಲ್ಲ ವೃಷಭಾವತಿ ನದಿಯ ನೀರಿನಲ್ಲೇ ಆಂಜನೇಯ ಮೂರ್ತಿಯನ್ನು ಸ್ವಚ್ಛಗೊಳಿಸುತ್ತಿದ್ದದ್ದು.

ಈಗ ಈ ವೃಷಭಾವತಿಯನ್ನು ಯಾರೂ 'ನದಿ' ಎಂದು ಕರೆಯುವುದೇ ಇಲ್ಲ. ಯಾಕೆಂದರೆ ಇವತ್ತು ಇದೊಂದು ಮೋರಿ ಆಗಿದೆ. ದಕ್ಷಿಣ ಬೆಂಗಳೂರಿನ ಕೊಳಚೆ ನೀರನ್ನು ಹೊತ್ತು ಸಾಗುವ ಈ ಮೋರಿ ಗಾಳಿ ಆಂಜನೇಯನ ದೇವಸ್ಥಾನದ ಹತ್ತಿರ ಎಷ್ಟು ಗಬ್ಬು ನಾರುತ್ತದೆ ಎಂದರೆ ಅಲ್ಲಿಗೆ ಹೋಗುವ ಭಕ್ತರು ಮೂಗು ಮುಚ್ಚಿಕೊಳ್ಳಬೇಕು. ನನ್ನ ಮನೆ ಇರುವ ರಾಜರಾಜೇಶ್ವರಿನಗರಕ್ಕೆ ಹೋಗಲು ನಾನು ಈ ಮೋರಿಯನ್ನು ಎರಡು ಬಾರಿ ದಾಟಬೇಕು. ಮಳೆ ಬಂದಾಗಲೆಲ್ಲ ಈ ಮೋರಿ ರಸ್ತೆಯನ್ನೇ ಆಕ್ರಮಿಸುತ್ತದೆ. ಆಗ ಅದನ್ನು ದಾಟಿ ಹೋಗುವುದೇ ಒಂದು ದೊಡ್ಡ ಸಮಸ್ಯೆ. ಇನ್ನು ರಾಜರಾಜೇಶ್ವರಿ ಆರ್ಚ್ ಪಕ್ಕದಲ್ಲೇ ಮೋರಿ ನೀರನ್ನು ಶುದ್ಧೀಕರಿಸುವ ಘಟಕ ಇದ್ದರೂ ಹಲವೊಮ್ಮೆ ಈ ಮೋರಿ ಹೊಮ್ಮುವ ಗಬ್ಬುನಾತ ಅಕ್ಕಪಕ್ಕದ ಪ್ರದೇಶಗಳನ್ನು ಆವರಿಸುತ್ತದೆ. ಮೈಸೂರಿನಿಂದ ಬರುವಾಗ ಅದೆಷ್ಟೊ ಜನರಿಗೆ 'ಬೆಂಗಳೂರು ತಲುಪಿದ್ದೇವೆ' ಎಂಬ ಸಂದೇಶವನ್ನು 'ಸಾರುವುದೇ' ಈ ವೃಷಭಾವತಿ ಮೋರಿ. ಅರ್ಕಾವತಿಯ ಸ್ಥಿತಿ ವೃಷಭಾವತಿ ಸ್ಥಿತಿಗಿಂತಲೂ ಭಗ್ನವಾಗಿಲ್ಲ, ಅದೂ ಈಗ ನದಿಗಿಂತಲೂ ಮೋರಿಯನ್ನೇ ಹೋಲುತ್ತದೆ. ಈ ನದಿಗಳು ಯಾವ ಕೆರೆಯನ್ನು ತುಂಬಿಯಾವು?

ಇನ್ನು ಕೆರೆಗಳ ವಿಷಯಕ್ಕೆ ಬರುವುದಾದರೆ ಎರಡು ಕೆರೆಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಹತ್ತು ವರ್ಷಗಳ ಹಿಂದೆ ನಮ್ಮ ವಿ.ಎಸ್.ಶ್ರೀಧರ 'ಉತ್ತರಹಳ್ಳಿಮೊಗೆ' ಕೆರೆಯ ಪಕ್ಕದಲ್ಲೇ ಮನೆ ಕಟ್ಟಿಸುತ್ತಿದ್ದಾಗ, ಅದು ಇನ್ನೂ 'ಜೀವಂತ ಕೆರೆ'ಯಾಗಿದ್ದು ಪ್ರತಿವರ್ಷ ಪೆಲಿಕನ್ ಹಕ್ಕಿಗಳು ಬಂದು ಗೂಡು ಕಟ್ಟಿ, ಮರಿ ಮಾಡಿ ಆಮೇಲೆ ಹಾರಿಹೋಗುತ್ತಿದ್ದವು. ಆದರೆ ರಿಯಲ್ ಎಸ್ಟೇಟ್ ದಂಧೆಕೋರರು ಮತ್ತು ಬಿಜೆಪಿಯ ಒಬ್ಬ ನಾಯಕನ ಚಿತಾವಣೆಯಿಂದಾಗಿ ಈ ಕೆರೆ ಬತ್ತಿಹೋಗಲಾರಂಭಿಸಿತು. ಯಾಕೆಂದರೆ ಆ ಪ್ರದೇಶದಲ್ಲಿ ಈಗ ಭೂಮಿಯ ಬೆಲೆ ಗಗನ ಮುಟ್ಟಿದೆ. ಆಗ ಶ್ರೀಧರ ಮತ್ತು ಮಿತ್ರರು ಸೇರಿಕೊಂಡು ಒಂದು ಹೋರಾಟವನ್ನೇ ಶುರು ಮಾಡಿದರು. ಬೆಂಗಳೂರಿನ ಕೆರೆಗಳನ್ನು ಕಾಪಾಡಬೇಕೆಂದು ಸುಪ್ರೀಂಕೋರ್ಟ್ ಹಲವು ದಶಕಗಳ ಹಿಂದೆ ತೀರ್ಪು ನೀಡಿರುವುದರಿಂದ ಸರ್ಕಾರ ಸ್ಪಂದಿಸಲೇಬೇಕಾಯಿತು. ಈಗಲೂ ಆ ಕೆರೆ ತನ್ನ ಹಿಂದಿನ ವೈಭವವನ್ನು ಪಡೆದಿಲ್ಲ, ಆದರೆ ನೆಮ್ಮದಿಯ ಸಂಗತಿ ಯಾವುದೆಂದರೆ ಅದೆಷ್ಟೋ ವರ್ಷಗಳ ನಂತರ ಕಳೆದ ವರ್ಷ ಪೆಲಿಕನ್ ಪಕ್ಷಿಗಳು ವಾಪಸ್ ಬಂದದ್ದು.

ಇನ್ನೊಂದು ಕೆರೆ ನನ್ನ ತಂಗಿ ಕವಿತಾಳ ಮನೆ ಹಿಂದಿರುವ ದೊರೆಕೆರೆ. ಕವಿತಾ ಮನೆ ಕಟ್ಟಿಸುತ್ತಿದ್ದಾಗ ಆ ಕೆರೆ ಎಷ್ಟು ಚಂದವಾಗಿತ್ತೆಂದರೆ ನಾವೆಲ್ಲ ಅಲ್ಲಿ ಬೋಟಿಂಗ್ ಹೋಗುತ್ತಿದ್ದೆವು. ಆದರೆ ಸುತ್ತಮುತ್ತ ಮನೆಗಳು ಹೆಚ್ಚಾದಂತೆ ಕೆರೆ ನಶಿಸಲಾರಂಭಿಸಿತು. ಯಾಕೆಂದರೆ ಎಲ್ಲಾ ಮನೆಗಳ ಕೊಳಚೆ ನೀರನ್ನು ಈ ಕೆರೆಗೆ ಹರಿಸುತ್ತಿದ್ದರು. ಮತ್ತೊಮ್ಮೆ ಸ್ಥಳೀಯರೆಲ್ಲ ಹೋರಾಟ ಮಾಡಿ ಆ ಕೆರೆಯನ್ನು ಉಳಿಸಿಕೊಳ್ಳಬೇಕಾಯಿತು. ಇವತ್ತು ಈ ಕೆರೆಯ ಸುತ್ತಲೇ ಬಹಳಷ್ಟು ಜನ ತಮ್ಮ ಮಾರ್ನಿಂಗ್ ವಾಕ್‌ಗೆ ಹೋಗುತ್ತಾರೆ.

ಈ ಎರಡು ಕೆರೆಗಳಾದರೂ ಉಳಿದುಕೊಂಡವು. ಆದರೆ ಆ ಅದೃಷ್ಟ ಬೆಂಗಳೂರಿನ ಇತರೆ ಕೆರೆಗಳಿಗೆ ಸಿಗಲಿಲ್ಲ. ಒಂದು ಅಂದಾಜಿನ ಪ್ರಕಾರ 1961ರಲ್ಲಿ ಬೆಂಗಳೂರಿನಲ್ಲಿ 600ಕ್ಕಿಂತಲೂ ಹೆಚ್ಚಿನ ಕೆರೆಗಳಿದ್ದವು. ಆದರೆ 1986ರ ಹೊತ್ತಿಗೆ



ವಿಷ ಕಾರುತ್ತಿರುವ ವರ್ತೂರು ಕೆರೆ

ಅವುಗಳ ಸಂಖ್ಯೆ 81ಕ್ಕೆ ಇಳಿದಿತ್ತು. ಈಗ 50 ಕೆರೆಗಳು 'ಜೀವಂತ'ವಾಗಿದ್ದರೆ ಅದೇ ಹೆಚ್ಚು ಎನ್ನುವಂತಹ ಸ್ಥಿತಿ ಇದೆ.

ಯಾಕೆ ಹೀಗಾಯಿತು ಎಂದು ಅರ್ಥಮಾಡಿಕೊಳ್ಳಬೇಕಾದರೆ ಬೆಂಗಳೂರು ಬೆಳೆದಿರುವ ವೇಗವನ್ನು ನೋಡಬೇಕು. 1961ರಲ್ಲಿ ಬೆಂಗಳೂರು ಕೇವಲ 130 ಚದುರ ಕಿಲೋಮೀಟರ್ ಪ್ರದೇಶವನ್ನು ಆವರಿಸಿತ್ತು. ಆದರೀಗ ಅದು 812 ಚದುರ ಕಿಲೋಮೀಟರ್ ಪ್ರದೇಶಕ್ಕೆ ವಿಸ್ತಾರಗೊಂಡಿದೆ. ಆಗ ಬೆಂಗಳೂರಿನ ಜನಸಂಖ್ಯೆ 1.2 ಮಿಲಿಯನ್ ಇದ್ದರೆ, ಈಗ 8.8 ಮಿಲಿಯನ್ ಆಗಿದೆ. 1960ರ ದಶಕದಿಂದ ಬೆಂಗಳೂರು ದೇಶದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ನಗರ ಎಂದೇ ಖ್ಯಾತಿ ಪಡೆದಿದೆ. ವಾಣಿಜ್ಯ ಬೆಳೆದಂತೆ ಲಕ್ಷಾಂತರ ಜನ ಬೆಂಗಳೂರಿಗೆ ವಲಸೆ ಬರುತ್ತಿದ್ದಾರೆ. ಆ ಕಾರಣಕ್ಕೇ ಇವತ್ತು ಮುಂಬೈ ತರಹದ ನಗರಗಳ ಜನಸಂಖ್ಯೆ ಕಡಿಮೆ ಆಗುತ್ತಿದ್ದರೆ, ಜನಸಂಖ್ಯೆ ಶೇ.16ರ ಗತಿಯಲ್ಲಿ ಬೆಳೆಯುತ್ತಿರುವ ದೇಶದ ಏಕೈಕ ಮಹಾನಗರ ಬೆಂಗಳೂರು ಎನಿಸಿಕೊಂಡಿದೆ.

ಡಾ.ಟಿ. ತಿಪ್ಪಯ್ಯ ಎಂಬುವವರ ಪ್ರಕಾರ ಬೆಂಗಳೂರಿನಲ್ಲಿ ಕನಿಷ್ಠ ಐವತ್ತು ಕೆರೆಗಳನ್ನು ನುಂಗಿಹಾಕಿದ್ದು ಸರ್ಕಾರದ ಬಿಡಿಎ. ಬೆಂಗಳೂರಿಗರಿಗೆ ಕಡಿಮೆ ದರದಲ್ಲಿ ಸೈಟುಗಳನ್ನು ಕೊಡಲು ಬಿಡಿಎ ಜಮೀನುಗಳನ್ನು ಮತ್ತು ಅದರಲ್ಲಿದ್ದ ಕೆರೆಗಳನ್ನೂ ವಶಪಡಿಸಿಕೊಳ್ಳಬೇಕಾಯಿತು. ಸೈಟುಗಳು ಕಾಲುವೆಗಳಲ್ಲೂ ರೂಪಗೊಂಡಿದ್ದರಿಂದ ಮತ್ತು ಸುತ್ತಲೂ ಮನೆಗಳು ತಲೆ ಎತ್ತಿದ್ದರಿಂದ ಕೆರೆಗಳಿಗೆ ಮಳೆ ನೀರು ಹರಿದು ಬರುವುದೇ ನಿಂತುಹೋಯಿತು. ನಿಧಾನವಾಗಿ ಕೆರೆಗಳು ಬತ್ತಿಹೋದವು. ಆಮೇಲೆ ಕೆರೆ ಜಾಗಗಳಲ್ಲಿ ತಲೆ ಎತ್ತಿದ್ದು ಸ್ಟೇಡಿಯಂಗಳು, ಬಸ್‌ಸ್ಟ್ಯಾಂಡ್‌ಗಳು, ವಸತಿ ಕಾಂಪ್ಲೆಕ್ಸ್‌ಗಳು ಮತ್ತು ವಾಣಿಜ್ಯ ಮಳಿಗೆಗಳು.

ಬಿಡಿಎ ಬೆಂಗಳೂರಿಗರಿಗೆ ಮಾತ್ರ ಸೈಟುಗಳನ್ನು ವಿತರಿಸುತ್ತಿದ್ದರಿಂದ ಹೊರಗಿನಿಂದ ಬಂದವರಿಗೆ ಸೈಟುಗಳು ಸಿಗುವುದು ಕಷ್ಟವಾಗಿತ್ತು. ಆಗ ತಲೆ ಎತ್ತಿದ್ದು ಬಿಲ್ಡರ್ ಲಾಬಿ. ಲ್ಯಾಂಡ್ ಮಾಫಿಯಾದವರು ಸಿಕ್ಕ ಭೂಮಿಗಳನ್ನೆಲ್ಲ ಆಕ್ರಮಿಸಿಕೊಂಡು ಲೇಔಟ್‌ಗಳನ್ನು ಮತ್ತು ಫ್ಲಾಟ್‌ಗಳನ್ನು ನಿರ್ಮಿಸಿದರು. ಜಾಗ ಸಿಗದಿದ್ದಾಗ ಕೆರೆಗಳನ್ನು ಬೇಕಂತಲೇ ಬತ್ತಿಸಿ, ಅವುಗಳನ್ನು ಸಮತಟ್ಟು ಮಾಡಿ ಕಬಳಿಸಿದರು. ಕೆರೆ ಅಕ್ರಮಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು, ಅಧಿಕಾರಿಗಳು ಮತ್ತು ಕ್ರಿಮಿನಲ್‌ಗಳು ಶಾಮೀಲಾಗಿರುವುದೂ ನಿಜವೇ.

ಒಂದು ಅಂದಾಜಿನ ಪ್ರಕಾರ 16ನೇ ಶತಮಾನದಲ್ಲಿ ಬೆಂಗಳೂರು ಮತ್ತು ಸುತ್ತಮುತ್ತ 2,000 ವಿವಿಧ ಗಾತ್ರದ ಕೆರೆಗಳಿದ್ದವು. ಈಗ ಐವತ್ತು ಕೆರೆಗಳಿರಬಹುದು. ದೊರೆಸ್ವಾಮಿಯವರು ಹೇಳಿರುವಂತೆ ಯಾವ ಮುಲಾಜೂ ಇಲ್ಲದೆ ಒತ್ತುವರಿಯಾಗಿರುವ ಎಲ್ಲಾ ಕೆರೆಗಳನ್ನು ತೆರವುಗೊಳಿಸಿದರೆ ಬೆಂಗಳೂರಿನ ಶೇ 90 ಭಾಗವನ್ನೇ ನೆಲಸಮ ಮಾಡಬೇಕಾಗುತ್ತದೆ. ಇದು ಸಾಧ್ಯವೇ? ಹೋಗಲಿ, ತೆರವುಗೊಳಿಸಿದ ನಂತರ ಅಲ್ಲಿ ಮತ್ತೆ ಕೆರೆಗಳನ್ನು ನಿರ್ಮಿಸಲು ಆಗುವುದೇ? ಹಿರಿಯರಾದ ದೊರೆಸ್ವಾಮಿಯವರ ಕಾಳಜಿ ಮೆಚ್ಚುವಂಥದ್ದೆ. ಬೆಂಗಳೂರಿನ ಕೆರೆಗಳು ಉಳಿಯಬೇಕು, ನಶಿಸುತ್ತಿರುವ ಕೆರೆಗಳನ್ನು ರಕ್ಷಿಸಬೇಕು, ಪುನರ್ ಉಜ್ಜೀವಿಸಬಹುದಾದ ಕೆರೆಗಳನ್ನು ವಶಪಡಿಸಿಕೊಳ್ಳಬೇಕು ಎನ್ನುವುದೂ ಮುಖ್ಯವೇ.


ಆದರೆ ಆಗಲೇ ಸತ್ತುಹೋಗಿರುವ, ಮತ್ತೆಂದೂ ಪುನರ್ ನಿರ್ಮಿಸಲಾಗದಂತಹ ಜಾಗಗಳನ್ನೆಲ್ಲ ಖಡಾಖಂಡಿತವಾಗಿ ತೆರವುಗೊಳಿಸಬೇಕು ಎಂದರೆ ಬೆಂಗಳೂರು ತನ್ನ ಮೇಲೆ ತಾನೇ ದೊಡ್ಡ ಚಪ್ಪಡಿ ಕಲ್ಲು ಎಳೆದುಕೊಂಡಂತಾಗುವುದಿಲ್ಲವೇ? ದೊರೆಸ್ವಾಮಿಯವರು ಮತ್ತು ಸಿದ್ದರಾಮಯ್ಯನವರು ಕೆರೆ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಸರಿಯಾದ ನೀತಿಗಳನ್ನು ರೂಪಿಸಬೇಕಿದೆ. ■

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಅಂಕೋಲಾ: ಹರಾಮಿ ಪಿಐ ಹೆಗಡೆಗೆ ಬಡಪಾಯಿ ಬಲಿ


ಪಿಐ ಗಣೇಶ್ ಹೆಗಡೆ

ಪಿಐ ಹೆಗಡೆ ಪೊಲೀಸ್ ಇಲಾಖೆಗೇ ಕಳಂಕ. ಆತ ಸ್ಯಾಡಿಸ್ಟ್. ಭ್ರಷ್ಟ, ಹೆಣ್ಣುಬಾಕ; ಖಾಕಿ ಗೂಂಡಾ. ಪೊಲೀಸ್ ಇಲಾಖೆಯಲ್ಲಿರಲು ಈತ ನಾಲಾಯಕ್. ಇಂಥವನಿಗೆ ತಕ್ಕ ಪಾಠ ಕಲಿಸುವ ಧೈರ್ಯ ಡಿಜಿಪಿ ಓಂಪ್ರಕಾಶ್ ಸಾಹೇಬರಿಗಿದೆಯಾ? ಗೃಹ ಮಂತ್ರಿ ಕೆ.ಜೆ. ಜಾರ್ಜ್ ಮುಗ್ಧ-ನಿಷ್ಪಾಪಿ ಹಾಲಕ್ಕಿ ಒಕ್ಕಲಿಗ ಕುಟುಂಬದ ಹುಡುಗನ ಮೇಲಾದ ಹೇಯ-ಬರ್ಬರ ಭಯಾನಕ ಪೊಲೀಸ್ ಹಲ್ಲೆ ಗಂಭೀರವಾಗಿ ಪರಿಗಣಿಸಬೇಕಿದೆ. ಜನ ಬೀದಿಗಿಳಿವ ಮೊದಲೇ ಪಾಪಿ ಪೊಲೀಸರ ಮನೆಗಟ್ಟುವ ಕೆಲಸ ಸಂಬಂಧಿಸಿದವರು ಮಾಡಬೇಕಿದೆ.



ಸುನಿಲ ಬಾನಾವಳಿ


ಉತ್ತರ ಕನ್ನಡದ ಅಂಕೋಲಾದಲ್ಲಿ ಅಂಧಾ ದರ್ಬಾರಿನದೇ ಅಟ್ಟಹಾಸ! ಕಾನೂನು-ಸುವ್ಯವಸ್ಥೆ ಎಂಬುದು ಅದೆಂದೋ ಸತ್ತು ಹೋಗಿದೆ. ಅಕ್ರಮ-ಅನ್ಯಾಯ-ಅನಾಚಾರ-ಅವಾಂತರ ತಾಲ್ಲೂಕಾದಳಿತದ ನಿತ್ಯ 'ಕರ್ಮ'ದಂತಾಗಿದೆ. ದಲಿತರಿಗೆ-ಬಡವರಿಗೆ-ಅಸಹಾಯಕರಿಗೆ ಮತ್ತು ಮಹಿಳೆಯರಿಗೆ ಬದುಕು ಬವಣೆಯಾಗಿದೆ. ಒಂದೆಡೆ ಆಯಕಟ್ಟಿನ ಜಾಗದಲ್ಲಿರುವ ಅಧಿಕಾರಿ ಗಣದ ಪಾತಕವಾದರೆ, ಮತ್ತೊಂದೆಡೆ ಹೊಣೆಗೇಡಿ ಶಾಸಕ ಸತೀಶ್ ಸೈಲ್‌ನ ಶುದ್ಧ ಸೋಂಭೇರಿತನ. ಒಟ್ಟಿನಲ್ಲಿ ಅಂಕೋಲಾ ಎಂದರೆ ಸಾಕ್ಷಾತ್ ನರಕ!!

ಇಡೀ ಅಂಕೋಲೆಯ ಅಷ್ಟೂ ಅನಿಷ್ಟ-ಅವ್ಯವಹಾರದ ಕಿಂಗ್‌ಪಿನ್ ಹಸಿಹಸೀ ಹರಾಮಿ ಪೊಲೀಸ್ ಇನ್ಸ್‌ಪೆಕ್ಟರ್ ಗಣೇಶ್ ಹೆಗಡೆ! ಐದಾರು ಗೂಂಡಾ ಗುಣಧರ್ಮದ ಪೇದೆಗಳ ಗ್ಯಾಂಗ್ ಕಟ್ಟಿಕೊಂಡಿರುವ ಹೆಗಡೆ ಪೊಲೀಸ್ ಠಾಣೆಯನ್ನು ಲೇವಾದೇವಿ ಅಡ್ಡೆಯಾಗಿ ಮಾರ್ಪಡಿಸಿಕೊಂಡಿದ್ದಾನೆ; ಹೆಣ್ಣುಗಳ ಖಯಾಲಿಯ ಹೊಲಸು ಬುದ್ಧಿಯ ಪಿಐ ಹೆಗಡೆ ಹಣ ಸಿಗುತ್ತದೆಂದರೆ ಅದೆಂಥ ಪಾಪಿ ಕಾರ್ಯಾಚರಣೆಗೂ ರೆಡಿ! ಪ್ರತಿದಿನ ಅಂಕೋಲೆಯ ಸುತ್ತ-ಮುತ್ತ ನಡೆಯುವ ದೋ ನಂಬರ್ ದಂಧೆ ವಹಿವಾಟು ಕಡಿಮೆಯೆಂದರೂ ಕಾಲು ಕೋಟಿ! ಇದಕ್ಕೆಲ್ಲ ಹೆಗಡೆ ಮಾಣಿಯೇ ಅಪ್ಪಯ್ಯ!

ಮಹಾನ್ ರಸಿಕ ಕ್ರೀಡಾಪಟುವಾದ ಹೆಗಡೆ ಅಂಕೋಲೆಗೆ ವಕ್ಕರಿಸಿ ವರ್ಷ ಎರಡು ಸಂದಿದೆ. ಈ ಅವಧಿಯಲ್ಲಿ ಅಂಕೋಲಾದ ಹಳ್ಳಿ-ಹಳ್ಳಿಗಳಲ್ಲಿ ಕೋಳಿ ಅಂಕ, ಗುಡು-ಗುಡಿ ಮಂಡ, ಮಟ್ಕಾ, ಜುಗಾರಿ, ಚರ್ಮೋದ್ಯಮ ದಂಧೆ ಹುಲುಸಾಗಿ ಹಬ್ಬಿದೆ! ಏಪ್ರಿಲ್-ಮೇ ಸೀಜನ್‌ನಲ್ಲಿ ಹಳ್ಳಿ ಏರಿಯಾದಲ್ಲಿ ನಡೆಯುವ ಧಾರ್ಮಿಕ-ಸಾಂಸ್ಕೃತಿಕ ಚಟುವಟಿಕೆ ಹೊತ್ತಲ್ಲಿ ನಾಟಕ-ಮನರಂಜನೆ ನಡೆಯುವುದು ಅಂಕೋಲೆಯಲ್ಲಿ ಮಾಮೂಲಿ. ಇಂಥ 'ನಾಟಕ'ದ ಗಡಿಬಿಡಿಯಲ್ಲಿ ನಾನಾ ನಮೂನೆಯ ಜೂಜಾಟ ನಡೆಯುತ್ತದೆ. ಇದಕ್ಕೆಲ್ಲ ಪಿಐ ಹೆಗಡೆಯ ಠಾಣೆಗೆ 25 ಸಾವಿರ 'ಒಪ್ಪಿಗೆ ಕಾಣಿಕೆ' ಇಡಲೇಬೇಕು. ಲಂಚ ಪಡೆದ ನಂತರ ಈತ ಸುಮ್ಮನಿರುತ್ತಾನೆಂದು ಭಾವಿಸುವಂತೆಯೂ ಇಲ್ಲ. ನಕಲಿ ರೇಡು ಹಾಕಿ ಅಲ್ಲಿರುವ ಹಣವೂ ಬಾಚಿಕೊಂಡು ಬರ್‍ತಾನೆ. ಡಬ್ಬಲ್ ಧಮಾಕಾ ಮಾಮಾ ಈ ಪೊಲೀಸಪ್ಪ!! ಡಾಂಬರ್ ಮಾಫಿಯಾದ ಹಿತರಕ್ಷಕನೇ ಪಿಐ ಹೆಗಡೆ!

ಪಿಐ ಗಣೇಶ್ ಹೆಗಡೆ ಅನಾಹುತಕಾರಿ ಹೆಣ್ಣುಬಾಕನೆಂಬ ಸಂಗತಿ ಅಂಕೋಲೆಯ ಉದ್ದಗಲಕ್ಕೂ ಜನಜನಿತ; ಕತ್ತೆಗೆ ಸೀರೆ ಉಡಿಸಿ ಹೆಗಡೆ ಮಾಮಾನ ಜೀಪಿನ ಸವಾರಿ ಹೋಗುವ ದಾರಿಯಲ್ಲಿ ನಿಲ್ಲಿಸಿದರೆ, ಆತ ಅಲ್ಲೇ ನಿಂತು


ಎಸ್ಪಿ ಆರ್. ದಿಲೀಪ್


ಅಂಕೋಲದ ಅಧಿಕೃತ ಪೊಲೀಸ್ ಠಾಣೆ

ಜೊಲ್ಲು ಸುರಿಸೋದು ಗ್ಯಾರಂಟಿ ಎಂದು ಜನ[...] ತ್ತಿದ್ದಾರೆ. ಇಷ್ಟು ನಿರ್ಲಜ್ಜ ನಡವಳಿಕೆಯ ಹೆಗಡೆ[...] ಎದುರು ಚೆಂದದ ಹೆಂಗಸರು ಸುಳಿದರಂತೂ [...] ಖಂಡಿತ. ಠಾಣೆಗೆ ಸಮಸ್ಯೆ ಹೊತ್ತುಕೊಂಡ[...] ಮಹಿಳೆಯರನ್ನು ಆತ ಪಳಗಿಸಲು [...] ಪ್ರಯತ್ನಿಸುತ್ತಾನೆ; ಆ ನಂತರ ಪ್ರಕರಣದ ಪರಿಗ[...] ಪಿಐ ಡ್ಯೂಟಿ ಸ್ಟೈಲ್. ಸಮಸ್ಯೆ ಪರಿಹಾರ ಮಾಡಲ[...] ಹೆಂಗಸರ ಮೊಬೈಲ್ ನಂಬರ್ ಪಡೆದುಕೊಳ್[...] ಸಾಹೇಬರು ಮರೆಯುವುದಿಲ್ಲ.

ಹೆಂಗಸರ ಮೊಬೈಲ್‌ಗೆ ಬುರ್ನಾಸ್ [...] ಕಳಿಸೋದು, ಅಶ್ಲೀಲ ಕಾಲ್ ಮಾಡೋದು [...] ಜನ್ಮಕ್ಕಂಟಿದ ರೋಗ. ಆತ ಎಲ್ಲೆಲ್ಲಿ ಕೆಲಸ ಮಾ[...] ಅಲ್ಲೆಲ್ಲ 'ಹೆಂಗಸರ ಮಳ್ಳ' ಎಂಬ ಬಿರುದು[...] ಬಂದಿದ್ದಾನೆ. ಹಿಂದೆ ಭಟ್ಕಳದಲ್ಲಿ ಬ್ಲೂಫಿಲ[...] ನಡೆದಾಗ ಹೆಗಡೆ ಅದರ ಫಲಾನುಭವಿ ಎಂಬ [...] ಉಡುಪಿ ಜಿಲ್ಲೆಯಲ್ಲಿ ನೌಕರಿ ಮಾಡಿದಾಗಲ[...] ನಡವಳಿಕೆ ಸರಿಯಿಲ್ಲ ಎಂದು ಜನ ಕ್ಯಾಕರಿಸಿ ಉ[...] ಅಂಕೋಲೆಯಲ್ಲಂತೂ ಈತನ ಪೀಡೆ ವಿಪರೀತ [...] ಬೇಲೇಕೇರಿಯ ಗ್ರಾಮಲೆಕ್ಕಿಗಳೊಂದಿಗೆ ಪಿಐ[...] ಇಟ್ಟುಕೊಂಡಿರುವ ಸಲುಗೆ ರಂಗೀಲಾ [...] ಆಹಾರವಾಗಿದೆ; ಭಾವಿಕೇರಿಯ ಕಾಲೇಜು [...] ಫ್ಯಾಮಿಲಿಯ ಅಸಹಾಯಕತೆ-ಆಕೆಯ ಮಳ್ಳಾ[...] ತನ್ನ ಚಟಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದ್ದಾನೆ. ಸಗ[...] ಶಿಕ್ಷಕಿಯೊಬ್ಬಳ ಮೊಬೈಲ್‌ಗೆ ಈತ ಕಳಿಸಿ[...] ವೇದನೆಯ ಸಂದೇಶ ಆಕೆಯ ಪತಿಯ ಪಿ[...] ದೊಡ್ಡ ರಾದ್ಧಾಂತ ಮಾಡಿತ್ತು! ದೋಂಗ್ರಿಯ ಹ[...] ಹೆಂಗಸಿನ ಗಂಡನ ಮಿಸ್ಸಿಂಗ್ ಪಿಐ ಮಾಮನ[...] ತೀರಿಕೆಗೆ ನೆರವಾಗಿದೆ!

ಹೆಗಡೆಯ ಇಂಥ ಮನ್ಮಥ ಲೀಲೆ ಒಂದಾ... [...] ಅದಕ್ಕೆ ಲೆಕ್ಕವೇ ಇಲ್ಲ. ಸಾಹೇಬರ ದೌರ್ಬ[...] ಮಾಡಿಕೊಂಡಿರುವ ಪೇದೆಗಳ ತಂಡವೊಂದು[...] ಅಂಕೋಲೆಯ ಅಮಾಯಕರನ್ನು ಬಡಿದು [...] ಈ ಪೇದೆ ಪಟಾಲಮ್‌ನ ಪುಂಡಾಟ-ಸುಲಿಗೆ [...] ಹೋಗಿದೆ. ಪಿಐ ಗಣೇಶ್ ಹೆಗಡೆಯ [...] ಬೆಟಾಲಿಯನ್‌ಗೆ ಸುನಿಲ್ ಬಾನಾವಳಿ ಕ್ಯಾಪ್ಟ[...] ರೌಡಿಯಾದ ಈತ ಬಾಸ್‌ನ ಬೇಕು-ಬೇಡ ಬಾ[...] ಪೂರೈಸುತ್ತಾನೆ. ತಾನೂ ಸುಖ-ಸಂಪತ್ತು ಪಡೆ[...] ಹೆಗಡೆಯ ಆರೆಂಟು ನಿಷ್ಠಾವಂತ ಪೊಲೀಸ್ [...] ಹಿಂಸೆ ತಾಳಲಾಗದೆ ಅಂಕೋಲೆ ಕಂಗಾಲಾಗಿ [...] ಇಸ್ಪೀಟು ಅಡ್ಡೆ, ಡಾಂಬರ್ ಮಾಫಿಯಾ, ಕೋ[...] ಅಂಕಣ, ಮಟ್ಕಾ ಕೇಂದ್ರ, ಅಕ್ರಮ ಸಾರಾಯಿ ತಾ[...] ನಿಗದಿತ ಮಾಮೂಲಿ ತರುವುದೇ ಈ ಪೇದೆ ಪ[...] ಕರ್ತವ್ಯ ಎಂಬಂತಾಗಿದೆ.


ಜಿಲ್ಲೆಯ ಪೊಲೀಸ್ ಪ್ರಪಂಚದಲ್ಲಿ ಪಿಐ [...] ಲಂಚದ ಲಾಲಸೆ, ಲಂಪಟ ಲೀಲೆಗಳೆಲ್ಲ ಬಹು[...] ವಿಷಯಗಳು. ಎಸ್ಪಿ ಆರ್. ದಿಲೀಪ್ ಸಾಹೆ[...] ಇದು ಗೊತ್ತಿರುವ ಕತೆಯೇ. ಆದರೂ ಎಸ್ಪಿ[...] ಕಾಣದಂತಿದ್ದಾರೆ. ಅಷ್ಟೇ ಅಲ್ಲ ಹೆಗಡೆಯ ಬಾ[...] ಮಾಫ್ ಮಾಡಿ ಸಲಹುತ್ತಿದ್ದಾರೆ. ಎಸ್ಪಿ [...] ಕೃಪಾಕಟಾಕ್ಷದಲ್ಲಿ ಪಿಐ ಹೆಗಡೆ ಪೊಲೀಸ್‌ಗಿರಿಗ[...] ಖದರು ಬಂದುಬಿಟ್ಟಿದೆ.

ಅಸಹಾಯಕರ ಮೇಲೆ ಅಮಾನುಷವಾ[...] ಚಿತ್ರಹಿಂಸೆಗೀಡು ಮಾಡಿ ವಿಕೃತಾನಂದ ಪಡೆಯ[...] ಹೆಗಡೆಯ ಪಾತಕಿ ಪೇದೆ ಪಡೆ ಇದೇ ತಿಂಗಳ [...] ವಾರದಲ್ಲಿ ಬಡಪಾಯಿಯೊಬ್ಬನ ಬದುಕನ್ನೇ [...] ಮಾಡಿಬಿಟ್ಟಿದೆ! ಗಣೇಶ್ ಹೆಗಡೆಯ ರಕ್ಕಸ[...] ಮಾರಣಾಂತಿಕ ಥರ್ಡ್ ಡಿಗ್ರಿ ಟ್ರೀಟ್‌ಮೆಂಟ್‌ಗ[...] ಒಕ್ಕಲು ಬುಡಕಟ್ಟಿನ ಕುಟುಂಬದ ವಾಸುದೇ[...] ದೇಹದ ಎಡಭಾಗದ ಸ್ವಾಧೀನ ಕಳೆದುಕೊಂಡ[...]

ಫಿಟ್ಸ್ ಪುಕಾರು!!

ಕಳ್ಳನೆಂಬ ಸಂಶಯದಲ್ಲಿ ನಿರಪರಾಧಿ ವಾಸುದೇವ ಗೌಡನನ್ನು ನಿಗೂಢ ಸ್ಥಳಕ್ಕೆ ಒಯ್ದು ಬರೋಬ್ಬರಿ 15 ತಾಸು ತರತರದ ಹಿಂಸಾತ್ಮಕ ಪಾತಕ ಪ್ರಯೋಗಿಸಿದ್ದ ಪೊಲೀಸರು ಕ್ರಿಮಿನಲ್‌ಗಳೆಂಬುದು ಈಗ ಸ್ವಯಂ ಸಾಬೀತು ಪಡಿಸಿಕೊಂಡಿದ್ದಾರೆ. ಬಂಗಾರ ಕದ್ದಿರುವೆನಾಗಿ ಒಪ್ಪಿಕೊಳ್ಳುವಂತೆ ಬರ್ಬರ ಟ್ರೀಟ್‌ಮೆಂಟ್ ನೀಡಿದ ಅಂಕೋಲಾ ಪಿಐ ಗಣೇಶ ಹೆಗಡೆ ಹಾಗು ಆತನ ರೌಡಿ ಪೊಲೀಸ್ ಪಡೆಯ ಕ್ರೌರ್ಯಕ್ಕೆ ಆ ಹುಡುಗನ ಭವಿಷ್ಯವೇ ಹಾಳಾಗಿಹೋಗಿದೆ. ಆತ ಎಂದೆಂದೂ ಮೊದಲಿನಂತಾಗದ ದುಸ್ಥಿತಿಗೆ ಪೊಲೀಸರು ತಳ್ಳಿದ್ದಾರೆ.

ಮುಗ್ಧನ ಬದುಕಿಗೆ ಕೊಳ್ಳಿ ಇಟ್ಟಿರುವ ಪಿಐ ಗಣೇಶ್ ಹೆಗಡೆ "ವಾಸುದೇವನಿಗೆ ಪೊಲೀಸರು ಹೊಡೆದಿಲ್ಲ. ಆತ ಫಿಟ್ಸ್, ಫಿಟ್ಸ್ ಪೇಶಂಟ್.... ಒಂದೇಟು ಕೊಟ್ಟಾಗ ಬಿದ್ದು ಸ್ವಾಧೀನ ಕಳೆದುಕೊಂಡಿದ್ದಾನೆ....." ಎಂದೆಲ್ಲ ಸುಳ್ಳುಗಳನ್ನು ಕಲಾತ್ಮಕವಾಗಿ ಹೆಣೆಯಲು ಹವಣಿಸುತ್ತಿದ್ದಾನೆ. ಸಬೂಬು ಹೇಳಿದಂತೆಲ್ಲ ಆತನ ಖಾಕಿ ಗ್ಯಾಂಗ್ ಕ್ರಿಮಿನಲ್ ಛಾಸ್ಗಡಿ ಮಾಡಿರುವುದು ಸಾಬೀತಾಗುತ್ತಿದೆ.


ಮೀನುಗಾರಿಕೆ ಬೋಟ್‌ನಲ್ಲಿ ವಾಸುದೇವಗೌಡ


ಸಾಮಾಜಿಕ ಕಾರ್ಯಕರ್ತ ಮಾಧವ ನಾಯ್ಕ ಕಾರವಾರದ ಸಹೃದಯರ ಸಹಕಾರದಿಂದ ಪೊಲೀಸರ ಮಾರಣಾಂತಿಕ ಹಲ್ಲೆಯಿಂದ ಹೈರಾಣದ ವಾಸುದೇವ ಗೌಡನನ್ನು ಮಂಗಳೂರಿನ ಆಸ್ಪತ್ರೆಗೆ ಸ್ಥಳಾಂತರಿಸುತ್ತಿದ್ದಂತೆಯೇ ಪಿಐ ಹೆಗಡೆ ಗಡಿಬಿಡಿಗೆ ಬಿದ್ದಿದ್ದಾನೆ. ತಾನು ವಾಸುದೇವನ ಚಿಕಿತ್ಸೆಯ ವೆಚ್ಚ ಭರಿಸುವುದಾಗಿ ಹೇಳಿದ್ದಾನೆ. ಮಂಗಳೂರಿಗೆ ವಾಸುದೇವನ ಜೊತೆಗೇ ಹೋಗಿ ಅಡ್ಮಿಟ್ ಮಾಡಿಬರುವೆನಾಗಿ ಸುಳ್ಳು ಹೇಳಿದ್ದಾನೆ. ಸಾಮಾಜಿಕ ಕಾರ್ಯಕರ್ತ ಮಾಧವ ನಾಯ್ಕ ಬಳಗದ ಕಾಳಜಿಯಿಂದ ವಾಸುದೇವನ ತಪ್ಪಿಸುವ ತಂತ್ರಗಾರಿಕೆ ಮಾಡಿದ್ದಾನೆ. ಮಾಧವ ನಾಯ್ಕರ ದೇಖರೇಖಿಯಲ್ಲಿ ಆತ ಇದ್ದರೆ ತನ್ನ ಮತ್ತು ತನ್ನ ಗ್ಯಾಂಗಿನ ದುಷ್ಟತನ ಇನ್ನಷ್ಟು ಬಯಲಾಗುವ ಭೀತಿಯೇ ಹೆಗಡೆ ಚಡಪಡಿಕೆಗೆ ಕಾರಣ.

ವಾಸುದೇವ ದಾಖಲಾಗಿದ್ದ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯ ಪಿಆರ್‌ಓ ಡೇವಿಡ್‌ರನ್ನು ಕದ್ದು ಸಂಧಿಸಿದ ಪಿಐ ಹೆಗಡೆ ಬಚಾವಿಗೆ ಭಂಡಾಟ ನಡೆಸಿ ಸಿಕ್ಕಿಬಿದ್ದಿದ್ದಾನೆ. ವಾಸುದೇವನ ಸಹಿ ಇರುವ ಖಾಲಿ ಹಾಳೆಗೆ ಪಿಆರ್‌ಓ ಮೂಲಕ ಹೆಗಡೆ ತರಿಸಿಕೊಂಡು ಸುಳ್ಳು ಹೇಳಿಕೆ ತಯಾರಿಸಿ ತಾನು ನಿರಪರಾಧಿಯೆಂದು ಬಿಂಬಿಸಲು ಹೊರಟಿದ್ದಾನೆ. ವಾಸುದೇವ ಫಿಟ್ಸ್ ರೋಗಿ ಎಂದು ಪುಕಾರು ಹಬ್ಬಿಸಿದ್ದಾನೆ.

ಫಿಟ್ಸ್ ಇರುವಾತ ಸಮುದ್ರ ಮೀನುಗಾರಿಕೆಗೆ ಬೋಟಲ್ಲಿ ಹೋಗುವ ಧೈರ್ಯ ಮಾಡಬಹುದಾ? ವಾಸುದೇವ ಗೌಡ ಗೋವಾದ ಬೋಟೊಂದರಲ್ಲಿ ಮೀನುಗಾರಿಕಾ ಕಾರ್ಮಿಕನಾಗಿದ್ದು ಆತನ ಕುಟುಂಬದವರು, ಊರವರು ಹೇಳುವ ಪ್ರಕಾರ ಫಿಟ್ಸ್ ಇರಲಿಲ್ಲ ವಾಸುದೇವನಿಗೆ. ಸಾಮಾಜಿಕ ಕಾರ್ಯಕರ್ತ ಮಾಧವ ನಾಯ್ಕರಿಗೆ ಪಿಐ ಹೆಗಡೆ ಆಸ್ಪತ್ರೆಗೆ ಹೋಗಿ ವಾಸುದೇವನ ಸಹಿಯಿರುವ ಖಾಲಿ ಕಾಗದ ತಂದದ್ದು ಗೊತ್ತಾಗುತ್ತಿದ್ದಂತೆಯೇ ಅದನ್ನು ಮರಳಿಸಿದ್ದಾನೆ. ಆದರೆ ವಾಸುದೇವನ ಕುಟುಂಬದವರನ್ನು ಬೆದರಿಸುವ ನೀಚತನ ನಡೆಸುತ್ತಿದ್ದಾನೆ. ಹೇಗಾದರೂ ಮಾಡಿ ಕೇಸು ಹಳ್ಳ ಹಿಡಿಸಲು ಪಿಐ ಹೆಗಡೆ ಜಾತಿ ಬಾಂಧವರಾದ ರಾಜಕಾರಣಿಗಳ ಕೈಕಾಲು ಹಿಡಿಯುತ್ತಿದ್ದಾನೆ. ಎಸ್ಪಿ ದಿಲೀಪ್ ಜಾತಿ ಪ್ರೀತಿಯಿಂದ ಪಿಐ ಹೆಗಡೆ ರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದಾನೆ.

ಪಿಐ ಹೆಗಡೆ ಮತ್ತಾತನ ಆರು ಮಂದಿ ಕ್ರೂರ ಪೇದೆ ಗ್ಯಾಂಗನ್ನು ನಿಷ್ಠೂರ ತನಿಖೆ ಒಳಪಡಿಸಬೇಕಿದೆ. ನ್ಯಾಯಾಂಗ ತನಿಖೆ ಮಾಡಲು ಸಿಎಂ ಮನಸ್ಸು ಮಾಡುವರಾ? ಹಾಗಂತ ಅಸಹಾಯಕ ಹಾಲಕ್ಕಿ ಒಕ್ಕಲಿಗರು, ಉತ್ತರ ಕನ್ನಡದ ಪ್ರಜ್ಞಾವಂತರು ಕೇಳುತ್ತಿದ್ದಾರೆ. ಪಿಐ ಹೆಗಡೆಗೆ ಪಾಠ ಕಲಿಸುವ ಅನಿವಾರ್ಯತೆ ಗೃಹ ಇಲಾಖೆಯ ಪ್ರಭೃತಿಗಳಿಗೆ ಅರ್ಥವಾಗಿದೆಯಾ?







...ೋಟಾ ಕೇಸ್!!


...ಕೋಲೆಯ ಪೊಲೀಸರು ಪಾಪದ ವಾಸುದೇವ ...ನ್ನು ಸಾಯುವಂತೆ ಹೊಡೆದು ಅರೆಜೀವ ...ರ್ಶ್ವ ಶಾಶ್ವತವಾಗಿ ತೆವಳುತ್ತ ಜೀವಿಸುವಂಥ ಪರಿಸ್ಥಿತಿಗೆ ...ದೆಂದು ಜಗಜ್ಜಾಹೀರಾಗುತ್ತಿದ್ದಂತೆಯೇ ಪೊಲೀಸ್ ... ಎಚ್ಚೆತ್ತಂತೆ ನಟಿಸುತ್ತಿದೆ. ಅಂಕೋಲೆ ಪೊಲೀಸರ ...ಕ್ರಮ ಕೈಗೊಳ್ಳುವ ಭ್ರಮೆ ಮೂಡಿಸುತ್ತಿದೆ. ಶಿರಸಿ ...ಸ್‌ಪಿ ತನಿಖಾಧಿಕಾರಿಯಾಗಿ ನೇಮಿಸಲಾಗಿದೆ.

ಕಣ್ಣೊರೆಸುವ ಕುತಂತ್ರ!

...ಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿ ಅಂಕೋಲಾ ...ಸರ ಪಾತಕ ಬಹಿರಂಗವಾಗುತ್ತಿದ್ದಂತೆಯೇ ...ವನ್ನು ದಾಖಲಿಸಲಾಗಿದೆ ಅಂಕೋಲಾ ಠಾಣೆಯಲ್ಲಿ. ...ಠಾಣೆಯ ಪಾತಕಿ ಪೊಲೀಸರ ಮೇಲೆ ಕೇಸು ...ಗಿದೆ. ಇದರಲ್ಲಿ ನಂಬರ್ ಒನ್ ಆರೋಪಿ ಯಾರು ... ಅಂಕೋಲಾ ಪೊಲೀಸ್ ಠಾಣೆ. ಆರೋಪಿ ನಂಬರ್ ...ಟೂ ಎಂದರೆ ಕೇಸು ಹಾಕಬೇಕಾಗಿರುವುದು ಪಿಐ ... ಹೆಗಡೆ ಮತ್ತು ಆತನ ನಿಷ್ಠಾವಂತ ಬಂಟರಾದ ...ೇದೆಗಳ ಮೇಲೆ. ಈ ಸಪ್ತಶನಿಗಳು ವಾಸುದೇವನ ... ಬರಡಾಗಿಸಿದ್ದಾರೆ; ಕಾನೂನು ಧಿಕ್ಕರಿಸಿ ಅಪ್ರಾಪ್ತ ... ಬಾಲಕ ಗಣಪತಿಗೆ ಕೋಳತೊಡಿಸಿ ಹೊಡೆದಿದ್ದಾರೆ. ...ೊಲೀಸರ ಆರ್ಭಟಕ್ಕೆ ಬೆದರಿ ಆತ್ಮಹತ್ಯೆಗೂ ಪ್ರಯತ್ನ ...ದ್ದನೆ. ಈಗಲೂ ಆತ ಚೇತರಿಸಿಕೊಂಡಿಲ್ಲ. ...ವರು ಆತನ ಮೇಲೊಂದು ನಿಗಾ ಇಟ್ಟಿದ್ದಾರೆ. ...ಸುದೇವನ ತಾಯಿಯನ್ನು ಕೊಂದಿರುವ, ...ೇವನನ್ನು ಹಾಫ್ ಮರ್ಡರ್ ಮಾಡಿರುವ, ಗಣಪತಿ ...ಆತ್ಮಹತ್ಯೆಗೆ ಪ್ರಚೋದಿಸಿರುವ, ರಾಘವೇಂದ್ರ ಗೌಡ ...ಮಾಗುವ ಪರಿಸ್ಥಿತಿ ನಿರ್ಮಿಸಿರುವ ಅಂಕೋಲೆಯ ...ತಕಾರಿ ಪೊಲೀಸರಿಗೆ ಇಲಾಖೆಯ-ಸ್ವಜಾತಿ ...ರಣಿಗಳ ರಕ್ಷಣೆ ಸಿಗಬಹುದು. ಆದರೆ ನೊಂದಿರುವ ...ಕುಟುಂಬಗಳ ಕಣ್ಣೀರಿನ ಶಾಪ ತಟ್ಟದೇ ಇರದು!!

ತಾಕೀತು ಮಾಡಿ ಹೋಗಿದ್ದಾರೆ ಪಿಐ ಗಣೇಶ್ ಹೆಗಡೆ ಅಂಡ್ ರೌಡಿ ಪೊಲೀಸ್ ಪಟಾಲಮ್. ವಾಸುದೇವನ ತಾಯಿಗೆ ವಿಶೇಷವಾಗಿ ಕರೆದು, "ನಿನ್ನ ಮಗನ ಮೇಲೆ ಸಂಶಯ ಜಾಸ್ತಿಯಿದೆ... ಅವನ ಎತ್ತಾಕಿಕೊಂಡು ಹೋಗ್ತೇವೆ...." ಎಂದು ಪೊಲೀಸರು ಧಮಕಿ ಹಾಕಿದ್ದಾರೆ.

ಪೊಲೀಸರ ಈ ಘರ್ಜನೆಗೆ ವಾಸುದೇವನ ವೃದ್ಧ ತಾಯಿ ಹೌಹಾರಿದ್ದಾಳೆ. ತನ್ನ ಮಗನ ಮೇಲೆ ಪೊಲೀಸರು ಕಣ್ಣಿಟ್ಟಿರುವುದು ಆಕೆಯನ್ನು ಖಿನ್ನತೆಗೆ ತಳ್ಳಿಬಿಟ್ಟಿದೆ. ಅಂದು ರಾತ್ರಿ ಆಕೆ ಬಿಪಿ ಮಾತ್ರೆ ತಿನ್ನಲೂ ಮರೆತಿದ್ದಾಳೆ. ತೀರಾ ಮಾನಸಿಕ ಒತ್ತಡಕ್ಕೆ ತುತ್ತಾದ ಆಕೆ ಆ ರಾತ್ರಿಯೇ ಹೃದಯಾಘಾತದಿಂದ ಪ್ರಾಣಬಿಟ್ಟಿದ್ದಾಳೆ! ತಾಯಿ ಸತ್ತ ದುಃಖದಲ್ಲಿದ್ದ ವಾಸುದೇವ ಗೌಡನನ್ನು ಪೊಲೀಸರು ಆತನ ಗುಡಿಸಲಿಂದ ಕರೆದೊಯ್ದಿದ್ದಾರೆ. ಅಂಕೋಲೆಯ ಠಾಣೆಗೆ ಒಯ್ಯದೇ ಮೀನು ಪೇಟೆ ಹತ್ತಿರವಿರುವ ಕ್ವಾಟ್ರರ್ಸ್‌ಗೆ ಕರೆದೊಯ್ದು ಮನಸೋ ಇಚ್ಛೆ ಬಡಿದು 'ಬಂಗಾರ ಎಲ್ಲಿಟ್ಟಿದ್ದೀಯಾ' ಎಂದು ಕೇಳಿದ್ದಾರೆ. ತಾನು ಕದ್ದಿಲ್ಲ ಎಂದು ವಾಸುದೇವ ಹೇಳಿದ್ದಾನೆ. ಮರುದಿನ ಆತನ ಸಂಬಂಧಿ 16 ವರ್ಷದ ಬಾಲಕ ಗಣಪತಿಯನ್ನು ಪೊಲೀಸರು ಅಂಕೋಲೆಯ ತಮ್ಮ 'ವಧಾ ಸ್ಥಾನ'ಕ್ಕೆ ತಂದು ಥಳಿಸಿದ್ದಾರೆ.



ಜೋಡಿಸಲಾಗಿದೆ. ಇಂಥ ಅಪಾಯಕಾರಿ ಆಯುಧವನ್ನು ಪೊಲೀಸರು, ವಾಸುದೇವ, ಗಣಪತಿ, ರಾಘವೇಂದ್ರರ ಮೇಲೆ ಪ್ರಯೋಗಿಸಿದ್ದಾರೆ:

ಸೀಸಮ್ ಕಟ್ಟಿಗೆಯ ರೋಲ್‌ನಿಂದ ಎದೆಯಿಂದ ತೊಡೆಯತನಕ ಇಬ್ಬರು ಪೊಲೀಸರು ತಮ್ಮೆಲ್ಲ ಶಕ್ತಿ ಹಾಕಿ ಶಂಕಿತರ ಮೇಲೆ ಎಳೆದಾಡಿ ಹಿಂಸಿಸಿದ್ದಾರೆ. "ಬಂಗಾರ ನಾವು ಕದ್ದಿಲ್ಲ..." ಎಂದು ಆ ಹುಡುಗರು ಪರಿಪರಿಯಾಗಿ ಹೇಳಿ ಕಣ್ಣೀರಿಟ್ಟರೂ ಸುನಿಲ ಬಾನಾವಳಿ, ಅಶೋಕ ತಳಗಪ್ಪನವರ, ನಾಗೇಕರ್, ಸಂತೋಷ್ ನಾಯಕ, ವಿವೇಕ್ ನಾಯಕ ಸೇರಿದಂತೆ ಒಟ್ಟು 6 ಮಂದಿ ಪೇದೆಗಳಿಗೆ ಅದು ಕೇಳಿಸಲೇ ಇಲ್ಲ, ಆ ಹುಡುಗರು ಒದ್ದಾಡಿದಂತೆಲ್ಲ ಈ ಪೇದೆಗಳು ಮತ್ತವರ ಕಟುಕ ಸಾಹೇಬ ಪಿಐ ಹೆಗಡೆ ಉನ್ಮತ್ತರಾಗಿ ತಾಂಡವ ನೃತ್ಯ ನಡೆಸಿದ್ದಾರೆ. ಪಿಐ ಹೆಗಡೆ ".... ಬಾಯಿ ಬಿಡಿಸಿ... ಬಾಯಿ ಬಿಡಿಸಿ... ಬಡೀರಿ... ಬಡೀರಿ..." ಎಂದು ಹಿಂಸೋನ್ಮಾದದಲ್ಲಿ ಒದರಾಡುತ್ತಿದ್ದ. ಬಾಲಕ ಗಣಪತಿ ಹೊಡೆತ ತಾಳಲಾರದೆ ಮೂತ್ರ ವಿಸರ್ಜನೆ ಮಾಡಿಕೊಂಡಾಗಲಂತೂ ಖಾಕಿ ಗೂಂಡಾಗಳು ಕೇಕೆ ಹಾಕಿ ಸಂಭ್ರಮಿಸಿದ್ದಾರೆ! ಪಿಐಗಂತೂ ಮೃಗೀಯ ಸಡಗರ!!

ಇದರಿಂದ ಮತ್ತಷ್ಟು ಪ್ರಚೋದಿತರಾದ ದುಷ್ಟ ಆರು ಪೊಲೀಸ್ ಪೇದೆಗಳು ವಾಸುದೇವನೊಬ್ಬನ ಮೇಲೆ ಹೆಚ್ಚು ನಿಗಾ ಇಟ್ಟು ಆತನ ಜೀವ ಹಿಂಡತೊಡಗಿದರು. ಆತನ ಕೈ ಬೆರಳಿಗೆ ವಿದ್ಯುತ್ ಶಾಕ್ ನೀಡಿ ಸುಟ್ಟು ಹಾಕಿದರು; ಕಾಲಿನ ಮಂಡಿಗಳಿಗೆ ಸಿಗರೇಟಿನ ಬೆಂಕಿ ಹಚ್ಚಿದರು. ಬರ್ಬರವಾದ ಬೆಲ್ಟ್‌ನಿಂದ ತಲೆ-ತೊಡೆ-ಮುಖ-ಪೃಷ್ಠ ಎನ್ನದೆ ಎಲ್ಲೆಂದರಲ್ಲಿ ಬಡಿದರು. ಆ ಬೆಲ್ಟ್‌ನ ಹೊಡೆತ ತಲೆಗೆ ಬಿದ್ದು ವಾಸುದೇವ ತತ್ತರಿಸಿಬಿಟ್ಟ, ನೆಲಕ್ಕುರುಳಿದ, ವಿಲವಿಲ ಒದ್ದಾಡಿದ, ಪ್ರಜ್ಞೆ ತಪ್ಪಿದ. ಆ ಹೊಡೆತಕ್ಕೆ ಆತನ ಮೆದುಳಿನಲ್ಲಿ ರಕ್ತಸ್ರಾವವಾಗಿತ್ತು, ಹೀಗಾಗಿ ಎಡಗಡೆ ದೇಹ ಭಾಗದ ನಿಯಂತ್ರಣವೇ ತಪ್ಪಿಹೋಯ್ತು. ಬೆಳಗ್ಗೆ 10 ರಿಂದ ನಡುರಾತ್ರಿ 1 ಗಂಟೆ ತನಕ ಯಮಯಾತನೆ ನೀಡಿದ ಖಾಕಿ ರೌಡಿಗಳು ವಾಸುದೇವ ನೆಲಕ್ಕೊರಗಿದಾಗ ಬೆಚ್ಚಿ ಬಿದ್ದಿದ್ದಾರೆ. ಆಗ ಕಂಗಾಲು ಬಿದ್ದಿದ್ದಾನೆ ಪಿಐ ಹೆಗಡೆ. ನಿತ್ರಾಣಗೊಂಡಿದ್ದ ವಾಸುದೇವನನ್ನು ಆತನ ಮನೆ ಬಳಿ ಬಿಟ್ಟು ಬರಲು ಹೇಳಿದ್ದಾನೆ.

ಕತ್ತಲಲ್ಲಿ ಕಳ್ಳ ಪೊಲೀಸರು ಜೀವಂತ ಶವದಂತಾಗಿದ್ದ ವಾಸುದೇವನನ್ನು ಸಿಂಗನಮಕ್ಕಿಯ ಆತನ ಮನೆ ಪಾಗಾರದ ಬಳಿ ಇಟ್ಟು ಪರಾರಿಯಾಗಿದ್ದಾರೆ. ಆತ ಅದ್ಹೇಗೋ ತೆವಳಿ ಮನೆ ಸೇರಿದ್ದಾನೆ. ವಾಸುದೇವನ ದುಸ್ಥಿತಿಗೆ ಇಡೀ ಗೌಡಗಳ ಕೊಪ್ಪ ಕೆರಳಿದೆ. ಊರವರೆಲ್ಲಾ ಸೇರಿ ವಾಸುದೇವನನ್ನು ಹೊತ್ತುಕೊಂಡು ಪೊಲೀಸ್ ಠಾಣೆ ಬಾಗಿಲಿಗೆ ತಂದು ಮಲಗಿಸಿದ್ದಾರೆ. "ಆತನ ನಡೆದಾಡಲಾಗದ ಸ್ಥಿತಿಗೆ ತಂದ ನೀನೇ ಚಿಕಿತ್ಸೆ ಕೊಡಿಸಿ...." ಎಂದು ಬೈದಿದ್ದಾರೆ. ಬೇರೆ ದಾರಿಯಿಲ್ಲದೆ ಸ್ಟೇಷನ್ ಪಕ್ಕದಲ್ಲೇ ಇರುವ ತಾಲ್ಲೂಕ್ ಆಸ್ಪತ್ರೆಗೆ ಪೊಲೀಸರು ಸೇರಿಸಿದ್ದಾರೆ.

ತಾಲ್ಲೂಕ್ ಆಸ್ಪತ್ರೆಯ ವೈದ್ಯರು ವಾಸುದೇವನ ದುಃಸ್ಥಿತಿ ಕಂಡು ಕೈಮೀರಿದ ಕೇಸ್ ಎಂದು ಹೇಳಿದ್ದಾರೆ. ಜಿಲ್ಲಾ ಆಸ್ಪತ್ರೆಗೆ ಒಯ್ಯುವಂತೆ ಸಲಹೆ ನೀಡಿದ್ದಾರೆ. ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲೂ ವಾಸುದೇವನಿಗಾದ ಗಾಯ ಮತ್ತು ಮೆದುಳಿನ ರಕ್ತಸ್ರಾವಕ್ಕೆ ಚಿಕಿತ್ಸೆ ಸಾಧ್ಯವಾಗಲಿಲ್ಲ, ಆಗಾತನ ಬಂಧುಗಳನ್ನು ಪುಸಲಾಯಿಸಿದ ಅಂಕೋಲಾ ಪೊಲೀಸರು ಗೋವಾಕ್ಕೆ ಸ್ಥಳಾಂತರಿಸುವಂತೆ ಮಾಡಿದರು. ಅಲ್ಲಿಯ ಭಾಷೆ, ಖರ್ಚು ನಿಭಾಯಿಸಲು ವಾಸುದೇವನ ಸಂಬಂಧಿಕರಿಂದಾಗಲಿಲ್ಲ. ಹಾಗಾಗಿ ಆತನನ್ನು ಕಾರವಾರ ಸಿವಿಲ್ ಆಸ್ಪತ್ರೆಗೆ ತಂದರು. ವಾಸುದೇವ ಸಾವು-ಬದುಕಿನ ನಡುವೆ ಒದ್ದಾಡಹತ್ತಿದ.

ವಾಸುದೇವನ ಮೇಲಾದ ಪೊಲೀಸರ ಮಾರಣಾಂತಿಕ ಹಲ್ಲೆ, ಅದರಿಂದಾತ ಜೀವಂತ ಶವದಂತಾಗಿರುವ ಕತೆ ಕಾರವಾರದ ಸಾಮಾಜಿಕ ಕಾರ್ಯಕರ್ತ ಮಾಧವ ನಾಯ್ಕ ಕಿವಿಗೆ ಅದ್ಹೇಗೋ ಮುಟ್ಟುತ್ತದೆ. ತಕ್ಷಣ ಸರ್ಕಾರಿ ಆಸ್ಪತ್ರೆಗೆ ಹೋದ ಮಾಧವ ನಾಯ್ಕ ಮೊದಲು ಮಾಡಿದ್ದು ವಾಸುದೇವನ ಉಳಿಸುವ ಪ್ರಯತ್ನ. ಗೋವಾ ಅಥವಾ ಮಂಗಳೂರಿನಂಥ ದೊಡ್ಡ ಊರಿನ ಹೈಟೆಕ್ ಆಸ್ಪತ್ರೆಗೆ ವಾಸುದೇವನ ಸೇರಿಸುವ ತಾಕತ್ತು ಆತನ ಕುಟುಂಬಕ್ಕೆ ಇಲ್ಲವೆಂಬುದು ಮಾಧವ ನಾಯ್ಕಗೆ ಮನವರಿಕೆಯಾಗಿತ್ತು, ಆತ ತಕ್ಷಣ ಕಾರವಾರದ ನ್ಯಾಯವಾದಿ ಎಸ್.ಪಿ. ಕಾಮತರ ಕ್ರೂಗರ್ ಫೌಂಡೇಷನ್ ಸಂಪರ್ಕಿಸುತ್ತಾರೆ. ಕಾಮತ್ ಹೈರಾಣಾಗಿದ್ದ ವಾಸುದೇವನ ಮೆದುಳು ರಕ್ತಸ್ರಾವಕ್ಕೆ ಚಿಕಿತ್ಸೆ ಮಾಡಿಸಲು ದೊಡ್ಡ ಆಸ್ಪತ್ರೆ ಸೇರಿಸಲು ಸಮ್ಮತಿಸುತ್ತಾರೆ. ಮಾಧವ ನಾಯ್ಕ ಸ್ಥಳೀಯರ ಸಹಕಾರ ಪಡೆದು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ವಾಸುದೇವನನ್ನು ಸ್ಥಳಾಂತರಿಸುತ್ತಾರೆ.

ಮಂಗಳೂರಿನ ಆಸ್ಪತ್ರೆಯಲ್ಲಿ ವಾಸುದೇವ ಈಗ ಅಕ್ಷರಶಃ ಜೀವಚ್ಛವದಂತೆ ಬಿದ್ದುಕೊಂಡಿದ್ದಾನೆ. ಆತನ ಜೀವಕ್ಕೇನೂ ಅಪಾಯವಿಲ್ಲ, ಆದರೆ ಜೀವನಪರ್ಯಂತ ಆತ ಎಡಭಾಗಕ್ಕೆ ಚೇತನ ಬರುವುದು ಅನುಮಾನ. ಪಿಐ ಗಣೇಶ ಹೆಗಡೆಯ ಪಾಪಿ ಪೊಲೀಸ್ ಬಳಗದ ಕ್ರೌರ್ಯಕ್ಕೆ ಆತನ ಇಡೀ ಬದುಕೇ ಬರ್ಬಾದ್ ಆಗಿಹೋಗಿದೆ. ಕೇವಲ 22 ವರ್ಷದ ಹುಡುಗನ ಬದುಕು ಬರಡಾಗಿಸಿದ ಪಿಐ ಗಣೇಶ್ ಹೆಗಡೆ, ಪಿಸಿ ಬಾನಾವಳಿಯ ಆರು ಅನಿಷ್ಟರ ಗ್ಯಾಂಗಿಗೆ ಏನು ಶಿಕ್ಷೆ ಕೊಟ್ಟರೂ ಕಡಿಮೆಯೆ! ನಿರಪರಾಧಿಯನ್ನು ನಿಷ್ಕಾರಣವಾಗಿ ಅಂಗವಿಕಲವಾಗಿಸಿದ, ಅಪ್ರಾಪ್ತ ಬಾಲಕನನ್ನು ಠಾಣೆಗೆ ತಂದು ಚಿತ್ರಹಿಂಸೆ ನೀಡಿದ ಪಿಐ ಹೆಗಡೆ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕಂಬಿ ಹಿಂದೆ ನಿಲ್ಲಿಸಬೇಕಾದ ಜರೂರಿದೆ.

ಪಿಐ ಹೆಗಡೆ ಪೊಲೀಸ್ ಇಲಾಖೆಗೇ ಕಳಂಕ. ಆತ ಸ್ಯಾಡಿಸ್ಟ್, ಭ್ರಷ್ಟ, ಹೆಣ್ಣುಬಾಕ; ಖಾಕಿ ಗೂಂಡಾ. ಪೊಲೀಸ್ ಇಲಾಖೆಯಲ್ಲಿರಲು ಈತ ನಾಲಾಯಕ್. ಇಂಥವನಿಗೆ ತಕ್ಕ ಪಾಠ ಕಲಿಸುವ ಧೈರ್ಯ ಡಿಜಿಪಿ ಓಂಪ್ರಕಾಶ್ ಸಾಹೇಬರಿಗಿದೆಯಾ? ಗೃಹಮಂತ್ರಿ ಕೆ.ಜೆ. ಜಾರ್ಜ್ ಮುಗ್ಧ-ನಿಷ್ಪಾಪಿ ಹಾಲಕ್ಕಿ ಒಕ್ಕಲಿಗ ಕುಟುಂಬದ ಹುಡುಗನ ಮೇಲಾದ ಹೇಯ-ಬರ್ಬರ ಭಯಾನಕ ಪೊಲೀಸ್ ಹಲ್ಲೆ ಗಂಭೀರವಾಗಿ ಪರಿಗಣಿಸಬೇಕಿದೆ. ಜನ ಬೀದಿಗಿಳಿವ ಮೊದಲೇ ಪಾಪಿ ಪೊಲೀಸರ ಮನೆಗಟ್ಟುವ ಕೆಲಸ ಸಂಬಂಧಿಸಿದವರು ಮಾಡಬೇಕಿದೆ.

ಬಡ ಬುಡಕಟ್ಟು ಕುಟುಂಬದ ವಾಸುದೇವ ಗೌಡನ ವೈದ್ಯಕೀಯ ವೆಚ್ಚ ಸರ್ಕಾರವೇ ಭರಿಸಬೇಕಿದೆ! ಆಗ ಅಧಿಕಾರಿಗಳು ಮಾಡಿದ ಪಾಪಕ್ಕೆ ಸಣ್ಣ ಪ್ರಾಯಶ್ಚಿತ್ತ ಆಗಬಹುದು!!

-ವರದಿಗಾರ



ಆರೋಪಿಗಳನ್ನು ತಂದು ಥಳಿಸುವ ನಿಗೂಢ ಜಾಗ (ಅಂಕೋಲದ ಅನಧಿಕೃತ ಪೊಲೀಸ್ ಠಾಣೆ)

...ದ್ದಾನೆ! ಪಿಐ ಹೆಗಡೆಯ ನಂಬಿಗಸ್ಥ ಬಂಟರಾದ ...ೇದೆಗಳ ದೌರ್ಜನ್ಯದಿಂದ ವಾಸುದೇವ ಅಕ್ಷರಶಃ ...ಾಗಿ ಹೋಗಿದ್ದಾನೆ!! ಇಪ್ಪತ್ತು ವರ್ಷದ ವಾಸುದೇವ ...ಮತ್ತು ಅಪ್ರಾಪ್ತ ವಯಸ್ಸಿನ (ಹದಿನಾರು ವರ್ಷ) ... ಗೌಡರನ್ನು ಕಳ್ಳತನದ ಆರೋಪದಲ್ಲಿ ಎತ್ತಾಕಿಕೊಂಡು ... ಪೊಲೀಸರು ಬೆಳಗ್ಗೆ 10 ರಿಂದ ನಡುರಾತ್ರಿ 1ರ ...ಮಾರಣಾಂತಿಕವಾಗಿ ಥಳಿಸಿದ್ದಾರೆ. ಈಗ ವಾಸುದೇವ ...ಮಂಗಳೂರಿನ ಫಾದರ್ ಮುಲ್ಲಾರ್ ಆಸ್ಪತ್ರೆಯಲ್ಲಿ ...ವಾಗಿ ಬಿದ್ದುಕೊಂಡಿದ್ದಾರೆ. ಗಣಪತಿ ಜೀವಭಯದಲ್ಲಿ ... ಅಡಗಿ ದಿನ ಕಳೆಯುತ್ತಿದ್ದಾನೆ.

...ಕೋಲೆ ಪೊಲೀಸರ ಹಿಂಸೋನ್ಮಾದದ ಕತೆ ...ವಿದ್ರಾವಕವಾಗಿದೆ. ಅಂದು ಏಪ್ರಿಲ್ 8. ...ಲಾದ ಸಿಂಗನಮಕ್ಕಿ ಎಂಬ ಹಳ್ಳಿಯಲ್ಲಿ ನಾಟಕ ...ಡಗೇರಿಯ ವಾಸುದೇವಗೌಡ ಈ ನಾಟಕ ಮತ್ತು ...ೀಗ್ಯಪೀಡಿತ ತಾಯಿಯನ್ನು ನೋಡಲೆಂದು ...ಿಂದ ಬಂದಿದ್ದ ಅಲ್ಲಿನ ಮೀನುಗಾರಿಕಾ ಬೋಟಲ್ಲಿ ...ದ್ದ, ನಾಟಕಕ್ಕೆ ವಾಸುದೇವನ ಮನೆಯ ...ವರೆಲ್ಲರೂ ಹೋಗಿದ್ದರು. ನಾಟಕ ಮುಗಿಸಿ ಬಂದಾಗ ...ನೆ ಪಕ್ಕದಲ್ಲಿದ್ದ ಚಿಕ್ಕಪ್ಪನ ಮನೆಯಲ್ಲಿ ಕಳ್ಳತನವಾಗಿತ್ತು, ...ರು ಲಕ್ಷದ ಬಂಗಾರವನ್ನು ಕಳ್ಳರು ಕದ್ದೊಯ್ದಿದ್ದರು. ...ನದ ಸುದ್ದಿ ಅಂಕೋಲೆ ಪೊಲೀಸರಿಗೆ ಮುಟ್ಟಿದೆ. ...ದ ನಡೆಸಿದ ಬಂದ ಪೊಲೀಸರ ಕಣ್ಣು ವಾಸುದೇವ, ...ಮತ್ತು ರಾಘವೇಂದ್ರರ ಮೇಲೆ ಸಂಶಯ ಬಂದಿದೆ. ...ವರನ್ನು ಸೇರಿಸಿ ಒಂಥರಾ ಭಯಾನಕ ಚರ್ಚೆ-... ...ಪೊಲೀಸರು ಮಾಡಿದ್ದಾರೆ. ಪೊಲೀಸರ ದಾದಾಗಿರಿಯ ...ಸಮುದಾಯಕ್ಕೆ ಅನಾಯಕ ಹಾಲಕ್ಕಿ ಒಕ್ಕಲಿಗರ ... ಭಯಭೀತ ವಾತಾವರಣ ನಿರ್ಮಾಣವಾಗಿದೆ. ನಾವು ... ಕರೆದಾಗ ಆಗ ಬರಬೇಕು ಎಂದು ಊರವರಿಗೆ

ಇಷ್ಟಕ್ಕೇ ಖಾಕಿ ರೌಡಿಗಳಿಗೆ ತೃಪ್ತಿಯಾಗಿಲ್ಲ. ಮೇ 7ರಂದು ಆರು ಪೊಲೀಸರು ಮೂರು ಬೈಕಲ್ಲಿ ಶೇಡಗೇರಿಗೆ ಹೋಗಿದ್ದಾರೆ. ವಾಸುದೇವ, ಗಣಪತಿ ಮತ್ತು ರಾಘವೇಂದ್ರರನ್ನು ಒಂದೊಂದು ಬೈಕಿನ ಮಧ್ಯದಲ್ಲಿ ಕೂಡ್ರಿಸಿಕೊಂಡು ಹಿಂಸಾಚಾರದ ಬಂಕರ್‌ಗೆ ತಂದಿದ್ದಾರೆ. ಅಲ್ಲಿ ಆ ಮೂವರನ್ನೂ ಬೆತ್ತಲೆ ಮಾಡಿ ಕೈಕಾಲಿಗೆ ಕೋಳ ತೊಡಿಸಿ ಕಿಟಕಿಗೆ ಕಟ್ಟಿ ಹಾಕಿದ್ದಾರೆ. ಸಂಶಯಿತರ ಬಾಯಿ ಬಿಡಿಸಲೆಂದೇ ಪಿಐ ಹೆಗಡೆ ಗ್ಯಾಂಗ್ ವಿಶಿಷ್ಟವಾಗಿ ತಯಾರಿಸಿಕೊಂಡಿರುವ ಅಪಾಯಕಾರಿ ಬೆಲ್ಟ್‌ನಿಂದ ಯದ್ವಾತದ್ವಾ ಬಡಿದಿದ್ದಾರೆ. ಅಕ್ಕಿ ಗಿರಣಿಯ ಬೆಲ್ಟ್ ಅದು. ಎರಡು ಫೂಟ್ ಉದ್ದದ ಬೆಲ್ಟ್‌ಗೆ ಹ್ಯಾಂಡಲ್ ಅಳವಡಿಸಲಾಗಿದೆ. ಅದರ ತುದಿಯಲ್ಲಿ ನಟ್-ಬೋಲ್ಟ್




ಆಸ್ಪತ್ರೆಯಲ್ಲಿರುವ ಜೀವಚ್ಛವವಾಗಿರುವ ವಾಸುದೇವಗೌಡ

ಹುಬ್ಬಳ್ಳಿ-ಧಾರವಾಡ ಪಾಲಿಕೆ: ದಾದಾಗಿರಿ-ದಗಲ್ಬಾಜಿಗಳ ಅಡ್ಡೆ

ಇದು ಅವಳಿ ನಗರಗಳ ದೌರ್ಭಾಗ್ಯವೋ, ಪಾಲಿಕೆಯ ದುರ್ಗತಿಯೋ ಗೊತ್ತಿಲ್ಲ, ಒಟ್ಟಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆವರಣ ಚಾರ್ ಸೌ ಬೀಸ್ ಕಾರ್ಪೊರೇಟರ್‌ಗಳ ಅಟ್ಟಹಾಸದಿಂದ ನಲುಗಿಹೋಗುತ್ತಿದೆ. ಅಭಿವೃದ್ಧಿಯ ಮಾತು ಒತ್ತಟ್ಟಿಗಿರಲಿ, ಅನ್ಯಾಯ-ಅಕ್ರಮಗಳನ್ನು ಪ್ರಶ್ನಿಸಲು ಹೋದರೆ ಸಾಕು, ಹಾಡುಹಗಲೇ ಮನೆಗೆ ನುಗ್ಗಿ ಹಲ್ಲೆ ನಡೆಸುವಷ್ಟು ಕಾರ್ಪೊರೇಟರ್‌ಗಳು ಹದ್ದುಮೀರಿ ಹೋಗಿದ್ದಾರೆ. ಇನ್ನು ಬೊಕ್ಕಸದ ಲೂಟಿಯನ್ನಂತು ಕೇಳುವುದೇ ಬೇಡ, ಸಾರ್ವಜನಿಕರ ದುಡ್ಡನ್ನು ತನ್ನಪ್ಪನ ಮನೆಯ ಆಸ್ತಿಯೆಂಬಂತೆ ಚಕ್ಕಮಕ್ಕಳ ಹಾಕಿ ಕೂತು ಚಪ್ಪರಿಸುತ್ತಿದ್ದಾರೆ.

ಪಾಲಿಕೆ ಅದೆಷ್ಟು ಅಧ್ವಾನದ ಹಾದಿ ಹಿಡಿದಿದೆ ಅನ್ನೋದನ್ನು ಸಾಬೀತು ಮಾಡಲು ಹೆಚ್ಚೇನು ಬೇಡ, ಬಿಜೆಪಿ ಕಾರ್ಪೊರೇಟರ್ ಸತೀಶ್ ಹಾನಗಲ್‌ನ ಅಟ್ಟಹಾಸ ಮತ್ತು ಕಾಂಗ್ರೆಸ್ ಸದಸ್ಯ ಪ್ರಕಾಶ್ ಕ್ಯಾರಕಟ್ಟಿಯ ಹಗಲುದರೋಡೆಯ ಎರಡು ಪ್ರಕರಣಗಳೇ ಸಾಕು.

ರೌಡಿ ಕಾರ್ಪೊರೇಟರ್



ಸತೀಶ್ ಹಾನಗಲ್ ಎಂಬ ಬಿಜೆಪಿ ಕ್ರಿಮಿಯೊಂದು ಇಡೀ ಪಾಲಿಕೆಯ ಗೌರವ, ಘನತೆಗಳನ್ನೇ ಕೊರೆದು ನೆಲಕ್ಕುರುಳಿಸುತ್ತಿದೆ. ಅಸಲಿಗೆ, ಈ ನೆಲದ ಕಾನೂನುಗಳು ಮತ್ತು ಖಾಕಿ ಕೈಗಳು ಗಟ್ಟಿಮುಟ್ಟಾಗಿದ್ದರೆ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲೊ ಅಥವಾ ಬಳ್ಳಾರಿ ಬಂದಿಖಾನೆಯಲ್ಲೊ ಇರಬೇಕಾದಂತ ಆಸಾಮಿ ಈತ. ಹೊಡಿ-ಬಡಿ ಸಂಸ್ಕೃತಿಯ ಲಾಂಗು-ಮಚ್ಚು ವಿಕೃತಿಯ ಕೂಸು. ಅಂತವನು 'ದೇಶಭಕ್ತ' (!?) ಪಾರ್ಟಿಯ ಕಾರ್ಯಕರ್ತನಾಗಿ ಪಾಲಿಕೆಗೆ ವಕ್ಕರಿಸಿದ್ದಾನೆ. ಪುಂಡರ ಗುಂಪಿನ ಪ್ರೆಸಿಡೆಂಟಿನಂತಿರುವ ಇವನಿಂದ 'ಸಮಾಜಸೇವೆ' ನಿರೀಕ್ಷೆ ಮಾಡೋದೇ ಮಹಾಪರಾಧ. ಲಕ್ಷಾಂತರ ಚೆಲ್ಲಾಡಿ, ಕೋಟ್ಯಂತರ ಬಾಚಿಕೊಳ್ಳಬೇಕೆಂದೇ ಬಂದ ಈತನ ಆಸ್ತಿ ಅದೆಷ್ಟಿರಬೇಡ ಎಂಬ ಕೆಟ್ಟ ಕುತೂಹಲಕ್ಕೆ ಬಿದ್ದ ಶಿವಕುಮಾರ್ ಗೋಕಾವಿ ಎಂಬ ಬಡಪಾಯಿಯೊಬ್ಬ 'ನನಗೆ ಸತೀಶ್ ಹಾನಗಲ್‌ನ ಆಸ್ತಿ ವಿವರ ಕೊಡಿ' ಅಂತ ಆರ್‌ಟಿಐ ಅರ್ಜಿ ಗುಜರಾಯಿಸಿದ್ದ.

ಈ ವಿಷಯ ಗೊತ್ತಾದದ್ದೇ ತಡ, ಏಪ್ರಿಲ್ 7ರಂದು 'ನನ್ನ ಆಸ್ತಿ ವಿವರ ಕೇಳಲು ನೀನ್ಯಾವನೊ' ಅಂತ ಅಬ್ಬರಿಸಿ-ಬೊಬ್ಬಿರಿದು ತೊಡೆ ತಟ್ಟಿದ ಸತೀಶ್ ತನ್ನ ನಾಲ್ಕೈದು ಗೂಂಡಾಗಳನ್ನು ಶಿವಕುಮಾರ್ ಗೋಕಾವಿಯ ಮನೆಯೊಳಕ್ಕೇ ನುಗ್ಗಿಸಿ ಹೀನಾಮಾನ ಹೊಡೆಸಿದ್ದ. ಅಷ್ಟಕ್ಕೇ ಬಿಡದೆ ಮಾರನೇ ದಿನ ಶಿವಕುಮಾರ್‌ನ ತಮ್ಮ ವಿನಾಯಕ್ ಗೋಕಾವಿಯ ಮೇಲೂ ಅಟ್ಯಾಕ್ ಮಾಡಿಸಿ ಕೊಲೆ ಮಾಡುವ ಯತ್ನ ನಡೆಸಿದ್ದ. ಸತೀಶ್ ಹಾನಗಲ್‌ನ ದುಷ್ಟತನ ತಿಳಿದಿತ್ತಾದರೂ ಆತ ಈ ಮಟ್ಟಕ್ಕೆ ಹೋಗಲಾರ ಎಂದುಕೊಂಡು ಆರ್‌ಟಿಐ ಅರ್ಜಿ ಸಲ್ಲಿಸಿದ್ದ ಶಿವಕುಮಾರ್ ಈ ಘಟನೆಗಳಿಂದಾಗಿ ಕುಸಿದುಹೋಗಿದ್ದ. ಆತ ಅದೆಷ್ಟು ಆಘಾತಗೊಂಡಿದ್ದನೆಂದರೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದ.

ಯಾವಾಗ ಶಿವಕುಮಾರ್ ಕೆಎಂಸಿ ಆಸ್ಪತ್ರೆಗೆ ದಾಖಲಾಗಿ, ಈ ಸಂಗತಿ ಮಾಧ್ಯಮಗಳಲ್ಲಿ ಬರುವಂತಾಯ್ತೊ ಆಗ ಹಳೇ ಹುಬ್ಬಳ್ಳಿ ಪೊಲೀಸರು ಎಚ್ಚೆತ್ತುಕೊಂಡು ಸತೀಶ್ ಹಾನಗಲ್ ಮತ್ತು ಅವನ ಇಬ್ಬರು ಹಿಂಬಾಲಕರ ಮೇಲೆ ಕೊಲೆ ಯತ್ನದ ಕೇಸು ಗೀಚಿಕೊಂಡರು. ಕೇಸು ಎಲ್ಲಿಗೆ ಬಂತು ಅಂತ ಪೊಲೀಸರನ್ನು ಕೇಳಿದರೆ 'ನಾಪತ್ತೆಯಾದ ಸತೀಶ್ ಹಾನಗಲ್ ಇದೂವರೆಗೆ ಪತ್ತೆಯಾಗಿಲ್ಲ' ಅನ್ನೋ ಉತ್ತರ ಬಿಟ್ಟು ಮತ್ತಾವ ಪ್ರತಿಕ್ರಿಯೆಯೂ ಹೊರಬರುವುದಿಲ್ಲ. ಸತೀಶ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನಿನ ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿರೋದರಿಂದ ಆತ ಭೂಗತನಾಗಿದ್ದಾನೆ. ಪೊಲೀಸರು ಮನಸ್ಸು ಮಾಡಿದರೆ ಅವನನ್ನು ಪತ್ತೆ ಹಚ್ಚಿ ಜೈಲಿಗೆ ಗದುಮುವುದು ಕಷ್ಟವೇನೂ ಅಲ್ಲ. ಆದರೆ ಅಂತಹ ರಿಸ್ಕು ಯಾರಿಗೆ ಬೇಕು?


ಸತೀಶ್ ಹಾನಗಲ್ ನಾಪತ್ತೆಯಾಗಿ ಅಜಮಾಸು ಐವತ್ತು ದಿನಗಳೇ ಕಳೆದು ಹೋಗುತ್ತಿವೆ. ಈ ಅವಧಿಯಲ್ಲಿ ನಡೆದ ಪಾಲಿಕೆ ಸಭೆಗಳಿಗೂ ಆತ ಹಾಜರಾಗಿಲ್ಲ. ಕೆಎಂಸಿ ಕಾಯ್ದೆಯಂತೆ ಸತತವಾಗಿ 3 ಬಾರಿ ಪಾಲಿಕೆ ಸಭೆಗೆ ಗೈರುಹಾಜರಾದರೆ ಅಂತಹ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡಬೇಕು. ಸತೀಶನ ಈ ಭೂಗತ ಅವಧಿಯಲ್ಲಿ ವಿಶೇಷ ಸಭೆಯೂ ಸೇರಿದಂತೆ ಒಟ್ಟು 4 ಸಭೆಗಳು ಜರುಗಿವೆ. ಈ ಎಲ್ಲಾ ಸಭೆಗಳಿಗೆ ಗೈರು ಹಾಜರಾಗಿರುವ ಸತೀಶನ ಸದಸ್ಯತ್ವವನ್ನು ಈಗಾಗಲೇ ರದ್ದು ಪಡಿಸಬೇಕಿತ್ತು. ಆದರೆ ಅದೂ ಘಟಿಸಿಲ್ಲ. "ನಾನು ಅನಾರೋಗ್ಯದಿಂದ ಬಳಲುತ್ತಿದ್ದೇನೆ. ಹೀಗಾಗಿ ಪಾಲಿಕೆ ಸಭೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದು" ಪಾಲಿಕೆಯ ಪರಿಷತ್ ಕಾರ್ಯದರ್ಶಿಗೆ 2 ಬಾರಿ ಪತ್ರ ಕಳಿಸಿ ಸದಸ್ಯತ್ವ ರದ್ಧತಿಯಿಂದ ಪಾರಾಗುವ ಪ್ಲಾನ್ ಮಾಡಿರುವ ಸತೀಶ್ ತಾನಗೆಂತ ಕಾಯಿಲೆ, ಎಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂಬುದನ್ನೇ ಬಹಿರಂಗ ಪಡಿಸಿಲ್ಲ. ಆದರ ಗೊಡವೆ ಕೂಡಾ ಯಾರಿಗೂ ಬೇಕಾಗಿಲ್ಲ.

ತಿಂಗಳಿಗೆ 11 ಲಕ್ಷ ಗೋತಾ!

ಕಾಂಗ್ರೆಸ್‌ನಿಂದ ಗೆದ್ದು ಒಮ್ಮೆ ಪಾಲಿಕೆ ಮೇಯರ್ ಆಗಿ ಅಧಿಕಾರ ಚಲಾಯಿಸಿ, ಈಗ ಕೇವಲ ಕಾರ್ಪೊರೇಟರ್‌ಗಿರಿಗೆ ಸೀಮಿತವಾಗಿರುವ ಪ್ರಕಾಶ್ ಕ್ಯಾರಕಟ್ಟಿ ಪಾಲಿಕೆ ಬೊಕ್ಕಸದಿಂದ ತಿಂಗಳಿಗೆ ಏನಿಲ್ಲವೆಂದರೂ 11 ಲಕ್ಷ ಲೂಟಿ ಹೊಡೆಯುತ್ತಿದ್ದಾನೆ. ಮೇಲ್ನೋಟಕ್ಕೆ ನ್ಯಾಯಯುತವಾಗಿ ಟೆಂಡರ್ ಗಿಟ್ಟಿಸಿ ವ್ಯವಹಾರ ನಡೆಸುತ್ತಿರುವಂತೆ ಕಂಡುಬಂದರೂ ತನ್ನ ಅಧಿಕಾರ ಪ್ರಭಾವ ಬಳಸಿ ಟೆಂಡರ್ ಪ್ರಕ್ರಿಯೆಯನ್ನೇ ಭ್ರಷ್ಟಗೊಳಿಸಿರುವ ಕ್ಯಾರಕಟ್ಟಿಯದು ಏಕ್‌ದಂ ಹಗಲುದರೋಡೆ.

ಈತ ಪಾಲಿಕೆ ಸದಸ್ಯನಾಗುವುದಕ್ಕೂ ಮುನ್ನ ಇನ್‌ಫೋಟೆಕ್ ಕಂಪ್ಯೂಟರ್ ಎಜುಕೇಷನ್ ಸೊಸೈಟಿ ಎಂಬ ಸಂಸ್ಥೆಯನ್ನು ನಡೆಸುತ್ತಿದ್ದ. 2008ರಲ್ಲಿ ಪಾಲಿಕೆಯ ಆಡಳಿತಕ್ಕೆ ಕಂಪ್ಯೂಟರ್‌ಗಳು ಮತ್ತು ಆಪರೇಟರ್‌ಗಳ ಅಗತ್ಯವಿದ್ದುದರಿಂದ ಪೂರೈಕೆ ಮಾಡಲು ಟೆಂಡರ್ ಕರೆಯಲಾಗಿತ್ತು. ಆಗ ತನ್ನ ಪ್ರಭಾವ ಬಳಸಿ 2 ವರ್ಷದ ಅವಧಿಗೆ ಹೊರಗುತ್ತಿಗೆ ಟೆಂಡರ್ ತನಗೇ ಸಿಗುವಂತೆ ಮಾಡಿಕೊಂಡಿದ್ದ. ಆಗ ಆತ ಕಾರ್ಪೊರೇಷನ್‌ಗೆ 60 ಕಂಪ್ಯೂಟರ್ ಮತ್ತು ಅದಕ್ಕೆ ಬೇಕಾದ ಆಪರೇಟರ್‌ಗಳನ್ನು ಪೂರೈಸುತ್ತಿದ್ದ.

ಟೆಂಡರ್ ನಿಯಮದ ಪ್ರಕಾರ ಅವನ ಗುತ್ತಿಗೆ ಅವಧಿ 2 ವರ್ಷಕ್ಕೆ ಮುಗಿಯಬೇಕಿತ್ತು. ಆದರೆ ಅಷ್ಟರಲ್ಲಾಗಲೆ ಆತ ಕಾರ್ಪೊರೇಟರ್ ಆಗಿ ಪಾಲಿಕೆಗೆ ವಕ್ಕರಿಸಿಬಿಟ್ಟಿದ್ದ. ಹಾಗಾಗಿ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಟೆಂಡರ್ ಅವಧಿ ಮತ್ತೆ ಕೆಲ ದಿನಗಳಿಗೆ ಮುಂದುವರೆಯುವಂತೆ



ನೋಡಿಕೊಂಡಿದ್ದ. ವಿಪರ್ಯಾಸವೆಂದರೆ ಅಲ್ಲಿಂದಿ[...] ಪಾಲಿಕೆ ಈ ವಿಷಯವಾಗಿ ಟೆಂಡರನ್ನೇ ಕರೆದಿಲ್ಲ. ಅಥ[...] ಕರೆಯದಂತೆ ಕ್ಯಾರಕಟ್ಟಿ ನೋಡಿಕೊಂಡು ಬಂದಿದ್ದಾನೆ. ಏಳು ವರ್ಷಗಳಿಂದ ಒಂದೇ ಸಂಸ್ಥೆಗೆ ಗುತ್ತಿಗೆ ನೀಡು[...] ಯಾವ ಕಾನೂನೂ ಅವಕಾಶ ಕಲ್ಪಿಸುವುದಿಲ್ಲ. ಕ್ಯಾರಕ[...] ಕರಾಮತ್ತಿನಿಂದ ಅದು ಸಾಧ್ಯವಾಗಿದೆ. ಅಷ್ಟೇ[...] ಆರಂಭದಲ್ಲಿ 60 ಕಂಪ್ಯೂಟರ್‌ಗಳನ್ನು ಪೂರೈಸುತ್ತಿದ್ದ[...] ಸಂಸ್ಥೆ ಇಂದು ಅನಾಮತ್ತು 114 ಆಪರೇಟರ್[...] ಸೇವೆಗೆ ಒದಗಿಸುತ್ತಿದ್ದೇವೆ ಅಂತ ತಿಂಗಳಿಗೆ 11.07[...] ರೂಪಾಯಿಯನ್ನು ಪಾಲಿಕೆಯಿಂದ ವಸೂಲಿ ಮಾಡ[...] 2013ರ ಅಕ್ಟೋಬರ್ ತಿಂಗಳವರೆಗೂ ಈ ಸಂಸ್ಥೆ ಕ[...] ಕ್ಯಾರಕಟ್ಟಿಯ ಹೆಸರಲ್ಲೇ ಇತ್ತು, ಆನಂತರ ಅದನ್[...] ಮಗ ಶ್ರೀನಿವಾಸ ಕ್ಯಾರಕಟ್ಟಿ ಹೆಸರಿಗೆ ವರ್ಗಾ[...] ಮಾಡಿದ್ದಾನೆ.


ಈಗ ಟೆಂಡರ್ ವಂಚನೆ ಬಯಲಾಗುತ್ತಿದ್ದಂ[...] 'ಆ ಸಂಸ್ಥೆ ನನ್ನ ಮಗನದ್ದು. ನನ್ನ ಮಗ ನ[...] ಬೇರೆಯಾಗಿದ್ದಾನೆ. ಅವನ ವ್ಯವಹಾರವೇ ಬೇ[...] ವ್ಯವಹಾರವೇ ಬೇರೆ. ಅದಕ್ಕೂ ನನಗೂ ಸಂಬ[...] ಇಲ್ಲ, ನನ್ನ ಹೆಸರನ್ನು ಯಾಕೆ ಕೆಡಿಸುತ್ತಿದ್ದೀರಿ' [...] ಮೊಸಳೆ ನಾಟಕ ಆಡುವ ಪ್ರಕಾಶ್‌ಗೆ ಕೆಎಂಸಿ ಆಕ್[...] ಅನ್ವಯ ಚುನಾಯಿತ ಪ್ರತಿನಿಧಿಗಳಾಗಲಿ ಅಥವಾ [...] ಕುಟುಂಬದ ಯಾವೊಬ್ಬ ಸದಸ್ಯರಾಗಲಿ ಪ್ರತ್ಯಕ್ಷವಾಗಿ [...] ಪರೋಕ್ಷವಾಗಿ ಪಾಲಿಕೆಯಿಂದ ಲಾಭ ಮಾಡಿಕೊಳ್ಳ[...] ಎಂಬ ವಾಸ್ತವ ಗೊತ್ತಿಲ್ಲದೇನಿಲ್ಲ.

'ಮಗ ಶ್ರೀನಿವಾಸ ನನ್ನಿಂದ ಬೇರೆ ಇದ್ದಾನೆ [...] ಉದ್ಯೋಗ ಬೇರೆ ನನ್ನ ಉದ್ಯೋಗ ಬೇರೆ' [...] ಪ್ರಕಾಶ್ ಕ್ಯಾರಕಟ್ಟಿ ಯುವ ಕಾಂಗ್ರೆಸ್‌ನಲ್ಲಿ ಮಗನಿಗ[...] ಕೊಡಿಸಿ, ಉತ್ತರಾಧಿಕಾರಿಯನ್ನಾಗಿ ಬೆಳೆಸುವುದನ್ನು [...] ಮರೆತಿಲ್ಲ!

'ಕಾರ್ಪೊರೇಟರ್ ಪ್ರಕಾಶ ಕ್ಯಾರಕಟ್ಟಿ ವಿರುದ್ಧ [...] ಕ್ರಮ ತೆಗೆದುಕೊಂಡಿದ್ದ?' ಎಂದು ಪ್ರಶ್ನಿಸಿದರೆ ಅಧಿಕ[...] 'ಯಾರಾದರೂ ಕಂಪ್ಲೇಟ್ ಕೊಟ್ಟರೆ ಕ್ರಮಕೈಗೊಳ್[...] ಎನ್ನುತ್ತಾರೆ. ಕ್ಯಾರಕಟ್ಟಿಯ ಖತರ್ನಾಕ್ ಹಿನ್ನೆಲೆ ಗೊ[...] ಯಾರು ತಾನೆ ಅವನ ಮೇಲೆ ಕಂಪ್ಲೇಂಟ್ [...] ಗ್ರಹಚಾರವನ್ನು ಮೈಮೇಲೆ ಎಳೆದುಕೊಳ್ತಾರೆ.

ಡೆಮಾಲಿಷನ್ ಮ್ಯಾನ್ ಎಂದೇ ಖ್ಯಾತಿಪಡೆ[...] ಹುಬ್ಬಳ್ಳಿ ಧಾರವಾಡದ ಕಾರ್ಪೊರೇಷನ್ ಕಮಿ[...] ನೂರ್ ಮನ್ಸೂರ್ ಇಂತಹವರ ವಿರುದ್ಧ ಆದಷ್[...] ಕ್ರಮತೆಗೆದುಕೊಳ್ಳಬೇಕಿದೆ.

■ ಹುಬ್ಬಳ್ಳಿಯ[...]



ಕ್ಯಾರಕಟ್ಟಿಯ 'ಗೂಂಡಾರಾಜ್ಯ'

ಕ್ಯಾರಕಟ್ಟಿ ಸೈತಾನರು ಹುಬ್ಬಳ್ಳಿ-ಧಾರವಾಡದ ಪಾಲಿಗೆ ಅದೆಂತಹ ಶನಿ ಸಂತಾನಗಳೆಂದರೆ, ತಮ್ಮ ವಿರುದ್ಧ ಯಾರೇ ಸೊಲ್ಲೆತ್ತಿದರೂ ಅವರನ್ನು ಮಟ್ಟ ಹಾಕುವವರೆಗೆ ವಿರಮಿಸುವುದಿಲ್ಲ. ಇವರ ಕಂಪ್ಯೂಟರ್ ಹಗರಣವನ್ನು ಬಯಲಿಗೆಳೆದ ಚಾಂದ್‌ಬಾಷಾ ಗೌರನನ್ನು ನಡುರಸ್ತೆಯಲ್ಲೆ ಸಾರ್ವಜನಿಕರ ಎದುರೇ ಅಟ್ಟಾಡಿಸಿ ಹೊಡೆದು ತಮ್ಮ ಪೈಶಾಚಿಕ ರೂಪವನ್ನು ತೋರಿಸಿದ್ದಾರೆ. ಈ ಅಪ್ಪ-ಮಗನ ಜುಗಲ್‌ಬಂಧಿ ಟೆಂಡರ್ ಹೆಸರಿನಲ್ಲಿ ನಡೆಸಿದ್ದ ಗೋಲ್‌ಮಾಲ್ ಅನ್ನು ಆರ್‌ಟಿಐ ಅರ್ಜಿ ಮೂಲಕ ಬಯಲಿಗೆಳೆದಿದ್ದೇ ಈ ಚಾಂದ್‌ಪಾಷಾ. ಈ ಹಗರಣವನ್ನು ಜನರ ಮುಂದೆ ತರಬೇಕೆನ್ನುವ ಕಾರಣಕ್ಕೆ ರಾಜ್ಯಮಟ್ಟದ ಟಿವಿ ವರದಿಗಾರನೊಬ್ಬನಿಗೆ ದಾಖಲೆ ತಲುಪಿಸಿ, ವಿಸ್ತೃತ ವರದಿ ಮಾಡುವಂತೆ ಸುದ್ದಿ ಮುಟ್ಟಿಸಿದ್ದ. ಅಲ್ಲದೇ ಟಿವಿ ಕ್ಯಾಮೆರಾದ ಮುಂದೆ ನಿಂತು ದಾಖಲೆ ಸಹಿತ ಕ್ಯಾರಕಟ್ಟಿ ಸೈತಾನರು ಪಾಲಿಕೆಯನ್ನು ಹೇಗೆಲ್ಲಾ ಲೂಟಿ ಹೊಡೆಯುತ್ತಿದ್ದಾರೆ ಎಂಬುದರ ಕುರಿತು ಪುಟ್ಟದೊಂದು ಬೈಟ್ ಕೂಡಾ ನೀಡಿದ್ದ. ಅದು ಟಿವಿಯಲ್ಲಿ ಬಿತ್ತರವಾಗುತ್ತಿದ್ದಂತೆಯೇ ಪ್ರಕಾಶ್ ಕ್ಯಾರಕಟ್ಟಿಯ ಮಗ, ಶ್ರೀನಿವಾಸ ಕ್ಯಾರಕಟ್ಟಿ ತನ್ನ ಪುಂಡರ ಗ್ಯಾಂಗ್ ಸಮೇತ ಚಾಂದ್‌ಪಾಷಾನನ್ನು ಹುಡುಕಿ ಹೊರಟಿದ್ದರು. ಅವರಿಗೆ ಶಿವಕೃಪಾ ಆಸ್ಪತ್ರೆ ಎದುರು ಭೇಟಿಯಾಗಿದ್ದಾನೆ. ಅದಕ್ಕೆ ತಾಗಿಕೊಂಡಂತೆಯೇ ಒಂದು ಬಸ್ ನಿಲ್ದಾಣವಿದೆ. ಅಲ್ಲಿ ಸಾಕಷ್ಟು ಜನ ಬಸ್ಸಿಗಾಗಿ ಕಾದು ನಿಂತಿದ್ದರು. ಆದರೆ ಥೇಟ್ ಬಿಹಾರಿ ಸ್ಟೈಲಿನಲ್ಲಿ ಜನರೆದುರೆ ಹಾಕಿಸ್ಟಿಕ್ ಸಮೇತ ಚಾಂದ್‌ಪಾಷಾನ ಮೇಲೆ ಮುಗಿಬಿದ್ದು ಅಟ್ಟಾಡಿಸಿ ಹೊಡೆದಿದ್ದರು. ಪ್ರಾಣ ಉಳಿಸಿಕೊಳ್ಳಲು ಪಾಷಾ ಎಷ್ಟೇ ಕೂಗಾಟ ನಡೆಸಿದರೂ ಕ್ಯಾರಕಟ್ಟಿ ಗ್ಯಾಂಗಿನ ರೌದ್ರಾವತಾರಕ್ಕೆ ಬೆದರಿದ ಜನರ್‍ಯಾರು ಆತನ ಸಹಾಯಕ್ಕೇ ಹೋಗಿರಲಿಲ್ಲ. ಪಾಷಾನ ದೇಹ ರಕ್ತ ಚೆಲ್ಲಿಕೊಂಡು ನೆಲಕ್ಕೆ ಬಿದ್ದರೂ ಪುಂಡರ ಟೀಮು ಒದ್ದು ಎಳೆದಾಡಿದ್ದರು. ಜನ ನೋಡುತ್ತಿದ್ದಾರೆ, ಪೊಲೀಸ್‌ನವರು ಬಂದಾರು ಆದಷ್ಟು ಬೇಗ ನಾವಿಲ್ಲಿಂದ ಜಾಗ ಖಾಲಿ ಮಾಡಬೇಕೆಂಬ ಯಾವ ಧಾವಂತವೂ ಕ್ಯಾರಕಟ್ಟಿ ಗ್ಯಾಂಗಿಗೆ ಇದ್ದಂತಿರಲಿಲ್ಲ. ರಕ್ತದ ಮಡುವಿನಲ್ಲಿ ಚೆಲ್ಲಿಕೊಂಡಿದ್ದ ಪಾಷಾ ಸತ್ತೇ ಹೋದನೆಂದು ನಂಬಿದ ರೌಡಿಗಳು ಅಲ್ಲಿಂದ ಕದಲಿದ ಮೇಲಷ್ಟೆ ಜನ ಬಂದು ಚಾಂದ್‌ಪಾಷಾನ ಸುತ್ತ ನೆರೆದಿದ್ದು. ಅದೃಷ್ಟವಶಾತ್ ಚಾಂದ್‌ಪಾಷಾನ ಪ್ರಾಣ ಹೋಗಿರಲಿಲ್ಲ. ಕೂಡಲೇ ಜನರೇ ಪಕ್ಕದಲ್ಲಿದ್ದ ಶಿವಕೃಪಾ ಆಸ್ಪತ್ರೆಗೆ ದಾಖಲಿಸಿ ಅವನ ಜೀವ ಉಳಿಸಿದ್ದಾರೆ. ಈ ಸಂಬಂಧ ಹುಬ್ಬಳ್ಳಿ ಉಪನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆಯಾದರು ನ್ಯಾಯ ಸಿಗುವ ಯಾವ ಲಕ್ಷಣವೂ ಗೋಚರಿಸುತ್ತಿಲ್ಲ.


ಕೊಲೆಗೆ ಯತ್ನಿಸಿ ಪರಾರಿಯಾಗಿರುವ ಬಿಜೆಪಿ ಕಾರ್ಪೊರೇಟರ್ ಸತೀಶ್ ಹಾನಗಲ್‌ನನ್ನೇ ಇಲ್ಲೀವರೆಗೆ ಹುಬ್ಬಳ್ಳಿ ಪೊಲೀಸರಿಗೆ ಪತ್ತೆ ಮಾಡಲು ಆಗಿಲ್ಲ. ಅಂತದ್ದರಲ್ಲಿ ಆರ್‌ಟಿಐ ಕಾರ್ಯಕರ್ತ ಪಾಷಾ ಮೇಲೆ ದಾಳಿ ಮಾಡಿದ ಪ್ರಕಾಶ ಕ್ಯಾರಕಟ್ಟಿಯನ್ನಾಗಲಿ ಅವನ ಮಗ ಯುವ ಕಾಂಗ್ರೆಸ್ ತುಂಡು ಶ್ರೀನಿವಾಸ ಕ್ಯಾರಕಟ್ಟಿಯನ್ನಾಗಲಿ ಹೆಡಮುರಗಿ ಕಟ್ಟಿ ಕಂಬ ಹಿಂದೆ ತಳ್ಳುವ ತಾಕತ್ತು ಪೊಲೀಸರಿಗೆ ಇದೆಯಾ?

...ಮ್ಮನೆ ಕಿಮ್ಮತ್ತು ಈ ನನ್ ಮಗನಿಗೇನು ಗೊತ್ತು!

...ಟಾರಿ ಮದ್ಯ ನಿಲ್ಲಿಸಿದರೆ ಕಳ್ಳಭಟ್ಟಿ ಆರಂಭವಾಗುತ್ತೆ ... ನಿಲ್ಲಿಸಿದರೆ ಬೇರೆ ಹೆಸರಿನ ಅಮಲುಪುಡಿಯನ್ನು ...ಟಗಿಯುತ್ತಾರೆ. ಹಾಗೆ ಲಾಟರಿ ನಿಲ್ಲಿಸಿದರೆ ಒಂದಂಕಿ ... ನಡೆಯುತ್ತದೆ. ಯಾವ ದಂಧೆ ನಡೆಯಬೇಕಾದರೂ ...) ಕರ್ಮಚಾರಿಗಳ ಕೃಪೆ ಇರಲೇಬೇಕು. ಬ್ಯಾಂಕಿಗೆ ... ಆಗುವ ಸಂಬಳದ ಕಡೆ ತಿರುಗಿಯೂ ನೋಡದ ...ಸರು ಒಂದಂಕಿ ದಂಧೆಯಲ್ಲೇ ಕುಬೇರರಾಗಿ ...ದ್ದರಂತಲ್ಲಾ. ಒಂದಂಕಿ ಲಾಟರಿ ಟಿಕೆಟ್ ತೆಗೆದುಕೊಂಡು ...ಗಿ ಹೋದ ಕುಮಾರಣ್ಣನ ಕಡೆಯವರು ...ದೊಂದು ದಂಧೆ ನಡೆಯುತ್ತಿದೆ. ಸಿಂಹಪಾಲನ್ನು ...ಸರೇ ಹಂಚಿಕೊಂಡು ಉಳಿದುದನ್ನು ಮಾತ್ರ ...ರ್ಣೆಗಳ ಹಿಂಬಾಲಕರಿಗೆ ಕೊಡುತ್ತಾರೆ" ಎಂದು ...ಸ್ತೇ ಕಾರಣವಾಗಿ, ಕುಮಾರಣ್ಣ ಸರಕಾರದ ಮಾನವನ್ನು ...) ಕಾಸಿಗೆ ಹರಾಜು ಹಾಕಿದವರ ಗತ್ತಿನಲ್ಲಿ ಎಲ್ಲವನ್ನೂ ...ಬಗಗೊಳಿಸಿದರಂತಲ್ಲಾ. ಇದೆಲ್ಲವನ್ನು ಕೇಳಿಸಿಕೊಂಡ ...ಗೌಡರು ಮಲಗಿದ್ದ ಮಂಚದಲ್ಲೇ ಎದ್ದು ಕುಳಿತು, ...ನಗೆಯೊಂದಿಗೆ "ಲಾಟರಿ ಹಗರಣ ನಿರಾತಂಕವಾಗಿ ...ಬೇಕಾದರೆ ಅದಕ್ಕೆ ಆಳುವವರ ಕೃಪಾಶೀರ್ವಾದ ...ಬೇಕು. ಅದರಲ್ಲೂ ಈ ದಂಧೆಯ ಬಗ್ಗೆ ನಮ್ಮ ...ವನ್ನೇ ಹೇಳಬೇಕಾದರೆ, ಇದರಲ್ಲಿ ಮುಖ್ಯಮಂತ್ರಿಗಳ ...) ಇರುತ್ತದೆ. ನನ್ನ ಮಾತನ್ನು ಸುಳ್ಳು ಮಾಡಬೇಕಾದರೆ ...ಣೋಣ, ಸಿಬಿಐಗೆ ಕೊಡಿ" ಎಂದಕೂಡಲೇ ಸಿದ್ದು ...ೆ ಕೊಟ್ಟು, ಮಧ್ಯಾಹ್ನದ ನಿದ್ದೆಗೆ ಜಾರಿದರಂತಲ್ಲ ...ರಿ!

* * *

...ರ್ನಾಟಕ ಸರಕಾರ ಲಾಟರಿ ನಂಬರುಗಳಲ್ಲಿ ...ಂಡು ಲಾಟರಿ ಹೊಡೆಯುತ್ತಿರಬೇಕಾದರೆ, ಅತ್ತ ... ಸರಕಾರದ ಕೇಸರಿ ಜನ "ಅಚ್ಚೇ ದಿನ ಬಂದು ...ವಾಯ್ತು" ಎಂದು ಚಡ್ಡಿ ಉದುರಿಹೋಗುವಂತೆ ...ಯುತ್ತಿವೆಯಂತಲ್ಲಾ. ಚೆಡ್ಡಿಗಳ ತಾಳಕ್ಕೆ ತಕ್ಕಂತೆ ತಾಳ ...ತ್ತಿರುವ ಮಾಧ್ಯಮದ ಭೋಜನಪ್ರಿಯರು ಎಡೆಬಿಡದೆ ...ದಿಯ ಮಹಿಮೆಯನ್ನು ಕೊಂಡಾಡುತ್ತಿವೆಯಂತಲ್ಲ, ...ತ್ತ ಅಮೆರಿಕದ ಪತ್ರಿಕೆಗಳು "ಮೋದಿ ಭಾರತದ ...ಗಳು ಹೊಗಳಿ ಅಟ್ಟಕ್ಕೇರಿಸಿದ ಸಂಘದ ವ್ಯಕ್ತಿ. ...ಲ್ಲೂ ಸಾಮಾನ್ಯ ವ್ಯಕ್ತಿ. ಭೀಕರವಾಗಿ ಭಾಷಣ ...ವವನೇ ನಾಯಕ ಎನ್ನುವುದಾದರೆ ಡ್ರಾಮಾ ...ಯಲ್ಲಿ ಇಂತಹ ನಟರು ಹೇರಳವಾಗಿ ಸಿಗುತ್ತಾರೆ. ...ಬ್ಬ ಚುನಾವಣೆ ಭಾಷಣಕಾರನೇ ಹೊರತು ಆಡಿದ ...ನ್ನು ಮಾಡಿ ತೋರುವ ಪ್ರತಿಭಾವಂತನಲ್ಲ" ಎಂದು ...ವೆಯಂತಲ್ಲಾ. ಇದನ್ನು ಓದಿಕೊಂಡ ಪಿಂಜರಾಪೋಲು ...ರ ಪಡೆ "ನಮ್ಮ ದೇಶದ ಪ್ರಧಾನಿಯನ್ನು ಟೀಕಿಸುವ ...ಲು ನಿಮ್ಮ ದೇಶದ ಸ್ಥಿತಿ ನೋಡಿಕೊಳ್ಳಿ. ನಿಮ್ಮ ...ಕ ಸಮಸ್ಯೆಗಳ ಬಗ್ಗೆ, ವಿದೇಶಾಂಗ ನೀತಿಗಳ ಬಗ್ಗೆ ...ಸುಕೊಳ್ಳಿ" ಎಂದು ಬರೆಯಲು ರೆಡಿಯಾಗಿ



ಕುಳಿತವಂತಲ್ಲಾ, ಹಾಗೆ ನೋಡಿದರೆ ಮೋದಿ ಒಂದು ಕಡೆ ಹೊರಟರೆ, ಚೆಡ್ಡಿಗಳು ಇನ್ನೊಂದು ಕಡೆಗೆ, ದೇಶ ಮತ್ತೊಂದು ಕಡೆಗೆ ಹೊರಟದೆಯಂತಲ್ಲಾ. ಪಾಕಿಸ್ತಾನದಲ್ಲೂ ಹಾಗೆಯೇ. ಸರಕಾರದ ಕಾರ್ಯ ಬೇರೆ, ಉಗ್ರಗಾಮಿಗಳ ಕಾರ್ಯಾಚರಣೆ ಬೇರೆ, ಮಿಲಿಟರಿ ಆಲೋಚನೆ ಬೇರೆ. ಹೀಗೆ- ದಾಯಾದಿ ದೇಶಗಳು ಅಷ್ಟ ದಿಕ್ಕಿಗೆ ಚಲಿಸುತ್ತಿವೆಯಂತಲ್ಲಾ, ಥೂತ್ತೇರಿ!

* * *

ಗ್ರಾಮ ಪಂಚಾಯ್ತಿ ಚುನಾವಣೆಗಳು ರೋಚಕ ಸಂಗತಿಗಳನ್ನು ಬಿತ್ತರಿಸುತ್ತಿರುವ ಸಂದರ್ಭದಲ್ಲಿ ಆ ಯುದ್ಧಭೂಮಿಯಲ್ಲಿ ತಿರುಗಾಡುತ್ತಿರುವ ವಾಟಿಸ್ಸೆ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಕ್ಯಂಚಾಲೋ ಮಚ್ಚಾಲೋ ಯಂಗವ್ರುಲಾ ನಿನ್ ಕನಸ್‌ಗಳು..."

"ಹಲೋ ಯಾರು?"

"ವಾಟಿಸ್ಸೆ ನಾನು ಯಾಹೂ. ಅಲ್ಲಿ ಪಂಚಾಯ್ತಿ ಚುನಾವಣೆ ಯಂಗೆ ನಡದದೆ?"

"ಯಂಗೆ ನಡೆದದೆ ಅಂತೀರಾ? ಬಂದು ನೋಡಬೇಕಿಲ್ಲ."

"ತುಂಬಾ ಜೋರಾಗಿದಿಯಾ?"

"ಜೋರಲ್ಲ, ಯಾಕಾದ್ರೂ ನಜೀರ್ ಸಾಬ್ರು ಇಂತ ಕ್ಯಲಸ ಮಾಡಿಹೋದ್ರು ಅಂತ ಬೈಯ್ಯಂಗಾಗ್ಯದೆ."

"ನಜೀರ್‌ಸಾಬರ ಉದ್ದೇಶ ನಿಮ್ಮನ್ನ ನೀವೇ ಆಳಿಕಳಿ ಅನ್ನೋದಾಗಿತ್ತು. ಹ್ವಡದಾಡಿ ಅಂತ ಅವ್ರುರೆಲ್ಲೇಳಿದ್ರು."

"ಸರಿ ಸಾರ್. ಹಳ್ಳಿಗರಿಗಿರೊ ಕಾಯಿಲೆನೂ ಅವರು ಲಕ್ಷ್ಯ ಹಾಕಬೇಕಾಗಿತ್ತು."

"ಅದ್ಯಲ್ಲ ಆಗಿ ಈಗಾಗ್ಲೆ ಐದನೆ ಬ್ಯಾಚಲವೆ ಚುನಾವಣೆ ಎದುರುಸ್ತಾಯಿರದು? ಈಗೇನಾಗ್ಯದೆ ಹೇಳು?"

"ಏನಿಲ್ಲ, ಚನ್ನಾಗೇ ಇದ್ದೀವಿ. ಕಾಂಗ್ರೆಸ್ ಕ್ಯಾಂಡೇಟ್ ಬಂದು ಒಂದು ಸಾವ್ರ ಕೊಟ್ಟು ಹೋದ. ಅದು ಗೊತ್ತಾಗಿ ಜೆಡಿಎಸ್‌ನೋನು ಬಂದು ಒಂದು ಸಾವ್ರ ಕೊಟ್ಟ."

"ಬಿಜೆಪಿಗಳು ಕೊಡಲಿಲ್ವೆ?"

"ಆ ನನಮಕ್ಕಳ ಪಾರ್ಟಿನೂ ಇಲ್ಲ, ಕ್ಯಾಂಡೇಟೂ ಇಲ್ಲ."

"ಮೀಸ್ಲಾತಿ ಜನ ಕೊಡ್ಲಿಲವೆ?"

"ನಾವೇ ಕೊಡಬೇಕವ್ರುರಿಗೆ, ಅಂಥಾ ಕ್ಯಾಂಡೇಟ್ ನಿಂತವ್ರುರೆ."

"ಅಂಗರವ್ರುರದೆ ನಿಜವಾದ ಚುನಾವಣೆ."

"ಏನ್ಸಾರ್? ಕೈಲಿ ಕಾಸಿಲ್ದೊರದೆ ನಿಜವಾದ ಚುನಾವಣೆ. ಆದ್ರೂ ಫಿಫ್ಟಿ ಪರಸೆಂಟ್ ಲೇಡೀಸ್ ಹೋಗಿ ಪಂಚಾಯ್ತಿ ಆಫೀಸಲ್ಲಿ ಜಗಳ ಆಡದ ನೋಡಬೇಕು ಅನ್ನಿಸಿದೆ ಸಾರ್."

"ನಿನ್ನೆಂಡ್ತಿ ನಿಲ್ಲುಸಬೇಕಾಗಿತ್ತು."

"ಅವುಳ ನಿಲ್ಲಿಸಿದ್ರೆ ನನ್ನ ಕತೆನೇ ಮುಗಿತು ಸಾರ್. ಹಿಂದಿನ ಕಾಲದಲ್ಲಿ ರಾಕ್ಷಸರು ಬದುಕಿದ್ದೂ, ಹೆಂಡ್ತಿ ಮಾಡಿದ ದಾನ, ಧರ್ಮ, ಪತಿವ್ರತೆ ಧರ್ಮದಿಂದ್ಲೆ ಬದುಕಿದ್ರಂತೆ, ಅಂಗಾಗ್ಯದೆ ನನ್ನ ಕತೆ."

"ನೀನೇ ನಿಲ್ಲಬೇಕಾಗಿತ್ತು."

"ನಾನು ಚುನಾವಣೆ ಕ್ಯಾಂಡೇಟಲ್ಲ ಸಾರ್.

ಥೂತ್ತೇರಿ

ನಾಮಿನೇಟೆಡ್ ಕ್ಯಾಂಡೇಟಾಗಕ್ಕೆ ಯೋಗ್ಯ ನನ್ನ ನೋಡಿದ್ರೆ ಯಾರಾರ ಓಟಾಕ್ತರಾ ಸಾರ್?"

"ಯಾಕೆ ಹಾಕಲ್ವ?"

"ನಾನೊಂಥರಾ ಪಬ್ಲಿಕ್ ಟಿ.ವಿ. ರಂಗನಾಥ್ ಅವ್ರುನಲ್ಲಾ ಆ ಥರ ಕಾಣ್ತಿನಿ ಸಾರ್. ಅವ್ರುನಂಗೇ ಮಾತಾಡ್ತೀನಿ. ಅಂಗಾಗಿ ಯಾರೂ ಬೆಲೆ ಕೊಡದಿಲ್ಲ, ಓಟನೂ ಕೊಡದಿಲ್ಲ."

"ರಂಗನಾಥ ಚೆನ್ನಾಗಿ ಮಾತಾಡ್ತನಲ್ಲಾ?"

"ಏನು ಮಾತಾಡ್ತನೆ ಸಾರ್. ಅವ್ರುನೊಬ್ಬ ಈಡಿಯಟ್. ಈ ಸಿದ್ದರಾಮಯ್ಯನ ಸಂಪುಟದಲ್ಲಿ ಕ್ಲೀನ್‌ಹ್ಯಾಂಡ್ ಮಂತ್ರಿ ಅಂದ್ರೆ ಕಿಮ್ಮನೆ ರತ್ನಾಕರ್. ಅವ್ರುರಿಗೆ ಇವನು ರೇಣುಕಾಚಾರಿನ ಟೀಕೆ ಮಾಡಿದಂತೆ ಮಾಡ್ತನಲ್ಲಾ, ಕಿಮ್ಮನೆ ಕಿಮ್ಮತ್ತು ಗೊತ್ತಾ ಇವ್ರುನಿಗೆ?"

"ಏನು ಟೀಕೆ ಮಾಡ್ದಾ?"

"ಏನು ಅಂದ್ರೆ ಬಾಯಿಗೆ ಬಂದಂಗೆ ಮಾತಾಡ್ತಾನೆ. ಜನಪ್ರತಿನಿಧಿನ ಸರಕಾರದ ಮಂತ್ರಿನ ಆ ತರ ಟೀಕೆ ಮಾಡೋ ಹಕ್ಕನ್ನು ಈ ನನ ಮಗನಿಗೆ ಯಾರು ಕೊಟ್ರು ಅಂತ?"

"ಅದು ಮಾಧ್ಯಮಕ್ಕೆ ಡೆಮಾಕ್ರಸಿ ಕೊಟ್ಟಿರೊ ಸ್ವಾತಂತ್ಯ್ರ."

"ಸ್ವಾತಂತ್ರ ಬಾಯಿಗೆ ಬಂದಂಗೆ ಮಾತಾಡಕ್ಕಲ್ಲ ಇರದು. ಪಾಪ ಅದ್ಯಾವುದೊ ಒಂದುಡುಗಿಯ ಎದುರಿಗೆ ಕೂರಿಸಿಗಂಡು ತಿಂದಿರೊ ಬಾಯಿನೂ ಪರಿಸಿಗಳದಂಗೆ, ಅಸಯ್ಯವಾಗಿ ಮಾತಾಡ್ತನಲ್ಲಾ, ಅವ್ರುಡುಗಿಗೆ ವಾಕರಿಕೆ ಬರದಿಲವೆ? ಹೋಗ್ಲಿ, ಆ ಹುಡುಗಿಗೆ ಎಷ್ಟು ಬೇಜಾರಾಗ್ಯದೆ ಅನ್ನದಾರ ಗೊತ್ತಾಗ್ಯದ ಇವ್ರುನಿಗೆ?"

"ಸ್ಫೂರ್ತಿಗೆ ಕೂರಿಸಿಗಂಡಿರೊ ಹುಡುಗಿ ಅದು."

"ಏನು ಸ್ಫೂರ್ತಿ ಸಾರ್? ಅವ್ರುನ್ನ ನೋಡಿದ್ರೆ ಜಾಂಡೀಸ್ ಹತ್ತಿಗೊಂಡಿರೊನಂಗೆ ಕಾಣ್ತನೆ. ಆದಿರ್ಲಿ, ಇವನಿಗೆ ಜನಸಮೂಹವಾಗ್ಲಿ, ಸರಕಾರನಾಗ್ಲಿ ಬೈಯ್ಯೋ ಹಕ್ಕೇನಿದೆ? ಸಾರ್, ಅವ್ರುನೇ ಬೈಸಿಗಳಕ್ಕೆ ಯೋಗ್ಯನಾದೋನು. ಆದ ಮರಮಾಚಕ್ಕೆ ಅಂತ ಬಾಯಿಗೆಬಂದಂಗೆ ಮಾತಾಡ್ತನೆ ಅನ್ನುಸ್ತದೆ. ಅವ್ರುನ ಫೋನ್ ನಂಬರ್ ಕೊಡಿ ಸಾರ್."

"ಯಾಕೆ?"

"ಫೋನ್ ಮಾಡಿ, ಮೊದ್ಲು ಮಕಚವ್ರುರ ಮಾಡಿ, ಸ್ನಾನ ಮಾಡು. ಇಲ್ಲ ಅಂದ್ರೆ ನನ್ನ ನೋಡಿದ ಜನ ನಿನ್ನನ್ನ ನಾನು ಅಂತ ತಿಳಕತ್ತರೆ. ಒಂದೇ ತರ ಇಬ್ರು ಇರಬಾರ್ದು ಅಂತೀನಿ."

"ಥೂತ್ತೇರಿ!!" ■

ಪುರೋಹಿತ ಪಿಂಡಗಳ ಅವಾಂತರ

...ಒಂದು ಬ್ರಾಹ್ಮಣರ ಮದುವೆಗೆ ಹೋಗಿದ್ದೆ. ...ದರೆ ಹುಡುಗನ ಮನೆಯವರು ಒಂದಿಷ್ಟು ಜಾತ್ಯತೀತ ...ಭಾವದವರು. ಅದ್ದೂರಿ ಮದುವೆಗಳು ಮತ್ತು ...ದಾಯದ ಮದುವೆಗಳಿಗೆ ಹೋಗಬಾರದೆಂದು ಎಷ್ಟೇ ...ನಾಡಿದರೂ ಇವನ್ನೆಲ್ಲಾ ಮೀರುವ ಪ್ರಸಂಗಗಳು ...ರಾಗಿ ಬಿಡುತ್ತವೆ. ಅಂತಹದ್ದೊಂದು ವಿಶ್ವಾಸಕ್ಕೆ ...ಬಿದ್ದು ಹೋದಾಗ ವರನ ಕಡೆಯವರಿಗೇ ...ಯಾಗಿದ್ದುದನ್ನು ಗಮನಿಸಿದೆ.

...ವೈದಿಕರ ಶಾಸ್ತ್ರಗಳು ಆರಂಭಗೊಂಡವು. ಇಲ್ಲಿ ಮೈಕಿನ ...ಹಾಡುಗಳ ಹಾವಳಿ ಮತ್ತು ವಾದ್ಯಗಳ ಅಬ್ಬರವಿರಲಿಲ್ಲ. ...ೂ ಸಮಯೋಚಿತವಾಗಿ ಅವುಗಳ ಇರುವಿಕೆಯನ್ನ ...ೆ ಸುಮ್ಮನಾಗುತ್ತಿದ್ದವು. ಇತ್ತೀಚಿನ ಮದುವೆಗಳಲ್ಲಿ ... ನಾದಸ್ವರ ಕಣ್ಮರೆಯಾಗುತ್ತಿದೆ. ಅದರ ಬದಲಿಗೆ ...ರರಚಕ್ಕಿ ಕೂಗುವ ಗಾರ್ದಭ ದನಿಯ ಸಾಕ್ಸೊಫೋನ್ ...ಗಳು ಬಂದಿವೆ. ಇವುಗಳು ನಮ್ಮಲ್ಲಿ ಯಾವ ...ಗಳನ್ನು ಕೆರಳಿಸದೆ "ಹೋಗ್ಲಿ ನಿಲ್ಲಸ್ರಯ್ಯ ನಿನ್ನ ರಾಗವ" ...ವಂತೆ ಗೊಗ್ಗರುದನಿಯ ಶಬ್ದ ಮಾಡುತ್ತವೆ. ಅದೇ ...ರ ಡೋಲು ಶ್ರುತಿಯ ಮೇಳ ಕೇಳಿದರೆ ಎಂಥವನಿಗೂ ...ವೆಯಾಗಬೇಕೆನ್ನಿಸುತ್ತದೆ!

...ಇಲ್ಲಿ ಸಾಕ್ಸೊಫೋನ್ ಕಲಾವಿದ ಇಂಧೋಳ ರಾಗದಲ್ಲಿ ... ಹಾಡ ತನ್ಮಯಗೊಂಡು ತಲೆದೂಗುತ್ತಿದ್ದಾಗ ಆತನ ...ನೋಡಿ ಒಂದು ಸೆಲ್ಯೂಟ್ ಹೊಡೆದೆ. ಖುಷಿಗೊಂಡ ...ಸಾಮಜವರಗಮನ'ವನ್ನ ಶುರು ಆರಂಭಿಸಿದ.

...ಷ್ಟದಲ್ಲಿ ವಧುವರರನ್ನು ವೇದಿಕೆಗೆ ತಂದು ನಿಲ್ಲಿಸಿದ ...ಹಿತರು ಒಂದು ಸಣ್ಣ ಟವಲ್ ಅಗಲಕ್ಕೆ ಅಕ್ಕಿ ...ದರು. ನೋಡುನೋಡುತ್ತಿದ್ದಂತೆ ಹೊಸ ಐವತ್ತು ...ಯಗಳ ನೋಟುಗಳನ್ನ ಹಾಸಿ ಅದರ ಮೇಲೆ ...ಯನ್ನ ನಿಲ್ಲಿಸಿದರು. ಹೊಸದಾದ ನೋಟಿನ ಮೇಲೆ

ಗಾಂಧಿ ಚಿತ್ರ ಹೊಳೆಯುತ್ತಿತ್ತು. ಪುರೋಹಿತರಿಗೆ ತಲೆ ಒಪ್ಪಿಸಿದ್ದ ವಧುವರ ಒಂದಿಷ್ಟೂ ಅಳುಕದೆ ಪಾದ ಊರಿ ನಿಂತರು. ಈ ಪುರೋಹಿತ ಪಿಂಡಗಳಿಗೆ ಧನ ಮತ್ತು ಧಾನ್ಯದ ಬೆಲೆ ಖಂಡಿತ ಗೊತ್ತಿಲ್ಲ. ಇವರ ಯಾವ ಶಾಸ್ತ್ರವನ್ನಾದರೂ ಸಹಿಸಿಕೊಳ್ಳಬಹುದು. ಆದರೆ ಈ ದೇಶದ ಕರೆನ್ಸಿ ಮತ್ತು ತಿನ್ನುವ ಅನ್ನಕ್ಕೆ ಇವರು ಕೊಡುತ್ತಿರುವ ಬೆಲೆ ನೋಡಿ ಮೈ ಉರಿದುಹೋಯಿತು. ಸೂಕ್ಷ್ಮವಾಗಿ ನೋಡಿದಾಗ ಈ ಅಜ್ಞಾನಿಗಳು ಎಂದೂ ಭತ್ತ ಬೆಳೆದವರಲ್ಲ ಮತ್ತು ದುಡಿದು ಹಣ ಸಂಪಾದಿಸಿದವರಲ್ಲ. ಎಲ್ಲವೂ ದೇವಸ್ಥಾನಕ್ಕೆ ತಾನಾಗಿ ಬಂದು ಬೀಳುತ್ತದೆ. ಆ ಕಾರಣವಾಗಿ ಅದು ಇವರ ಕಾಲ ಕಸವಾಗಿತ್ತು. ಈ ಪುರೋಹಿತಶಾಹಿಗಳು

ಇನ್ನೂ ಎಷ್ಟರಮಟ್ಟಿಗೆ ಮುಗ್ಧ ಮನಸ್ಸುಗಳನ್ನ ಎಡೆಮುರಿ ಕಟ್ಟಿ ಮಲಗಿಸಿದ್ದಾರೆಂದರೆ ಇತ್ತೀಚೆಗೆ ಕರಿಬಸಣ್ಣನ ಹೆಂಡತಿ ಗೋಕರ್ಣಕ್ಕೆ ಹೋಗಿ ವಾಪಸು ಊರಿಗೆ ಹೋಗುತ್ತಿದ್ದರು. ಅವರ ಬೀಗ ನಮ್ಮೂರ ಕಡೆಯವರು ಮತ್ತು ಶಿವಮೊಗ್ಗದಲ್ಲಿ ಕರಿಬಸಣ್ಣನ ಗೆಳೆಯರಿದ್ದಾರೆ. ನಮ್ಮನ್ನು ಮಾತನಾಡಿಸಿ ಹೋಗೋಣ ಎಂದು ನಮ್ಮ ಮನೆಗೆ ಕರೆದುಕೊಂಡು ಬಂದರು. ಆದರೆ ಕರಿಬಸಣ್ಣನ ಹೆಂಡತಿ ಕಾರಿನಿಂದ ಇಳಿಯಲೇ ಇಲ್ಲ. ಏಕೆಂದು ಕೇಳಲಾಗಿ, ಗೋಕರ್ಣದ ಪುರೋಹಿತ "ನೀವು ಎಲ್ಲೂ ಯಾರ ಮನೆಗೂ ಹೋಗದೆ ನೇರವಾಗಿ ಹೋಗಿ ನಿಮ್ಮ ಮನೆ ತಲುಪಿ" ಎಂದು ಹೇಳಿದ್ದನಂತೆ. ಆ ಕಾರಣಕ್ಕಾಗಿ ಆಯಮ್ಮ ಕಾರಿನಿಂದ



ಇಳಿಯಲಿಲ್ಲ, ಕಾರಿಗೇ ಊಟ ಸಪ್ಲೈ ಮಾಡಿದೆವು. ಆಗ ನಾನು "ನಮ್ಮ ಮನೆ ಒಳಗಡೆ ಬಂದರೆ ಏನಾಗುತ್ತದಂತೆ?" ಎಂದೆ.

ಅದಕ್ಕೆ ಆಯಮ್ಮ "ಪುರೋಹಿತರು ಯಾರ ಮನಿಗೂ ಹೋಗಬ್ಯಾಡಿ ಅಂದವ್ರುರೆ" ಎಂದಿತು. "ಯಾರ ಮನೆಗೂ ಹೋಗದೆ ಊರು ತಲುಪಿದರೆ ಅಲ್ಲಿ ನಿನ್ನ ತೀರಿಕೊಂಡ ಮಗಳು ಮತ್ತು ಕರಿಬಸಣ್ಣ ಬಂದು ಕೂತಿರುತ್ತಾರಂತಾ? ನಿಮ್ಮ ಬದುಕಿನಲ್ಲಿ ಇನ್ನೇನು ಒಳ್ಳೆದಾಗಬೇಕು?" ಎಂದೆ. ಆ ಯಮ್ಮ ಸುಮ್ಮನಿತ್ತು.


ಫಿಲಾಸಫಿ ಹೇಳುತ್ತಂತೆ 'ಮನುಷ್ಯನ ಮನಸ್ಸು ಸ್ವತಂತ್ರವಾದದ್ದು' ಎಂದು. ಆದರೆ ಅಂತಹ ಮನಸ್ಸನ್ನು ಇನ್ನೂ ಬಂಧಿಸಿ ತಾವು ಹೇಳಿದಂತೆ ಕೇಳುವ ಹಾಗೆ ಮಾಡಿಕೊಂಡು ಮೆರೆಯುತ್ತಿರುವ ಪುರೋಹಿತಶಾಹಿ ಪಿಂಡಗಳ ಬಗ್ಗೆ ಯೋಚಿಸಿದಾಗ ತೇಜಸ್ವಿ ಹೇಳಿದ ಮಾತೊಂದು ನೆನಪಾಗುತ್ತದೆ.

"ಅಯೋಗ್ಯರ, ನೀಚರ, ಸರಾಸರಿ ಪ್ರಮಾಣ ಎಲ್ಲ ಜಾತಿಗಳಲ್ಲೂ ಸಮವಾಗಿದೆ. ಆದರೆ ಹಾರುವರಿಗೆ ದೇಶವ್ಯಾಪಿ ಇರುವ ಅಧಿಕಾರಿಗಳ, ಸುದ್ದಿ ಮಾಧ್ಯಮಗಳ ಜಾಲದಿಂದ ಅವನು ಇತರರಿಗಿಂತ ಹೆಚ್ಚು ಅಪಾಯಕಾರಿಯಾಗಲು ಸಾಧ್ಯ. ಅದಕ್ಕೇ ನಾವು ಅವರ ಬಗ್ಗೆ ವಿಶೇಷ ಕಾಳಜಿ ವಹಿಸಿರುವುದು" ಎಂದು ತೇಜಸ್ವಿ ಹೇಳಿದ್ದರು.

ಆದರೀಗ ತೇಜಸ್ವಿ ಯಾರ ಬಗ್ಗೆ ಎಚ್ಚರಿಕೆಯಿಂದಿರಿ ಎಂದು ಹೇಳಿಹೋದರೋ ಆ ಜನ ದನಿಯ ಹಜಾರದಲ್ಲಿ ಬಂದು ಕುಳಿತುಬಿಟ್ಟಿದ್ದಾರೆ. ನಮ್ಮ ಕಳ್ಳುಬಳ್ಳಿ, ಸಂಬಂಧಿ ಮುಗ್ಧರನ್ನು ನಮ್ಮಿಂದ ಬೇರ್ಪಡಿಸುತ್ತಿದ್ದಾರೆ. ಅದಕ್ಕೆ ಧನಧಾನ್ಯದ ಮೇಲೆ ನಿಂತ ವಧುವರರೂ ಉನ್ನತ ಶಿಕ್ಷಣ ಪಡೆದಿದ್ದರೂ ಮೂರ್ಖರಾಗಿದ್ದರು.

■ ಬಿ.ಚಂದ್ರೇಗೌಡ

ಭಾರೀ ಬ್ಯಾಂಕ್ ದರೋಡೆಗಳು



ಬ್ಯಾಂಕು ದರೋಡೆ ಮಾಡಲು ಬರುವವರು ಸಾಮಾನ್ಯವಾಗಿ ತಮ್ಮ ಗುರುತು ಸಿಗಬಾರದೆಂದು ಮುಖಕ್ಕೆ ಮುಸುಕು ತೊಟ್ಟಿರುತ್ತಾರೆ. ಕೈಯಲ್ಲಿ ಆಯುಧಗಳನ್ನು ಹಿಡಿದಿರುತ್ತಾರೆ. ಎಷ್ಟೋ ಜನ ಕ್ರಿಮಿನಲ್‌ಗಳ ಪಟ್ಟಿಯಲ್ಲಿರುತ್ತಾರೆ. ಜೈಲುವಾಸ ಅನುಭವಿಸಿದವರೂ ಇರುತ್ತಾರೆ. ಸಾರ್ವಜನಿಕರ ಹಣವನ್ನು ದೋಚುವ ಇವರು ಸಮಾಜಘಾತುಕ ಶಕ್ತಿಗಳು! ಈ ದರೋಡೆಕೋರರು ಹತ್ತೋ ಇಪ್ಪತ್ತೋ ಲಕ್ಷ ಹಣ ದೋಚಿದರೆ ಭಾರೀ ಬ್ಯಾಂಕ್ ದರೋಡೆ ಎಂದು ಮುಖಪುಟದ ಸುದ್ದಿಯೂ ಆಗುತ್ತದೆ.

ಮತ್ತೊಂದು ರೀತಿಯ ಜನರಿದ್ದಾರೆ. ಅವರು ಸಾವಿರಾರು ಕೋಟಿ ಮೌಲ್ಯದ ಕಂಪನಿಗಳ ಒಡೆಯರು. ಇವರು ಸೂಟುಬೂಟುಧಾರಿಗಳು. ಇವರ ಸೇವೆಯನ್ನು ನೆನೆದು ಸರ್ಕಾರಗಳು ಇವರಿಗೆ ನಾನಾ ಪ್ರಶಸ್ತಿ ಪುರಸ್ಕಾರಗಳನ್ನು ಕೊಡುತ್ತಿರುತ್ತವೆ. ಈ ಮಂದಿ ಸದ್ದುಗದ್ದಲವಿಲ್ಲದೆ ನಮ್ಮ ಬ್ಯಾಂಕುಗಳಿಗೆ ಲಗ್ಗೆ ಹಾಕುತ್ತಿದ್ದಾರೆ. ಸಾಲದ ಹೆಸರಿನಲ್ಲಿ ಸಾವಿರಾರು ಕೋಟಿಗಳನ್ನು ತಮ್ಮ ಕೈವಶ ಮಾಡಿಕೊಳ್ಳುತ್ತಾರೆ. ಸ್ವಲ್ಪ ಕಾಲದ ನಂತರ ಈ ಮೊತ್ತ ಹಾಗೆ ಕರಗಿಬಿಡುತ್ತದೆ. ಹೀಗೆ ಕರಗಿಹೋಗುವ ಹಣಕ್ಕೆ ಬ್ಯಾಂಕುಗಳು ಬೇರೆ ಬೇರೆ ಸೋಗಲಾಡಿ ಹೆಸರುಗಳನ್ನು ಕೊಟ್ಟಿರುತ್ತಾರೆ.

ಬ್ಯಾಂಕ್‌ಗಳಿಂದ ಪಡೆದ ಅಸಲನ್ನಾಗಲಿ, ಬಡ್ಡಿಯನ್ನಾಗಲಿ ಪಾವತಿಸದೆ ಸಾವಿರಾರು ಕೋಟಿ ಬಾಕಿ ಉಳಿಸಿಕೊಂಡ ಕಂಪನಿಗಳಿಗೆ ಬ್ಯಾಂಕ್‌ಗಳು ಪುನಃ ಪುನಃ ಸಾಲ ಕೊಡುತ್ತವೆ.

40 ಸಾವಿರ ಕೋಟಿ ಬಾಕಿ ಉಳಿಸಿಕೊಂಡು, ಎರಡು ವರ್ಷಗಳಿಂದ ಅಸಲು ಬಡ್ಡಿ ಯಾವುದನ್ನೂ ಕಟ್ಟದಿರುವ ಕಂಪನಿಗೆ ಮತ್ತೆ 7,000 ಕೋಟಿ ಮಂಜೂರು ಮಾಡುವ ಕಸರತ್ತು ನಡೆಯುತ್ತಿದೆ ಎಂದರೆ ನಂಬುವವರ್‍ಯಾರು? ಬ್ಯಾಂಕ್‌ಗಳಿಂದ 80 ಸಾವಿರ ಕೋಟಿ ಸಾಲ ಮಾಡಿ, ಅದನ್ನು ಸರಿಯಾಗಿ ಮರುಪಾವತಿ ಮಾಡದೇ ಇರುವ ವ್ಯಕ್ತಿಯೊಬ್ಬನಿಗೆ ಮತ್ತೆ 6,400 ಕೋಟಿ ಬ್ಯಾಂಕ್ ಸಾಲ ಮಂಜೂರಾಗಿದೆ ಎಂದರೆ ನೀವು ನಂಬುತ್ತೀರಾ?

ನಂಬೋದು ಬಿಡೋದು ನಿಮ್ಮ ಆಯ್ಕೆಗೆ ಬಿಟ್ಟ ವಿಚಾರ. ಮೋದಿ ಮಾದರಿ ಆಡಳಿತದ ವಾಸ್ತವಾಂಶಗಳು ನಮ್ಮ ಕಣ್ಣೆದುರಿನಲ್ಲೇ ಇವೆ. ಈಗ ವಿಚಾರಕ್ಕೆ ಬರೋಣ.

ಕಳೆದ ಆಗಸ್ಟ್ 2 ರಂದು ಸಿಬಿಐ ಅಧಿಕಾರಿಗಳು 50 ಲಕ್ಷ ಲಂಚ ಪಡೆದುಕೊಳ್ಳುತ್ತಿದ್ದ ಆರೋಪದ ಮೇಲೆ ಭೋಪಾಲ್‌ನಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ಕೆ.ಜೈನ್ ಮತ್ತು ಮೂವರು ಮಧ್ಯವರ್ತಿಗಳನ್ನು ರೆಡ್‌ಹ್ಯಾಂಡ್ ಆಗಿ ಬಂಧಿಸಿದರು. ಇಷ್ಟೊಂದು ಭಾರೀ ಮೊತ್ತದ ಲಂಚದ ಹಣ ಕೊಟ್ಟಿದ್ದು ಭೂಷಣ್ ಸ್ಟೀಲ್ಸ್ ಎಂಬ ಕಂಪನಿಯ ಒಡೆಯರು. ಹಣ ಪಾವತಿಸಿದ್ದು ಕೂಡ ಹವಾಲಾ ಏಜೆಂಟುಗಳ ಮೂಲಕ.

ಸಿಬಿಐ ಡೈರೆಕ್ಟರ್ ರಂಜಿತ್ ಸಿನ್ಹಾ ಸ್ವತಃ ಈ ಕಾರ್ಯಾಚರಣೆಯನ್ನು ರೂಪಿಸಿದ್ದರು. ಭೂಷಣ್ ಸ್ಟೀಲ್ಸ್‌ನ ಎಂಡಿ ನೀರಜ್ ಸಿಂಘಾಲ್‌ನನ್ನು ಬಂಧಿಸಲು ಹೋಗಿದ್ದ ತಂಡ ಆತನನ್ನು ಬಂಧಿಸದೆ ಬರಿಗೈಯಲ್ಲಿ ವಾಪಸ್ ಬಂತು. ಸಾವಿರಾರು ಕೋಟಿಗಳ ಒಡೆಯನನ್ನು ಬಂಧಿಸುವುದೆಂದರೆ ಹುಡುಗಾಟದ ಮಾತೆ? ತಮ್ಮ ಡ್ಯೂಟಿ ನಿರ್ವಹಿಸದ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆ ನಡೆಯಿತು. ಅದು ಹಾಗಿರಲಿ.

ಬಂಧನ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ನೀರಜ್ ಸಿಂಘಾಲ್ ನಿರೀಕ್ಷಣಾ ಜಾಮೀನಿಗೆ ಅರ್ಜಿ ಗುಜರಾಯಿಸಿದ. ಜಾಮೀನು ಅರ್ಜಿ ತಿರಸ್ಕೃತಗೊಂಡ ಮರುದಿನ ವಿಧಿಯಿಲ್ಲದೆ ಬಂಧನಕ್ಕೊಳಗಾದ. ನಂತರ ನಡೆದದ್ದೇನು? ಒಂದು ತಿಂಗಳ ನಂತರ ಬಿಡುಗಡೆಯಾದ ಆತ ಮತ್ತೆ ತನ್ನ ಸಾಮ್ರಾಜ್ಯದ ಉಸ್ತುವಾರಿ ವಹಿಸಿಕೊಂಡಿದ್ದಾನೆ. ಈತ ಇಷ್ಟೊಂದು ಲಂಚ ಕೊಡಲು ಕಾರಣವಾದರೂ ಏನಿತ್ತು?

ಏನೆಂದರೆ ಈತನ ಕುಟುಂಬದ ಒಡೆತನದಲ್ಲಿರುವ ಭೂಷಣ್ ಸ್ಟೀಲ್ಸ್ ಎಂಬ ಕಂಪನಿ ಸಾರ್ವಜನಿಕ ಬ್ಯಾಂಕುಗಳಿಂದ ಇದುವರೆಗೆ ಸುಮಾರು 40,000 ಕೋಟಿ ಸಾಲ ಮಾಡಿದೆ. ಈ ಸಾಲದ ಅಸಲನ್ನಾಗಲಿ, ಬಡ್ಡಿಯನ್ನಾಗಲಿ ಮರು ಪಾವತಿಸದೆ ಎರಡು ವರ್ಷಗಳಿಂದ ಸುಸ್ತಿದಾರರಾಗಿದ್ದಾರೆ. ಹೀಗೆ ವಸೂಲಾಗದ ಮೊತ್ತವನ್ನು ಬ್ಯಾಂಕುಗಳು ಎನ್‌ಪಿಎ (ನಾನ್ ಪರ್‌ಫಾರ್ಮಿಂಗ್ ಅಸೆಟ್ - ಕಾರ್ಯ ನಿರ್ವಹಿಸದಿರುವ ಸ್ವತ್ತು) ಎಂದು ವರ್ಗೀಕರಿಸುತ್ತವೆ. ಹೀಗೆ ವರ್ಗೀಕರಣಗೊಂಡ ನಂತರ ಸದರಿ ಕಂಪನಿಗಳು ಮತ್ತಷ್ಟು ಹೊಸ ಸಾಲಗಳನ್ನು ಎತ್ತುವುದು ಕಷ್ಟ ಸಾಧ್ಯ. ಅದೂಅಲ್ಲದೆ, ಇಂಥ ಕಂಪನಿಯ ಷೇರು ಮೌಲ್ಯ ಕುಸಿಯುವ ಅಪಾಯವೂ ಇರುತ್ತದೆ. ಹೀಗಾಗಿ ಕಂಪನಿಗಳು ಆದಷ್ಟೂ ಎನ್‌ಪಿಎ ಪಟ್ಟಿಗೆ ಸೇರುವುದನ್ನು ತಪ್ಪಿಸಲು ಪ್ರಯತ್ನಿಸುತ್ತವೆ.


ನೀರಜ್ ಸಿಂಘಾಲ್‌ನ ಸಮಸ್ಯೆಯೂ ಇದೇ ಆಗಿತ್ತು. 40,000 ಕೋಟಿ ಸಾಲದ ಬಾಕಿಯಿಂದಾಗಿ ಎನ್‌ಪಿಎ ಪಟ್ಟಿಗೆ ಸೇರುವುದನ್ನು ತಪ್ಪಿಸಲು ಹಾಗೂ ಮತ್ತೆ ನೂರು ಕೋಟಿ ಹೊಸ ಸಾಲ ಮಂಜೂರು ಮಾಡಲು ಸಿಂಡಿಕೇಟ್ ಬ್ಯಾಂಕ್ ಎಂಡಿ ಜೊತೆ ಡೀಲ್ ಕುದುರಿಸಿದ್ದ.


ಈ ಡೀಲ್ ಕುದುರಿಸಿದ್ದು ಮಧ್ಯವರ್ತಿ ಪವನ್ ಬನ್ಸಾಲ್ ಎಂಬ ಚಾರ್ಟರ್ಡ್ ಅಕೌಂಟೆಂಟ್. ಇಂಥಾ ಸಾಲಗಳನ್ನು ಅರೇಂಜ್ ಮಾಡುವುದರಲ್ಲಿ ಈತ ನಿಸ್ಸೀಮ. ಇಂಥದ್ದನ್ನೇ ತಮ್ಮ ಕಾಯಕ ಮಾಡಿಕೊಂಡು ಮುಂಬೈ, ದೆಹಲಿಗಳಂತಹ ಮಹಾನಗರಗಳಲ್ಲಿ ಏರ್ ಕಂಡಿಷನ್ಡ್ ಕಚೇರಿಗಳನ್ನು ತೆರೆದು ಕೂತಿರುವ ಸಾಕಷ್ಟು ಮಂದಿ ಇದ್ದಾರಂತೆ.

ಪವನ್ ಬನ್ಸಾಲ್ ಕೊಟ್ಟ ಮಾಹಿತಿ ಮೇರೆಗೆ ಯೂಕೋ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಮಹಾರಾಷ್ಟ್ರದ ಅಧಿಕಾರಿಗಳು ಹಾಗೂ ಕೆಲವು ಕಂಪನಿಗಳ ಎಂಡಿಗಳ ಮೇಲೆ ಸಿಬಿಐ ಕೇಸು ದಾಖಲಿಸಿದೆ. ಈ ಕೇಸಿನಲ್ಲಿ ಅರೆಸ್ಟ್ ಆದವರು ಒಟ್ಟು 8 ಮಂದಿ. ಅದರಲ್ಲಿ ಅರುಣ್ ಅಗರವಾಲ್ ಎಂಬ ಆಸಾಮಿಯೂ ಒಬ್ಬ. ಈತ ನೀರಜ್ ಸಿಂಘಾಲ್‌ನ ಅಣ್ಣ ಸಂಜಯ್ ಸಿಂಘಾಲ್‌ನ ಭೂಷಣ್ ಸ್ಟೀಲ್ ಅಂಡ್ ಪವರ್ ಕಂಪನಿಯಲ್ಲಿ ಫೈನಾನ್ಸ್ ಮ್ಯಾನೇಜರ್. ಎಸ್‌ಕೆ ಜೈನ್ ಜೊತೆ ವ್ಯವಹಾರ ಕುದುರಿಸುವಲ್ಲಿ ಈತ ಪ್ರಮುಖ ಪಾತ್ರ ವಹಿಸಿದ್ದ.

ಮೊದಲು ಒಟ್ಟಿಗೆ ಇದ್ದ ಬ್ರಿಜ್ ಭೂಷಣ್ ಸಿಂಘಾಲ್‌ನ ಇಬ್ಬರು ಮಕ್ಕಳು 2011ರಲ್ಲಿ ಆಸ್ತಿ ವಿಭಜನೆ ಮಾಡಿಕೊಂಡಿದ್ದರು. ಅಣ್ಣ ಸಂಜಯ್ ಸಿಂಘಾಲ್ ಭೂಷಣ್ ಸ್ಟೀಲ್ಸ್ ಅಂಡ್ ಪವರ್ಸ್ ಎಂಬ ಕಂಪನಿಯ ಮಾಲಿಕನಾದ. ನೀರಜ್ ತನ್ನ ತಂದೆಯ ಜೊತೆಗೆ ಭೂಷಣ್ ಸ್ಟೀಲ್ಸ್ ಎಂಬ ಹೆಸರಿನ ಕಂಪನಿಯ ಮಾಲಿಕತ್ವ ಪಡೆದುಕೊಂಡ.

ಅಷ್ಟಾಗಿ ಸುದ್ದಿಯಲ್ಲಿಲ್ಲದ ಈ ಮಂದಿ ಮಾಮೂಲಿ





ಉದ್ಯಮಿಗಳೇನಲ್ಲ, ಭಾರತದ ಸ್ಟೀಲ್ ಉದ್ಯಮ ಕ್ಷೇತ್ರದ ಅಗ್ರಗಣ್ಯರಾದ ಟಾಟಾ, ಎಸ್ಸಾರ್, ಜಿಂದಾಲ್‌ಗಳ ಸಾಲಿನಲ್ಲಿ ಇವರೂ ಇದ್ದಾರೆ. ಹಿರಿ ಮಗ ಸಂಜಯ್ ಸಿಂಘಾಲ್ ಕಳೆದ ವರ್ಷ ಭಾರತದ ಫೋರ್ಬ್ಸ್ ಶ್ರೀಮಂತರ ಪಟ್ಟಿಗೆ ಎಂಟ್ರಿಯಾಗಿದ್ದಾನೆ. ಮೋದಿಯ ಹಿಂದೆಮುಂದೆ ಸುತ್ತುವ ಕಂಪನಿಗಳ ಪಟ್ಟಿಯಲ್ಲಿ ಇವರೂ ಇದ್ದಾರೆ. ಮೊನ್ನೆ ಮೊನ್ನೆ ಮೋದಿಯ ಚೀನಾ ಪ್ರವಾಸದಲ್ಲಿ ಪ್ರಧಾನಿ ಜೊತೆಗಿನ ಬ್ಯುಸಿನೆಸ್ ನಿಯೋಗದಲ್ಲಿ ಸಂಜಯ್ ಸಿಂಘಾಲ್‌ನೂ ಒಬ್ಬ. ಮೋದಿಯ ಸಮ್ಮುಖದಲ್ಲಿ ಸಂಜಯ್ ಸಿಂಘಾಲ್ ಶಾಂಘೈನ ಕಂಪನಿಯೊಂದರ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ್ದಾನೆ.

ವಿಷಯ ಹೀಗಿರುವಾಗ ಅವರಿಗೆ ಏನಾದರೂ ತೊಂದರೆಯಾಗಲು ಸಾಧ್ಯವೆ? ಭೂಷಣ್ ಸ್ಟೀಲ್‌ಗೆ ಸಾಲ ಕೊಟ್ಟಿದ್ದವರಲ್ಲಿ ಸಿಂಡಿಕೇಟ್ ಅಲ್ಲದೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಐಡಿಬಿಐ ಮುಂತಾದವರಿದ್ದಾರೆ. ಭೂಷಣ್ ಕಂಪನಿಯ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲಿಕ್ಕಾಗಿ, ಮೋದಿ ಸರ್ಕಾರದ ಹಣಕಾಸು ಸಚಿವಾಲಯದ ಸೂಚನೆಯ ಮೇರೆಗೆ ಈ ಬ್ಯಾಂಕುಗಳ ಪ್ರಮುಖರು ಸಭೆ ಸೇರಿ ಹಲವು ಬಾರಿ ಚರ್ಚಿಸಿದ್ದಾರೆ. ಕೊನೆಗೆ ಒಂದು ಪರಿಹಾರವನ್ನೂ ಕಂಡುಹಿಡಿದಿದ್ದಾರೆ. ಆ ಪರಿಹಾರವೇನು ಗೊತ್ತೆ? ಭೂಷಣ್ ಸ್ಟೀಲ್ಸ್‌ಗೆ ಮತ್ತೆ 7,000 ಕೋಟಿ ಮಂಜೂರು ಮಾಡುವುದು!!

ನೀರಜ್ ಸಿಂಘಾಲ್ ಒಂದು ತಿಂಗಳ ಕಾಲ ಸೆರೆಯಲ್ಲಿದ್ದದ್ದು ಸಾರ್ಥಕವಾಯಿತಲ್ಲವೆ?

ಭೂಷಣ್ ಸ್ಟೀಲ್ಸ್ ಪ್ರಕರಣ ಬಿಸಿಬಿಸಿಯಾಗಿದ್ದಾಗಲೇ, ಅಂದರೆ ಆಗಸ್ಟ್ 26ರಂದು ಯುಕೋ ಬ್ಯಾಂಕ್‌ನ ಎನ್‌ಪಿಎ ಅಕೌಂಟ್‌ಗಳನ್ನು ಆಡಿಟ್ ಮಾಡಬೇಕೆಂಬ ಆದೇಶ ಹೊರಬಿತ್ತು, ಮರುದಿನವೇ ಬ್ಯಾಂಕ್‌ನ ಷೇರು ಮೌಲ್ಯ 8% ಕುಸಿದು ಒಂದೇ ಏಟಿಗೆ 3500 ಕೋಟಿ ಕೊಚ್ಚಿಹೋಯಿತು. ಇದಾದ ಎರಡು ದಿನಗಳ ನಂತರ ಆಗಸ್ಟ್ 28ರಂದು ಇಂಡಿಯಾ ಗ್ಲೋಬಲ್ ಇನ್ಫ್ರಾಸ್ಟ್ರಕ್ಚರ್ ಕಂಪನಿ ಮೇಲೆ ಸಿಬಿಐ ಕೇಸು ದಾಖಲಿಸಿತು. ಸುಳ್ಳು ದಾಖಲೆ ಪತ್ರ ಕೊಟ್ಟು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ 139 ಕೋಟಿ ಮೋಸ ಮಾಡಿದ[...] ಅದು. ಹೀಗೆ ಪಟ್ಟಿ ಮಾಡುತ್ತಾ ಹೋದ[...] ಮೊದಲಿಲ್ಲದಷ್ಟು ಪ್ರಕರಣಗಳು!

ದರೋಡೆಯ ಪ್ರಮಾಣ ಎಷ್[...]

ಕೆಲವು ಅಂಕಿಅಂಶ ನೋಡೋಣ. 2014ರ [...] 31ವರೆಗೆ ಹೀಗೆ ವಸೂಲಿಯಾಗದೆ ಎನ್‌ಪಿಎ ಪ[...] ಮೊತ್ತ 2,16,000 ಕೋಟಿ! 2014ರ ಡಿಸೆಂಬ[...] 2,60,531 ಕೋಟಿಗೆ ಏರಿದೆ. ಈಗ ಈ ಮೊ[...] ಕೋಟಿಗಳನ್ನು ದಾಟಿದೆ ಎಂದು ಅಂದಾಜು[...] ರೇಟಿಂಗ್ ಸಂಸ್ಥೆಯ ಅಂದಾಜಿನ ಪ್ರಕಾರ 2[...] ನೇ ಆರ್ಥಿಕ ವರ್ಷ ಮುಗಿಯುವಷ್ಟರಲ್ಲಿ ಈ [...] ಲಕ್ಷದ 30 ಸಾವಿರ ಕೋಟಿಗಳಿಗೆ ಏರಲಿದೆ[...]

ಇನ್ನೂ ಕುತೂಹಲಕಾರಿ ಸಂಗತಿಯೊಂದಿ[...] 30 ಕಾರ್ಪೊರೇಟ್ ಕಂಪನಿಗಳು ಈ ಲಕ್ಷಾಂತ[...] ಮೊತ್ತದಲ್ಲಿ ಶೇಕಡ 50 ಭಾಗವನ್ನು ಗುಳುಂ [...] ಕಳೆದ ನವೆಂಬರ್‌ನಲ್ಲಿ ಪ್ರಶ್ನೆಯೊಂದಕ್ಕೆ ಉ[...] ಸಂದರ್ಭದಲ್ಲಿ ಹಣಕಾಸು ಸಚಿವ ಜೈಟ್ಲಿಯ[...] ವಿಷಯವನ್ನು ಒಪ್ಪಿಕೊಂಡಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಈ ಎನ್‌ಪಿ[...] ದಿನೇದಿನೇ ಬೃಹದಾಕಾರವಾಗಿ ಬೆಳೆಯುತ್ತಾ [...] ಅಂದಿನ ವಾಜಪೇಯಿ ಸರ್ಕಾರದಿಂದ ಹಿಡಿದ[...] ಸರ್ಕಾರದವರೆಗೂ ಇದೇ ಹಣೆಬರಹ. ಯುಪಿಎ [...] ಕೊನೆಕೊನೆಗೆ ತೀರಾ ಅತಿಯೆನಿಸಿ ಕಂಟಕಪ್ರಾ[...] ಈ ಪಿಡುಗನ್ನು ತಹಬಂದಿಗೆ ತರಲು ಒಂದ[...] ತೆಗೆದುಕೊಳ್ಳುವ ಪ್ರಯತ್ನ ನಡೆದಿತ್ತು. ಆದರೆ[...] ಸರ್ಕಾರ ಬಂದನಂತರ ಸಾರ್ವಜನಿಕರ ಹಣ [...] ವ್ಯಾಧಿ ಮತ್ತಷ್ಟು ವೇಗ ಪಡೆದುಕೊಂಡು ಒಂದೇ [...] ಸುಮಾರು 80,000 ಕೋಟಿಗಳು ಲೆಕ್ಕದ [...] ಹೂತುಹೋಗಿದೆ!

ಅಸಲಿಗೆ ಈ ಎನ್‌ಪಿಎ ಮಾನದಂಡಗ[...] ವಿಚಿತ್ರವಾಗಿವೆ. ನಿಯಮದಂತೆ 90 ದಿನ[...] ಪಾವತಿಯಾಗದೆ ಸುಸ್ತಿಯಾದ ಸಾಲವನ್ನು ಸಾ[...] ಎನ್‌ಪಿಎ ಎಂದು ಪರಿಗಣಿಸಲಾಗುತ್ತದೆ. ಹೀಗೆ ದ[...] ಬಾಕಿ ಉಳಿದ ಸಾಲವನ್ನು ಕಾರ್ಪೊರೇಟ್[...] ರೀಸ್ಟ್ರಕ್ಚರಿಂಗ್ - ಸಿಡಿಆರ್ (ಕಾರ್ಪೊರೇಟ್ [...] ಪುನರ್‌ರಚನೆ) ಸ್ಕೀಮ್‌ನಡಿ ತರಲಾಗುತ್ತದೆ. [...] ಅವಧಿಯೆಂದರೆ ಎಷ್ಟು ಕಾಲ ಎಂಬುದಕ್ಕೆ [...] ನೀತಿನಿಯಮಗಳಿಲ್ಲ; ಇದು ಕಂಪನಿಯ ಪ್ರಭಾವ[...] ಅಧಿಕಾರಿಗಳ ಮರ್ಜಿ, ಕೇಂದ್ರ ಸರ್ಕಾರದ ಪರಿ[...] ತಕ್ಕಂತೆ ತೀರ್ಮಾನಿಸಲಾಗುತ್ತಿದೆ. ಬ್ಯಾಂಕ್‌ಗಳ [...] ಆಫ್ ಡೈರೆಕ್ಟರ್‌ಗಳು, ಮಂತ್ರಿ ಮಹೋದಯರ[...] ಮಾಲೀಕರೊಂದಿಗೆ ಶಾಮೀಲಾಗಿ ಸಿಡಿಆರ್ [...] ಮತ್ತೊಂದು ರೀತಿಯ ದರೋಡೆಯಾಗಿ ಪರಿವರ್ತ[...]

ಅದು ಹೇಗೆ? ಸಿಡಿಆರ್‌ಗೆ ಒಳಗಾದ[...] ಬಡ್ಡಿಯನ್ನು, ಕೆಲವೊಮ್ಮೆ ಅಸಲಿನ ಒಂದು [...] ಮನ್ನಾ ಮಾಡುವುದು. ಸಾಲದ ಅವಧಿಯ[...] ವರ್ಷಗಳವರೆಗೂ ವಿಸ್ತರಿಸುವುದು, ಸಾಲದ [...] ಆಯಾ ಬ್ಯಾಂಕ್‌ಗಳು ಆ ಕಂಪನಿಯಲ್ಲಿ ಹೂಡಿರ[...] ಎಂದು ಪರಿಗಣಿಸುವುದು ಇತ್ಯಾದಿ. ತೋಕಡಿಸ[...] ಹಾಸಿಗೆ ಹಾಸಿಕೊಟ್ಟರು ಅಂತಾರಲ್ಲಾ ಹಾಗೆ [...] ಇಂಥಾ ನೀತಿಯ ದುರುಪಯೋಗಕ್ಕೆ ಹೇಳೋರು [...] ಯಾರೂ ಇಲ್ಲ, ಇದುವರೆಗೆ ಸಿಡಿಆರ್ ಸ್ಕೀಮ್[...] ಮೊತ್ತ ಆರೂವರೆ ಲಕ್ಷ ಕೋಟಿಗಳು! ಎನ್‌ಪಿ[...] ಸಿಡಿಆರ್ ಎರಡೂ ಸೇರಿದರೆ ಕಾರ್ಪೊರೇಟ್ [...]

ಆಯ್ದ 10 ಬಾಕಿದಾರರ ಪಟ್ಟಿ

1. ಕಿಂಗ್‌ಫಿಷರ್ಸ್
2. ವಿನ್‌ಸಮ್
3. ಎಲೆಕ್ಟ್ರೋಥರ್ಮ್
4. ಝೂಮ್ ಡೆವಲಪರ್ಸ್
5. ಸ್ಟರ್ಲಿಂಗ್ ಬಯೋಟೆಕ್
6. ಎಸ್ ಕುಮಾರ್ಸ್
7. ಫಾರ್‌ಎವರ್ ಪ್ರೀಷಿಯಸ್
8. ಇಸ್ಪಾಟ್ ಅಲಾಯ್ಸ್
9. ಸ್ಟರ್ಲಿಂಗ್ ಆಯಿಲ್ಸ್
10. ವರುಣ್ ಇಂಡಸ್ಟ್ರೀಸ್

ಈ ಪಟ್ಟಿಯಲ್ಲಿರುವ ಕಂಪನಿಗಳಷ್ಟೆ ಸಮಸ್ಯೆಯಲ್ಲ. ವಾಸ್ತವದಲ್ಲಿ ಸಾರ್ವಜನಿಕ ಹಣವನ್ನು ಭಾರೀ ಪ್ರಮಾಣದಲ್ಲಿ ಕಬಳಿಸುತ್ತಿರುವ ಕಂಪನಿಗಳು ಈ ಪಟ್ಟಿಗೂ ಸೇರದಂತೆ ತಮ್ಮ ಜೈತ್ರಯಾತ್ರೆ ಮುಂದುವರೆಸಿದ್ದಾರೆ. ಉದಾಹರಣೆಗೆ ಅದಾನಿ 80 ಸಾವಿರ ಕೋಟಿ ಸಾಲ ಪಡೆದಿದ್ದಾನೆ. ಮೋದಿ ಬಂದಮೇಲೆ ಹತ್ತಾರು ಸಾವಿರ ಕೋಟಿಗಳ ವಿಸ್ತರಣಾ ಯೋಜನೆ ಕೈಗೆತ್ತಿಕೊಂಡಿದ್ದಾನೆ.

ಝೂಮ್ ಡೆವಲಪರ್ಸ್ ಮಧ್ಯಪ್ರದೇಶದ ಇಂದೋರ್‌ನಲ್ಲಿ ಒಂದು ಎಸ್‌ಇಜಡ್ ನಿರ್ಮಿಸಲು ಸಾವಿರ ಕೋಟಿ ಹೂಡಿಕೆಯ ಯೋಜನೆ ಕೈಗೆತ್ತಿಕೊಂಡಿದ್ದಾರೆ. ಮಾಧ್ಯಮ ಸಂಸ್ಥೆ ಮಹುವಾದ ಮಾಲೀಕ ಪಿ.ಕೆ. ತಿವಾರಿ ಭೋಜಪುರಿ, ಬಾಂಗ್ಲಾ ಮುಂತಾದ ಭಾಷೆಗಳ ಚಾನೆಲ್ ಹೊಂದಿದ್ದಾನೆ. ಹಲವಾರು ರೇಡಿಯೋ ಸ್ಟೇಷನ್‌ಗಳು ಆತನ ಒಡೆತನದಲ್ಲಿವೆ. ಬೇರೆಬೇರೆ ಹೆಸರುಗಳಲ್ಲಿ ತಮ್ಮ ವಹಿವಾಟನ್ನು ವಿಸ್ತರಿಸುತ್ತಲೇ ಇದ್ದಾರೆ. ನಮ್ಮ ಬೆಂಗಳೂರಿನ ಹೊಸಕೋಟೆಯ ಬಳಿ ಕೈಗಾರಿಕೆ ನಿರ್ಮಿಸಿದ್ದ ಲ್ಯಾಂಕೋ ಲಿಮಿಟೆಡ್ ಕಂಪನಿ 533 ಕೋಟಿ ಬಾಕಿ ಉಳಿಸಿಕೊಂಡಿದೆ. ಹಾಗಿದ್ದರೂ ಅದು ಉಡುಪಿ ಬಳಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸಿ, ಇತ್ತೀಚೆಗೆ ಅದನ್ನು ಅದಾನಿ ಕಂಪನಿಗೆ 6000 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದ್ದು ನಮಗೆ ತಿಳಿದಿದೆ. ಆದರೆ ಸಾಲ ವಾಪಸಾತಿ ಮಾತ್ರ ಇಲ್ಲ.

ಹೀಗೆ ಹುಚ್ಚು ಮುಂಡೇ ಮದುವೇಲಿ ಉಂಡೋನೇ ಜಾಣ ಎಂಬಂತಿದೆ ಈ ದಂಧೆ. ಮೋದಿಯಾಗಲಿ ಆತನ 'ದೇಶಭಕ್ತ' ಕೂಟವಾಗಲಿ ಅಪ್ಪಿತಪ್ಪಿಯೂ ಈಬಗ್ಗೆ ಬಾಯಿಬಿಚ್ಚುತ್ತಿಲ್ಲ; ಬಿಚ್ಚುವುದೂ ಇಲ್ಲ.

ಗೆ ನಾವು ತಿಳಿದಿನ ಮೊತ್ತ ಸುಮಾರು 10 ಯಷ್ಟು!!
ದಿ. ನಾವು ಮಾತಾಡುತ್ತಿರುವುದು ಬೇರೆ ಹಣದ ಬಗ್ಗೆ ಅಲ್ಲ; ನಮ್ಮೆಲ್ಲರಿಗೂ ಸೇರಿದ ಹಣದ ಬಗ್ಗೆ.

ಜೆಗಳಿಂದ ಕಂಪನಿಗಳಿಗಾಗಿ!

ಗಳಲ್ಲಿ ಜಮಾ ಆಗಿರುವ ಹಣ ಎಲ್ಲಿಂದ ಸಾರ್ವಜನಿಕರ ಠೇವಣಿಯಿಂದ ಅಥವ ತೊಡಗಿಸಿರುವ ಬಂಡವಾಳದಿಂದ. ಸರ್ಕಾರದ ಎಂದರೆ ಮತ್ತೆ ತೆರಿಗೆದಾರರ ಹಣವೇ. ಹೀಗೆ ಪ್ರಜೆಗಳ ಸ್ವತ್ತು. ಆದರೆ ಸಾಮಾನ್ಯ ಪ್ರಜೆಗಳ ಧೋರಣೆ ಎಂಥದ್ದು?

ಒಂದು ಬೈಕ್ ಕೊಳ್ಳುವ ಸಾಲಕ್ಕಾಗಿ ಗೆ ಹೋದರೆ, ನಾವು ಒದಗಿಸಬೇಕಾದ ದೊಡ್ಡ ಪಟ್ಟಿಯನ್ನೇ ಕೊಡುತ್ತಾರೆ. ಅಷ್ಟೆಲ್ಲ ಸಾಲ ಪಡೆದು ಯಾವುದೋ ಕಾರಣಕ್ಕಾಗಿ ತಿಂಗಳು ಸಾಲದ ಕಂತು ಪಾವತಿಸದೆ ಹೋದರೆ ಹನ ಸೀಜ್ ಮಾಡಿ ಬ್ಯಾಂಕ್‌ನ ವಶಕ್ಕೆ ಳ್ಳುತ್ತಾರೆ.

ಸ್ವಂತ ಉದ್ಯೋಗ ಪ್ರಾರಂಭಿಸಲಿಕ್ಕೆಂದು ದ ಸಾಲ ಪಡೆಯಲು, ಮನೆ ಮಠ ಅಡಮಾನ ನಾವು ಅಡವಿಡುವ ಆಸ್ತಿಯ ಮೌಲ್ಯ ಹತ್ತು 3 ಬ್ಯಾಂಕ್‌ನವರು ಮಂಜೂರು ಮಾಡುವ

ಬಾಕಿದಾರ. ಅದೂ ಎರಡು ವರ್ಷಗಳ ಹಿಂದಿನ ಲೆಕ್ಕ.

ಈ ಕಂಪನಿಯ ಹೆಗ್ಗಳಿಕೆ ಬಹಳ ದೊಡ್ಡದು. ವಜ್ರ ಮತ್ತು ಬಂಗಾರದ ಆಭರಣಗಳ ರಫ್ತು ವ್ಯವಹಾರದಲ್ಲಿ ಇದು ಅತಿ ದೊಡ್ಡ ಕಂಪನಿ. ದುಬೈ ಮುಂತಾದ ದೇಶಗಳಲ್ಲಿರುವ 28 ಕಂಪನಿಗಳೊಂದಿಗೆ ವಿನ್‌ಸಮ್ ಕಂಪನಿಯ ವಹಿವಾಟು ನಡೆದಿದೆ. ನಂಬಿದ್ರೆ ನಂಬಿ, ಬಿಟ್ರೆ ಬಿಡಿ. ಆ ಕಂಪನಿಗಳೆಲ್ಲವೂ ಜತಿನ್ ಮೆಹ್ತಾ ಮತ್ತು ಕುಟುಂಬ ವರ್ಗದವರ ಹಿಡಿತದಲ್ಲೇ ಇವೆ!

ಜತಿನ್ ಮೆಹ್ತಾನ ಮತ್ತೊಂದು ಸಂಬಂಧವೂ ನಮಗೆ ಮುಖ್ಯ. ಈತ ಅದಾನಿಯ ಬೀಗ! ಗೌತಮ್ ಅದಾನಿಯ ಅಣ್ಣ ವಿನೋದ್ ಅದಾನಿಯ ಮಗಳು ಕೃಪಾಳನ್ನು ಜತಿನ್ ಮೆಹ್ತಾನ ಮಗ ಸೂರಜ್ ಮೆಹ್ತಾನಿಗೆ ಕೊಟ್ಟಿದ್ದಾರೆ. ಅಂದರೆ ಜತಿನ್ ಮೆಹ್ತಾನ ಲೆವೆಲ್ ನಿಮಗೆ ಅರ್ಥವಾಗಿರಬಹುದು.

ವಿನೋದ್ ಅದಾನಿ ಕೂಡ ದುಬೈನಲ್ಲೇ ನೆಲೆಸಿದ್ದಾನೆ. ಅದಾನಿ ಗುಂಪಿನ ಬಂಗಾರದ ಆಮದು ವ್ಯವಹಾರದ ಉಸ್ತುವಾರಿ ಆತನದೇ.

ಈಗ ಜತಿನ್ ಮೆಹ್ತಾ 'ನಾಪತ್ತೆ'! ಪಂಜಾಬ್ ನ್ಯಾಷನಲ್ ಬ್ಯಾಂಕ್ ಒಂದೇ 1800 ಕೋಟಿ ಕೊಟ್ಟಿದೆ. ಇನ್ನು ಸೆಂಟ್ರಲ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ ಮುಂತಾದ ಒಟ್ಟು 15 ಬ್ಯಾಂಕುಗಳಿಗೆ ಪಂಗನಾಮ ಬಿದ್ದಿದೆ. ಮೆಹ್ತಾ ಮಾರಿಷಸ್‌ನಲ್ಲೋ, ದುಬೈನಲ್ಲೋ ವೃದ್ಧಾಪ್ಯ ಕಳೆಯುತ್ತಿರಬಹುದು. ಅವರು ಗ್ಯಾರಂಟಿ ಕೊಟ್ಟಿರುವ ಸ್ವತ್ತುಗಳನ್ನು ಬ್ಯಾಂಕುಗಳು ಹರಾಜು ಹಾಕಿದರೆ ಶೇಕಡ 0.5ರಷ್ಟೂ ಹಣ ಬರುವುದಿಲ್ಲವಂತೆ.

ಪರಿಹಾರ ಏನು?

ಇದು ಪರಿಹಾರವೇ ಕಾಣದ ಸಮಸ್ಯೆ ಎಂದು ಬಿಂಬಿಸಲು ಎಲ್ಲರೂ ಪ್ರಯತ್ನಿಸುತ್ತಿದ್ದಾರೆ. ಆರ್ಥಿಕ ಪಂಡಿತರ ಪ್ರಕಾರ ಈ ಸಮಸ್ಯೆಗೆ ಕಾರಣ ಜಾಗತಿಕ ಆರ್ಥಿಕ ಮುಗ್ಗಟ್ಟು. ಅದು ಪರಿಹಾರವಾಗದೆ ಈ ಸಮಸ್ಯೆ ಬಗೆ ಹರಿಯುವುದಿಲ್ಲವಂತೆ. ಕೇಂದ್ರ ಮಂತ್ರಿ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ಕೊಟ್ಟ ಹೇಳಿಕೆಯೂ ಇದೇ ರೀತಿಯದು.

ಈ ದೇಶದ ಎಲ್ಲ ಬ್ಯಾಂಕ್ ವ್ಯವಹಾರಗಳೂ ರಿಸರ್ವ್ ಬ್ಯಾಂಕ್‌ನ ಅಧೀನದಲ್ಲಿ ಬರುತ್ತವೆ. ಎಲ್ಲರಿಗೂ ಅನ್ವಯವಾಗುವುದು ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯಿದೆಯೇ. ಆದರೆ ಈ ಎನ್‌ಪಿಎ ಸಮಸ್ಯೆ ತೀವ್ರವಾಗಿರುವುದು ಸಾರ್ವಜನಿಕ ಬ್ಯಾಂಕುಗಳಲ್ಲಿ ಮಾತ್ರ. ಖಾಸಗಿ ಬ್ಯಾಂಕುಗಳು ಇಂಥಾ ಸಮಸ್ಯೆಯನ್ನು ಹತೋಟಿಯಲ್ಲಿಟ್ಟಿವೆ. ಅಂದರೆ ಅವರಿಗೆ ಜಾಗತಿಕ ಮುಗ್ಗಟ್ಟು ಪರಿಣಾಮ ಬೀರಿಲ್ಲವೆ?

ಜಾಗತಿಕ ಕಾರಣಗಳನ್ನು ಮುಂದುಮಾಡುವ ಈ ಮಂದಿಯ ಉದ್ದೇಶವಾದರೂ ಏನು? ಸಾರ್ವಜನಿಕ ಹಣವನ್ನು ಹೀಗೆ ಖಾಸಗಿ ಖದೀಮರ ಬಾಯಿಗೆ ಹಾಕಿ 'ಶೀಘ್ರ ಆರ್ಥಿಕ ಅಭಿವೃದ್ಧಿ' ಸಾಧಿಸುವುದೇ? ಇಂಥ ಹಗಲು ದರೋಡೆಯನ್ನು ತಡೆಯಲು ಪರ್ಯಾಯ ರಾಜಕೀಯ ಚಳವಳಿಗಳೇ ನಡೆಯಬೇಕಲ್ಲವೇ?

ಕಾರ್ಯದರ್ಶಿಯ ಸ್ಥಾನಕ್ಕೆ ಕಟ್ಟಾಳು ಒಬ್ಬನನ್ನು ತಂದು ಕೂರಿಸಿದ್ದಾರೆ. ಆತನ ಹೆಸರು ಹಸ್‌ಮುಖ್ ಅಧಿಯಾ. ಇದುವರೆಗೆ ಗುಜರಾತ್‌ನ ಆರ್ಥಿಕ ಇಲಾಖೆಯಲ್ಲಿದ್ದ ಮೋದಿಯ ನೆಚ್ಚಿನ ಈ ಅಧಿಕಾರಿ ಈಗ ಆರ್‌ಬಿಐನ ನಿರ್ದೇಶಕನೂ ಹೌದು.


ಜನವರಿ ಮೊದಲ ವಾರದಲ್ಲಿ ಪ್ರಧಾನಿ ಮೋದಿ ಸಾರ್ವಜನಿಕ ಬ್ಯಾಂಕುಗಳ ಉನ್ನತಾಧಿಕಾರಿಗಳ ಸಭೆ ನಡೆಸಿದರು. ಈ ಸಭೆಗೆ ಜ್ಞಾನಸಂಗಮ ಎಂದು ಹೆಸರಿಡಲಾಗಿತ್ತು. ಅಲ್ಲಿ ಮೋದಿ ಹೇಳಿದ್ದೇನು ಗೊತ್ತೆ? "ಸೋಮಾರಿತನದ ಬ್ಯಾಂಕಿಂಗ್ ಬೇಡ, ರಿಸ್ಕ್‌ಗಳಿಗೆ ಹಿಂಜರಿಯುವ ಪ್ರವೃತ್ತಿ ಬೇಡ" ಎಂದು. ರಿಸ್ಕ್


ಅಧಿಕಾರಿಗಳು ಮೋದಿಗೆ ಅಚ್ಚುಮೆಚ್ಚು. ಈಕೆ ಬಿಜೆಪಿ ಆಡಳಿತದಡಿಯ ಗೋವಾದ ಮೈನಿಂಗ್ ಕಂಪನಿಗಳ ಸಾಲವನ್ನು ಮನ್ನಾ ಮಾಡುವ ವಿಷಯದಲ್ಲಿ ಅತಿ ಉತ್ಸಾಹ ತೋರಿದ್ದರು. ಆದರೆ ಇದೇ ವ್ಯಕ್ತಿಗೆ ರೈತರನ್ನು ಕಂಡರಾಗದು. ಆತ್ಮಹತ್ಯೆಯ ಹಾದಿಯಲ್ಲಿರುವ ರೈತಾಪಿಗೆ ಯಾವುದೇ ಸಬ್ಸಿಡಿ, ಸಾಲಮನ್ನಾ ಸೌಲಭ್ಯಗಳನ್ನು ಖಂಡತುಂಡವಾಗಿ ವಿರೋಧಿಸುವ ಜಾಯಮಾನ ಇವರದು.

ಸಂಘಟನೆಯ ಮಹತ್ವ

ಇಷ್ಟೆಲ್ಲಾ ನಡೆಯುತ್ತಿದ್ದರೂ ಈ ಮಾಹಿತಿಗಳನ್ನು ಬಹಿರಂಗಪಡಿಸಿದ್ದು ಬ್ಯಾಂಕ್ ಅಧಿಕಾರಿಗಳಾಗಲಿ, ಸರ್ಕಾರವಾಗಲಿ ಅಲ್ಲವೇ ಅಲ್ಲ. ಇಂಥ ಮಹತ್ವದ ಮಾಹಿತಿಯನ್ನು ಹೊರಜಗತ್ತಿಗೆ ತಿಳಿಸಿದ್ದು ಬ್ಯಾಂಕ್‌ನ ನೌಕರರ ಸಂಘದವರು. ಬ್ಯಾಂಕ್ ನೌಕರರ ಸಂಘ ಮೊದಲಿಂದಲೂ ದೇಶಾದ್ಯಂತ ಪ್ರಬಲವಾದ ಸಂಘಟನೆ ಹೊಂದಿದೆ. ಸಶಕ್ತವಾಗಿರುವ ಬ್ಯಾಂಕಿಂಗ್ ಕ್ಷೇತ್ರವನ್ನು ಖಾಸಗೀಕರಣ ಮಾಡುವುದರ ವಿರುದ್ಧ ಹೋರಾಡಿ, ಅದನ್ನು ತಡೆಗಟ್ಟಿರುವುದರಲ್ಲಿ ಈ ಸಂಘಟನೆಗಳ ಪಾತ್ರ ಬಹಳ ದೊಡ್ಡದು. ಮೋದಿ ಬಂದ ಮೇಲೆ ಹಂತಹಂತವಾಗಿ ಅವುಗಳನ್ನು ಖಾಸಗಿ ತಿಮಿಂಗಿಲಗಳಿಗೆ ಒಪ್ಪಿಸುವ ಪ್ರಕ್ರಿಯೆಗೆ ಈಗಾಗಲೇ ಚಾಲನೆ ಸಿಕ್ಕಿದೆ.

ಕಿಂಗ್‌ಫಿಷರ್ ಕಂಪನಿ, ಜತಿನ್ ಮೆಹ್ತಾ ಮುಂತಾದ ಎಲ್ಲ ಕೇಸುಗಳ ಬಗ್ಗೆ ತನಿಖೆ ನಡೆಸುವುದಾಗಿ ಸಿಬಿಐ ಅಧಿಕಾರಿಗಳು ಹೇಳುತ್ತಿದ್ದಾರೆ. ತಮಾಷೆಯ ಸಂಗತಿಯೇನೆಂದರೆ ಎಸ್‌ಕೆ ಜೈನ್ ಲಂಚ ಪ್ರಕರಣ ಹೊರಬಿದ್ದು 10 ತಿಂಗಳು ಕಳೆದರೂ ಸಿಬಿಐ ಇನ್ನೂ ಈ ಕೇಸಿನಲ್ಲಿ ಚಾರ್ಜ್‌ಶೀಟ್ ಕೂಡ ಹಾಕಿಲ್ಲ, ಚಾರ್ಜ್‌ಶೀಟೇ ಇಲ್ಲವೆಂದಮೇಲೆ ತನಿಖೆ ಯಾವ ದಿಕ್ಕಿನಲ್ಲಿ ನಡೆಯಬಹುದು ಎಂಬುದನ್ನು ಊಹಿಸುವುದು ಸುಲಭ. ಮೋದಿ ಆಡಳಿತದಲ್ಲಿ ಕೂಡ ಸಿಬಿಐ "ಪಂಜರದ ಗಿಳಿ"ಯೇ ಹೊರತು ಸ್ವತಂತ್ರವಾಗಿ ಹಾರಾಡುವ ಪಕ್ಷಿಯಲ್ಲ ಅಲ್ಲವೆ?





ಜತಿನ್ ಮೆಹ್ತಾ



ಅರುಂಧತಿ ಭಟ್ಟಾಚಾರ್ಯ

ಮೊತ್ತ ಅದರ ಕಾಲು ಭಾಗದಷ್ಟಿರುತ್ತದೆ. ಸಾಲ ಒಂದು ವೇಳೆ ವ್ಯವಹಾರದಲ್ಲಿ ನಷ್ಟವಾದರೆ ಇದ್ದ ನ್ನ ಬ್ಯಾಂಕ್‌ನವರು ಹರಾಜು ಹಾಕುವುದು ಹೀಗಾಗಿ ಬ್ಯಾಂಕ್ ಸಾಲವೆಂದರೆ ಸಾಮಾನ್ಯವಾಗಿ ವರ್ಗದ ಜನತೆ ಹಿಂದೇಟು ಹಾಕುತ್ತಾರೆ.
ಆಸ್ತಿ ಪಾಸ್ತಿ ಏನೂ ಇಲ್ಲದ ಕೂಲಿ-ಕಾರ್ಮಿಕರನ್ನು ಮೂಸಿ ನೋಡುವುದೂ ಇಲ್ಲ, ಮೀಟರ್ ಅವರ ಪಾಲಿನ ಬ್ಯಾಂಕುಗಳು.
ಸಾವಿರಾರು ಕೋಟಿ ಬಾಕಿದಾರರಾಗಿರುವ ಬಗ್ಗೆ ಬ್ಯಾಂಕ್‌ಗಳ ಧೋರಣೆ ತೀರಾ ಭಿನ್ನ. ಗ್ಯಾರಂಟಿ ಕೊಡುವ ಆಸ್ತಿಯ ಮೌಲ್ಯ, ಸಾಲ ವ ಭರವಸೆ ಯಾವುದನ್ನೂ ಲೆಕ್ಕ ಹಿಡಿಯದೆ ಲಾಗುತ್ತದೆ.
ಉದಾಹರಣೆ ನೋಡೋಣ.
ಎನ್‌ಪಿಎ ಪಟ್ಟಿಯಲ್ಲಿರುವವರಲ್ಲಿ ಕಿಂಗ್‌ಫಿಷರ್ ನ ವಿಜಯ್ ಮಲ್ಯ ಮೊದಲಿಗ. ಎರಡು ಹಿಂದೆಯೇ ಈತನ ಸಾಲದ ಮೊತ್ತ 7,500 . ಅದರಲ್ಲಿ ಒಂದಷ್ಟು ಸಾಲವನ್ನು ಸಿಡಿಆರ್ ಗಿದೆ. ಉಳಿದ ಸಾಲವನ್ನು ವಸೂಲಿ ನೆಂದು ಬಹಿರಂಗದಲ್ಲಿ ಬ್ಯಾಂಕುಗಳು ಹೇಳುತ್ತಿವೆ. ವಾಸ್ತವದಲ್ಲಿ ಷೇರು ವಿನಿಮಯ ಕೇಂದ್ರಕ್ಕೆ ರುವ ದಾಖಲೆಗಳಲ್ಲಿ ತಿಳಿಸಿರುವಂತೆ ಈ ಸಾಲ ಗುವ ಯಾವ ಭರವಸೆಯೂ ಇಲ್ಲವಂತೆ. ದೀರ್ಘಕಾಲದ ವಿಷಯವಂತೆ. ದೀರ್ಘಕಾಲ ಷ್ಟು ಎಂಬುದು ಚಿದಂಬರ ರಹಸ್ಯ! ವಿಜಯ್ ವ ಚಿಂತೆಯೂ ಇಲ್ಲದೆ ಎಂದಿನಂತೆ ಮೋಜು ಕಾಲ ಕಳೆಯುತ್ತಿದ್ದಾನೆ.
ಪಟ್ಟಿಯ ಎರಡನೇ ಸ್ಥಾನದಲ್ಲಿರುವ ಕಂಪನಿ ಡೈಮಂಡ್ಸ್ ಅಂಡ್ ಜ್ಯುಯೆಲರಿ ಕತೆ ಇನ್ನೂ ದ ಮಾಲೀಕ ಜತಿನ್ ಮೆಹ್ತಾ ಕಳೆದ ಎರಡು ದ 'ನಾಪತ್ತೆ'ಯಾಗಿದ್ದಾನೆ!
ಮಾಲೀಕತ್ವದಲ್ಲಿ ಮೂರು ಕಂಪನಿಗಳಿವೆ. ವಜ್ರ ಮತ್ತು ಬಂಗಾರದ ವ್ಯಾಪಾರ ನಡೆಸುವ ಅವುಗಳ ಸಾಲ ಹೀಗಿದೆ. 1. ವಿನ್‌ಸಮ್ - 4366 ಕೋಟಿ, 2. ಫಾರ್‌ಎವರ್ ಡೈಮಂಡ್ - 1932 ಕೋಟಿ, 3. ಸೂರಜ್ 283 ಕೋಟಿ. ಒಟ್ಟು ಸೇರಿ 6,581 ಕೋಟಿ

ಹೇಳಿಕೇಳಿ ಇದು ವಜ್ರದ ವ್ಯಾಪಾರ. ಸಾವಿರಾರು ಕೋಟಿ ಬೆಲೆಬಾಳುವ ವಜ್ರಗಳನ್ನು ಒಂದು ಸಣ್ಣ ಬ್ಯಾಗಿನಲ್ಲಿ ಸಾಗಿಸಿಬಿಡಬಹುದು. ಅಂಥವರಿಗೆ ಯಾವ ಆಧಾರದಲ್ಲಿ ಬ್ಯಾಂಕುಗಳು ಸಾಲ ಕೊಟ್ಟವು?

ಈ ಪ್ರಕರಣದ ಬಗ್ಗೆ ಕಟುವಾದ ಪ್ರಶ್ನೆ ಕೇಳಿದ ಪತ್ರಕರ್ತನಿಗೆ ಬ್ಯಾಂಕ್ ಆಫ್ ಇಂಡಿಯಾದ ಎಂಡಿಯಾದ ವಿಆರ್ ಅಯ್ಯರ್ ಹೇಳಿದ್ದೇನು ಗೊತ್ತೆ? "ಅವರು ನಮ್ಮ ದೊಡ್ಡ ಕಸ್ಟಮರ್, ಅವರ ಬಗ್ಗೆ ಹಗುರವಾದ ಕಾಮೆಂಟ್ ಸರಿಯಲ್ಲ. ಇವತ್ತಲ್ಲ ನಾಳೆ ಹಣ ವಸೂಲಿಯಾಗುತ್ತದೆ". ಇಂಥ ಅಧಿಕಾರಿಗಳು ಯಾರ ಪರವಾಗಿ ಕೆಲಸ ಮಾಡುತ್ತಿದ್ದಾರೆ?

ಮೋದಿಯ ಮಾಯಾಜಾಲ!

ಇದೆಲ್ಲ ಹಿಂದಿನ ಸರ್ಕಾರಗಳ ವೈಫಲ್ಯ ಮೋದಿ ಇಂಥಾ ಸಮಸ್ಯೆಗಳನ್ನು ಸರಿಪಡಿಸುತ್ತಾನೆ ಎಂದು ಯಾರಾದರೂ ನಂಬಿಕೊಂಡರೆ ನಮಗಿಂತ ದೊಡ್ಡ ಮೂರ್ಖರು ಯಾರೂ ಇಲ್ಲ, ಅದು ಹೇಗೆ?

ಮೋದಿ ಅಧಿಕಾರಕ್ಕೆ ಬಂದ ಮೊದಲ ದಿನಗಳಲ್ಲೇ ಹಿಂದಿನ ಎಲ್ಲ ಪ್ರಧಾನಿಗಳ ದಾಖಲೆ ಮುರಿದಿದ್ದಾರೆ. ಅದು ನಡೆದದ್ದು ಆಸ್ಟ್ರೇಲಿಯಾದಲ್ಲಿ. ಮೋದಿ ಮಿತ್ರ ಗೌತಮ್ ಅದಾನಿ ಅಲ್ಲಿ ಒಂದು ಮೈನಿಂಗ್ ವ್ಯವಹಾರಕ್ಕೆ ಕೈಹಾಕಿದ್ದಾನೆ. ನಾನಾ ಕಾರಣಗಳಿಂದ ಅದು ಈಗ ಬರಕತ್ತಾಗುವ ಯಾವ ಲಕ್ಷಣಗಳೂ ಇಲ್ಲ, ಹೀಗಾಗಿ ಜಗತ್ತಿನ ದೊಡ್ಡ ದೊಡ್ಡ ಬ್ಯಾಂಕುಗಳು ಸಾಲ ಕೊಡಲು ನಿರಾಕರಿಸಿದ್ದವು. ಅದಕ್ಕೆ ಮತ್ತೊಂದು ಕಾರಣವೂ ಇತ್ತು, ಅದಾನಿ ಕಂಪನಿ ಕಳೆದ ಸೆಪ್ಟೆಂಬರ್ ವೇಳೆಗೆ ಪಡೆದುಕೊಂಡಿದ್ದ ಸಾಲ 72,632 ಕೋಟಿಗಳಿಗೇರಿತ್ತು, ಅದನ್ನು ತೀರಿಸುವ ವಿಚಾರದಲ್ಲಿ ಅದಾನಿಯದೂ ಅದೇ ಹಣೆಬರಹವೇ.

ಹೀಗಿದ್ದಾಗ ಮಾನ್ಯ ಮೋದಿಯವರು ಆಸ್ಟ್ರೇಲಿಯಾ ಪ್ರವಾಸದ ಸಂದರ್ಭದಲ್ಲಿ ಎಸ್‌ಬಿಐ ಚೇರ್ಮನ್ ಅರುಂಧತಿ ಭಟ್ಟಾಚಾರ್ಯರನ್ನು ತಮ್ಮ ಜೊತೆ ಕರೆದೊಯ್ದು 1 ಬಿಲಿಯನ್ ಡಾಲರ್ ಅಂದರೆ ಈಗಿನ ಬೆಲೆಯಲ್ಲಿ 6,400 ಕೋಟಿಗಳನ್ನು ಅದಾನಿಗೆ ಧಾರೆಯೆರೆದಿದ್ದಾರೆ. ಅದು ವಸೂಲಿಯಾಗುವ ಯಾವ ಲಕ್ಷಣವೂ ಇಲ್ಲ.

ವಾಸ್ತವದಲ್ಲಿ ಇಂಥಾ ದಂಧೆ ಮೋದಿ ಮಾದರಿ ಅಭಿವೃದ್ಧಿಯ ಅವಿಭಾಜ್ಯ ಅಂಗ. ಹೀಗಾಗಿ ಸಾರ್ವಜನಿಕ ಬ್ಯಾಂಕುಗಳ ಮೇಲೆ ತನ್ನ ಹಿಡಿತ ಸ್ಥಾಪಿಸಲು ಆರ್ಥಿಕ

ತೆಗೆದುಕೊಳ್ಳುವುದು ಎಂದರೆ ಗೊತ್ತಲ್ಲ? ಎಸ್‌ಬಿಐ ಬ್ಯಾಂಕು ಗೌತಮ್ ಅದಾನಿಗೆ 6,400 ಕೋಟಿ ಕೊಟ್ಟು ರಿಸ್ಕ್ ತೆಗೆದುಕೊಂಡಿದೆಯಲ್ಲಾ ಹಾಗೆ.

ವಾಸ್ತವದಲ್ಲಿ ಈ ಅರುಂಧತಿ ಭಟ್ಟಾಚಾರ್ಯರಂಥ

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಲಾಟರಿ ಭೂತ! ಮರ್ಮ ಗೊತ್ತಾ?


ಧರಣೇಂದ್ರ

ಐಎಎಸ್ ಅಧಿಕಾರಿ ಡಿ.ಕೆ. ರವಿ ಸಾವಿನ ಕುರಿತಂತೆ ಭ್ರಮೆಗಿಂತಲೂ ವಾಸ್ತವದತ್ತ ಪತ್ರಿಕೆ ತೋರಿದ ನಿಷ್ಠೆಯನ್ನು ಶುರುವಿನಲ್ಲಿ ಅಪಾರ್ಥ ಮಾಡಿಕೊಂಡವರೇ ಅಧಿಕ. ಈಗ ಸಿಬಿಐ ತನಿಖೆ ಸಾಗುತ್ತಿರುವ ರೀತಿ ಭ್ರಮೆ ಮತ್ತು ವಾಸ್ತವದ ನಡುವಿನ ವ್ಯತ್ಯಾಸವನ್ನು ಬಿಚ್ಚಿಡುತ್ತಿಲ್ಲವೆ?

ಹಾಗೆಯೇ ಲಾಟರಿ ಹಗರಣವನ್ನೂ ಸಿದ್ದು ಸರ್ಕಾರ ಮುಲಾಜಿಲ್ಲದೆ ಸಿಬಿಐಗೊಪ್ಪಿಸಿದೆ. ರಾಜ್ಯ ಸರ್ಕಾರವನ್ನು ಕಾಪಾಡಲು ಕೇಂದ್ರದಲ್ಲಿರುವುದು ಕಾಂಗ್ರೆಸ್ ಸರ್ಕಾರವೇನಲ್ಲ. ಮೋದಿಯ ಬಿಜೆಪಿಗೆ ಸಿದ್ದು ಸರ್ಕಾರ ಉರುಳಿಸಿ ಕಾಂಗ್ರೆಸ್ ಮುಕ್ತಗೊಳಿಸಲು ಇದಕ್ಕಿಂತ ಅವಕಾಶಬೇಕಿಲ್ಲ. ಲಾಟರಿ ದೊರೆಗಳ ಜೊತೆ ಸಿಎಂ, ಗೃಹಮಂತ್ರಿಗಳೇ ಕೈಜೋಡಿಸಿದ್ದಾರೆಂಬಂತೆ ಕುಮಾರಸ್ವಾಮಿ ಆರೋಪಿಸುತ್ತಾರೆ. ಬಿಜೆಪಿಯ ಪಾಲಿಗಿದು ಸಾವಿರಾರು ಕೋಟಿಯ ಕರ್ಮಕಾಂಡ. ದೇವೇಗೌಡರಾದಿಯಾಗಿ ಸದಾನಂದಗೌಡರ ವರೆಗೂ ಲಾಟರಿ ಮಂತ್ರ ಜಪಿಸುತ್ತಿದ್ದಾರೆ. ಇನ್ನು ಟೀವಿಗಳು ನ್ಯೂಸ್ ಚಾನಲ್ಲುಗಳ ಲೆಕ್ಕಕ್ಕೆ ಬಂದರೆ ಯಾರೋ ಪಾರಿರಾಜನ್ ಎಂಬಾತನೇ ಕರ್ನಾಟಕದ ಲಾಟರಿ ದೊರೆ, ಆತನ ವಾರ್ಷಿಕ ವಹಿವಾಟೇ ಹದಿನಾಲ್ಕು ಸಹಸ್ರ ಕೋಟಿ!

ಪಾರಿ ರಾಜನ್!

ಪ್ರಾಮಾಣಿಕತೆ ಮತ್ತು ಜನಪರತೆಯಲ್ಲಿ ಡಿ.ಕೆ. ರವಿ ಮಟ್ಟಕ್ಕಲ್ಲದೆ ಹೋದರೂ ಅಷ್ಟಿಷ್ಟು ದಕ್ಷ ಐಪಿಎಸ್ ಎಂದೇ ಚಾಲ್ತಿಯಲ್ಲಿದ್ದವರು ಆಲೋಕ್ ಕುಮಾರ್. ಒಂದೇ ಏಟಿಗೆ ಅಂಥಾ ಐಪಿಎಸ್ ವರ್ಚಸ್ಸನ್ನೇ ಲಾಟರಿ ದಂಧೆ ಮಣ್ಣು ಮುಕ್ಕಿಸಿದೆ. ಲಾಟರಿ ಮತ್ತು ಅಬಕಾರಿ ವಿಚಕ್ಷಣಾ ದಳದ ಎಸ್‌ಪಿ ಧರಣೇಂದ್ರ ಪ್ರಾಮಾಣಿಕ ಎಂದಾಗಲಿ ಮಹಾನ್ ದಕ್ಷ ಎಂದಾಗಲಿ ಯಾರೂ ಭಾವಿಸಿಲ್ಲ. ಭಾವಿಸುವುದೂ ಬೇಡ. ಆದರೆ ಯಾವ ಪಾರಿ ರಾಜನ್ ಎಂಬಾತನನ್ನು ಕರ್ನಾಟಕದ ಲಾಟರಿ ಕಿಂಗ್‌ಪಿನ್, ಲಾಟರಿ ದೊರೆಯೆಂದು ಬಿಂಬಿಸಲಾಗುತ್ತಿದೆಯೋ ಅದಕ್ಕಾದರೂ ಕಾರಣಗಳಿರ ಬೇಕಲ್ಲವೆ?

ಈತನಕ ಲಾಟರಿ ದೊರೆಗಳೆಂದು ಯಾರ್‍ಯಾರನ್ನು ಮಾಧ್ಯಮಗಳು ಭಾವಿಸಿವೆಯೋ ಅವರ್‍ಯಾರೂ ಸಾಮಾನ್ಯರಲ್ಲ, ಬೆಸ್ಟ್ ಅಂಡ್ ಕಂಪೆನಿ, ಎಸ್.ಎಲ್. ಡಿಸ್ಟ್ರಿಬ್ಯೂಟರ್ಸ್, ರಾಜಶ್ರೀ ಗ್ರೂಪ್, ಕನ್ನಯ್ಯ ಏಜೆನ್ಸಿ, ಮೇ ಲಕ್ಷ್ಮಿ ಏಜೆನ್ಸಿ, ಎಸ್.ಆರ್. ಮಾರ್ಕೆಟಿಂಗ್, ತಾರಾ ಅಂಡ್ ಕಂಪೆನಿ, ಸಮಾಧಾನ್ ಟ್ರೇಡರ್ಸ್, ಮಂಜುನಾಥ್ ಏಜೆನ್ಸಿ- ಹೀಗೆ ದೇಶದ ಉದ್ದಗಲಕ್ಕೂ ಬಾಹು ಬೀಸಿದ ಲಾಟರಿ ದೈತ್ಯರ ಪೈಕಿ ಮಾರ್ಟಿನ್, ಈತನ ತಮ್ಮ ಜಾನ್ ಮೈಕೆಲ್, ಸುಗಾಲ್ ಅಂಡ್ ದಮಾನಿ, ಆಲ್ವಿನ್ ಏಜೆನ್ಸಿಯ ಹರೂನ್ ಭಾಯಿ (ಈತ ತಮಿಳುನಾಡಿನ ಕಾಂಗ್ರೆಸ್ ಸಂಸದ) ಈತನ ತಮ್ಮ ಖಲೀಲ್ ಇತ್ಯಾದಿಗಳ್ಯಾರೂ ಸಾಮಾನ್ಯರಲ್ಲ, ಇಂಥ ಒಬ್ಬೊಬ್ಬ ಲಾಟರಿ ದೊರೆಯದ್ದೂ ದಿನವೊಂದಕ್ಕೆ ನೂರು ಕೋಟಿಯ ವಹಿವಾಟು. ವರ್ಷವೊಂದಕ್ಕೆ ಸಾವಿರ ಕೋಟಿಯ ಲೆಕ್ಕದಲ್ಲಿ ವಹಿವಾಟು ನಡೆಸುವ ಇಂಥ ಲಾಟರಿ ದೊರೆಗಳ ಮುಂದೆ ಸಿಕ್ಕಿಂ, ಮಿಜೋರಾಂ, ನಾಗಾಲ್ಯಾಂಡ್‌ನಂಥ ಪುಟ್ಟಪುಟ್ಟ ರಾಜ್ಯಗಳ ಮುಖ್ಯಮಂತ್ರಿಗಳೇ ಕೈಕಟ್ಟಿ ನಿಲ್ಲುತ್ತಾರೆ.

ಲಾಟರಿ ದೊರೆ ಮಾರ್ಟಿನ್‌ನನ್ನು ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಜೈಲಿಗೆ ದಬ್ಬಿದ್ದು ಹಳೇ ಕತೆ. ಆದರಿಂದ ಬಚಾವಾಗಲು ಮಾರ್ಟಿನ್ ಅಮ್ಮನ ಪಾದಕ್ಕರ್ಪಿಸಿದ್ದು ಕನಿಷ್ಠ ಐನೂರು ಕೋಟಿ. ಇವತ್ತು ತಮಿಳುನಾಡಿನ ಮುಖ್ಯಮಂತ್ರಿಯಿಂದ ಹಿಡಿದು ವಿರೋಧಿ ಡಿಎಂಕೆ ಸೇರಿದಂತೆ ಪುಡಿ ಪುಕ್ಕಾ ಪಕ್ಷಗಳನ್ನೂ ಸಾಕುತ್ತಿರುವ ಅಲ್ಲಿನ ಲಾಟರಿ ದೊರೆಗಳ ಬದುಕೇ ಊಹಾತೀತ. ಬೆಳಗ್ಗೆ ಸಿಂಗಾಪುರ್‌ದಲ್ಲಿದ್ದು ಸಂಜೆ ಖಾಸಗಿ ವಿಮಾನದಲ್ಲಿ ಬ್ಯಾಂಕಾಕ್‌ಗೆ ಹಾರುವ ಲಾಟರಿ ದೊರೆಗಳ ಮುಂದೆ ನಮ್ಮ ಗಣಿ ದೈತ್ಯರು, ಬಿಲ್ಡರ್‌ಗಳು ಡೆವಲಪರ್‌ಗಳು ಯಾವ ಲೆಕ್ಕ?

ಫುಟ್‌ಪಾತ್ ದೊರೆ

ಇಂಥ ಲಾಟರಿ ದೊರೆಗಳ ಮುಂದೆ ಸದ್ಯ ಕರ್ನಾಟಕದ ಲಾಟರಿ ಕಿಂಗ್‌ಪಿನ್ ಹಣೆಪಟ್ಟಿ ಹೊತ್ತ ಪಾರಿ ರಾಜನ್‌ಗೆ ಕನಿಷ್ಠ ಡಾಲರ್ಸ್ ಕಾಲನಿಯಲ್ಲೊಂದು ಬಂಗಲೆಯಾದರೂ


ಪಾರಿ ರಾ... | ಮಾರ್ಟಿನ್

ಇರಬೇಕಲ್ಲವೆ? ಖಾಸಗಿ ಹೆಲಿಕಾಪ್ಟರ್, ಮಿನಿ ಜೆಟ್‌ಗಳನ್ನು ಬಳಸುವುದು ಹಾಳಾಗಲಿ ಓಡಾಡಲು ಒಂದೆರಡಾದರೂ ಐಷಾರಾಮಿ ಕಾರುಗಳಿರಬೇಕಲ್ಲವೆ? ಯುಬಿ ಸಿಟಿಯಲ್ಲೋ ಮಾನ್ಯತಾ ಪಾರ್ಕಿನಲ್ಲೋ ಐಷಾರಾಮಿ ಛೇಂಬರ್, ಜೊತೆಗೊಬ್ಬ ಸೆಕ್ರೆಟರಿ, ಕಾರು ಡ್ರೈವರ್‌ಗಳು, ಮೂರ್‍ನಾಲ್ಕು ಮೊಬೈಲ್ ಸೆಟ್ಟುಗಳು ಇದ್ದರಾದರೂ ಆತನನ್ನು ಲಾಟರಿ ಕಿಂಗ್‌ಪಿನ್ ಎಂದಿದ್ದಕ್ಕೆ ಸಾರ್ಥಕ ತಾನೆ?

ವಿಕಟವೆಂದರೆ ಪಾರಿ ರಾಜನ್ ಮಲಗುವುದು ಬೆಂಗಳೂರಿನ ರೈಲ್ವೆ ಸ್ಟೇಷನ್ನಿನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ ಬಂಗಲೆಯ ಮಾತು ಒತ್ತಟ್ಟಿಗಿರಲಿ ಬೆಂಗಳೂರಿನ ಯಾವೊಂದು ಸ್ಲಮ್ಮಿನಲ್ಲೂ ಆತನಿಗೆ ಆರಡಿ ಮೂರಡಿ ಜೋಪಡಿಯಿಲ್ಲ, ಕಾರಿನ ಮಾತು ದೊಡ್ಡದಾಯಿತು ಕನಿಷ್ಠ ಬೈಕಿಗೂ ಗತಿಯಿಲ್ಲ, ಕೆಜಿಎಫ್ ಕೊಂಪೆಯ ಹೊರಭಾಗದಲ್ಲಿ ಸಾಧಾರಣ ಮಟ್ಟದ ಮನೆಯೊಂದನ್ನು ಕಟ್ಟಿಸಿಕೊಳ್ಳುವುದು ಯಾವ ಅಬ್ಬೇಪಾರಿಗೆ ತಾನೇ ಮಹಾಕಷ್ಟ? ಬೆಳಗ್ಗೆ ಕೆಜಿಎಫ್‌ನಿಂದ ರೈಲು ಹತ್ತಿ ಕೈಚೀಲವೊಂದರಲ್ಲಿ ಜೊತೆ ಇಸ್ತ್ರಿ ಮಾಡಿದ ಬಟ್ಟೆ ತಂದು ರಾತ್ರಿ ರೈಲ್ವೇ ಸ್ಟೇಷನ್ನಿನ ಫುಟ್‌ಪಾತಿನಲ್ಲಿ ಮಲಗಿ ಬೆಳಗ್ಗೆ ಹಮಾಮಿನಲ್ಲಿ ಸ್ನಾನ ಮುಗಿಸಿ ಗರಿಗರಿ ಬಟ್ಟೆತೊಟ್ಟು ಪಾರಿ ರಾಜನ್ ಅಖಾಡಕ್ಕಿಳಿದನೆಂದರೆ ತನಗೆ ಹೋಮ್‌ಮಿನಿಸ್ಟರ್ ಜಾರ್ಜ್ ಗೊತ್ತು, ಶಂಕರ್ ಬಿದರಿ ಖಾಸಾ ಖಾಸಾ, ಆಲೋಕ್‌ಕುಮಾರ್ ಬೇಕಾ, ಪೂಜಾರ್‌ಗೆ ಫೋನ್ ಮಾಡ್ಲಾ, ಸುನೀಲ್‌ಕುಮಾರ್ ಕರೆಸಲಾ, ಮುಖ್ಯಮಂತ್ರಿ ಮಗನ ನಂಬರ್ ಕೊಡ್ಲಾ, ರಾಹುಲ್ ಗಾಂಧಿಗೆ ಫೋನ್ ಮಾಡ್ಲಾ... ಎಂದು ರೈಲು ಬಿಟ್ಟೇ ಎದುರು ಪಾರ್ಟಿಯನ್ನು ಹಳ್ಳಕ್ಕೆ ಕೆಡವಬಲ್ಲ. ಇಂಥ ವಂಚಕರು, ಬಾಯಿಬಡುಕರು ವಿಧಾನಸೌಧ, ಶಾಸಕರ ಭವನದ ಸುತ್ತ ಲೆಕ್ಕವಿಲ್ಲದ ಸಂಖ್ಯೆಯಲ್ಲಿದ್ದಾರೆ. ಇಂಥವನನ್ನು ಏಕಾಏಕಿ 'ಲಾಟರಿ ಕಿಂಗ್‌ಪಿನ್' ಎಂಬ ಹಣೆಪಟ್ಟಿಗೆ ತಂದು 'ಈತ ರೈಲು ಬಿಟ್ಟಿದ್ದನ್ನೇ ಪರಮಸತ್ಯವೆಂದು ಹಾಗೆಂದು ಬಾಯಿ ಬಿಡಿಸಿದ್ದನ್ನೇ ಅದ್ಭುತ **sting operation** ಎಂದು ಯಾರಾದರೂ ಏಕೆ ನಂಬಹೊರಟಿದ್ದಾರೋ ಗೊತ್ತಿಲ್ಲ. ಹಾಗಂತ ಇದ್ಯಾವುದಕ್ಕೂ ಕಾರಣಗಳಿಲ್ಲದಿಲ್ಲ.

ಸದ್ಯ ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ ಮಾಧ್ಯಮಗಳ ಒಂದು ಗುಂಪು ಲಾಟರಿ ಭೂತದ ಹಿಂದೆ ಬಿದ್ದಿದೆ. ಹಾಗೆಂದು ಅಕ್ರಮ ಲಾಟರಿ ಇಲ್ಲವೆಂದಲ್ಲ, ಕೇರಳದ ಗಡಿ ಗ್ರಾಮಗಳಲ್ಲಿ ಇವತ್ತಿಗೂ ಕೆಲ ಪೆಟ್ಟಿ ಅಂಗಡಿಗಳಲ್ಲಿ ಕದ್ದೂ ಮುಚ್ಚಿ ಕೇರಳದ ಲಾಟರಿ ಮಾರಲಾಗುತ್ತಿದೆ. ಇದನ್ನು ಆಯಾ ಭಾಗದ ಲಾಟರಿ ದಳದ ಪೊಲೀಸರು ಹಿಡಿದು ಕಾಲಾನುಕಾಲಕ್ಕೆ ಕೇಸು ಹಾಕಿದ್ದೂ ಇದೆ. ಹಾಗೇ ತಮಿಳುನಾಡಿನ ಗಡಿಯ ಕೆಲ ಕುಗ್ರಾಮಗಳಲ್ಲೂ ನಡೆಯುತ್ತದೆ. ಪೊಲೀಸರು ಬರುವ ಹೊತ್ತಿಗೆ ಇದೆಲ್ಲ ಮಾಯವಾಗಿರುತ್ತದೆ. ಹೀಗೆ ನೆರೆ ರಾಜ್ಯ ಗಳಿಂದ ನೂರೋ ಇನ್ನೂರೋ ಟಿಕೆಟ್ಟು ತಂದು ಪುಡಿಕಾಸು ಖಮಾಯಿಸುವ ಹುಡಿ ಪುಡಿ ಅಬ್ಬೇಪಾರಿಗಳಿಗೆ ಇದರಿಂದ ದಿನಕ್ಕೆ ನೂರೋ ಇನ್ನೂರೋ ಸಿಕ್ಕರೆ ಅದೇ ಹೆಚ್ಚು.

ಟೀವಿ ರಂಪ

ಹಾಗೇ ಕಳ್ಳಭಟ್ಟಿ, ವೇಶ್ಯಾವಾಟಿಕೆ, ಸರ್ಕಾರಿ ಅಕ್ಕಿ ಮಾರಿಕೊಳ್ಳುವುದು, ಪೆಟ್ಟಿ ಅಂಗಡಿಗಳಲ್ಲಿ ಲಿಕ್ಕರ್ ಮಾರುವುದು, ಕಲಬೆರಕೆ ಪೆಟ್ರೋಲ್ ಮಾರುವುದು, ಕ್ರಿಕೆಟ್ ಬೆಟ್ಟಿಂಗ್, ನಕಲಿ ಸಿಡಿಗಳನ್ನು ಮಾರುವುದು, ಕಳಪೆ ಬಟ್ಟೆಗೆ ಕಂಪೆನಿ ಲೇಬಲ್ ಅಂಟಿಸುವುದು, ಆನೆ ದಂತ, ಹುಲಿ ಚರ್ಮ, ರಕ್ತಚಂದನ, ಕದ್ದ ಮಾಲು ಇತ್ಯಾದಿ ಏನೇನೋ ದಂಧೆಗಳಿವೆ. ಯಾರೋ ಡಿಪೋ ಅಕ್ಕಿ ಮಾರಿಕೊಂಡ ಮಾತ್ರಕ್ಕೆ ಅದಕ್ಕೆ ನಾಗರಿಕ ಸರಬರಾಜು ಮಂತ್ರಿಯ ರಾಜೀನಾಮೆ ಕೇಳುವುದು ಹುಚ್ಚಾಟವಾಗುತ್ತದೆ. ಇನ್ನಾರೋ ಕೆರೆ ಭೂಮಿ ಕಬಳಿಸಿದನೆಂದು ಅದಕ್ಕೆ ಕಂದಾಯ ಮಂತ್ರಿಯನ್ನು ಶಾಮೀಲು ಎನ್ನಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಹಳ್ಳಿಯ ಪೆಟ್ಟಿ ಅಂಗಡಿಯೊಂದರಲ್ಲಿ ಬಾಟಲು ವಿಸ್ಕಿ ಮಾರುತ್ತಾರೆಂದು ಅದಕ್ಕೆ ಅಬಕಾರಿ ಮಂತ್ರಿ ಕುಮ್ಮಕ್ಕೆಂದರೆ ಉತ್ಪ್ರೇಕ್ಷೆಯಾಗುತ್ತದೆ.

ಈಗ ಭುಗಿಲೆದ್ದ ಲಾಟರಿ ಭೂತದ ಹಿಂದಿರುವುದೂ ಇಂಥದ್ದೇ ಅತಿರೇಕ ಮತ್ತು ಅವಿವೇಕ. ಟೀವಿ ಚಾನಲ್ಲೊಂದರ ಯಡವಟ್ಟು ವರದಿಯೊಂದು ಮಾಡಿದ ಅನಾಹುತದ ಪರಿಣಾಮವೇ ಈ ಲಾಟರಿ ಭೂತ. ಕಳೆದ ಮಾರ್ಚ್ 6ರ ರಾತ್ರಿ ನ್ಯೂಸ್ ಚಾನಲ್ಲೊಂದರಲ್ಲಿ ಬಿತ್ತರವಾದ ಅರ್ಧ ಗಂಟೆಯ ಕಾರ್ಯಕ್ರಮವೇ ಸದ್ಯ ಲಾಟರಿ ಭೂತದ ಮೂಲಾಧಾರ ಮತ್ತು ಏಕೈಕ ಸಾಕ್ಷ್ಯಾಧಾರ. ಮೊದಲು ಪಿರಿಯಾಪಟ್ಟಣದಲ್ಲಿ ಯಾವುದೋ ಕಾಲಕ್ಕೆ ಲಾಟರಿ ಮಾರುತ್ತಿದ್ದವನೊಬ್ಬನನ್ನು ರಹಸ್ಯ ಕ್ಯಾಮರಾ ಮಾತಾಡಿಸುತ್ತದೆ. ಯಾವ ತಪ್ಪನ್ನೂ ಮಾಡದೆ ತನ್ನ ಪಾಡಿಗೆ ತಾನಿದ್ದ ತನಗೆ ಲಾಟರಿ ಟಿಕೆಟ್ಟು ಸಿಗುತ್ತಾ ಎಂದು ಕೇಳಿದ ಟೀವಿಯವರನ್ನು ಆತನೇ ಹಿಡಿದು ಠಾಣೆಗೆ ಎಳೆದೊಯ್ಯುತ್ತಾನೆ.


ಇಲ್ಲಿ ಲಾಟರಿಯಾಗಲಿ ಅದನ್ನು ಮಾರುತ್ತಿದ್ದದ್ದಾಗಲಿ ಇಲ್ಲದೆಹೋದರೂ ಹಿನ್ನೆಲೆಯಿಂದ ಈತನೇ 'ಕಳ್ಳ ಲಾಟರಿ ದಂಧೆಕೋರ' ಎಂದು ಟೀವಿ ಚಾನಲ್ ಆರೋಪಿಸುತ್ತದೆ. ಅನಂತರ ಹಾಸನದಲ್ಲಿ ಯಾವುದೋ ಕಾಲಕ್ಕೆ ಲಾಟರಿ ಮಾರುತ್ತಿದ್ದಾತನನ್ನು ತೋರಿಸಿ ಈತ ಈಗಲೂ ಟಿಕೆಟ್ಟು ಮಾರುತ್ತಾನೆನ್ನುತ್ತಾರೆ. ಇಲ್ಲೂ ಟಿಕೆಟ್ಟು ತೋರಿಸುವುದಿಲ್ಲ ಮಾರುವ ದೃಶ್ಯವಿಲ್ಲ. ತದನಂತರ ಬೆಂಗಳೂರಿನ ಮೂವಿಲ್ಯಾಂಡ್ ಪಕ್ಕದಲ್ಲಿ ಆನ್‌ಲೈನ್ ರೇಸ್‌ಬುಕಿಂಗ್ ಕೇಂದ್ರಕ್ಕೆ ಕ್ಯಾಮರಾ ಬರುತ್ತದೆ. ಅಲ್ಲಿ ಆಯಾ ದಿನದ ರೇಸ್‌ಗೆ ಸಂಬಂಧಪಟ್ಟಂತೆ ಕಟ್ಟಿದ ಬೆಟ್ಟಿಂಗ್‌ಗೆ ಆನ್‌ಲೈನ್ ರಸೀದಿ ಕೊಡುತ್ತಾರಲ್ಲ; ಅದನ್ನೇ ಅಕ್ರಮ ಲಾಟರಿಯೆಂದೂ ರಾಜಾರೋಷವಾಗಿ ರಾಜ್ಯದಲ್ಲಿ ಲಾಟರಿ ನಡೆಯುತ್ತಿದೆ ಯೆಂದೂ ನಿರೂಪಕಿಯ ಬಾಯಿಂದ ಹೇಳಿಸುತ್ತಾರೆ.


ಉಸ್ಮಾನ್ ಫಯಾಜ್

ಆನ್‌ಲೈನ್ ರೇಸ್ ಬೆಟ್ಟಿಂಗ್‌ಗೂ ಲಾಟರಿಗೂ ಇರುವ ವ್ಯತ್ಯಾಸವಾಗಲಿ, ಅರ್ಥವಾಗಲಿ ಗೊತ್ತಿದ್ದರೆ ಆ ಮಾತು ಬೇರೆ. ಅನಂತರ ಮಲ್ಲೇಶ್ವರದ ಮೊಬೈಲ್ ಅಂಗಡಿಯೊಂದರ ಮುಂದೆ ನಿಂತು ಈ ಅಂಗಡಿ ನಡೆಸುವ ಜೀತು ಎಂಬಾತ ಯಾವುದೋ ಕಾಲಕ್ಕೆ ಲಾಟರಿ ಮಾರುತ್ತಿದ್ದನೆಂದೂ ಈಗ ಮೊಬೈಲ್ ಅಂಗಡಿಯಲ್ಲೇ ಲಾಟರಿ ಮಾರುತ್ತಿದ್ದಾನೆಂದು ನಿರೂಪಕರು ಹೇಳುತ್ತಾರಾದರೂ ದೃಶ್ಯದಲ್ಲಿ ಲಾಟರಿ ಟಿಕೆಟ್ಟಾಗಲಿ ಮಾರುವುದಾಗಲಿ ಕಾಣಿಸುವುದಿಲ್ಲ, ಆದರೆ ಅದೃಶ್ಯ ಕೈಯೊಂದು ಏಕಾಏಕಿ ತೂರಿಬರುತ್ತದೆ. ಆ ಕೈಯಲ್ಲಿ ಕೆಲ ಲಾಟರಿ ಟಿಕೆಟ್ಟುಗಳಿವೆ. ತೀರ ಪರಿಶೀಲಿಸಿ ನೋಡಿದರೆ ಆ ಕೈ ಬೇರೆ ಯಾರದ್ದೂ ಅಲ್ಲ ಖುದ್ದು ಟೀವಿಯ ನಿರೂಪಕರದ್ದು!

ಎಸ್‌ಪಿ ಧರಣೇಂದ್ರ....?

ಈ ಎಲ್ಲಾ ದೃಶ್ಯಾವಳಿಗಳಲ್ಲಿ ಲಾಟರಿಯಾಗಲಿ ಅದನ್ನು ಮಾರುತ್ತಿದ್ದದ್ದು ಜನ ಕೊಳ್ಳುತ್ತಿದ್ದದ್ದಕ್ಕೆ ಯಾವುದೇ ಪುರಾವೆ, ದೃಶ್ಯಾವಳಿ, ದಾಖಲೆಗಳಿಲ್ಲ, ಹಾಗಿದ್ದೂ ಇವೆಲ್ಲವೂ ಲಾಟರಿ ಅಡ್ಡೆಗಳೆಂದೋ ಮಾರುತ್ತಾರೆಂದೋ ಆರೋಪಿಸಲಾಗುತ್ತದೆ. ತದನಂತರವೇ ಪಾರಿ ರಾಜನ್ ವೃತ್ತಾಂತ ಶುರುವಾಗುತ್ತದೆ. ಮೆಜೆಸ್ಟಿಕ್‌ನ ರೈಲ್ವೇ ಸ್ಟೇಷನ್ ಎದುರಿನ ಫುಟ್‌ಪಾತಿನ ಮೇಲೆ ಬಿಳಿಬಟ್ಟೆ ತೊಟ್ಟವನೊಬ್ಬನನ್ನು ತೋರಿಸುತ್ತಾರೆ. ಆತನಿಗೆ 'ನಾವೂ ಲಾಟರಿ ಮಾರಬೇಕು ಪರ್ಮಿಷನ್ ಕೊಡಿಸ್ತೀರಾ...' ಎಂದು ಆಮಿಷವೊಡ್ಡುತ್ತಾರೆ. ಆದಕ್ಕಾತ


ಆಲೋಕ್‌ಕುಮಾರ್

ನಿಮಗೆ ಆಲೋಕ್‌ಕುಮಾರ್ ಬೇಕಾ, ಶಂಕರ್‌ಬಿದರಿ ಬೆ... ಸುನೀಲ್ ಕುಮಾರ್, ಪೂಜಾರ್, ಧರಣೇಂದ್ರ ಯ... ಬೇಕು ಎಂದಿದ್ದೇ ಲಾಟರಿ ದಳದ ಎಸ್ಪಿ ಧರಣೇ... ಫೋನ್ ಮಾಡುತ್ತಾನೆ.

ಇದು ಕೂಡ ಎಷ್ಟೊಂದು ನಾಟಕೀಯವೆಂದರೆ '... ಬ್ರದರ್ ಚೆನ್ನಾಗಿದ್ದೀರಾ?' ಎಂದು ರಾಜನ್ ಕೇ... ಏಕಾಏಕಿ ಬ್ರದರ್ ಎಂದಿದ್ದರಿಂದ ಗಲಿಬಿಲಿಗೊ... ಧರಣೇಂದ್ರ ಏನ್ ಸಮಾಚಾರ ಎನ್ನುತ್ತಾರೆ. 'ಮ... ಬಿಟ್ರಲ್ಲಾ ಬ್ರದರ್ ನನ್ನನ್ನ.... ಬರ್ತೀನಿ ಇರ್ತೀರಾ' ಎನ್ನು... ಅದಕ್ಕೆ ಧರಣೇಂದ್ರ ಇರ್ತೀನಿ ಬಾ ಎನ್ನುತ್ತಾರೆ. ... ಸಂಭಾಷಣೆಯ ಸಾರಾಂಶ. ಇದರಲ್ಲಿ ಲಾಟರಿಯ ಮಾ... ಲಂಚದ ಮಾತಿಲ್ಲ, ಇಷ್ಟಾಗಿದ್ದೇ ಎಸ್.ಪಿ. ಧರಣೇಂ... ವೀಡಿಯೋ ತೋರಿಸಿದ್ದೇ 'ನೋಡಿದ್ರಾ ಮುಖ್ಯಮಂತ್ರಿ... ಪೊಲೀಸರೇ ಹೇಗೆ ಲಾಟರಿ ದಂಧೆಕೋರರ ಜ... ಶಾಮೀಲಾಗಿದ್ದಾರೆ ಅನ್ನೋದಕ್ಕೆ ಇದಕ್ಕಿಂತ ಸಾಕ್ಷಿ ಬ... ಎಂದು ನಿರೂಪಕರು ಪ್ರಶ್ನೆ ಹಾಕುತ್ತಾರೆ!

ಇಲ್ಲಿ ವರದಿಗಾರರ ಅದೃಶ್ಯ ಕೈ ಲಾಟರಿ ಟಿಕೆಟುಗ... ಹಿಡಿದು ತೂರಿ ಬಂದ ದೃಶ್ಯ ಬಿಟ್ಟರೆ ಎ... ಮಾರುವುದಾಗಲಿ ಕೊಳ್ಳುವುದಾಗಲಿ ಇಲ್ಲ, ರಾ... ಎಂಬಾತ ಲಾಟರಿ ಕಿಂಗ್‌ಪಿನ್ ಎಂಬುದಕ್ಕೂ ಯಾವ... ಆಧಾರವಿಲ್ಲ, ಯಾರೋ ಅಬ್ಬೇಪಾರಿಯೊಬ್ಬ ಫುಟ್‌ಪಾ... ನಿಂತು ತನಗೆ ಯಾರ್‍ಯಾರೋ ಗೊತ್ತು, ಲಾಟರಿ ಮಾ... ಅವಕಾಶ ಕೊಡಿಸ್ತೀನಿ ಎಂದು ಪೊಲೀಸ್ ಅಧಿಕಾ... ಫೋನಾಯಿಸಿ ಕುಶಲೋಪರಿ ನಡೆಸಿದ್ದನ್ನೇ ರಾಜ್ಯದಲ್ಲಿ ಅ... ಲಾಟರಿಗೆ ಪುರಾವೆಯೆಂದು ಸಾಧಿಸುತ್ತಾರೆ, ವಾದಿಸುತ...

ಪದ್ಮ ಪಿತೂರಿ

ಇದು ಪ್ರಸಾರವಾಗಿದ್ದು 2015ರ ಮಾರ್ಚ್... ರಾತ್ರಿ ಮತ್ತು ಮರುಪ್ರಸಾರವಾ... ಮಾರ್ಚ್ 7 ರ ಬೆಳಗ್ಗೆ. ಇಷ್ಟಾ... ತದ ಟೀವಿಯಲ್ಲಿ ಬಂದ ಈ ಕಾರ್ಯಕ್ರ... ಸೀಡಿ ತಯಾರಾಗಿದೆ. ಬಹುಶಃ ಇ... ಕಾಯುತ್ತಿದ್ದರೇನೋ ಎಂಬಂತೆ ಲಾ... ಮತ್ತು ಅಬಕಾರಿ ವಿಚಕ್ಷಣ ದಳದ ... ಪದ್ಮನಯನ ಈ ಬಗ್ಗೆ ವರದಿಯೊಂ... ಸಿದ್ಧಪಡಿಸಿದ್ದೇ 'ಟೀವಿಯವರ st... **operation** ನಲ್ಲಿ ಅಕ್ರ... ಲಾಟರಿಕೋರರ ಜೊತೆ ಎಸ್... ಧರಣೇಂದ್ರರಿಗೆ ನಿಕಟ ಸಂಬಂಧ ಇರುವುದು ಸಾಬೀತಾ... ಅವರ ಮೇಲೆ ಕ್ರಮ ಜರುಗಿಸಬೇಕು' ಎಂದು ಒತ್ತಾ... ಪೊಲೀಸ್ ಮಹಾನಿರ್ದೇಶಕರು, ಗೃಹಕಾರ್ಯದರ್ಶಿಗಳಿಗೆ ... ಬರೆಯುತ್ತಾರೆ.

ಇಲ್ಲಿ ರಾಜನ್ ನಿಜಕ್ಕೂ ಅಕ್ರಮ ಲಾಟರಿಕೋ... ಆತ ಧರಣೇಂದ್ರರ ಜೊತೆ ಮಾತಾಡಿದ್ದರಲ್ಲಿ ಏನಾ... ಅಕ್ರಮವಿತ್ತೆ? ಯಾವುದನ್ನೂ ಪರಿಶೀಲಿಸುವು... ಪದ್ಮನಯನರ ಈ ದುಡುಕಿನ ಹಿಂದಿರುವ ಇಲ...





ಮೂವಿಲ್ಯಾಂಡ್ ಪಕ್ಕ ಮುಚ್ಚಿದ ರೇಸ್ ಬುಕ್ಕಿಂಗ್ ಕೇಂದ್ರ

...ಣ್ಣಾ ಕ್ಯಾಂಟೀನ್, ಸಿಎಂ ಇಬ್ರಾಹಿಂ ಮತ್ತು ಅಸಲೀ ಲಾಟರಿ ಮಾಫಿಯಾ ತಂತ್ರಗಳು!

...ತಿಷ್ಠಕ್ಕೂ ಈ ಪಾರಿ ರಾಜನ್ ಯಾರು? ಆತನಿಗೂ ...ರಿ ದಂಧೆಗೂ ಏನು ಸಂಬಂಧ? ಆತನನ್ನೇ ಅಯ್ದು ...ರಿ ಕಿಂಗ್‌ಪಿನ್ ಪಟ್ಟಕ್ಕೆ ತಂದದ್ದು ಯಾರು ...ವಿಗಳನ್ನು ಕೆದಕುತ್ತಾ ಹೋದಂತೆಲ್ಲ ಕುತೂಹಲಕರ ...ಗಳು ಬಯಲಾಗುತ್ತವೆ.

...ಲ ತಿಂಗಳುಗಳ ಹಿಂದೆ ರಾಜ್ಯ ಯೋಜನಾ ...ಳಿಗದ ಉಪಾಧ್ಯಕ್ಷ ಮತ್ತು ಸಿಎಂ ಸಿದ್ದು ಆಪ್ತ ಸಿಎಂ ...ಹಿಂ ಇದ್ದಕ್ಕಿದ್ದಂತೆ ಹೇಳಿಕೆಯೊಂದನ್ನು ...ತ್ತಾರೆ. ರಾಜ್ಯದ ಬಡಬಗ್ಗರಿಗೆ ಉಚಿತ ...ಗ್ಯ ಭಾಗ್ಯ ಮತ್ತು ಔಷಧಿ ಚಿಕಿತ್ಸೆ ...ಲೆಂದೇ 'ಅಣ್ಣಾ ಕಾರುಣ್ಯ ...ಜನೆ'ಯನ್ನೂ, ತಮಿಳುನಾಡಿನಲ್ಲಿ ...ಣ್ಣಾ ಕ್ಯಾಂಟೀನ್ ಅಸ್ತಿತ್ವಕ್ಕೆ ಬಂದಂತೆ ...ದಲ್ಲಿ ಅಣ್ಣಾ ಕ್ಯಾಂಟೀನ್ ...ಸಲಾಗುವುದು ಎಂದೂ, ಇದಕ್ಕೆ ...ುವ 500 ಕೋಟಿ ರೂಪಾಯಿಗಳ ...ನ್ನು ಮತ್ತೆ ಲಾಟರಿಯನ್ನು ಆರಂಭಿಸುವ ...ಲಕ ಸಂಗ್ರಹಿಸಲಾಗುವುದು ಎಂದೂ ...ಹಿಂ ಹೇಳಿಕೆ ಕೊಡುತ್ತಾರೆ.



...ಇಬ್ರಾಹಿಂ ಈ ಅಧಿಕಪ್ರಸಂಗಿತನವೇ ಮುಂದೆ ಸಿದ್ದು ...ಸಿಗೆ ಕಾರಣವಾಗಿ ಭಾಯ್‌ಭಾಯ್‌ಯಂತಿದ್ದ ...ಇಬ್ರಾಹಿಂ ಕಾಲಕ್ರಮೇಣ ದೂರಾಗುತ್ತಾರೆ. ಈ ರೀತಿ ...ಕಿ ಇಬ್ರಾಹಿಂ ಬಾಯಿಯಿಂದ ಲಾಟರಿ ಮಂತ್ರ ...ವಾಗಲು ಕಾರಣರಾದವರು ಮೈಸೂರಿನ ...ರಿಯಸ್ ತ್ರಿವಳಿಗಳು. ಈ ಪೈಕಿ ರಾಮಕೃಷ್ಣ ಎಂಬಾತ ...ಟಕ ರಾಜ್ಯ ಚಿಲ್ಲರೆ ಲಾಟರಿ ಮಾರಾಟಗಾರರ ಸಂಘದ ...ನಾದರೆ ರಾಜಣ್ಣ ಎಂಬಾತ ಅದರ ಖಜಾಂಚಿ ಮತ್ತು ...ಪಾಸ್ ಇದರ ಉಪಾಧ್ಯಕ್ಷ. ಸರ್ಕಾರ ಲಾಟರಿ ನಿಷೇಧಿಸಿ ...ವುದೋ ಕಾಲವಾಗಿದೆ. ಆದರೂ ಲಾಟರಿ ...ಟಗಾರರ ಸಂಘ ಇನ್ನೂ ಅಸ್ತಿತ್ವದಲ್ಲಿದ್ದು ಲಾಬಿಗಿಳಿದಿದೆ ...ರೆ ಏನರ್ಥ?

...ಇದು ತಮಿಳುನಾಡಿನ ಲಾಟರಿ ದೊರೆ ಮಾರ್ಟಿನ್ ...ತ್ತನ ತಮ್ಮ ಜಾನ್ ಕೃಪಾಪೋಷಿತ ನಾಟಕ ...ಳಿಯಲ್ಲದೇ ಮತ್ತೇನಲ್ಲ. ಶತಗತಾಯ ಕರ್ನಾಟಕದಲ್ಲಿ ...ರಿ ಆರಂಭಿಸಬೇಕೆಂದೇ ಕಾಲಾನುಕಾಲಕ್ಕೆ ಲಾಬಿ ...ತ್ತಲೇ ಬಂದ ಮೈಸೂರಿನ ಈ ತ್ರಿವಳಿಗಳು ಈ ... ಡೀಲು ಕೊಟ್ಟಿದ್ದು ಇಬ್ರಾಹಿಂ ಸಾಹೇಬರಿಗ್ಾ?

ಒಂದು ಹಂತದಲ್ಲಿ ಲಾಟರಿ ದೊರೆಗಳ ಪರವಹಿಸಿ ಸಿದ್ದು ತಲೆ ತಿಕ್ಕಲು ಯತ್ನಿಸಿದ್ದರಾ? ಇದೇ ಕಾರಣಕ್ಕೆ ಸಿಎಂ ಸಿದ್ದು ಇಬ್ರಾಹಿಂರನ್ನು ದೂರವಿಟ್ಟರಾ?

ಹಾಗಂತ ಮೈಸೂರಿನ ತ್ರಿವಳಿಗಳಾಗಲಿ ಲಾಟರಿ ಮಾಫಿಯಾ ಆಗಲಿ ತಮ್ಮ ಲಾಬಿ ನಿಲ್ಲಿಸಲಿಲ್ಲ. ಅಕ್ಕಪಕ್ಕದ ಕೇರಳ ಮತ್ತು ತಮಿಳುನಾಡುಗಳಲ್ಲಿ ಲಾಟರಿ ಚಾಲ್ತಿಯಲ್ಲಿರುವುದರಿಂದ ಗಡಿಭಾಗದ ಜನ ಕೇರಳಕ್ಕೆ ಹೋಗಿ ಲಾಟರಿ ಆಡಿ ಬರುತ್ತಾರೆ, ಇದರಿಂದ ರಾಜ್ಯ ಬೊಕ್ಕಸಕ್ಕೆ ಅಪಾರ ನಷ್ಟವಾಗುತ್ತಿದೆ. ಇದಕ್ಕಿಂತ ನಾವೇ ಲಾಟರಿ ಆರಂಭಿಸಿದರೆ ಬೊಕ್ಕಸಕ್ಕೆ ಸಾವಿರಾರು ಕೋಟಿ ಲಾಭವಾಗುತ್ತದೆ ಮತ್ತು ರಾಜ್ಯಾದ್ಯಂತ ಸಹಸ್ರಾರು ಮಂದಿಗೆ ಉದ್ಯೋಗ ದೊರಕುತ್ತದೆ ಎಂಬ ವಿತಂಡವಾದವೊಂದನ್ನು ಮಂಡಿಸುತ್ತಲೇ ಬಂದರು. ಇದಕ್ಕೊಂದು ಸಮರ್ಥನೆ ಬೇಕಲ್ಲ, ಅದಕ್ಕೆಂದು ಕದ್ದೂಮುಚ್ಚಿ ಲಾಟರಿ ದಂಧೆ ನಡೆಯುತ್ತಿದೆ ಎಂಬಂತೆ ಹುಯಿಲೆಬ್ಬಿಸುವುದು ಈ ಲಾಬಿಯ ಷಡ್ಯಂತ್ರವಾಗಿತ್ತು. ಆಯ್ದಕೆಲ ಟೀವಿ ವರದಿಗಾರರಿಗೆ ರಹಸ್ಯ ಮಾಹಿತಿ ಕೊಟ್ಟು ಉಪಕರಿಸುವಂತೆ ಕೆಲ ಏಜೆಂಟರನ್ನು ಸೃಷ್ಟಿಸಲಾಯಿತು. ತಮಿಳುನಾಡು, ಕೇರಳಗಳಿಂದ ಹಳೆಯ ಲಾಟರಿ ಟಿಕೆಟ್ಟುಗಳನ್ನು ತರಿಸಿ ಇದೆಲ್ಲವೂ ಇತ್ತೀಚಿನಲ್ಲಿ ಖರೀದಿಸಿದ ಟಿಕೆಟ್ಟುಗಳೆಂದು ನಂಬಿಸಲಾಯಿತು.

ಹಾಗೊಮ್ಮೆ ಮತ್ತೆ ಅಕ್ರಮ ಲಾಟರಿ ತಲೆ ಎತ್ತಿದ್ದರೆ ರಾಜ್ಯದ ಯಾವ ಮೂಲೆಯ ಯಾವ ವರದಿಗಾರರಿಗಾದರೂ ಅದು ಗೊತ್ತಾಗಬೇಕಿತ್ತು, ಜೆಡಿಎಸ್, ಬಿಜೆಪಿಯ ಯಾವ ಪುಢಾರಿಗಾದರೂ ಅಂಥದೊಂದು ಟಿಕೆಟ್ ಪ್ರಾಪ್ತಿಸಿಕೊಳ್ಳುವುದು ಕಷ್ಟವಾಗಿರಲಿಲ್ಲ. ಆದರೆ ನಡೆಯದ ದಂಧೆಯನ್ನು ಹುಟ್ಟುಹಾಕಿ ಹುಯಿಲೆಬ್ಬಿಸುವುದೇ ಮಾಫಿಯಾ ತಂತ್ರವಾಗಿತ್ತಲ್ಲ, ಅದಕ್ಕೆ ಬಲಿಯಾದವನು ಕೆಜಿಎಫ್ ಅಬ್ಬೇಪಾರಿ ರಾಜನ್!

ಈತ ಕೆಜಿಎಫ್ ಚಿನ್ನದ ಗಣಿಯ ಮಾಜಿ ನೌಕರ ನಟರಾಜನ್ ಎಂಬಾತನ ಮಗ. 2004 ರ ಹೊತ್ತಿಗೆ ರಾಜ್ಯಾದ್ಯಂತ ಲಾಟರಿ ಹಂಗಾಮಾ ಇತ್ತಲ್ಲ, ಆಗ ಕೆಜಿಎಫ್‌ನಲ್ಲಿ ಈತನದ್ದೂ ಲಾಟರಿ ಅಂಗಡಿಯಿತ್ತು. ಆಗಾಗ ಮೆಜೆಸ್ಟಿಕ್‌ನ ಪ್ಯಾರೀಸ್ ಕಾರ್ನರ್‌ನಲ್ಲಿ ಅಡ್ಡೆ ಹಾಕುತ್ತಿದ್ದದ್ದೂ ಉಂಟು. ಲಾಟರಿ ನಿಷೇಧಿಸಲ್ಪಟ್ಟ ನಂತರ ರಾಜನ್ ರಿಯಲ್ ಎಸ್ಟೇಟ್‌ಗೆ ನಿಂತ. ಬಂಗಾರಪೇಟೆ ಬಳಿ ಜಮೀನು ಖರೀದಿಸಿ ತರಕಾರಿ ಬೆಳೆದು ಮಾರಲಾರಂಭಿಸಿದ. ಬೆಂಗಳೂರು ಸುತ್ತಮುತ್ತಲ ಐಷಾರಾಮಿ ಅಪಾರ್ಟ್‌ಮೆಂಟುಗಳ ಬಿಲ್ಡರುಗಳನ್ನು ಪರಿಚಯಿಸಿಕೊಂಡು ಅವರ ಫ್ಲಾಟುಗಳಿಗೆ ಗಿರಾಕಿಗಳನ್ನು ಹುಡುಕಿಕೊಡುವುದು ಈತನ ಫುಲ್‌ಟೈಂ ದಂಧೆ. ಅದಕ್ಕೆಂದು ಪ್ರಭಾವಿ ರಾಜಕಾರಣಿಗಳು, ಅಧಿಕಾರಿಗಳು, ಐಪಿಎಸ್ ಅಧಿಕಾರಿಗಳನ್ನು ಪರಿಚಯಿಸಿಕೊಳ್ಳುತ್ತಿದ್ದ. ವಿಶೇಷವಾಗಿ ದಲಿತ ವರ್ಗದ ಅಧಿಕಾರಿಗಳನ್ನೇ ಆಯ್ದು ಆತ್ಮೀಯತೆ ಗಳಿಸುತ್ತಿದ್ದ.


ರಾಜನ್ ಹುಟ್ಟಾ ಬಾಯಿಹರುಕ ಮತ್ತು ಲೂಸ್ ಟಾಕರ್. ತನ್ನ ಬಗ್ಗೆ ಏನೇನೋ ಹೇಳಿಕೊಂಡು ಬಿದರಿಯವರನ್ನು ಪರಿಚಯಿಸಿಕೊಂಡ. ಪೂಜಾರ್, ಸುನೀಲ್‌ಕುಮಾರ್, ಅಲೋಕ್‌ಕುಮಾರ್‌ರಂಥ ಐಪಿಎಸ್‌ಗಳ ವಿಶ್ವಾಸವನ್ನೂ ಗಿಟ್ಟಿಸಿದ. ಹೇಗೂ ಲಾಟರಿ ದಂಧೆಯ ಒಡನಾಟವಿತ್ತಲ್ಲ, ಲಾಟರಿ ಮತ್ತು ಅಬಕಾರಿ ವಿಚಕ್ಷಣದಳದ ದಲಿತ ಅಧಿಕಾರಿ ಧರಣೇಂದ್ರರನ್ನು ಪರಿಚಯಿಸಿಕೊಂಡು ರಾಜ್ಯದ ಗಡಿಗಳಲ್ಲಿ ಕದ್ದುಮುಚ್ಚಿ ನಡೆಯುತ್ತಿದ್ದ ಲಾಟರಿ ಜಾಲದ ಬಗ್ಗೆ ಮಾಹಿತಿ ಕೊಡುತ್ತಿದ್ದ. ರಾಜನ್ ನೀಡಿದ ಮಾಹಿತಿಯ ಮೇರೆಗೇ ಧರಣೇಂದ್ರ ಕೆಜಿಎಫ್, ಬಂಗಾರಪೇಟೆ ವ್ಯಾಪ್ತಿಯಲ್ಲಿ ಏಳು ಅಕ್ರಮ ಲಾಟರಿ ಅಡ್ಡೆಗಳನ್ನು ಮುಚ್ಚಿಸಿ ದಂಧೆಕೋರರನ್ನು ಜೈಲಿಗಟ್ಟಿದರು.



ಹೀಗೆ ರಾಜನ್ ನೀಡಿದ ಮಾಹಿತಿಯ ಮೇರೆಗೆ ಲಾಟರಿದಳದ ಎಸ್‌ಪಿ ಧರಣೇಂದ್ರರ ಬಲೆಗೆ ಬಿದ್ದವನು ದಕ್ಷಿಣ ಭಾರತದ ಲಾಟರಿ ದೈತ್ಯ ಮಾರ್ಟಿನ್. 2014 ರ ಸೆಪ್ಟೆಂಬರ್‌ನಲ್ಲಿ ಎಸ್‌ಪಿ ಧರಣೇಂದ್ರರ ನೇತೃತ್ವದಲ್ಲೇ ಬಂಗಾರಪೇಟೆಯಲ್ಲಿ ಕೇಸು ದಾಖಲಿಸುತ್ತಾರೆ. ಪದೇಪದೇ ಕೆಜಿಎಫ್ ಸಂದಿಗೊಂದಿಗೆ ನುಗ್ಗಿ ತಮಿಳುನಾಡಿನ ಲಾಟರಿ ಜಾಲವನ್ನು ಬಗ್ಗುಬಡಿಯುತ್ತಾರೆ. ಇದು ಸಹಜವಾಗೇ ರಾಜನ್ ವಿರುದ್ಧ ಲಾಟರಿ ದೊರೆಗಳನ್ನು ರೊಚ್ಚಿಗೇಳಿಸಿದೆ. ಕೆಲ ಏಜೆಂಟರನ್ನು ಬಿಟ್ಟು ನೀನೇ ಲಾಟರಿಗೆ ಅವಕಾಶ ಮಾಡಿಕೊಡು ಎಂದು ಪುಸಲಾಯಿಸಿದ್ದಾರೆ. ಮೊದಲೇ ಬಾಯಿ ಹರುಕ. ಬಂದದ್ದು ಟೀವಿಯವರಾ, ಲಾಟರಿಯವರಾ ಎಂಬುದನ್ನೂ ನೋಡದೇ "ಲಾಟರಿ ಮಾರ್ತೀರಾ.... ಯಾವ ಅಧಿಕಾರಿ ಬೇಕು ಅಲೋಕ್‌ಕುಮಾರ್ ಬೇಕಾ ಬಿದರಿ ಬೇಕಾ.... ಒಂಭತ್ತು ಗೋಲ್ಡ್ ಕಾಯ್ನ ತಗೊಂಡು ಬನ್ನಿ ಪರ್ಮಿಷನ್ ಕೊಡಿಸ್ತೀನಿ" ಎಂದಿದ್ದಾನೆ.

ಅಂದರೆ ಬಂದಷ್ಟು ಗುಂಜಿಕೊಂಡು ಕೈಯೆತ್ತುವುದು ರಾಜನ್ ತಂತ್ರವಾಗಿತ್ತು. ಮುಂದೆ ಇದೇ ತನಗೆ ಮುಳುವಾಗಿ ಅಲೋಕ್‌ಕುಮಾರ್‌ರಂಥ ದಿಟ್ಟ ಅಧಿಕಾರಿಗೂ ಕಂಟಕವಾಗಲಿದೆಯೆಂಬುದು ಆತನಿಗೆಲ್ಲಿ ಗೊತ್ತು? ●

...ವಳಿ ಮತ್ತು ಅದರ ಪಾಲು ಹಂಚಿಕೆಯ ಕಚ್ಚಾಟದ ...ತಲೆಕೆಡಿಸಿಕೊಳ್ಳಲು ಯಾರಿಗೂ ತಾಳ್ಮೆಯಿಲ್ಲ. ಮಾರ್ಚ್ ...ಸರ್ಕಾರದ ಅಧೀನ ಕಾರ್ಯದರ್ಶಿ ಜೆ.ಡಿ. ಮಧುಚಂದ್ರ ...ಸ್ವಿಯವರು ಧರಣೇಂದ್ರರನ್ನು ವರ್ಗಾವಣೆ ಮಾಡಿ ...ಶ ಹೊರಡಿಸುತ್ತಾರೆ. ಇದಾಗಿ ನಾಲ್ಕನೇ ದಿನಕ್ಕೆ ಅವರ ...ಾನತು ಆದೇಶವೂ ಹೊರಬಿದ್ದಿದೆ. ಸಸ್ಪೆಂಡ್ ಸುದ್ದಿ ...ಬರುತ್ತಿದ್ದಂತೆಯೇ ಎಲ್ಲಾ ಮಾಧ್ಯಮಗಳ ಕಣ್ಣು ಅಕ್ರಮ ...ರಿ ದಂಧೆಯ ಮೇಲೆಯೇ ಕೇಂದ್ರೀಕರಣಗೊಂಡಿದೆ. ...ಅಬ್ಬೇಪಾರಿ ರಾಜನ್‌ನ ಹೆಸರು ರಾತ್ರೋರಾತ್ರಿ ಲಾಟರಿ



...ಪಿನ್ ಪಾರಿ ರಾಜನ್ ಎಂದೂ ತನಗೆ ...ಲೋಕ್‌ಕುಮಾರ್ ಗೊತ್ತೆಂದು ಹೇಳಿದ್ದೇ ಜಂಟಿ ...ಕಮಿಷನರ್ ಅಲೋಕ್‌ಗೂ ಲಾಟರಿ ದೊರೆಗೂ ...ಬಂಧವಿದೆಯೆಂದೂ ಇನ್ನೂ ಅನೇಕ ಅಧಿಕಾರಿಗಳ ...ಕೆ ರಾಜನ್‌ಗೆ ಸಂಬಂಧವಿದೆಯೆಂದೂ ಗೃಹಮಂತ್ರಿ ...ನ ಜೊತೆ ಲಾಟರಿ ದೊರೆಗೆ ಲಿಂಕಿದೆ ಎಂದೂ ...ಜ್ಯಾದ್ಯಂತ ಎಗ್ಗಿಲ್ಲದೇ ಅಕ್ರಮ ಲಾಟರಿ ...ಯುತ್ತಿದೆಯೆಂದೂ ಸರ್ಕಾರದೇ ಕುಮ್ಮಕ್ಕೆಂದೂ ...ಸುಮಾರು 14 ಸಾವಿರ ಕೋಟಿಯ ವಹಿವಾಟು, 4 ...ರ ಕೋಟಿಯ ಲಾಭ; ಇತ್ಯಾದಿಯಾಗಿ ತಲೆಗೊಂದು ...ಗೊಂದು ಕತೆ ಹಬ್ಬುತ್ತಲೇ ಹೋಯಿತು.

...ರಾಜನ್ ಎಂಬಾತ ನಿಜಕ್ಕೂ ಲಾಟರಿ ದೊರೆಯೆ? ...ನಾ ಪೊಲೀಸ್ ಬಾತ್ಮಿದಾರನೆ? ಆತನ ಜೊತೆ ...ಡಿದ ಮಾತಿಗೆ, ರಾಜನುದ್ದಕ್ಕೂ ಅಕ್ರಮ ಲಾಟರಿ ...ಇದೆಯಾ? ಆತ ಹೇಳಿದ್ದೆಲ್ಲವೂ ನಿಜವಾ; ಇತ್ಯಾದಿಗಳ ...ತ್ಯಕತೆ ಯಾರಿಗೆ ಬೇಕು. ಹೋದ ಇಲಿಗೆ ...ಹಾಗೆಯೇ ಹುಲಿ ಎಂದರೆ ಎಲ್ಲರೂ ಹುಲಿಯೆಂದು ...ಕೊಳ್ಳುತ್ತಾರೆ. ಅದರಲ್ಲೇ ಸುಖ ಕಾಣುತ್ತಿದ್ದಾರೆ.

■ ರಾ. ಸೋಮನಾಥ್

ಲಾಟರಿ ದಳದ ಎತ್ತುವಳಿಯೂ ಪದ್ಮನಯನರ ಕುಟಿಲ ತಂತ್ರವೂ

ಪೊಲೀಸ್, ಅಬಕಾರಿ, ಲೋಕೋಪಯೋಗಿ, ಕಂದಾಯ ಇಲಾಖೆಗಳ ಉತ್ಪತ್ತಿಗೆ ಹೋಲಿಸಿದರೆ ಲಾಟರಿ ಮತ್ತು ಅಬಕಾರಿ ವಿಚಕ್ಷಣಾ ದಳದ ಆದಾಯ ಹೇಳಿಕೊಳ್ಳುವಂಥದ್ದೇನಲ್ಲ. ಅಕ್ರಮ ಲಾಟರಿ ತಡೆಗಟ್ಟುವುದು ಮತ್ತು ಕಳ್ಳಭಟ್ಟಿ ತಡೆಯುವುದು ಬಿಟ್ಟರೆ ಬೇರೆ ಕೆಲಸವಿಲ್ಲ. ಐಜಿಪಿ ರ್ಯಾಂಕಿನ ಐಪಿಎಸ್ ಒಬ್ಬರು ಇದಕ್ಕೆ ಮುಖ್ಯಸ್ಥರಾದರೆ ಅವರ ಕೈಕೆಳಗೆ ಇಬ್ಬರು ಎಸ್‌ಪಿಗಳಿರುತ್ತಾರೆ. ಜಿಲ್ಲೆಗೊಬ್ಬ ಇನ್ಸ್‌ಪೆಕ್ಟರ್. ಮೊದಲೇ ಲಾಟರಿ ನಿಂತಿದೆಯಾದ್ದರಿಂದ ಹಳ್ಳಿಗಳಲ್ಲಿ ಪೆಟ್ಟಿ ಅಂಗಡಿಗಳಲ್ಲಿ ಕದ್ದು ವಿಸ್ಕಿ ಮಾರುವವರಿಂದ ಸಂಗ್ರಹವಾಗುವ ಪುಡಿಗಾಸೇ ಇಲ್ಲಿ ಪರಮಾನ್ನ!

ಇನ್ಸ್‌ಪೆಕ್ಟರ್ ಒಬ್ಬನಿಗೆ ತಿಂಗಳಿಗೆ ಮೂವತ್ತೋ ನಲವತ್ತೋ ಸಾವಿರ ಸಿಕ್ಕರೆ ಅದೇ ಹೆಚ್ಚು. ಕಳ್ಳಭಟ್ಟಿಯಿಂದ ಗಿಟ್ಟುವ ಮಾತೇ ಇಲ್ಲ. ಏಕೆಂದರೆ ಭಟ್ಟಿಗೆ ಹೋದ ಮಾನಕ್ಕೆ ಬಂಗಾರ ಕೊಟ್ಟರೂ ಗಿಟ್ಟುವುದಿಲ್ಲ. ಇಲ್ಲಿಗೆ ಆರು ತಿಂಗಳ ಹಿಂದೆ ಲಾಟರಿ ದಳದ ಐಜಿಪಿಯಾಗಿ ಬಂದ ಪದ್ಮನಯನ ಜಾತಿಯಲ್ಲಿ ಆರ್ಯವೈಶ್ಯ ಮತ್ತು ಮತಿಯಲ್ಲಿ ವೈದಿಕಶಾಹಿ. ದಲಿತ ಅಧಿಕಾರಿಗಳನ್ನು ಕಂಡರೇನೇ ಸಿಡಿಮಿಡಿ ಕಿಡಿಕಿಡಿ. ಜೀವನಪರ್ಯಂತ ನೊಣ ಹೊಡೆಯುವ ಹುದ್ದೆಯಲ್ಲಿದ್ದೇ ಖಾಕಿ ಸವೆಸಿದ ಪದ್ಮನಯನರಿಗೆ ಸರ್ವೀಸ್‌ನ ಕೊನೆಗಾಲಕ್ಕಾದರೂ ಲಾಟರಿಯಂತೆ ದಕ್ಕಿದ ಹುದ್ದೆಯ ಮದ.

ಪದ್ಮನಯನರ ಕೈಕೆಳಗಿನ ಎರಡು ಎಸ್‌ಪಿ ಹುದ್ದೆಗಳ ಪೈಕಿ ಒಂದು ದಲಿತ ಅಧಿಕಾರಿ ಧರಣೇಂದ್ರರಾದರೆ ಮತ್ತೊಂದು ಕುರುಬ ಜಾತಿಯ ಚಂದ್ರಕಾಂತ್. ಇಬ್ಬರಿಗೂ ತಲಾ ಹದಿನೈದು ಜಿಲ್ಲೆಗಳ ಉಸ್ತುವಾರಿಯಿದೆ. ಚಂದ್ರಕಾಂತ್‌ಗೆ ಉತ್ತರ ಕರ್ನಾಟಕದ 15 ಜಿಲ್ಲೆಗಳು. ಧರಣೇಂದ್ರರಿಗೆ ಮೈಸೂರು, ಮಂಗಳೂರು ಮತ್ತು ಬೆಂಗಳೂರು ನಗರದ ಉಸ್ತುವಾರಿ. ಈ ಪೈಕಿ ಚಂದ್ರಕಾಂತ್ ಪದ್ಮನಯನರಿಗೆ ಪರಮಾಪ್ತರಾದರೆ ಧರಣೇಂದ್ರ ಅಷ್ಟಕ್ಕಷ್ಟೆ. ಬಂದುಬಂದಿದ್ದೇ ಪದ್ಮನಯನ ದಲಿತ ಇನ್ಸ್‌ಪೆಕ್ಟರ್‌ಗಳನ್ನೇ ಆಯ್ದು ಬಲಿ ಹಾಕತೊಡಗಿದ್ದನ್ನು ಧರಣೇಂದ್ರ ವಿರೋಧಿಸಿಕೊಂಡು ಬಂದಿದ್ದಾರೆ.

ಪದ್ಮನಯನರ ಕೆಂಗಣ್ಣಿಗೆ ಮೊದಲು ಬಲಿಯಾಗಿದ್ದು ರಾಯಚೂರಿನ ಇನ್ಸ್‌ಪೆಕ್ಟರ್ ಲಕ್ಷ್ಮಿನಾರಾಯಣ. ಗುಲ್ಬರ್ಗಾ, ರಾಯಚೂರು ವ್ಯಾಪ್ತಿಯಲ್ಲಿ ಸೇಂದಿಗೆ ಕೆಮಿಕಲ್ ಮಿಕ್ಸಾಗಿದೆ ಎಂದು ಲಕ್ಷ್ಮಿನಾರಾಯಣರನ್ನು ಸಸ್ಪೆಂಡ್ ಮಾಡುತ್ತಿದ್ದಂತೆ ಆ ಭಾಗದ ಇನ್ಸ್‌ಪೆಕ್ಟರ್‌ಗಳೆಲ್ಲ ಸೇರಿಕೊಂಡು 7 ಲಕ್ಷ ಸಂಗ್ರಹಿಸಿ ಸಾಹೇಬರ ಪಾದಕ್ಕರ್ಪಿಸಿಬಿಟ್ಟರು. ಇದು ಉತ್ತರ ವಲಯದ ಎತ್ತುವಳಿಯಾದರೆ ಧರಣೇಂದ್ರರ ವ್ಯಾಪ್ತಿಯಲ್ಲೂ ಎತ್ತುವಳಿಯಾಗಬೇಕಲ್ಲವೆ? ಆದರೆ ಧರಣೇಂದ್ರ ಸುಲಭಕ್ಕೆ ಜಗ್ಗುವ ಆಸಾಮಿಯಲ್ಲ. ಹಾಗಂತ ಪದ್ಮನಯನರು ಬಿಡಬೇಕಲ್ಲ, ಹಿಂದೆಮುಂದೆನ್ನದೆ 8 ಮಂದಿ ಇನ್ಸ್‌ಪೆಕ್ಟರ್‌ಗಳಿಗೆ ನೀವು ಅಕ್ರಮ ಲಾಟರಿ ತಡೆಗಟ್ಟುವಲ್ಲಿ ವಿಫಲರಾಗಿದ್ದೀರೆಂದು ನೋಟಿಸು ಕೊಟ್ಟರು. ಇದರ ಭೀತಿಗೆ ಬಿದ್ದೇ ಬೆಂಗಳೂರು ಪಶ್ಚಿಮದ ಇನ್ಸ್‌ಪೆಕ್ಟರ್ ಲಿಂಗಯ್ಯ ಎಂಬ ದಲಿತ ಅಧಿಕಾರಿ ರಜೆ ಹಾಕಿ ನಾಪತ್ತೆಯಾದರೆ ಕೇಂದ್ರ ವಲಯದ ಡಿವೈಎಸ್‌ಪಿ ಚಲುವರಾಜ್ ಎಂಬ ಮತ್ತೊಬ್ಬ ದಲಿತ ಅಧಿಕಾರಿಯದ್ದೂ ಇದೇ ಪಾಡಾಯಿತು.

ಅಲ್ಲಿಗೆ ಧರಣೇಂದ್ರರ ವ್ಯಾಪ್ತಿಯಿಂದ ಎತ್ತುವಳಿ ಕಷ್ಟವೆಂಬುದು ಐಜಿ ಸಾಹೇಬರಿಗೆ ಮನದಟ್ಟಾಗಿದೆ. ಇದೇ ಹೊತ್ತಿಗೆ ಟೀವಿಯ ಲಾಟರಿ ಕಾರ್ಯಕ್ರಮ ಬೇರೆ ಪ್ರಸಾರವಾಯಿತಲ್ಲ, ಮಟ್ಟಹಾಕಲು ಕಾಯುತ್ತಿದ್ದ ಪದ್ಮನಯನರ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ಟೀವಿ ವರದಿಯನ್ನೇ ಆಧರಿಸಿ ಧರಣೇಂದ್ರರನ್ನು ಎತ್ತಂಗಡಿ ಮಾಡಿದ್ದೇ ಬೆಂಗಳೂರು ಪೂರ್ವ ಮತ್ತು ಪಶ್ಚಿಮದ ಇನ್ಸ್‌ಪೆಕ್ಟರ್‌ಗಳನ್ನು ಬದಲಾಯಿಸಿ ಆ ಜಾಗಕ್ಕೆ ಕೆಜಿಎಫ್‌ನ ಕನಕಲಕ್ಷ್ಮಿ ಮತ್ತು ಜಿಟಿ ಸ್ವಾಮಿಯನ್ನು ತಂದರು. ಇವರಿಬ್ಬರೂ ನಾನಾ ಪ್ರಕರಣಗಳಲ್ಲಿ ಇಲಾಖಾ ತನಿಖೆ ಎದುರಿಸುತ್ತಿರುವ ಪ್ರಚಂಡರೆ. ರಾಜನ್‌ನನ್ನು ಲಾಟರಿ ಕಿಂಗ್‌ಪಿನ್ ಎಂದು ಸಾಬೀತುಮಾಡಿದರಷ್ಟೇ ಧರಣೇಂದ್ರರನ್ನು ಎತ್ತಂಗಡಿ ಮಾಡಿದ್ದಕ್ಕೆ ಸಮರ್ಥನೆ ಸಿಗುತ್ತದೆ. ಆದರೆ ರಾಜನ್ ವಿರುದ್ಧ ಈ ಹಿಂದೆ ಯಾವುದೇ ಅಕ್ರಮ ಲಾಟರಿ ಕೇಸು ದಾಖಲಾಗಿಲ್ಲ. ಟೀವಿಯಲ್ಲಿ ಲಾಟರಿ ಬಗ್ಗೆ ಆತ ಮಾತಾಡಿದ್ದು ಬಿಟ್ಟರೆ ಆತನಿಗೂ ಲಾಟರಿಗೂ ಸಂಬಂಧ ಕಲ್ಪಿಸಬಲ್ಲ ಬೇರೆ ಯಾವುದೇ ದಾಖಲೆಗಳಿಲ್ಲ.

ಇದಕ್ಕೆಂದು ತಮಿಳುನಾಡಿನಿಂದ ವಿವಿಧ ದಿನಾಂಕಗಳ ಲಾಟರಿ ಟಿಕೆಟ್ಟುಗಳನ್ನು ತರಿಸಲಾಯಿತು. ಮೇ 1ರಂದು ಕನಕಲಕ್ಷ್ಮಿ ಮತ್ತು ಸ್ವಾಮಿ ನೇತೃತ್ವದಲ್ಲಿ ಬೆಳ್ಳಂಬೆಳಗ್ಗೆಯೇ ಕೆಜಿಎಫ್‌ನ ರಾಜನ್ ಮನೆಗೆ ನುಗ್ಗಿದ ಲಾಟರಿ ಪಡೆ ತಾನೇ ಕೊಂಡೊಯ್ದಿದ್ದ ಲಾಟರಿ ಟಿಕೆಟ್ಟುಗಳನ್ನಿಟ್ಟು ರಾಜನ್‌ನನ್ನು ಬಂಧಿಸಿತ್ತು. ಅವತ್ತು ಲಾಟರಿ ಕಿಂಗ್‌ಪಿನ್ ರಾಜನ್ ಮನೆಯಲ್ಲಿ ಸಿಕ್ಕಿದ್ದಾದರೂ ಏನೇನು. ವಿವಿಧ ದಿನಾಂಕದ ಪೊಲೀಸರೇ ಇಟ್ಟಿದ್ದ ಹಳೇ ಲಾಟರಿ ಟಿಕೆಟ್ಟುಗಳು, ಒಂದು ಸೆಲ್‌ಫೋನ್, ಒಂದು ಕಂಪ್ಯೂಟರ್, ಮೂರು ಬ್ಯಾಂಕ್ ಪಾಸ್‌ಬುಕ್ಕುಗಳು, 38 ಸಾವಿರ ರೂ. ನಗದು ಮತ್ತು ಪತ್ನಿಯ ಹೆಸರಲ್ಲಿ ಬ್ಯಾಂಕಿನಲ್ಲಿಟ್ಟಿದ್ದ ಒಂದು ಲಕ್ಷ!

ಲಾಟರಿ ಕಿಂಗ್‌ಪಿನ್ ಬಳಿ ಇದ್ದದ್ದು ಕೇವಲ 38 ಸಾವಿರ ಮಾತ್ರ. ಓಡಾಡಲು ಕಾರು ಹಾಳಾಗಲಿ ಬೈಕ್ ಕೂಡ ಇರಲಿಲ್ಲ. ಇದು ಗೊತ್ತಾಗಿದ್ದೇ ಅಲೋಕ್‌ಕುಮಾರ್ ಫೋನ್ ಮಾಡಿ ಅನ್ಯಾಯ ಮಾಡಬೇಡ್ರಪ್ಪಾ ಎಂದಿದ್ದರಲ್ಲಿ ತಪ್ಪೇನಿದೆ? ಬಂಗಾರಪೇಟೆ ಎಸ್‌ಐ ಪ್ರಕಾಶ್ ಇದನ್ನು ಪದ್ಮನಯನರಿಗೆ ತಿಳಿಸಿದರೆ ಅದನ್ನೇ ಕಾಯುತ್ತಿದ್ದ ಪದ್ಮನಯನ ಅಲೋಕ್ ಫೋನ್ ಮಾಡಿದ್ದನ್ನು ಡೈರಿಗೆ ಎಂಟ್ರಿ ಮಾಡುವಂತೆ ಆದೇಶಿಸಿದ್ದಾರೆ. ಅಲ್ಲಿಗೆ ರಾಜನ್ ಲಾಟರಿ ಕಿಂಗ್‌ಪಿನ್ನಾಗಿದ್ದು ಅಲೋಕ್ ನೆರವಿಗೆ ಬಂದಿದ್ದರಿಂದ ಅವರೂ ಲಾಟರಿ ಅಕ್ರಮದ ಪಾಲುದಾರರೆಂದು ಹಣೆಪಟ್ಟಿ ತೊತ್ತಾಗಿತ್ತು. ಇಲ್ಲದ ಲಾಟರಿ ಅಕ್ರಮದ ತನಿಖೆಗೆಂದು ಸಿಐಡಿ ಎಸ್‌ಪಿ ಪವಾರ್ ವಿಚಾರಣೆಗಿಳಿದಾಗ ಎಸ್‌ಐ ಪ್ರಕಾಶ್ ಪ್ರಾಮಾಣಿಕವಾಗೇ ನಡೆದ ಘಟನೆಯನ್ನು ವಿವರಿಸಿದ್ದರು. ಕನಕಲಕ್ಷ್ಮಿ ಮತ್ತು ಸ್ವಾಮಿ ಸೇರಿಕೊಂಡು ತಾವೇ ಲಾಟರಿ ಟಿಕೆಟ್ಟುಗಳನ್ನು ರಾಜನ್ ಮನೆಯಲ್ಲಿಟ್ಟು ಆತನನ್ನು ಬಂಧಿಸಿದ್ದನ್ನು ಪ್ರಕಾಶ್ ಬಾಯಿಬಿಟ್ಟರು.

ಇದು ಗೊತ್ತಾಗಿದ್ದೇ ಸಿಐಡಿಯ ಐಜಿ ಪ್ರತಾಪ್ ರೆಡ್ಡಿಗೆ ಇಡೀ ಪ್ರಕರಣದ ಮರ್ಮ ಅರ್ಥವಾಗಿತ್ತು. ಅನ್ಯಾಯವಾಗಿ ಅಲೋಕ್‌ಕುಮಾರ್‌ರನ್ನು ಸಿಲುಕಿಸಿದ್ದಕ್ಕೆ ಎಲ್ಲಾ ಸಾಕ್ಷ್ಯಾಧಾರಗಳೂ ಲಭಿಸಿತ್ತು. ದುರಂತವೆಂದರೆ ಸಿಓಡಿಯ ಉಸ್ತುವಾರಿಯಲ್ಲಿದ್ದ ನಿಂಬಾಳ್ಕರ್‌ಗೂ ಅಲೋಕ್‌ಕುಮಾರ್‌ಗೂ ಎಣ್ಣೆಸೀಗೇಕಾಯಿ. ಎಲ್ಲಾ ಆರೋಪಿಗಳನ್ನು ಬೆಂಬಲಿಸುತ್ತೀರೇನು ಎಂದು ನಿಂಬಾಳ್ಕರ್ ಸಿಓಡಿಯವರನ್ನು ತಪ್ಪಾಗಿಸಿಬಿಟ್ಟರು. ಅಲ್ಲಿಗೆ ಅಲೋಕ್‌ಕುಮಾರ್‌ರನ್ನು ಬಚಾವು ಮಾಡುವ ಸಿಓಡಿಯ ಕಾಳಜಿಗೇ ತಡೆ ಬಿದ್ದಾಗಿತ್ತು.

ಇಲ್ಲದ ಲಾಟರಿಗೆ ಅಬ್ಬೇಪಾರಿಯೇ ಕಿಂಗ್‌ಪಿನ್. ಆತನ ನೆರವಿಗೆ ಬಂದ ತಪ್ಪಿಗೆ ಅಲೋಕ್‌ಕುಮಾರ್ ಬದುಕೇ ನಿರ್ನಾಮ. ಸತ್ಯ ಯಾರಿಗೆ ಬೇಕು? ಹಳ್ಳಕ್ಕೆ ಬಿದ್ದವ ಅಳಿಗೊಂದು ಕಲ್ಲು; ಪುಟಿಯೊಟ್ಟರಿಗೂ ಸರ್ಕಾರವನ್ನು ಹಣಿಯುವ ತವಕ. ಸುಳ್ಳೆಂಬುದು ಗೊತ್ತಿದ್ದರೂ ಅದನ್ನೇ ಸಾಧಿಸುವಾಸೆ. ಈನಿಷ್ಟ ಸಿಬಿಐ ಅದರೂ ಕಾಟಿ ಮಾಡಲೇಬೇಕಲ್ಲವೆ? ಕಾಲವೇ ನಿರ್ಧರಿಸುತ್ತಿದೆಯಲ್ಲವೆ? ●

ಸಿದ್ದರಾಮಯ್ಯನವರ 'ಮೇಕ್ ಔಟ್ ಇಂಡಿಯಾ' ಸೂತ್ರ



ಒಡಿಶಾದ ಕಾಳಹಂಡಿಯ ಪ್ರದೇಶದ 'ನಿಯಮಗಿರಿ ಪರ್ವತ' ಅಲ್ಲಿನ ಆದಿವಾಸಿಗಳಿಗೆ ಪವಿತ್ರಸ್ಥಳ. ಅದು ತನ್ನ ಗರ್ಭದಲ್ಲಿ ಖನಿಜ ಸಂಪತ್ತನ್ನು ತುಂಬಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ 'ಮೇಕ್ ಇನ್ ಇಂಡಿಯಾ' ಘೋಷಣೆಯಿಂದ ಪುಳಕಿತರಾದ ಬಹುರಾಷ್ಟ್ರೀಯ ಕಂಪನಿಯ ಅಧಿಕಾರಿಗಳು ನಿಯಮಪರ್ವತ ಪ್ರದೇಶಕ್ಕೆ ಹೋಗಿ ಅಲ್ಲಿನ ಆದಿವಾಸಿಗಳ ಸಭೆ ಕರೆದಿದ್ದಾರೆ. ಪರ್ವತ ಪ್ರದೇಶದ ಅರ್ಧಭಾಗವನ್ನು ಆದಿವಾಸಿಗಳಿಗೆ ಬಿಟ್ಟುಕೊಡುವುದಾಗಿ ಮತ್ತು ಆದಿವಾಸಿಗಳಿಗೆ ರಸ್ತೆ ಮುಂತಾದ ಮೂಲ ಸೌಕರ್ಯ ಕಲ್ಪಿಸುವುದಾಗಿಯೂ ತಿಳಿಸಿದ್ದಾರೆ. ಆಗ ಒಬ್ಬ ಆದಿವಾಸಿ ಮಹಿಳೆ ಕೇಳಿದ್ದಿಷ್ಟೇ: "ನಮ್ಮ ಪವಿತ್ರವಾದ ನಿಯಮಪರ್ವತದ ಅರ್ಧಭಾಗವನ್ನು ನಮಗೆ ಬಿಟ್ಟುಕೊಡುವ ನೀವು ಯಾರು?"

ಆಕೆಯ ಪ್ರಶ್ನೆಗೆ ಉತ್ತರಿಸಲಿಕ್ಕಾಗದ ಆ 'ಮೇಕ್ ಇನ್ ಇಂಡಿಯಾ' ಮಂದಿ ಬಾಯಿ ಮುಚ್ಚಿಕೊಂಡು ವಾಪಸ್ ಬಂದಿದ್ದಾರೆ. ಇಂಥ ಸಂಪದ್ಭರಿತ ತಾಣಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡುವ ಉದ್ದೇಶದಿಂದಲೇ ಪ್ರಧಾನಿ ಮೋದಿ 'ಭೂ ಸ್ವಾಧೀನ ಕಾಯ್ದೆ' ಜಾರಿಗೆ ತರಲು ಶ್ರಮಿಸುತ್ತಿದ್ದಾರೆ. ದೇಶವನ್ನು ಮಾರುವ ಹೊಸ ವಿಧಾನವಿದು! ಅವರು ಎಲ್ಲ ನಾಚಿಕೆ ಬಿಟ್ಟು ಬಂಡವಾಳಶಾಹಿಗಳಿಗೆ ಮತ್ತು ಸಾಮ್ರಾಜ್ಯಶಾಹಿಗಳಿಗೆ ದೇಶದ ಉಸ್ತುವಾರಿ ನೋಡಿಕೊಳ್ಳಲು ಸಾಧ್ಯವಾಗುವಂತೆ ಮಾಡುವುದರಲ್ಲಿ ಶತಪ್ರಯತ್ನ ಮಾಡುವ ಸಂದರ್ಭದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಡವರಿಗೆ ತುತ್ತು ಅನ್ನ ಸಿಗುವಂತೆ ಮಾಡುತ್ತಿರುವುದು ನಮ್ಮ ಅಂತಃಕರಣಕ್ಕೆ ತಟ್ಟಬಾರದೆ?

"ನನ್ನದು ಅಹಿಂದ ಸರ್ಕಾರ" ಎಂದು ಸಿದ್ದರಾಮಯ್ಯ ಘೋಷಿಸಿದ್ದಾರೆ. ಭಾರತದ ಇತಿಹಾಸದಲ್ಲಿ ಹೀಗೆ ಘೋಷಿಸುವ ಧೈರ್ಯ ತಾಳಿದ ಮೊದಲ ಮುಖ್ಯಮಂತ್ರಿ ಇವರಾಗಿದ್ದಾರೆ. ಎಲ್ಲ ಜಾತಿ ಜನಾಂಗಗಳ ಹಿತರಕ್ಷಣೆ ಮಾಡುವುದು ಅಹಿಂದ ಸರ್ಕಾರದ ಹೊಣೆ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಅವರು ಹೀಗೆ ಹೇಳಿದ್ದನ್ನು ಸಾಧಿಸಿ ತೋರಿಸಿದ್ದಾರೆ.

ದುಡಿಯುವ ಜನ ತಮಗೆ ಬೇಕಾದ ವಸ್ತುಗಳನ್ನು ಮಾರುಕಟ್ಟೆ ಬೆಲೆಗೆ ಖರೀದಿಸಿ ಗೌರವಯುತವಾಗಿ ಬಾಳುವಷ್ಟು ಕೂಲಿಯನ್ನು ಸಂಪಾದಿಸುವ ವಾತಾವರಣವನ್ನು ನಾನು ಬಯಸುತ್ತೇನೆ. ಅಂಥ ವಾತಾವರಣ ಇಲ್ಲದಾಗ ಸಿದ್ದರಾಮಯ್ಯ ಅವರು ಕಡುಬಡವರಿಗೆ ಅನ್ನಭಾಗ್ಯವನ್ನು ಕಲ್ಪಿಸಿಕೊಡುವುದು ತಪ್ಪೆ?

ಸಿದ್ದರಾಮಯ್ಯ ಅವರು ಅರಿತೋ ಅರಿಯದೆಯೊ ಬಹಳ ಮಹತ್ವದ್ದನ್ನು ಸಾಧಿಸುತ್ತಿದ್ದಾರೆ. ಸಹಸ್ರಾರು ವರ್ಷಗಳಿಂದ ಮಾನಸಿಕ ಗುಲಾಮಗಿರಿಯಲ್ಲಿ ಒದ್ದಾಡುತ್ತಿರುವವರಿಗೆ ಆತ್ಮಗೌರವ ಕಲ್ಪಿಸುವ ವಾತಾವರಣ ಸೃಷ್ಟಿಸುತ್ತಿದ್ದಾರೆ. ಬಡವರು ಕೂಲಿ ಮಾಡಲೇಬೇಕೆ? 'ನಿಮ್ಮ ಕೆಲಸಕ್ಕೆ ಬರಲಿಕ್ಕಾಗುವುದಿಲ್ಲ' ಎಂದು ಅವರು ಹೇಳಬಾರದೆ?

ಯಾರು ಯಾರ ಮೇಲೆ ಅವಲಂಬಿತರಾಗಿದ್ದಾರೆ ಎಂಬ ಸತ್ಯದ ಅರಿವಾಗಬೇಕಾದರೆ ಸಿದ್ದರಾಮಯ್ಯ ಅವರ ಬಡವರ ಪರ ಯೋಜನೆಗಳನ್ನು ಅರ್ಥೈಸಿಕೊಳ್ಳುವುದು ಅವಶ್ಯವಾಗಿದೆ. ಹೆಚ್ಚಿನ ಕೂಲಿ ಸಿಗದ ವಾತಾವರಣದಲ್ಲಿ ಕಡಿಮೆ ಬೆಲೆಗೆ ಮತ್ತು ಕಡುಬಡವರಿಗೆ ಉಚಿತ ಆಹಾರ ಧಾನ್ಯಗಳನ್ನು ಒದಗಿಸುವುದು ಸರ್ಕಾರದ ಆದ್ಯಕರ್ತವ್ಯ ಎಂಬ 'ಸಿದ್ದರಾಮಯ್ಯ ಸಿದ್ಧಾಂತ' ನಿಜವಾದ ಅರ್ಥದಲ್ಲಿ ಕ್ರಾಂತಿಕಾರಕವಾಗಿದೆ. ಈ ಸಿದ್ಧಾಂತ ಕೇವಲ ಅಹಿಂದ ಪರವಾಗಿ ಇದೆಯೆ? ಬಡ ಬ್ರಾಹ್ಮಣರಿಗೆ, ಲಿಂಗಾಯತರಿಗೆ, ಗೌಡರಿಗೆ ಮುಂತಾದ ಮೇಲ್ಜಾತಿಗಳ ಬಡವರಿಗೆ ಸಿದ್ದರಾಮಯ್ಯನವರ ಯೋಜನೆಗಳ ಸೌಲಭ್ಯ ದೊರೆಯುವುದಿಲ್ಲವೆ?

ಬಡವರಿಗಾಗಿ ತಪ್ಪು ಮಾಡುವುದು ಕೂಡ ನ್ಯಾಯಯುತವಾದುದೇ ಆಗಿರುತ್ತದೆ. ಬಡವರ ಪಕ್ಷಪಾತಿಯಾಗುವುದು ಮಾನವಧರ್ಮದ ಸಂವಿಧಾನ ಮತ್ತು ನೈಸರ್ಗಿಕ ನ್ಯಾಯದ ಪ್ರಕಾರ ನಿಯಮಬದ್ಧವಾಗಿದೆ. ಇಂಥ ತಪ್ಪುಗಳನ್ನು ಮಾಡುವ ಶಕ್ತಿಯನ್ನು ಸಿದ್ದರಾಮಯ್ಯ ಅವರು ಹೊಂದಿದ್ದಾರೆ ಎಂಬುದೇ ಅಭಿಮಾನದ ಸಂಗತಿ. ಅದೇನೇ ಇದ್ದರೂ ಅವರು ದೇಶದ ಸಂವಿಧಾನದ ಆಶಯಗಳಿಗೆ ಬದ್ಧರಾಗಿ ಒಟ್ಟಾರೆ ಬಡವರ ಪರ ನಿಲುವು ತಾಳಿದ್ದಾರೆ. ದೇಶದ ಪ್ರಧಾನಿ ಹಂಗುತೊರೆದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸುಲಿಗೆಕೋರರ ಪರ ನಿಲುವು ತಾಳುವ ಸಂದರ್ಭದಲ್ಲಿ ಸಿದ್ದರಾಮಯ್ಯನವರು ದೇಶದ ಜನರ ರಕ್ಷಣೆಯ ಸೂತ್ರವನ್ನು ಕಂಡುಹಿಡಿದಿದ್ದಾರೆ. ದೇಶದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು 'ಸಿದ್ದರಾಮಯ ಸೂತ್ರ'ವನ್ನು ಅನುಸರಿಸಿದರೆ ಪ್ರಧಾನಿಯ 'ಮೇಕ್ ಇನ್ ಇಂಡಿಯಾ' ಮೂಲೆಗುಂಪಾಗಿ, ಸಿದ್ದರಾಮಯ್ಯನವರ 'ಮೇಕ್ ಔಟ್ ಇಂಡಿಯಾ' ಭಾರತೀಯರನ್ನು ಎಚ್ಚರಗೊಳಿಸುತ್ತ ಶೋಷಣೆಯಿಂದ ಮುಕ್ತವಾಗಿಸುವ ದಿಕ್ಕನ್ನು ತೋರಿಸುವುದು.

- ರಂಜಾನ್ ದರ್ಗಾ

ಬುದ್ಧನನ್ನು ಕದ್ದವರು



ಕರಾವಳಿ ಜಿಲ್ಲೆಗಳಲ್ಲಿ ಕೊರಗರೆಂದರೆ ದಲಿತರೂ ಕೂಡ ಅವರನ್ನ ಮುಟ್ಟಿಸಿಕೊಳ್ಳುವುದಿಲ್ಲ. ಅವರನ್ನು ಅತ್ಯಂತ ನಿಕೃಷ್ಟವಾಗಿ ಇಲ್ಲಿ ನೋಡಿಕೊಳ್ಳಲಾಗುತ್ತಿದೆ. ಕರಾವಳಿಯ ಜನಪದ ನಂಬಿಕೆಗಳಲ್ಲೊಂದಾದ ಭೂತಾರಾಧನೆಯಲ್ಲಿ ಕಂಡುಬರುವ ದೈವಗಳಲ್ಲಿ ಕೊರಗ ಜನಾಂಗದ ಕೊರಗಜ್ಜನೂ ಒಬ್ಬ. ಈ ಮೊದಲು ಸ್ಥಳೀಯ ಬ್ರಾಹ್ಮಣೇತರ ವರ್ಗಗಳು ಕೊರಗಜ್ಜನಲ್ಲಿ ಭಕ್ತಿಯಿಂದ ನಡಕೊಂಡರೆ ಇದೀಗ ಅಸ್ಪೃಶ್ಯರಲ್ಲೇ ಅಸ್ಪೃಶ್ಯನಾದ ಕೊರಗಜ್ಜನ (ಕೆಲವೆಡೆ ಉತ್ತರ ಭಾಗದಲ್ಲಿ ಕೊರಗಜ್ಜನನ್ನ ನೀಚ ಎಂದೂ ಕರೆಯುತ್ತಾರೆ) ದೈವಸ್ಥಾನವನ್ನು ವೈದಿಕರ ಓಂ ಹಾಗು ಕೇಸರಿ ಬಣ್ಣಗಳು ಆಕ್ರಮಿಸಿಕೊಂಡಿವೆ. ಆತನ ನೇಮದಲ್ಲಿ ವೈದಿಕರ ಆಚರಣೆಗಳೆಲ್ಲವೂ ಬಿಂದಾಸ್ ಆಗಿ ಎಂಟ್ರಿಯಾಗಿವೆ. ಮಾಲ್ದಿ ಹಾಗು ಬಬ್ಬು ತರಹದ ದಲಿತವರ್ಗದ ದೈವಗಳ ಆಚರಣೆ ಯಾವತ್ತೋ ವೈದಿಕೀಕರಣಗೊಂಡಾಗಿದೆ. ದಲಿತ ಬಬ್ಬುಸ್ವಾಮಿ ಹಾಗು ಆತನ ತಾಯಿ ಮಾಲ್ದಿಯನ್ನು ದೇವಿಯ ಹಾಗು ಶಿವನ ಕಥೆಯೊಂದಿಗೆ ಲಿಂಕ್ ಮಾಡಲಾಗಿದೆ. ಇದು ವೈದಿಕರು ತಮ್ಮ ಅನುಕೂಲಕ್ಕಾಗಿ ಏನನ್ನೂ ಕೂಡ ಮಾಡಬಲ್ಲರೆಂಬುದಕ್ಕೆ ಒಂದು ಸಣ್ಣ ಉದಾಹರಣೆಯಷ್ಟೆ. ಯಾಕೆಂದರೆ ಸ್ಥಳೀಯವಾಗಿ ಇವುಗಳು ಸಿಕ್ಕಾಪಟ್ಟೆ ಪೊಪ್ಯುಲರ್ ದೈವಗಳು.

ಕಳೆದ ಸಂಚಿಕೆಯಲ್ಲಿ ಯೋಗೀಶ್ ಮಾಸ್ಟರ್ ಅವರು ಬುದ್ಧನ ಕುರಿತಾಗಿ ಕೆಲ ವಿಚಾರಗಳನ್ನು ಬರೆದಿದ್ದರು. ಬುದ್ಧನಾಗಲೀ ಮಹಾವೀರನಾಗಲೀ ಅಧಿಕಾರದ ಲಾಲಸೆಯಿಂದಲೋ (ಆಧ್ಯಾತ್ಮಿಕ ಗುರುವೆನಿಸುವುದು ರಾಜಾಧಿಕಾರಕ್ಕಿಂತಲೂ ದೊಡ್ಡದು; ರಾಜನಿಗೆ ಶತ್ರು ಭಯ, ಪ್ರಜೆಗಳ ಸೌಲಭ್ಯಗಳ ಕುರಿತ ಹೊಣೆಗಳಿದ್ದರೆ ಇವರದ್ದು ಜಬರ್ದಸ್ತಿನ ಬಿಂದಾಸ್ ಪಾದಪೂಜೆಯ ಬದುಕು) ವಂಶಾಡಳಿತದ ಪ್ರಭಾವದಿಂದಲೋ ಆಧ್ಯಾತ್ಮಿಕ ಲೋಕಕ್ಕೆ ಬಂದವರಲ್ಲ, ಅವರಲ್ಲೊಂದು ನಿಜ ತುಡಿತವಿದ್ದ ಕಾರಣ ಅದರ ಫಲವಾಗಿ ಅವರ ಬದುಕೇ ಬದಲಾಯಿತು. ದೊಡ್ಡ ಚಕ್ರವರ್ತಿಯೇ ಎನಿಸಿಕೊಳ್ಳಬಹುದಾಗಿದ್ದ ಈರ್ವರೂ ಈ ತುಡಿತದ ಕಾರಣಕ್ಕಾಗಿ ತಮ್ಮ ಐಶ್ವರ್ಯವನ್ನೆಲ್ಲ ಮೂಲೆಗೆ ತಳ್ಳಿ 'ಸತ್ಯದರ್ಶನ'ಕ್ಕಾಗಿ ವರ್ಷಾನುಗಟ್ಟಲೆ ಅಲೆದಾಡಿದರು. ಆಧ್ಯಾತ್ಮಿಕ ಭಾಷೆಯಂತೆ ಜ್ಞಾನೋದಯ ಹೊಂದಿದ ಇಂತಹ ಮಹಾಪುರುಷರಿಗೆ ದೇವರ ಕುರಿತಾದ ಸ್ಪಷ್ಟ ಅರಿವಿದ್ದರೂ ಕೂಡ ಆ ಬಗ್ಗೆ ಮಾತನಾಡದಿರಲು ಅವರದ್ದೇ ಆದ ಕಾರಣಗಳಿದ್ದವು. ದೇವರ ಕುರಿತಾದ ಭಕ್ತರ ಪ್ರಶ್ನೆಗಳಿಗೆ ಸಮಕಾಲೀನರಾದ ಮಹಾವೀರ ಹಾಗು ಬುದ್ಧರು ಇಬ್ಬರೂ ಬೇಕಂತಲೇ ಗೊಂದಲದ ಉತ್ತರಗಳನ್ನು ನೀಡುತಿದ್ದರೇ ವಿನಃ ಯಾವುದೇ ನಿರ್ದೇಶನವನ್ನು ಹೇರುತ್ತಿರಲಿಲ್ಲ, ಅವರ ಕಾಲದಲ್ಲಿ ಅತ್ಯಂತ ಪ್ರಭಾವಿಗಳಾಗಿ ರಾಜ ಮನ್ನಣೆಯನ್ನು ಗಳಿಸಿಕೊಂಡಿದ್ದ ಇವರುಗಳು ತಮ್ಮ ಮಾತುಗಳಲ್ಲಿ ಈಶ್ವರ ಪಾರ್ವತಿ ವಿಷ್ಣು ಗಣಪತಿಯೆಂದು ಉಲ್ಲೇಖಗಳನ್ನು ನೀಡ ಹೊರಟಿದ್ದರೆ ವೈದಿಕರ ಜೊಳ್ಳು ಕಾಳುಗಳೆಲ್ಲ ಅದರೊಟ್ಟಿಗೇನೆ ಬೇಡಬೇಡವೆಂದರೂ ಬಂದು ಸೇರಿಕೊಳ್ಳುತ್ತಿತ್ತು, ಸಮಾಜಮುಖಿಯಲ್ಲದ ಯಾವುದನ್ನು ದೂರವಿರಿಸ ಬಯಸಿದ್ದರೋ ಅದರದ್ದೇ ಮುಖವಾಣಿಗಳು ತಾವಾಗಬಾರದೆಂಬ ಮುನ್ನೆಚ್ಚರಿಕೆಗಾಗಿ ದೇವರ ಕುರಿತಾದ ಸ್ಪಷ್ಟ ಅರಿವಿದ್ದೂ ಕೂಡ ಆ ಬಗ್ಗೆ ಇವರು ಮಾತನಾಡಬಯಸಲಿಲ್ಲ, ನಾಸ್ತಿಕರಾಗಿದ್ದರೆ ಕೊನೆಪಕ್ಷ ದೇವರು ಇಲ್ಲವೆಂದೂ ಕೂಡ ಹೇಳಲಿಲ್ಲ. ವೈದಿಕತೆಯ ಪರವಿಲ್ಲದಿರುವಿಕೆಯೇ ನಾಸ್ತಿಕತೆ ಎನಿಸುವುದಾದರಷ್ಟೆ ಇವರನ್ನು ನಾಸ್ತಿಕರೆನ್ನಬಹುದಷ್ಟೆ.

ಬೇರುಮಟ್ಟದ ಆಧ್ಯಾತ್ಮಿಕ ಬದುಕನ್ನು ನಡೆಸಿ ರಾಜನಾಗಿರುವಂತವನಾದರೂ ತನ್ನನ್ನು ತಾನು ಭಿಕ್ಷುಕ (ಬಿಕ್ಕು) ಎಂದು ಕರೆದುಕೊಂಡು ವೈದಿಕರ ಹುಸಿ ಭಿನ್ನತೆ ತೋರಿಸಿಕೊಳ್ಳುವ ಸಂಸ್ಕೃತದ ಬದಲು ಜನರ ಆಡುಭಾಷೆಯಲ್ಲಿ ಮಾತಾಡುತ್ತಾ ಬದುಕಿದ್ದ ಬುದ್ಧ ತನ್ನ ಜನಪರ ಸಂದೇಶ ಹಾಗು ನಡೆಗಳಿಂದ ಸಾಮಾನ್ಯ ಜನರಿಗೂ ಹತ್ತಿರದವನಾದ. ಒಂದುಕಡೆ ರಾಜಮಹಾರಾಜರುಗಳು ಇನ್ನೊಂದೆಡೆ ಜನಸಾಮಾನ್ಯರು ಇವರೆಲ್ಲರೂ ಬುದ್ಧನ ಸಂದೇಶ ಹಾಗು ದರ್ಶನಕ್ಕೆ ಹಾತೊರೆಯುವಂತಾಯಿತು. ಪಾದಪೂಜೆ ಪಲ್ಲಕ್ಕಿಗಳಿಲ್ಲದ, ರಾಜನನ್ನೂ ಮತ್ತು ದರಿದ್ರನನ್ನೂ ಒಂದೇ ರೀತಿಯಲ್ಲಿ ಕಾಣುವ ಈ ಹೊಸ ಗುರು ಸಾಂಪ್ರದಾಯಿಕ ಕ್ಲಾಸಿಕಲ್ ವೈದಿಕ ಗುರುಗಳಲ್ಲಿ (ಆ ಸಮಯದಲ್ಲಿ ಹಿಂದೂ ಎನ್ನುವ ಸಂಯುಕ್ತ ಧರ್ಮ ಚಾಲ್ತಿಯಲ್ಲಿರಲಿಲ್ಲ, ಅದರ ಕಲ್ಪನೆಯೂ ಇರಲಿಲ್ಲ) ಕಂಪನವನ್ನೇ ತಂದಿಟ್ಟದ್ದ ಆ ಒಳಗಿನ ಸಿಟ್ಟು-ಪ್ರತೀಕಾರ ಬುದ್ಧ ನಿರ್ವಾಣ ಹೊಂದಿ ಎಷ್ಟೋ ವರ್ಷಗಳ ಬಳಿಕ ಶಂಕರಾಚಾರ್ಯನಂತವರ ಮೂಲಕ ಕ್ರೂರ ಹಾಗು ಕೀಳುಮಟ್ಟದಲ್ಲಿ ಹೊರಹಾಕಲ್ಪಟ್ಟಿತು. ವೈದಿಕಶಾಹಿಯ ಅಸ್ತಿತ್ವಕ್ಕೆ ದೊಡ್ಡ ಮಟ್ಟದಲ್ಲಿ ಹೊಡೆತ ನೀಡಿದ್ದ ಬುದ್ಧನಿಗೆ ಆತ ಸತ್ತ ಶತಮಾನಗಳ ಬಳಿಕವಾದರೂ 'ತಕ್ಕ ಶಾಸ್ತಿ' ಮಾಡಿ ಆ ಮೂಲಕ ಇಂದಿಗೂ ಶಂಕರಾಚಾರ್ಯ ವೈದಿಕರ ಹೀರೋ ಎನಿಸಿಕೊಂಡುಬಿಟ್ಟ. ವೈದಿಕರ ವೈರಿಗೆ 'ಧೀ' ಕೊಟ್ಟ ಕ್ರೆಡಿಟ್ ಕೇವಲ ಶಂಕರಾಚಾರ್ಯನಿಗೆ ಹೋಗಬಾರದೆಂದು ಶಂಕರಾಚಾರ್ಯನ ಬದ್ಧ ವೈರಿ (ಉಡುಪಿಯಲ್ಲಿ ಶಂಕರಾಚಾರ್ಯನನ್ನು ಈ ಕಾರಣಕ್ಕೆ ನಾಯಿ ನರಿ ಎಂದು ಜರೆಯುವ ಪದ್ಧತಿಯಿದೆ) ಹಾಗು ಭೀಮನ ಅವತಾರವಾದ ಮಧ್ವನೂ ಕೂಡ ಬುದ್ಧನಿಗೆ ಪೆಟ್ಟು ನೀಡಿದ್ದಾನೆಂದು ಮಾಧ್ವರುಗಳು ಹೇಳಿಕೊಳ್ಳುತ್ತಾರೆ. (ಭೀಮ-ಮಧ್ವರ ಕುರಿತಾದ ಕನಕದಾಸರ ಒಂದು ಸ್ತೋತ್ರದಲ್ಲಿ ಮಧ್ಯಗ್ರಹದಾತನಾ ಸತಿಯಲ್ಲಿ ಉದಿಸಿದವಗೆ, ಬೌದ್ಧ ಚಾರ್ವಾಕ ಮಾಯ್ಗಳ ಜರೆದವಗೆ.. ಮಧ್ವ ಶಾಸ್ತ್ರವನೆಲ್ಲ ಸಜ್ಜನಿಗೊರೆದವಗೆ – ಎಂಬ ಉಲ್ಲೇಖವಿದೆ.) ಇಂತಹ ಬದ್ಧ ಬುದ್ಧ ದ್ವೇಷಿಗಳು ಬುದ್ಧನನ್ನು ವಿಷ್ಣುವಿನ ಅವತಾರವೆಂದು ಒಪ್ಪುವರೇ? ವಾಸ್ತವದಲ್ಲಿ ಕಥೆ ಬೇರೆಯೇ ಇದೆ.

ನೀವು ಹಿಂದೂ ಪುರಾಣಗಳನ್ನು ಓದಿದರೆ ಅಲ್ಲಿರುವ ಶೃಂಗಾರ ಕಥೆಗಳನ್ನು ಓದಿದಾಗ ಅಚ್ಚರಿಯೆನಿಸುತ್ತದೆ. ದೊಡ್ಡ ದೊಡ್ಡ ದೇವಾನುದೇವತೆಗಳು ಲಜ್ಜೆಬಿಟ್ಟು ಮೋಹಕ್ಕೊಳಗಾದವರಂತೆ 'ರಸವತ್ತಾಗಿ' (ಯಾವ ಮುಚ್ಚುಮರೆಯಿಲ್ಲದೇ) ಅವರ ಶೃಂಗಾರದಾಟವನ್ನು ಇನ್ನಿಲ್ಲದಂತೆ ಅದರಲ್ಲಿ ವರ್ಣಿಸಲಾಗಿದೆ (ಬಹುಶಃ ಈ ಧಾರಾಳತನದ ಚಿಂತನೆಯೇ ದೇಗುಲದಲ್ಲಿನ ಶೃಂಗಾರ ಶಿಲ್ಪಗಳಿಗೆ ಪ್ರೇರಣೆ ಇದ್ದರೂ ಇರಬಹುದು). ಆಕಾಶ ಮಾರ್ಗದಲ್ಲಿ ಹೋಗುವಾಗ ಅಪ್ಸರೆಯನ್ನು ನೋಡಿ ಸ್ಖಲಿಸುವುದು, ಹೆಣ್ಣಿನ ವೇಷ ತೊಟ್ಟ ಮತ್ತೊಬ್ಬನನ್ನು ಎಲ್ಲರೆದುರು ಅಟ್ಟಿಸಿಕೊಂಡು ಹೋಗುವುದು (ಅಯ್ಯಪ್ಪನ ಕಥೆ), ಒಂದೇ ಎರಡೆ... ಬಗೆಬಗೆಯ ಕಥೆಗಳು ಇಲ್ಲಿ ಸಿಗುತ್ತವೆ.

ಇಂಥಾದ್ದೇ ದೇವರನ್ನು ಶೃಂಗಾರದಾಟಕ್ಕೆಳೆಯುವ ಕಥೆ ತುಳಸಿ ಜಲಂಧರನದ್ದು. ಜಲಂಧರನ ವೇಷ ಧರಿಸಿ ವಿಷ್ಣು ಕಾರ್ಯಸಾಧನೆಗಾಗಿ ತುಳಸಿಯನ್ನು ಕೂಡುವ ಕಥೆ ಇದು. ಈಗಿನ ಚಿಂತನಾ ದೃಷ್ಟಿಯಲ್ಲಿ ವಿಷ್ಣುವನ್ನು ಇದು ಡೀಗ್ರೇಡ್ ಮಾಡುವಂತೆ (ಲಂಪಟತನ ಹಾಗು ವಂಚನೆಯನ್ನು ಎತ್ತಿ ತೋರುವ) ತೋರಿದರೆ ಅವತ್ತು 'ದೇವರ ಹಾಗು ದೇವರ, ಮುಖವಾಡ ಹೊತ್ತವರ ಮತ್ತು ಪರಿಚಾರಕರ ಇಂತಹ ಆಟ'ಗಳಿಗೆ ರಿಯಾಯತಿ ಅಥವ ಮಾನ್ಯತೆ ಇದ್ದಿರಬಹುದು. ಇಂತಾದ್ದೇ ಕಥೆ ದಶಾವತಾರಿ ಬುದ್ಧನದ್ದು ಕೂಡ.


ಪತಿವ್ರತಾ ಪತ್ನಿಯರ ದೆಸೆಯಿಂದ ಅಜೇಯನಾಗಿದ್ದ ತ್ರಿಪುರಾಸುರನನ್ನು ವಧಿಸಲು ಈಶ್ವರ ಹೋದಾಗ ವಿಷ್ಣು ತ್ರಿಪುರನ ಪತ್ನಿಯರೆದುರು ಬೆತ್ತಲೆ ನಿಂತು ಅವರ ಮನಸ್ಸನ್ನು ಚಂಚಲಗೊಳಿಸಿ ಅವರ ಪತಿವ್ರತಾ ಧರ್ಮಕ್ಕೆ ಭಂಗ ತಂದು ಆ ಮೂಲಕ ಶಿವನಿಗೆ ನೆರವಾಗುವ ಕಥೆಯಿದು. ಪುರಂದರ ದಾಸರ ಅನೇಕ ಕೀರ್ತನೆಗಳಲ್ಲಿ ಕಂಡುಬರುವ "ಬೆತ್ತಲೆ ನಿಂತಿಹ ಬುದ್ಧನಿಗೆ?" ಎಂಬುದರ ತಾತ್ಪರ್ಯ ಇದೇ ಕಥೆಯನ್ನು ಸೂಚಿಸುತ್ತದೆ. ಇದನ್ನು ಪಾವೆಂ ಅಂತವರೇ ಕನ್‌ಫ್ಯೂಷನ್ ಮಾಡಿಕೊಂಡದ್ದುಂಟು (ಪದಾರ್ಥ ಚಿಂತಾಮಣಿ ಪುಟ 203ರಲ್ಲಿ ಬುದ್ಧ-ಮಹಾವೀರರಲ್ಲಿ ವ್ಯತ್ಯಾಸ ತಿಳಿಯದೇ ದಾಸರು ಮಹಾವೀರನ ಬದಲು ಬುದ್ಧನೇ ಬೆತ್ತಲೆ ನಿಂತದ್ದೆಂದು ಭಾವಿಸಿರಬೇಕೆಂದು ಅವರು ಹೇಳಿದ್ದರು. ವಾಸ್ತವವಾಗಿ ಮಹಾವೀರನೂ ಕೂಡ ಬೆತ್ತಲೆ ನಿಲ್ಲಲಿಲ್ಲ; ಆತನ ಜಿನ ಧರ್ಮದ ಬಾಹುಬಲಿ ಮಾತ್ರ ವಿರಾಗಿಯಂತೆ ಬೆತ್ತಲೆ ನಿಂತದ್ದು)

ಪುರಾಣಗಳ ಇನ್ನಿತರ ಶೃಂಗಾರ ಕಥೆಗಳು ಅವುಗಳಿಗೆಂದೇ ಓದುವುದೋ ಬಿಡುವುದೋ ಮಾಡಬಹುದಾದರೆ ಈ ಬುದ್ಧನದ್ದು ಮಾತ್ರ ಗೋಳಿನ ಕಥೆ. ನಂತರದ ದಿನಗಳಲ್ಲಿ ಪುರಾಣಿಕರಿಗೆ ವಿಷ್ಣುವಿನ ಮಹಿಮೆ ಸಾರುವ ದಶಾವತಾರ ಕಥೆಯನ್ನು ಸಾರುವಾಗಲೆಲ್ಲ ಬೇಡವೆಂದರೂ ಈ ಲಜ್ಜಿತ ಬುದ್ಧನನ್ನು ಉಲ್ಲೇಖಿಸಲೇ ಬೇಕಾದ ಅನಿವಾರ್ಯತೆ ಎದುರಾಗಿತ್ತು. ಈ ಮುಜುಗರದ ಸಮಸ್ಯೆಯನ್ನು ಬುದ್ಧಿವಂತಿಕೆಯಿಂದ ನಿವಾರಿಸಬೇಕಾಗಿ ಬಂದಾಗ ಬಟ್ಟೆಯಾಗಿ ಸಿಕ್ಕವನೇ ದಿ ಗ್ರೇಟ್ ಗೌತಮ ಬುದ್ಧ. ತಮ್ಮಲ್ಲಿ ಹೆಣ್ಣುಗಳ ಬರವೆಂದು ಶೂದ್ರ ಹೆಣ್ಣುಗಳಿಗೆ ಬ್ರಾಹ್ಮಣರು ಮರ್ಯಾದೆ ಬಿಟ್ಟು ಗಾಳ ಹಾಕಿದಂತೆ ಇದೊಂದು ಅನಿವಾರ್ಯ ಪರಿಸ್ಥಿತಿಯಲ್ಲಿ ಹುಟ್ಟಿಕೊಂಡ ಬೆಳವಣಿಗೆಯೇ (ಕೆಲವೆಡೆ ಗೌತಮ ಬುದ್ಧನೇ ವಿಷ್ಣುರೂಪಿ ಎಂಬಂತೆ ಹೊಸ ಕಥೆಗಳ ಸೃಷ್ಟಿಯನ್ನೂ ನಡೆಸಲಾಯ್ತು) ಹೊರತು ಇದು ಪ್ರೀತಿಯಿಂದಾದ ಸೇರ್ಪಡೆಯಲ್ಲ, ಯಾಕೆಂದರೆ, ವೈದಿಕರ ಬುದ್ಧ ದ್ವೇಷಕ್ಕೆ ಎರಡುಸಾವಿರ ವರ್ಷಗಳ ಇತಿಹಾಸವೇ ಇದೆಯಲ್ಲದೆ ಅದು ಇಂದಿಗೂ ಕೂಡ ಜೀವಂತವಿದೆ.

ಕೆಲವೊಮ್ಮೆ ಒಂದು ಪ್ರದೇಶದ ಕುರಿತಾದ ಸಂಗತಿಗಳ ದಾಖಲೆಗಳನ್ನು ಬೇರೆ ಯಾವುದೋ ಮೂಲದಿಂದ ನೋಡಬೇಕಾದ ಅನಿವಾರ್ಯತೆ ಇರುತ್ತದೆ. ಇಲ್ಲಿನ ಪ್ರಾಚೀನ ಐತಿಹಾಸಿಕ ಸಂಗತಿಗಳನ್ನು ಹು ಯೆನ್‌ತ್ಸಾಂಗನೋ ಯೂರೋಪ್, ಅರಬ್ಬೀ ಪ್ರವಾಸಿಗಳೋ ಇಂತವರ ದಾಖಲೆಗಳಿಂದ ರುಜುವಾತು ಮಾಡಬೇಕಾದ ಸಂದರ್ಭಗಳು ಬಂದದ್ದುಂಟು. ಇಲ್ಲಿನ ಉಪನಿಷದ್ ಅಥವ ಇನಾವುದೋ ಗ್ರಂಥದ ಸಾರವಾಗಲಿ, ಐತಿಹಾಸಿಕ ಸಂಗತಿಗಳಾಗಲಿ ಪರ್ಷಿಯನ್ ಅನುವಾದಗಳಲ್ಲೋ ಗ್ರೀಕರ ಸಾಹಿತ್ಯದಲ್ಲೋ ಸಿಕ್ಕನೂ ಸಿಗಬಹುದು. ಅದೇ ರೀತಿ ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದ ಇಲ್ಲಿನ ವೈದಿಕರ ಸಾಹಿತ್ಯಗಳಲ್ಲಿ ಮೂಲ ಬದಲಾಗದ ಒರಿಜಿನಲ್ ಎನಿಸಬಹುದಾದ ಸಾಹಿತ್ಯಿಕ ಸಂಗತಿಗಳು ಕಾಪಿಡಲ್ಪಟ್ಟದ್ದುಂಟು. ಅಂತದ್ದರಲ್ಲಿ ಬುದ್ಧ ಚರಿತೆಯೂ ಒಂದು. ಈಗ ಅಲ್ಲದಿದ್ದರೂ ಕನಕ-ಪುರಂದರರ ಕಾಲಮಾನದಲ್ಲಿ ಮೇಲಿನ ಭಾಗವತದ ಬೆತ್ತಲೆ ಬುದ್ಧನ ಕಥೆಯೇ ಎಲ್ಲೆಡೆ ಚಾಲ್ತಿಯಲ್ಲಿತ್ತು ಎಂಬುವುದಕ್ಕೆ ಅವರಿಬ್ಬರ ಸಾಹಿತ್ಯದಲ್ಲಿ ಹೇರಳವಾಗಿ ಕಾಣಸಿಕೊಳ್ಳುವ ತ್ರಿಪುರನನ್ನು ಕೊಲ್ಲಲು ಸಹಕರಿಸಿದ ಬೆತ್ತಲೆ ಬುದ್ಧನ ಕಥೆಯೆ ಸಾಕ್ಷಿ. ಉದಾ: ಕನಕ ದಾಸರ ತಾಳಲ್ಲಲ್ಲಲ್ಲೋ ಕೀರ್ತನೆಯಲ್ಲಿ "ಪತಿವ್ರತೆಯರ ವ್ರತವನಳಿಯಬೇಕೆನುತಲಿ ಅತಿಶಯದಿ ತ್ರಿಪುರದ ಸ್ತ್ರೀಯರ ನುತ ಬೌದ್ಧ ರೂಪದಿ ಬಹು ಭಂಗ ಪಡಿಸಿದ ರತಿಪತಿ ಪಿತನೆಂಬ–.. ಎನ್ನುವ ಸಾಲಿದೆ. (ಚಂದನ ಚಾನೆಲ್‌ನಲ್ಲಿ ಈ ಹಿಂದೆ ಪುರಾಣಗಳ ಕುರಿತಾಗಿ ಪ್ರಶ್ನೋತ್ತರ ಕಾರ್ಯಕ್ರಮ ನಡೆಸುತ್ತಿದ್ದ ಹಿರಿಯ ವಿದ್ವಾಂಸರಾದ ಪ್ರಕಾಶ್ ಪಾವಗಡ ಎನ್ನುವವರು ಗೌತಮ ಬುದ್ಧ ವಿಷ್ಣು ಅವತಾರಿ ಬುದ್ಧನಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದನ್ನು ಕೇಳಿದ್ದೆ) ಉಡುಪಿಯ ಕೊಡವೂರು ದೇವಾಲಯದ ಗೋಡೆಯಲ್ಲಿ ಒಂದು ಬೌದ್ಧಾವತಾರದ ಚಿತ್ರವಿದೆ. ಅದು ಜಟೆಯ ಬದಲು ಕಿರೀಟಧಾರಿ ಬುದ್ಧನ ಚಿತ್ರ. ತನ್ನನ್ನು ಬಿಕ್ಕು ಎಂದು ಕರೆದುಕೊಂಡಂತವನಿಗೆ ಬಂಗಾರದ ಕಿರೀಟವೇಕೆ? ಇದು ನೈಜ ಪುರಾಣ ಬಲ್ಲವರ ಉಸ್ತುವಾರಿಯಲ್ಲಿ ರಚಿತವಾದ ಚಿತ್ರವಿರಬೇಕು.

- ಶಶಿ ಪುತ್ತೂರು, ದಕ

ಎಚ್ಚರಿಕೆ! ಜನಕಲ್ಯಾಣ ಕಾರ್ಯಕ್ರಮಗಳ ಕೊರಳು ಕುಯ್ಯಲಾಗುತ್ತಿದೆ



ತ್ನ ಚಿತ್ತಾಟಗಳ ಮೂಲಕ ಭಾರತದಲ್ಲಿ ಸ್ವರ್ಗವನ್ನೇ ಸ್ಸುವ ಭರವಸೆಗಳನ್ನು ತೋರಿ ಜನರಿಗೆ ಮರುಳಿಕ್ಕಿ ನಾವಣೆ ಗೆದ್ದ ನರೇಂದ್ರ ಮೋದಿ ಈಗ ಆರೆಸ್ಸೆಸ್‌ನ ಜೆಂಡಾಗಳನ್ನು ಜಾರಿಗೊಳಿಸುತ್ತ ಕಾರ್ಪೋರೇಟ್ ಖಳಗಳಿಗೆ ಟ್ಟಿರುವ ಆಶ್ವಾಸನೆಗಳನ್ನಷ್ಟೆ ಈಡೇರಿಸುವುದರಲ್ಲಿ ಲ್ಲೀನನಾಗಿದ್ದಾನೆ. ಇನ್ನೊಂದು ಕಡೆ ಸಾರ್ವಜನಿಕರ ಹಕ್ಕುಗಳ ೀಲೆ, ಪರಿಸರ ಸಂರಕ್ಷಣೆಗಾಗಿ ಹೋರಾಡುತ್ತಿರುವ ನ್ಜಿಓಗಳ ಮೇಲೆ, ಅಲ್ಪಸಂಖ್ಯಾತರಿಗೆ ನ್ಯಾಯ ಒದಗಿಸಲು ಯತ್ನಿಸುತ್ತಿರುವ ಸಂಘಟನೆಗಳ ಮೇಲೆ ಪರೋಕ್ಷ ದಾಳಿ ಡೆಸುವ ಮೂಲಕ ಪ್ರತಿರೋಧದ ಧ್ವನಿಗಳನ್ನು ಹತ್ತಿಕ್ಕುವ ವ್ಯವಸ್ಥಿತ ಕಾರ್ಯಾಚರಣೆಗಳು ನಡೆಯುತ್ತಿವೆ. ಅದೇ ವೇಳೆ ಳೆದ ಒಂದು ವರ್ಷದ ಅವಧಿಯಲ್ಲಿ ಹಿಂದಿನ ಜನಕಲ್ಯಾಣ ಕಾರ್ಯಕ್ರಮಗಳನ್ನೆಲ್ಲ ಒಂದಲ್ಲ ಒಂದು ವಿಧದಲ್ಲಿ ಹಳ್ಳ ಹಿಡಿಸುತ್ತಾ ಬರಲಾಗಿದೆ. ನಾಡಿನ ಬಹುತೇಕ ಮಾಧ್ಯಮಗಳು ಮೋದಿ ಸರ್ಕಾರ ಈ ರೀತಿ ಬಡವರ ತಟ್ಟೆಯಿಂದ ಟ್ಟಿ ಕಸಿಯುವ ಕೆಲಸವನ್ನು ಸದ್ದಿಲ್ಲದೆ ನೆರವೇರಿಸುತ್ತಿರುವ ಚಾರಕ್ಕೆ ಕೊಡಬೇಕಾದಷ್ಟು ಪ್ರಚಾರವನ್ನು ಕೊಡದೆ ಕೇವಲ ರ್ಕಾರದ ಭಟ್ಟಂಗಿತನ ಮಾಡುತ್ತಿರುವುದರಿಂದಾಗಿ ಜನಸಾಮಾನ್ಯರಲ್ಲಿ ಹೆಚ್ಚಿನವರಿಗೆ ಸರ್ಕಾರ ತಮಗೆ ಗೆಯುತ್ತಿರುವ ದ್ರೋಹದ ಅರಿವಿಲ್ಲ. ಆದುದರಿಂದ ಮೋದಿ ಸರ್ಕಾರದ ಜನವಿರೋಧಿ ನೀತಿಗಳನ್ನು ಮುಲಿಗೆಳೆದಷ್ಟೂ ಕಮ್ಮಿಯೇ. ಈ ಸರ್ಕಾರ ಹೇಗೆ ಕಾನೂನುಗಳನ್ನು ಕಡೆಗಣಿಸಿ ವಿವಿಧ ಜನಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನ ಕಡಿಮೆ ಮಾಡುತ್ತಿದೆ ಎಂಬುದನ್ನು ಖ್ಯಾತ ಮಾನವತಾವಾದಿ ಹರ್ಷ ಮಂದರ್ ಅಂಕಿಅಂಶಗಳ ಸಮೇತ ವಿವರಿಸಿದ್ದಾರೆ. ಅವರ ಲೇಖನದ ಭಾವಾನುವಾದ ಇಲ್ಲಿದೆ:

ಭಾರತದ ಸಂಸತ್ತು ಸೆಪ್ಟಂಬರ್ 2013ರಲ್ಲಿ ಅಂಗೀಕರಿಸಿದಂತಹ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಒಂದು ವರ್ಷದೊಳಗಾಗಿ ಅಂದರೆ ಸೆಪ್ಟಂಬರ್ 2014ಕ್ಕೂ ಮೊದಲೇ ಪೂರ್ತಿಯಾಗಿ ಜಾರಿಗೊಳಿಸಬೇಕಾಗಿತ್ತು. ಆದರೆ ಅದಿನ್ನೂ ಆಗಿಲ್ಲ. ಬದಲು ಅನೆಯ ತಾರೀಕನ್ನು ಮೂರು ಮೂರು ಬಾರಿ ಮುಂದೂಡಲಾಗಿದೆ. ಕಾಯ್ದೆಗೆ ತಿದ್ದುಪಡಿ ತರದೆ ಹೀಗೆ ಮುಂದೂಡುವುದು ಕಾನೂನುಬಾಹಿರವಾಗಿದೆ. ಎರಡನೆಯದಾಗಿ, ಬಜೆಟ್ಟಿನಲ್ಲಿ ಆಹಾರ ಸಬ್ಸಿಡಿಗೆಂದು ಇಂತಿಷ್ಟು ದುಡ್ಡನ್ನು ತೆಗೆದಿರಿಸಲಾಗಿದೆಯಾದರೂ ಇದು ಹೆಸರಿಗೆ ಮಾತ್ರ. ಕಾಯ್ದೆಯನ್ನು ದೇಶಾದ್ಯಂತ ಪೂರ್ತಿಯಾಗಿ ಅನುಷ್ಠಾನಗೊಳಿಸಲು ಈ ಮೊತ್ತ ಎಲ್ಲೆಲ್ಲಿಗೂ ಸಾಲದು. ವಾಸ್ತವ ಏನೆಂದರೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಶೇಕಡಾ 54 ಅನುದಾನ ಕಡಿತ ಆಗಿದೆ. ಶಾಲೆಗಳಲ್ಲಿ ನೀಡಲಾಗುವ ಬಿಸಿಯೂಟ ಕಾರ್ಯಕ್ರಮದ ನಿಧಿಯಲ್ಲಿ ಶೇಕಡಾ 30 ಕಡಿತ ಮಾಡಲಾಗಿದೆ.

ಹೆರಿಗೆ ಸೌಲಭ್ಯ ಯೋಜನೆಯಡಿ ಪ್ರತಿಯೊಬ್ಬ ಗರ್ಭಿಣಿ ಮಹಿಳೆಗೆ ನೀಡಬೇಕಿರುವ 6000 ರೂಪಾಯಿಗಳಿಗೆ ಕನ್ನಹಾಕಿ ಅವರಿಗೆ ತೀರಾ ಅತ್ಯಲ್ಪ ಮೊತ್ತವನ್ನು ಒದಗಿಸಲಾಗಿದೆ.

2009ರ ಶಿಕ್ಷಣ ಹಕ್ಕು ಕಾಯ್ದೆಯ ವಿಚಾರದಲ್ಲೂ ಇದೇ ಕತೆ ಪುನರಾವರ್ತನೆಯಾಗಿರುವುದನ್ನು ಕಾಣಬಹುದು. ಈ ಬಾರಿ ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮಕ್ಕೆ ಕಳೆದ ಬಾರಿಗಿಂತಲೂ 20% ಕಡಿಮೆ ಅನುದಾನ ನೀಡಲಾಗಿದೆ.

ಸಾರ್ವಜನಿಕ ಆರೋಗ್ಯದ ವಿಷಯಕ್ಕೆ ಬಂದರೆ ಮೊದಲೇ ಕಡಿಮೆ ಇದ್ದ (ಜಿಡಿಪಿಯ ಶೇಕಡಾ 1.25ರಷ್ಟು) ಅನುದಾನಕ್ಕೆ ಮತ್ತಷ್ಟು ಕತ್ತರಿ ಪ್ರಯೋಗವಾಗಿದೆ. ಪರಿಣಾಮವಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಬಡವರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಲಿದೆ. ಅವರ ಪಾಲಿಗೆ ಆರೋಗ್ಯ ಸೇವೆಗಳು ಗಗನ ಕುಸುಮವಾಗಿಯೇ ಉಳಿಯಲಿದೆ.

ಪಿಂಚಣಿ, ಕುಡಿಯುವ ನೀರು, ನೈರ್ಮಲ್ಯ, ಗ್ರಾಮೀಣ



ಭಾಗಗಳಲ್ಲಿ ಮೂಲಭೂತ ವ್ಯವಸ್ಥೆಗಳು, ನಗರ ನವೀಕರಣ ಮೊದಲಾದ ಸಾಮಾಜಿಕ ಕಾರ್ಯಕ್ರಮಗಳಿಗಾಗಿ ರಾಜ್ಯಗಳಿಗೆ ಒದಗಿಸಬೇಕಾದ ಮೊತ್ತದಲ್ಲಿಯೂ ಕಡಿತ ಮಾಡಲಾಗಿದೆ. ರಾಜ್ಯಗಳಿಗೆ ಬೇಕಾದ ಸಂಪನ್ಮೂಲವೆಲ್ಲ ಕೇಂದ್ರ ತೆರಿಗೆ ನಿಧಿಯಿಂದ ಒದಗಿಬರಲಿದೆ ಎಂಬ ಮೊಂಡುವಾದವೊಂದನ್ನು ಮುಂದಿಡಲಾಗಿದೆ. ಮೋದಿ ಸರ್ಕಾರದ ಈ ವಾದದಲ್ಲಿ ಪ್ರಾಮಾಣಿಕತೆ ಇಲ್ಲ, ನಿಜ ಹೇಳಬೇಕೆಂದರೆ ವಂಚನೆ ಇದೆ. ಕಾರಣ ಇಲ್ಲಿದೆ: ಅತ್ತ ರಾಜ್ಯಗಳಿಗೆ ವಿತರಿಸಲಾಗುವ ತೆರಿಗೆ ಮೊತ್ತವನ್ನು ಏರಿಸಲಾಗಿದ್ದರೂ ಇತ್ತ ಕೇಂದ್ರ ನೇರವಾಗಿ ನೀಡುವ ವಿತ್ತೀಯ ಸಹಾಯಧನದಲ್ಲಿ ಇಳಿಕೆಯಾಗಿದೆ. ಆದುದರಿಂದ ಅಂತಿಮವಾಗಿ ರಾಜ್ಯಗಳಿಗೆ ದೊರೆಯುವ ಮೊತ್ತದಲ್ಲಿ ವಿಶೇಷ ಬದಲಾವಣೆಯಾಗಿಲ್ಲ. ಇನ್ನೊಂದು ಗಮನಾರ್ಹ ವಿಷಯವೆಂದರೆ ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳ ಸಿಬ್ಬಂದಿಯ ವೇತನಗಳಿಗೆ ಕೇಂದ್ರದ ಕಡೆಯಿಂದ ಇದುವರೆಗೆ ನೀಡಲಾಗುತ್ತಿದ್ದ ಸಹಾಯಧನವನ್ನು ಕೂಡ ನಿಲ್ಲಿಸಲಾಗಿದೆ.

ಮೋದಿ ಸರ್ಕಾರವೀಗ ತಣ್ಣಗೆ ಮನರೇಗಾ ಕಾರ್ಯಕ್ರಮಕ್ಕೆ ಇತಿಶ್ರೀ ಹಾಡುವ ವ್ಯವಸ್ಥಿತ ಹುನ್ನಾರವೊಂದಕ್ಕೆ ಚಾಲನೆ ನೀಡಿದೆ. 2015ರ ಮೊದಲ ಮೂರು ತಿಂಗಳುಗಳಲ್ಲಿ ಮನರೇಗಾದಡಿ ಒದಗಿಸಲಾಗಿರುವುದು ಕೇವಲ ಸುಮಾರು 34 ಕೋಟಿ ಮಾನವ ದಿನಗಳಷ್ಟು ಕೆಲಸ. ಕಳೆದ ಎರಡು ವರ್ಷಗಳ ಇದೇ ಅವಧಿಗಳಿಗೆ ಹೋಲಿಸಿದಾಗ ಮಾನವ ದಿನಗಳಲ್ಲಿ ಕಡಿತ ಮಾಡುತ್ತಿರುವ ಷಡ್ಯಂತ್ರ ಬಯಲಾಗುತ್ತದೆ. 2013ರಲ್ಲಿ ಇದು ಸುಮಾರು 57 ಕೋಟಿಯಷ್ಟಿದ್ದರೆ 2014ರಲ್ಲಿ ಸುಮಾರು 68 ಕೋಟಿಯಷ್ಟಿತ್ತು.

ರಾಜ್ಯಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ. ಪರಿಣಾಮವಾಗಿ ಕಳೆದ ವರ್ಷ ಶೇಕಡಾ 70ಕ್ಕೂ ಅಧಿಕ ಕಾರ್ಮಿಕರ ವೇತನ ವಿತರಣೆಯಲ್ಲಿ 15 ದಿನಗಳಿಗಿಂತ ಜಾಸ್ತಿ ವಿಳಂಬವಾಗಿದೆ. ನಿಧಾನವಾಗಿ ಕೇಂದ್ರದ ಆರ್ಥಿಕ ಸಹಾಯವನ್ನು ನಿಲ್ಲಿಸುವುದೇ ಇದರ ಉದ್ದೇಶವಾಗಿದೆ.

ಮೋದಿ ಸರ್ಕಾರ ಹೀಗೆ ಸಮಾಜಕಲ್ಯಾಣ ಕಾರ್ಯಕ್ರಮಗಳಿಂದ ಹಿಂದಕ್ಕೆ ಸರಿಯುತ್ತಿರುವುದರ ಅಂತಿಮ ಪರಿಣಾಮಗಳೇನು?

- ಗರ್ಭಿಣಿ ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಠಿಕತೆ ಇನ್ನಷ್ಟು ಹೆಚ್ಚಲಿದೆ.
- ಇವತ್ತು ಬಡ ಮತ್ತು ತಳವರ್ಗಗಳ ಮಕ್ಕಳಿಗೆಂದೇ ಆಗಿರುವ ಸರ್ಕಾರಿ ಶಾಲೆಗಳನ್ನು ನಡೆಸುವುದು ತೀರಾ ದುಸ್ತರವಾಗಲಿದೆ.
- ಈಗಾಗಲೆ ಕುಂಟುತ್ತಿರುವ ಗ್ರಾಮೀಣ ಆರೋಗ್ಯಸೇವೆ ಸಂಪೂರ್ಣವಾಗಿ ನೆಲಕಚ್ಚಲಿದೆ.
- ಮನರೇಗಾ ಯೋಜನೆ ಒದಗಿಸುತ್ತಿರುವ ಭದ್ರತೆ ಕಡಿಮೆಯಾಗಿ ಹಳ್ಳಿಗಳಲ್ಲಿ ನಿರುದ್ಯೋಗ, ಹಸಿವು, ಸಾಲದ ಹೊರೆ ಮತ್ತು ವಲಸೆ ಹೋಗುವಿಕೆ ಹೆಚ್ಚಲಿದೆ.

ಎರಡು ವಿಧದ ಪ್ರಭುತ್ವಗಳಿವೆ. ಒಂದು, ಪ್ರತಿಕೂಲ ಪರಿಸ್ಥಿತಿಗಳಲ್ಲಿರುವ ಜನರ ಹಕ್ಕುಗಳನ್ನು ರಕ್ಷಿಸುವ ಪುನರ್ವಿತರಣಾ ಪ್ರಭುತ್ವ. ಇನ್ನೊಂದು ಜಾಗತೀಕರಣಗೊಂಡ ಮಾರುಕಟ್ಟೆ ಮತ್ತು ಖಾಸಗಿ ಹೂಡಿಕೆಯನ್ನು ಬೆಳೆಸುತ್ತ ಜನರಿಗೆ ಆರೋಗ್ಯಸೇವೆ, ಶಿಕ್ಷಣ, ಆಹಾರ ಮತ್ತು ಸಾಮಾಜಿಕ ಭದ್ರತೆಯನ್ನು ಖರೀದಿಸುವ ಶಕ್ತಿಯನ್ನು ಮಾರುಕಟ್ಟೆಯೇ ಒದಗಿಸುತ್ತದೆ ಎಂದು ನಂಬುವ ಪ್ರಭುತ್ವ. ಇವೆರಡೂ ಪ್ರಭುತ್ವಗಳ ನಡುವೆ ತೀವ್ರ ಪೈಪೋಟಿ ಇದೆ.

ಎರಡರ ಮಿಶ್ರಣವಾಗಿದ್ದ ಯುಪಿಎ ಸರ್ಕಾರ ಮಾರುಕಟ್ಟೆ ಆರ್ಥಿಕತೆಯ ನೀತಿಗೆ ಹೆಚ್ಚು ಒತ್ತು ನೀಡಿದರೂ ಅದರ ದುಷ್ಪರಿಣಾಮಗಳನ್ನು ನಿವಾರಿಸಲೆಂದು ಕೆಲವು ಜನಕಲ್ಯಾಣ ಯೋಜನೆಗಳನ್ನು ಹಾಕಿಕೊಂಡಿತ್ತು. ಇದರಿಂದ ಅಂಚಿನಲ್ಲಿರುವವರಿಗೆ, ಅವಕಾಶವಂಚಿತರಿಗೆ ಸ್ವಲ್ಪ ಮಟ್ಟಿನ ಪ್ರಯೋಜನಗಳಾಗಿವೆ. ಆದರೂ ಅದು ಇದಕ್ಕಾಗಿ ವಿನಿಯೋಗಿಸಿದ ಮೊತ್ತ ಏನೇನೂ ಸಾಲದು.

ಆದರೆ ಮೋದಿ ಸರ್ಕಾರ ನೂರಕ್ಕೆ ನೂರರಷ್ಟು ಮಾರುಕಟ್ಟೆ-ಸ್ನೇಹಿಯಾಗಿದೆ. ಅಂತೆಯೇ ಅದೀಗ ಜನಕಲ್ಯಾಣ ಕಾರ್ಯಕ್ರಮಗಳ ಕೊರಳನ್ನು ನಿಧಾನವಾಗಿ ಕುಯ್ಯತೊಡಗಿದೆ. ಇನ್ನೊಂದೆಡೆ ಕಾರ್ಮಿಕ ಕಾಯ್ದೆ, ಭೂಸ್ವಾಧೀನ ಕಾಯ್ದೆಗಳಿಗೆ ತಿದ್ದುಪಡಿ ತರುವ ಮೂಲಕ ಸರ್ಕಾರದ ನೀತಿಗಳ ಮೇಲೆ ಕಾರ್ಪೋರೇಟ್ ಹಿಡಿತವನ್ನು ಇನ್ನಷ್ಟು ಬಲಪಡಿಸುತ್ತಿದೆ. ಪರಿಣಾಮವಾಗಿ ಭಾರತದ ಕೋಟ್ಯಂತರ ಬಡಬಗ್ಗರು ಅನುಭವಿಸುತ್ತಿರುವ ಉಪೇಕ್ಷೆ ಮತ್ತು ಸಂಕಷ್ಟಗಳು ದಿನೇದಿನೇ ಹೆಚ್ಚುತ್ತಲೇ ಹೋಗಲಿವೆ."

ಮೋದಿಯ ಬೂಸಿಗಳನ್ನು ನಂಬಿ ಮತ ಹಾಕಿದ ಬಡವರು, ರೈತರು, ಕಾರ್ಮಿಕರು ಮತ್ತಿತರರು ಇನ್ನಾದರೂ ಎಚ್ಚೆತ್ತುಕೊಂಡಾರೇ?

(ಹರ್ಷ ಮಂದರ್ ಲೇಖನ ಹಿಂದುಸ್ತಾನ್ ಟೈಮ್ಸ್ ಕೃಪೆ)

ಜಡ್ಜಿಗಳೂ ಅರ್ಥ್‌ಮೆಟಿಕ್ಸ್‌ನಲ್ಲಿ ವೀಕಂತೆ

ಆದಾಯಕ್ಕಿಂತ ಮಿಗಿಲಾದ ಆಸ್ತಿ ಮಾಡಿದ್ದಾರೆ ಅಂತ ವಿಶೇಷ ನ್ಯಾಯಾಲಯ ಜೆ. ಜಯಲಲಿತಾ ಎಂಬ ಜಯಲಲಿತಾ ಎಂಬಾಕೆ ಬಂಗಾರ ಅಲ್ಲ, ಕಾಗೆ ಬಂಗಾರ ಅಂತ ತೀರ್ಮಾನಿಸಿ ಶಿಕ್ಷೆ ವಿಧಿಸಿತ್ತಲ್ಲ, ಅದು ಅಸರಿಯೇ ಲ್ಲಂತೆ ಕಣ್ರೀ. ಅವರು ಅಪ್ಪಟ ಬಂಗಾರನೇ ಅಂತೆ. ಸ್ತಿ ಪಾಲಿ ಇಂತಹವುಗಳ ಲೆಕ್ಕಾಚಾರ ಮಾಡುವಾಗ ಜಡ್ಜ್ ತಪ್ಪು ಮಾಡಿದ್ರಂತೆ. ಛೇ ಹಿಂಗಾಗಬಾರದು ಅಂತಾವ ರ್ನಾಟಕದ ಹೈಕೋರ್ಟು ಕರೆಕ್ಟಾಗಿ ಲೆಕ್ಕಾಚಾರ ಮಾಡಿ ಅವರು ಇಷ್ಟತ್ತಾಲ್ಕು ಕ್ಯಾರೆಟ್ ಚಿನ್ನವೇಯ; ಪುರಚ್ಚಿ ತಲೈವಿ ಯಾವ ಅಪರಾಧನೂ ಮಾಡಿಲ್ಲ ಅಂತ ಕ್ಲೀನ್‌ಚಿಟ್ ಕೊಟ್ಟಿದೆ. ಆದರೆ ಇದೆಂಗಾಯ್ತದೆ ಇದು ಒಬ್ಬ ಜಡ್ಜ್ ...ಗೆ ಸಂಗಚ್ಚೆ ಅಂದ್ರೆ, ಇನ್ನೊಬ್ಬ ಜಡ್ಜ್ ಜಯಲಲಿತಾ ...ಗಿದ್ದ ಉಗುಳ್ಳೀ ಹಣ ಅಂದ್ಕೊಂಡು ತಪ್ಪಾಗೋಗದೆ ...ತಾನಪ್ಪ ಅಂತ ಸಾಮಾನ್ಯ ಜನ ಬೆಕ್ಕಸ ಬೆರಗಾಗಿದ್ದರೆ; ...ಷ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ವಿ. ಆಚಾರ್ಯ ಅವರು ...ಯಲಲಿತಾ ಅಪರಾಧಿ ಅನ್ನೋದರಲ್ಲಿ ಸಂಶಯಾನೆ ಇಲ್ಲ ...ತ ಕುಂತಿದ್ದಾರೆ. 'ಅದೆಂಗೆ, ಸಾರ್ ಹಿಂಗಾಗಿದೆ' ಅಂದ್ರೆ ...ವರು 'ಆಸ್ತಿ ಜಾಸ್ತಿ ಲೆಕ್ಕಾಚಾರ ಮಾಡೋದ್ರಲ್ಲಿ ...ಡವಟ್ಟಾಗಿದೆ. ಮೇಲ್ಮನವಿ ಸಲ್ಲಿಸಲೇಬೇಕು' ಅಂತಾರೆ. ...ತಾ ಇಂತೂ ಆಸ್ತಿಪಾಸ್ತಿ ಲೆಕ್ಕಾಚಾರದಲ್ಲಿ ಎಲ್ಲೋ ...ಡವಟ್ಟಾಗಿದೆ ಅಂದಂಗಾಯ್ತು, ಈ ಜಡ್ಜ್‌ಗಳೂ ನಮ್ಮಂಗೆ ಅರ್ಥ್‌ಮೆಟಿಕ್ಸ್‌ನಲ್ಲಿ 'ವೀಕ್'ರಬೇಕು. ಇರಲಿ.

ಇಲ್ಲಿ ಇದೆಂಗೋ ಆಯ್ತಲ್ಲ, ಇದು ರಾಜಕಾರಣಿಗಳಿಗೆ ...ಲ್ಲಿ, ತಮಿಳುನಾಡಿನವರಿಗೆ ಭಲೇ ಖುಷಿಗೆ ...ತಂತೆ. ತಮಿಳುನಾಡಿನಲ್ಲಿ ಅಧಿಕಾರ ಹಿಡಿಯೋ ...ನೋರು ಡಿಎಂಕೆ, ಎಐಎಡಿಎಂಕೆ ಮಾತ್ರ ಅಂತ.



ಒಂದಪ ಇವರು ಅಧಿಕಾರಕ್ಕೆ ಬಂದ್ರೆ ಇನ್ನೊಂದಪ ಅವರು ಬರ್ತಾರಂತೆ. ಈಗ ಜಯಲಲಿತಾ ಪಕ್ಷ ಅಧಿಕಾರದಲ್ಲಿದೆಯಲ್ವ. ಮುಂದಿನ ಸಲ ನಾವೇ ಗ್ಯಾರಂಟಿ ಅಂತಾವ ಡಿಎಂಕೆಯೋರು ತಿಳ್ಕೊಂಡಿದ್ರಂತೆ. ಈಗೇನಾಗಿದೆ ನೋಡಿ. ಜೈಲಿಗೆ ಹೋಗಿ ಬಿಡುಗಡೆಯಾಗಿ ಬಂದ ಜಯಲಲಿತಾ ಮೇಲೆ ಜನರ ಅನುಕಂಪ ಅನ್ನೋದು ಯದ್ವಾತದ್ವಾ ಆಗಿದೆಯಂತೆ. ಭ್ರಷ್ಟಾಚಾರ ಮಾಡಿ ಜೈಲಿಗೆ ಹೋದ್ರೆ ಆಕ್ರೋಶ ಬರಬೇಕು. ಇಲ್ಲಿ ನೋಡಿದ್ರೆ ಅನುಕಂಪ ತೋರಿಸ್ತಿದಾರೆ. ಜನರ ಮುಂದೆ ಡಿಎಂಕೆಯೋರು 'ಅವರು ಜೈಲಿಗೆ ಹೋಗಿದ್ದು ಭ್ರಷ್ಟಾಚಾರದ ಆರೋಪದ ಮೇಲೆ' ಅಂದರೆ ಸಾಕು ಜನಾದ ಜನ ಎಲ್ಲ 'ಬಿಡೇಳು ಸಾಚಾನ. ನೀವು ನುಂಗಿದಷ್ಟೂ ಅಮ್ಮ ನುಂಗಿಲ್ಲಾ' ಅಂತ ಎಗರಿಬಿಗರಿ ಬೀಳ್ತಾರಂತೆ. ಹಿಂಗಾಗಿ ಡಿಎಂಕೆ ನಾಯಕರ ತಲೆ ಕೆಟ್ಟು ಕೆರ ಆಗಿದೆಯಂತೆ.

ಡಿಎಂಕೆ ಕತೆ ಹಿಂಗಾಯ್ತಲ್ಲ, ಇನ್ನು ಭಾಜಪ ಕತೆ ನೋಡಿ. ಡಿಎಂಕೆ ಅನ್ನೋದು ಹೇಳಿಕೇಳಿ 'ಕಡವಳಿಲ್ಲೆ, ಕಡವಳಿಲ್ಲೆ, ಕಡವಳ್ ಇಲ್ಲವೇ ಇಲ್ಲೆ' ಅನ್ನೋರ ಪಕ್ಷ. ಅಮ್ಮನ ಪಕ್ಷವೂ ಅದರ ಕುಡಿಯೇ ಆದರೂ ಈ ಅಮ್ಮ ದೇವರು ದಿಂಡಿರಗೆ ಅಡ್ಡ ಬೀಳೋಳು. ಅವಳು ಹೆಂಗಿದ್ರೂ ಜೈಲಲ್ಲವ್ಳೆ, ಈಗ ಒಂದು ನಿರ್ವಾತಸ್ಥಿತಿ ಉಂಟಾಗಿದೆ. ಆಸ್ತಿಕ ಸಮುದಾಯಗಳಿಗೆ ಬಲೆ ಬೀಸಲು ಇದೇ ಸಮಯ ಅಂತೆಲ್ಲ ಯೋಚಿಸಿ ಗಟ್ಟಿಯಾದ ಬಲೇನೆ ನೇಯ್ದಿದ್ದರಂತೆ. ಮಾತಿನ ಮೋಡೀಲಿ ಮತದಾರರನ್ನು ಕೆಡವಬೇಕು ಅಂತ ಯೋಚಿಸಿದ್ದರಂತೆ. ಮೋದಿ ಸರ್ಕಾರದ ಮಹತ್ ಸಾಧನೆಗಳನ್ನು ಬಲೂನ್‌ಗೆ ಬಣ್ಣ ಹಚ್ಚಿ ಹಾರಿಸಲು ಕೇಂದ್ರ ಸರ್ಕಾರದ ನಲವತ್ತು ಎರಡು ಮಂತ್ರಿಗಳನ್ನು ಆಹ್ವಾನಿಸಿದ್ದರಂತೆ. ದಿನಾಂಕಗಳೂ ನಿಶ್ಚಯ ಆಗಿದ್ದವಂತೆ. ಆದರೇನು ಮಾಡ್ತೀರಿ. ಜಯಲಲಿತಾ ಬಿಡುಗಡೆ ಆಗಿದೆ. ಅವರು ಜೈಲಿಗೆ ಹೋದಾಗ, ಬೇಲ್ ಮೇಲೆ ಬಿಡುಗಡೆ ಆದಾಗ, ಆರೋಪ ಮುಕ್ತರಾದಾಗ ಸೇರಿದ್ದ ಜನ ಅವರ ಹುಮ್ಮಸ್ಸು ನೋಡಿ ತಮಿಳುನಾಡಿಗೆ ಭೇಟಿ ನೀಡಬೇಕಾಗಿದ್ದ ಕೇಂದ್ರ ಮಂತ್ರಿಗಳು ಆ ಕಡೆ ತಲೆಹಾಕಿಯೂ ಮಲಗಲು ಸಿದ್ಧರಿಲ್ಲವಂತೆ. ಹಾರಾಡುತ್ತಿದ್ದ ಕಾರ್ಯಕರ್ತರು ಕಣ್ಣಾರೆಯಾಗಿದ್ದಾರಂತೆ. ತಮಿಳುನಾಡಿನ ಭಾಜಪ ಅಧ್ಯಕ್ಷ ತಮಿಳ್ ಇಸೈ ಸೌಂದರ ರಾಜನ್ ಜಯಲಲಿತಾ 'ಜನರ ಮುಖ್ಯಮಂತ್ರಿ' ಅಂತ ಅನಿವಾರ್ಯವಾಗಿ ಹೇಳಬೇಕಾಯಿತಂತೆ.

ಇನ್ನು ಸಿದ್ದರಾಮಯ್ಯನವರ ಕತೆ ನೋಡಿ. ಹೈಕೋರ್ಟಿನ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸೋಣ ಅಂದ್ರೆ ಕಾವೇರಿ ನೀರು ಕುಂತದೆ. ಅಯಮ್ಮ ಇನ್ನು ಏನು ಕಿತಾಪತಿ ಮಾಡ್ತಾಳೋ ಅನ್ನುವ ಅಳುಕು ಕಾಡುತ್ತಿರುವಂತಿದೆ. ಅದಕ್ಕೆ ಆ ಸುದ್ದಿ ಬಂದಾಗಲೆಲ್ಲ ಸಂಪೂರ್ಣವಾಗಿ ತೀರ್ಪಿನ ಪ್ರತಿ ನೋಡಿದ ನಂತರ ತೀರ್ಮಾನಿಸುತ್ತೇವೆ. ಕಾನೂನು ಪಂಡಿತರ ಜೊತೆ ಚರ್ಚಿಸುತ್ತೇನೆ. ಮಂತ್ರಿಮಂಡಲದಲ್ಲಿ ತೀರ್ಮಾನ ತೆಗೋತೀವಿ ಅಂತ ಸಬೂಬು ಹೇಳ್ತಾ ಕಾಲ ನೂಕ್ತಾ ಇರಂಗೆ ಆಗದೆ.

ಈಗ ಸಿದ್ದರಾಮಯ್ಯ ನೆರವಿಗೆ ಜೈರಾಮ್ ರಮೇಶ್ ಬಂದವ್ರೆ. ಮೂಲ ಅರ್ಜಿದಾರರು ಕಾಂಗ್ರೆಸ್‌ನೋರಲ್ಲ; ಭಾಜಪದವರು. ಅವರು ಮೇಲ್ಮನವಿ ಸಲ್ಲಿಸಬೇಕು. ಪ್ರಪಂಚದ ಎಲ್ಲಾ ವಿಷಯಗಳನ್ನು ಕುರಿತು ಪಂಡಿತ ವ್ಯಾಖ್ಯಾನ ನೀಡುವ ಅರುಣ್ ಜೇಟ್ಲಿ ಮತ್ತು ನರೇಂದ್ರ ಮೋದಿ ಎಂಬ ಸರ್ವ ವಿದ್ಯಾಪಾರಂಗತರು ಈ ವಿಷಯ ಪ್ರಸ್ತಾಪವನ್ನೇ ಮಾಡಿಲ್ಲವಲ್ಲ ಯಾಕೆ ಎಂದು ಪ್ರಶ್ನಿಸುತ್ತಾ ಅವರ ದಿವ್ಯ ಮೌನ ಭ್ರಷ್ಟಾಚಾರಕ್ಕೆ ಕೇಂದ್ರ ಸರ್ಕಾರದ ಸಮ್ಮತಿ ಇದೆ ಎಂಬ ಸಂಶಯವನ್ನು ಜನರ ಮನಸ್ಸಿನಲ್ಲಿ ಬಿತ್ತಿದ್ದಾರೆ.

ಜೈರಾಮ್ ರಮೇಶ್ ಅವರ ಮಾತುಗಳನ್ನು ಸಂಪೂರ್ಣವಾಗಿ ಒಪ್ಪುವ ಹಾಗಿಲ್ಲ. ಮೋದಿ ಈ ವಿಷಯದಲ್ಲಿ ಮೌನ ವಹಿಸಿದ್ದಾರೆ ಎಂಬುದು ಸುಳ್ಳು. ಜಯಲಲಿತಾ ಆರೋಪ ಮುಕ್ತರಾದಾಗ ಸನ್ಮಾನ್ಯ ಮೋದಿಯವರು ಅಭಿನಂದಿಸಿದ್ದಾರೆ! ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದಾಗಲೂ ಅದೇ ಮಾಡಿದ್ದಾರೆ!

ನರೇಂದ್ರ ಮೋದಿ ಹಾಗೂ ಜಯಲಲಿತಾ ಅವರ ರಾಜಕೀಯ ಬಾಂಧವ್ಯ ಸೊಗಸಾಗಿದೆ. ಹೀಗೆ ಇರುವುದು ಅನಿವಾರ್ಯವೂ ಹೌದು. ಜಯಲಲಿತಾ ಪಕ್ಷದ ಹತ್ತೊಂಬತ್ತು ಸದಸ್ಯರು ರಾಜ್ಯಸಭೆಯಲ್ಲಿದ್ದಾರೆ. ಅವರ ಸಹಾಯ ಮೋದಿಗೆ ಬೇಕು. ಮೇಲ್ಮನವಿ ಸಲ್ಲಿಸಿದಾಗ ಮೋದಿಯವರ ಸಹಾಯ ಜಯಲಲಿತಾಗೆ ಅನುಕೂಲ ಆಗಬಹುದು!

■ ...ಚಿತ್ರ

ನೇಪಾಳ ಭೂಕಂಪ ಮತ್ತು ಹೇಯ ಭಾರತೀಯರು

ಪ್ರಫುಲ್ ಬಿದ್ವಾಯಿ ಅವರು ನೇಪಾಳದಲ್ಲಿ ಭೂಕಂಪ ಸಂಭವಿಸಿದಾಗ ಭಾರತದ ಮಾಧ್ಯಮಗಳು ಪ್ರದರ್ಶಿಸಿದ ಅಹಂಕಾರವನ್ನು ಕೇಂದ್ರವಾಗಿರಿಸಿಕೊಂಡು ಬರೆದ ಲೇಖನದ ಅನುವಾದ ಇಲ್ಲಿದೆ.

8000 ಮಂದಿಯ ದಾರುಣ ಸಾವಿಗೆ ಕಾರಣವಾದ ಬೃಹತ್ ಭೂಕಂಪ ಸಂಭವಿಸಿ ಇನ್ನೇನು ಎರಡು ವಾರ ಕಳೆಯುತ್ತಿದೆ ಎನ್ನುವಾಗ ನೇಪಾಳ ಮತ್ತೆ ಶಕ್ತಿಶಾಲಿ ಪಶ್ಚಾತ್ ಕಂಪನಕ್ಕೆ ತುತ್ತಾಗಿದೆ. ಪರಿಣಾಮವಾಗಿ ಇನ್ನೂ 100ಕ್ಕೂ ಅಧಿಕ ಮಂದಿಯ ಸಾವಿನೊಂದಿಗೆ ನೇಪಾಳದ ಮುಗಿಯದ ಸಂಕಟಗಳಿಗೆ ಇನ್ನಷ್ಟು ಸೇರ್ಪಡೆಯಾಗಿದೆ. 35 ಲಕ್ಷಕ್ಕೂ ಅಧಿಕ ಮಂದಿ ಆಹಾರದ ನೆರವು ಎದುರುನೋಡುತ್ತಿದ್ದಾರೆ; 4,79,000 ಮನೆಗಳು ಧ್ವಂಸವಾಗಿವೆ; 2,63,000 ಮನೆಗಳು ಹಾನಿಯಾಗಿವೆ; ಅಲ್ಲದೆ, ನೇಪಾಳಕ್ಕೆ ಆಗತ್ಯವಿರುವ 415 ದಶಲಕ್ಷ ಡಾಲರ್ ಹಣಕಾಸು ನೆರವಿನ ಪೈಕಿ ಕೇವಲ 5% ಮೊತ್ತ ನೇಪಾಳವನ್ನು ತಲುಪಿದೆ. ಬಹುತೇಕ ಗುಡ್ಡಗಾಡಿನ ರಸ್ತೆಗಳು ಧ್ವಂಸವಾಗಿರುವುದರಿಂದ ಸಂತ್ರಸ್ತರಿಗೆ ಪರಿಹಾರ ಸಾಮಗ್ರಿಗಳನ್ನು ತಲಪಿಸುವುದು ಹೆಚ್ಚುಕಡಿಮೆ ಅಸಾಧ್ಯದ ಕೆಲಸವಾಗಿದೆ.

ಈ ಪಶ್ಚಾತ್ ಕಂಪನವು ನೇಪಾಳದೊಂದಿಗೆ ತನ್ನ ಒಗ್ಗಟ್ಟನ್ನು ಪ್ರದರ್ಶಿಸಲು ಭಾರತಕ್ಕೆ ಸಿಕ್ಕ ಒಂದು ಅದ್ಭುತ ಪರೀಕ್ಷಾ ಸಂದರ್ಭವಾಗಿದೆ. ಆದರೆ ಭಾರತ ಈ ಸವಾಲನ್ನು ಸ್ವೀಕರಿಸುವುದಿಲ್ಲ ಎನ್ನುವುದರಲ್ಲಿ ಅನುಮಾನವಿಲ್ಲ, ಯಾಕೆಂದರೆ ಏಪ್ರಿಲ್ 25ರ ತರುವಾಯ ಭಾರತದ ಎನ್ ಡಿ ಆರ್ ಎಫ್ ನಡೆಸಿದ ಪರಿಹಾರ ಕಾರ್ಯ 'ಆಪರೇಶನ್ ಮೈತ್ರಿ' (ಇದರ ಬಗ್ಗೆ ಭಾರತೀಯ ಮಾಧ್ಯಮಗಳು ಅತಿಯೆನಿಸುವಷ್ಟು ಪ್ರಚಾರ ನೀಡಿದ್ದವು) ನೇಪಾಳದಲ್ಲಿ ಕಹಿ ಅನುಭವವನ್ನು ಉಳಿಸಿಹೋಗಿದೆ. ಭೂಕಂಪದ ಮೊದಲ ವಾರದ ತರುವಾಯ ನೇಪಾಳದ ಸಾಮಾಜಿಕ ಮಾಧ್ಯಮಗಳಲ್ಲಿ 'ಗೋಹೋಮ್‌ಇಂಡಿಯನ್ ಮೀಡಿಯಾ' (ಭಾರತೀಯ ಮಾಧ್ಯಮಗಳೇ ಹೊರಟುಹೋಗಿ) ಎಂಬ ಸಂದೇಶ ವ್ಯಾಪಕವಾಗಿ ಹರಿದಾಡುತ್ತಿದೆ.

'ಮೊದಲ ಭೂಕಂಪದ ಬಗ್ಗೆ ನೇಪಾಳದ ಪ್ರಧಾನ ಮಂತ್ರಿ ಸುಶೀಲ್ ಕೊಯಿರಾಲರಿಗೆ ತಿಳಿದದ್ದು ತನ್ನ ಟ್ವಿಟ್ಟರ್ ಸಂದೇಶದ ಮೂಲಕ' ಎಂದು ಘೋಷಿಸುವ ಮೂಲಕ ಭಾರತೀಯ ಸೊಕ್ಕಿನ ಪ್ರದರ್ಶನಕ್ಕೆ ನಾಂದಿ ಹಾಡಿದ್ದು ಸ್ವತಃ ಪ್ರಧಾನಿ ನರೇಂದ್ರ ಮೋದಿ. ಭಾರತದ ಪ್ರಧಾನಿಯ ಈ ಮಾತು ನಿಜವೇ ಆಗಿದ್ದರೂ ನಿಶ್ಚಿತವಾಗಿಯೂ ಅದೊಂದು ವಿವೇಚನಾರಹಿತ ಕೆಲಸ ಎನ್ನಲೇಬೇಕಾಗುತ್ತದೆ. ತಾನೇನೂ ಕಡಿಮೆ ಇಲ್ಲ ಎಂಬಂತೆ ಸ್ವಪ್ರಶಂಸೆಯ ಅಖಾಡಕ್ಕೆ ಜಿಗಿದ ಹಣಕಾಸು ಸಚಿವ ಅರುಣ್ ಜೇಟ್ಲಿ 'ಭಾರತ ಈಗ ಪರಿಹಾರ ಕಾರ್ಯಾಚರಣೆಯಲ್ಲಿ ಮತ್ತು ಪರಿಹಾರ ಸಾಮಗ್ರಿ ತಲುಪಿಸುವಲ್ಲಿ ತಾನೊಂದು ಜಾಗತಿಕ ಮುಂದಾಳು ಎನ್ನುವಂತೆ ತನ್ನನ್ನು ನಿರೂಪಿಸಿಕೊಂಡಿದೆ' ಎಂದು ಕೊಚ್ಚಿಕೊಂಡರು.

ಅಸಲಿಗೆ, 700 ಮಂದಿಯ ಸದಸ್ಯರನ್ನು ಹೊಂದಿದ್ದ ನಮ್ಮ ಎನ್‌ಡಿಆರ್‌ಎಫ್ ತಂಡವು ಒಟ್ಟಾರೆಯಾಗಿ 4050 ಮಂದಿ ಸದಸ್ಯರನ್ನು ಹೊಂದಿದ್ದ 34 ಅಂತಾರಾಷ್ಟ್ರೀಯ ಪರಿಹಾರ ಕಾರ್ಯಾಚರಣಾ ತಂಡಗಳ ಪೈಕಿ ಒಂದು ತಂಡವಾಗಿತ್ತು ಅಷ್ಟೆ. ಎನ್‌ಡಿಆರ್‌ಎಫ್‌ನ ಮುಖ್ಯಸ್ಥ ಒ.ಪಿ.ಸಿಂಗ್ ಪ್ರಕಾರ ಕಾರ್ಯಾಚರಣಾ ತಂಡಗಳು ಅವಶೇಷಗಳ ಅಡಿಯಿಂದ 20 ಮಂದಿಯನ್ನು ಜೀವಂತ ಹೊರತೆಗೆಯುವಲ್ಲಿ ಮತ್ತು 133 ಮೃತದೇಹಗಳನ್ನು ಹೊರ ತೆಗೆಯುವಲ್ಲಿ ಯಶಸ್ವಿಯಾದವು (ಇಂಡಿಯನ್ ಎಕ್ಸ್‌ಪ್ರೆಸ್, ಮೇ 9). ಆದರೆ ನೇಪಾಳದ ಬೃಹತ್ ನೆರೆಯ ದೇಶವಾಗಿ ಭಾರತ ಈ ಎಲ್ಲದರ ಕೀರ್ತಿಯನ್ನು ತಾನೇ ತೆಗೆದುಕೊಳ್ಳಬಯಸಿತ್ತು!


ಸುದ್ದಿ ಪ್ರಸಾರದಲ್ಲಿ ಭಾರತೀಯ ಮಾಧ್ಯಮಗಳ 'ಕರ್ಕಶ ಸದ್ದು, ಅಬ್ಬರದ ದೇಶಭಕ್ತಿ ಪ್ರದರ್ಶನ, ಅತಿಶಯೋಕ್ತಿ ಸಂವೇದನಾಹೀನತೆ ಮತ್ತು ಕೆಲವೊಮ್ಮೆ ಅಚಾತುರ್ಯಗಳು ನೇಪಾಳದ ಇಡಿಯ ಸಮುದಾಯದಲ್ಲಿ ಅಸಮಾಧಾನದ ಅಲೆ ಎಬ್ಬಿಸಿತು' ಎಂದು ಹಿಮಾಲ್ ಮ್ಯಾಗಜೀನ್‌ನ ಸಂಪಾದಕ ಕನಕ್ ಮಣಿ ದೀಕ್ಷಿತ್ ಬಿಬಿಸಿಗೆ ಹೇಳಿದರು. ದುರಂತ ಸಂದರ್ಭದ ಪರಿಹಾರ ಕಾರ್ಯಾಚರಣೆಯನ್ನು ಭಾರತೀಯ ಮಾಧ್ಯಮಗಳು ಭಾರತ ಸರಕಾರದ ಪರವಾಗಿ ಹೈಜಾಕ್ ಮಾಡಿದವು ಮತ್ತು ಅದರ ಬಗ್ಗೆ ವಿಪರೀತ ಕೊಚ್ಚಿಕೊಳ್ಳತೊಡಗಿದವು. ನೇಪಾಳದ ಜನತೆಯ ಯಾತನೆ, ಘನತೆಯೊಂದಿಗೇ ಅವರು ದುರಂತವನ್ನು ಎದುರಿಸಿದ್ದ



ರೀತಿ ಹಾಗೆಯೇ ಅವರ ಕೆಚ್ಚನ್ನು ಅವು ನಾಚಿಕೆಯಿಲ್ಲದೆ ಕಡೆಗಣಿಸಿದವು.

ಭಾರತೀಯ ಮಾಧ್ಯಮಗಳ 'ತಮ್ಮನ್ನು ತಾವು ಅಭಿನಂದಿಸಿಕೊಳ್ಳುವ' ಮತ್ತು 'ವಿಜಯಶಾಲಿ ಎಂದು ಬಿಂಬಿಸಿಕೊಳ್ಳುವ' ಸಂದೇಶದೊಂದಿಗೆ ಮಾನವಯಾತನೆಯ ಬಗೆಗಿನ ತೀವ್ರ ತಾತ್ಸಾರವೂ ಸೇರಿಕೊಂಡಿತು. ನೇಪಾಳಕ್ಕೆ ಹಾರಿದ ಹೆಲಿಕಾಪ್ಟರ್‌ಗಳಲ್ಲಿ ವೈದ್ಯಕೀಯ ಸಿಬ್ಬಂದಿಯನ್ನಾಗಲಿ, ಆಹಾರ ಅಥವಾ ಪರಿಹಾರ ಸಾಮಗ್ರಿಯನ್ನಾಗಲಿ ಒಯ್ಯುವ ಬದಲು ಭಾರತೀಯ ಪತ್ರಕರ್ತರನ್ನು ಒಯ್ಯಲಾಯಿತು!

ಅನೇಕ ಭಾರತೀಯ ವರದಿಗಾರರು ತಾವು ಕಂಡ ಹಾನಿಯ ವಿಚಾರದಲ್ಲಿ ಸಂವೇದನಾಹೀನರಾಗಿದ್ದು, ಅವರು ಯುದ್ಧಕಾಲದಲ್ಲಿ ಸಮರ ವಾಹನಗಳಲ್ಲಿ ಅವಿತು ಸಾಗುವ ಪತ್ರಕರ್ತರಂತೆ ನಡೆದುಕೊಂಡರು. ನೇಪಾಳಿ ಜನತೆಯ ಯಾತನೆ ಅವರ ವರದಿಗಳ ಪಾಲಿಗೆ ಸಹಾನುಭೂತಿಪೂರ್ಣವಾಗಿ ತಲಪಿಸತಕ್ಕ ಪ್ರಧಾನ ಕಥಾನಕವಾಗಿರಲಿಲ್ಲ, ಬದಲಿಗೆ



ಭಾರತೀಯ ಸರಕಾರದ ಔದಾರ್ಯವನ್ನು ಅಹಂಕಾರದಿಂದ ವರದಿ ಮಾಡಲಾಯಿತು. ಒಬ್ಬ ವರದಿಗಾರನಂತೂ ಆಸ್ಪತ್ರೆಯೊಂದರ ಜನರಲ್ ವಾರ್ಡ್‌ಗೆ ನುಸುಳಿ, ಕೈಕಾಲು ಮುರಿದುಕೊಂಡು, ತಲೆ ಒಡೆದುಕೊಂಡು ಮಲಗಿದ್ದ ಬಾಲಕನಿದ್ದ ಬೆಡ್ ಬಳಿ ಕುಳಿತು ತನ್ನ ಕತೆಯನ್ನು ಹೇಳಿಕೊಳ್ಳುವಂತೆ ಆತನನ್ನು ಒತ್ತಾಯಿಸಿದ್ದ; ಆ ಬಾಲಕನ ದುಸ್ಥಿತಿಯ ಬಗ್ಗೆ ಕಿಂಚಿತ್ತೂ ಕಾಳಜಿ ಆತನಲ್ಲಿರಲಿಲ್ಲ!

ಭಾರತೀಯ ಮಾಧ್ಯಮಗಳ ಈ ಒಡ್ಡತನದ ನಡವಳಿಕೆಯನ್ನು ಮೂರು ಅಂಶಗಳು ವಿವರಿಸುತ್ತವೆ: ದುರಭಿಮಾನದಿಂದ ಕೂಡಿದ ರಾಷ್ಟ್ರೀಯತಾವಾದ, ಚೀನಾದೊಂದಿಗೆ ಸ್ಪರ್ಧಾತ್ಮಕ ಮೇಲಾಟ ಮತ್ತು ನೇಪಾಳಿ ಜನತೆ, ಸಮಾಜ ಮತ್ತು ಸಂಸ್ಕೃತಿಯ ವಿಚಾರಕ್ಕೆ ಬಂದಾಗ 'ತಾವೇ ಮೇಲು' ಎಂದು ತೋರಿಸಿಕೊಳ್ಳುವ ಮನೋಭಾವ. ಸದರಿ ಮಾಧ್ಯಮಗಳು ಭಾರತೀಯ ಮಧ್ಯಮ ವರ್ಗ, ಅದರಲ್ಲೂ ವಿಶೇಷವಾಗಿ ಆದರ ಉದಾರ, ಕೊಳ್ಳುಬಾಕ ಮೇಲ್ವರ್ಗವು ಮೈಗೂಡಿಸಿಕೊಂಡ ತೀವ್ರಸ್ವರೂಪದ ಮತ್ತು ಆಕ್ರಮಣಕಾರಿಯಾದ 'ಮೇರಾ ಭಾರತ್ ಮಹಾನ್' ರಾಷ್ಟ್ರೀಯತಾವಾದವನ್ನು ಬಿಂಬಿಸುತ್ತವೆ. ಈ ವರ್ಗವು ದುರಾಸೆಯನ್ನು ಒಂದು ಒಳ್ಳೆಯ ಗುಣ ಎಂದು ಪರಿಗಣಿಸುತ್ತದೆ; ಸಾಮಾನ್ಯ ನಾಗರಿಕರಿಂದ ಮಾನಸಿಕವಾಗಿ ದೂರ ಸರಿದಿದೆ ಹಾಗೂ ಬಡವರನ್ನು ಸ್ವತಃ ಒಂದು ಅಡ್ಡಿ ಎಂಬಂತೆ ನೋಡುತ್ತದೆ.

ಭಾರತವು ಒಂದು ಮಹಾನ್ ಶಕ್ತಿಯಾಗಿ ಹೊರಹೊಮ್ಮುವುದು ಖಂಡಿತ ಎಂಬ ತಪ್ಪು ಚಿಂತನೆಗೆ ಅನೇಕ ಅಂಶಗಳು ಕಾಣಿಕೆ ನೀಡಿದ್ದು, ಅದನ್ನು ಗೌರವಿಸುವ ಬದಲು ಅದರ ಬಗ್ಗೆ ಭಯ ಪಡುವ ಅಗತ್ಯವಿದೆ. ಇವುಗಳಲ್ಲಿ ವಿಪರೀತ ರಾಷ್ಟ್ರೀಯತಾವಾದಿ ಪಠ್ಯಕ್ರಮ (ಇದು ಭಾರತವನ್ನು ಮಹಾನ್ ನಾಗರಿಕತೆ ಎಂದು ಬಿಂಬಿಸುತ್ತದೆ), ಒಡ್ಡೊಡ್ಡಾದ ಬಲಪಂಥೀಯ ಸಾರ್ವಜನಿಕ ಸಂಕಥನ ಮತ್ತು ಒಂದು ಆರ್ಥಿಕ ಶಕ್ತಿಯಾಗಿ ಭಾರತದ ಇತ್ತೀಚಿನ ಉದಯ ಮೊದಲಾದವುಗಳನ್ನು ಒಳಗೊಂಡಿದೆ.

ಚೀನಾದ ವಿಚಾರವನ್ನೇ ತೆಗೆದುಕೊಳ್ಳಿ. 1962 ರಲ್ಲಿ ಅಮಾಯಕ ಭಾರತಕ್ಕೆ ಅವಮಾನಕಾರಿ ಸೋಲನ್ನು ಉಣಿಸಿದ ಮತ್ತು ಭಾರತದ ಭೂಭಾಗವನ್ನು ಕಸಿದುಕೊಂಡ ಚೀನಾವನ್ನು ಒಂದು ವೈರಿದೇಶ ಎಂದು ನೋಡಲಾಗುತ್ತಿದೆ. ಭಾರತವು ಟಿಬೆಟ್ ಪ್ರತ್ಯೇಕತಾವಾದವನ್ನು ಬೆಂಬಲಿಸಿತು, ಮೆಕ್‌ಮೋಹನ್ ರೇಖೆಯಂತಹ ಸಾಹತುಶಾಹಿ ಪೂರ್ವ ನಿದರ್ಶನವನ್ನು ಉಲ್ಲೇಖಿಸುತ್ತಾ ಚೈನಾದೊಂದಿಗೆ ಗಡಿ ಸಂಧಾನ ನಡೆಸಲು ನಿರಾಕರಿಸಿತು ಮಾತ್ರವಲ್ಲ ದುಸ್ಸಾಹಸಕ್ಕೂ ಇಳಿಯಿತು. ಚೈನಾ ದಂಡನಾತ್ಮಕ ಕಾರ್ಯಾಚರಣೆಯ ಮೂಲಕ ಅದನ್ನು ಹಿಮ್ಮೆಟ್ಟಿಸಿತು.

ಕಾರ್ಯಾಚರಣೆ ಮುಗಿಯಿತು. ಚೀನೀ ಪಡೆಗಳು ಒಬ್ಬನೇ ಒಬ್ಬ ಯುದ್ಧಕೈದಿಯನ್ನು ತಮ್ಮೊಡನೆ ಒಯ್ಯದೆ ತಮ್ಮ ಮೂಲ ನೆಲೆಗೆ ಮರಳಿದವು. ಆ ತರುವಾಯ ಎರಡೂ ದೇಶಗಳು ಚೀನಾ ಮೊದಲು ಮುಂದಿಟ್ಟ ಸೂತ್ರದ ಅನುಸಾರ ಗಡಿ ಸಂಧಾನಕ್ಕೆ ಒಪ್ಪಿಕೊಂಡಿವೆ. ಭಾರತ ಮತ್ತು ಅದರ ಪ್ರಧಾನ ವ್ಯಾಪಾರ ಸಹಭಾಗಿಗಳಿಗಿಂತ ಬೇರೆಯದೇ ಆದ ಆರ್ಥಿಕ ಮತ್ತು ಸೇನಾ ಬಳಗದಲ್ಲಿದೆ ಚೀನಾ.

ಭಾರತವು ಅಂತಾರಾಷ್ಟ್ರೀಯವಾಗಿ ಚೀನಾದ ಉನ್ನತ ಸ್ಥಾನಮಾನವನ್ನು ಮಾನ್ಯ ಮಾಡುತ್ತದೆ; ಆದರೆ, ತನ್ನ ತಕ್ಷಣದ ನೆರೆಕರೆಯಲ್ಲಿ ಅಥವಾ 'ವ್ಯೂಹಾತ್ಮಕ ಹಿತ್ತಲಲ್ಲಿ' ಅದು ಹಾಗೆ ಮಾಡುವುದಿಲ್ಲ, ನೇಪಾಳದಲ್ಲಿ ಭಾರತದ ಅತಿ ಪ್ರಚಾರದ ಪರಿಹಾರ ಕಾರ್ಯಾಚರಣೆಗೆ ಒಂದು ಕಾರಣವೆಂದರೆ, ಚೀನಾಕ್ಕಿಂತ ತಾನೇ ಮೇಲು ಎಂದು ತೋರಿಸಿಕೊಳ್ಳುವುದು ಮತ್ತು ಭಾರತ ನಿಮಗೆ ಅನಿವಾರ್ಯ ಎಂಬ ಸಂದೇಶವನ್ನು ನೇಪಾಳಕ್ಕೆ ತಲುಪಿಸುವುದು. ಇದು ಅಂತಿಮವಾಗಿ ತೀವ್ರ ಸ್ವರೂಪದಲ್ಲಿ ತಿರುಗುಬಾಣವಾಯಿತು.

ಪಕ್ಷಪಾತದಿಂದ ಕೂಡಿದ ರಾಜಕೀಯ ವ್ಯವಹಾರಗಳನ್ನು

ಕುದುರಿಸುವುದು/ ಅಂತಹ ಕಾರ್ಯದ ಮಧ್ಯವ
ಕೆಲಸ ಮಾಡುವುದು, ನಿರ್ದಿಷ್ಟ ಆಳ್ವಿಕರ ವಿ
ಹೋರಾಟಗಳಿಗೆ ಕುಮ್ಮಕ್ಕು ನೀಡುವುದು, ನಿ
ವಿಧಿಸುವುದು (1988-89ರಲ್ಲಿ ನೇಪಾಳ ಚೀನಾ
ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳ ಬಯಸಿದಾಗ), ಅ
ಜನವಿರೋಧಿ ನದಿನೀರು ಹಂಚಿಕೆ ಒಪ್ಪಂದಗ
ಹೇರುವುದು- ಹೀಗೆ ಭಾರತವು ನೇಪಾಳದ ವ್ಯವಹಾರ
ಲೆಕ್ಕವಿಲ್ಲದಷ್ಟು ಬಾರಿ ಹಸ್ತಕ್ಷೇಪ ನಡೆಸಿದೆ.

ತಮ್ಮನ್ನು ವೈಸರಾಯ್‌ಗಳ ಹಾಗೆ ನೋಡಿಕೊಳ್ಳ
ಮತ್ತು ಅಲ್ಲಿನ ಸಾರ್ವಭೌಮ ಎನಿಸಿಕೊಂಡಿರುವ ಸರಕಾ
ಯಾವುದೇ ಬೃಹತ್ ಕಾರ್ಯನೀತಿ ನಿರ್ಧ
ತೆಗೆದುಕೊಳ್ಳುವ ಮುನ್ನ ತಮ್ಮ ಸಲಹೆ ಪಡೆಯಬ
ಎಂದು ಸಾಮಾನ್ಯವಾಗಿ ನೇಪಾಳದಲ್ಲಿರುವ ಭಾರತ
ರಾಯಭಾರಿಗಳು ಅಪೇಕ್ಷಿಸುತ್ತಾರೆ! 2006 ರಲ್ಲಿ
ಜನಾಂದೋಲನ ಎದುರಾದಾಗ ಅಧಿಕಾರ
ಉಳಿದುಕೊಳ್ಳಲು ರಾಜ ಜ್ಞಾನೇಂದ್ರನಿಗೆ ನೆರವಾಗ
ಮತ್ತು ಮುಂದೆ ಮಾವೋವಾದಿಗಳನ್ನು ಸರಕಾರ
ದೂರ ಇಡಲು ಯತ್ನಿಸುವಲ್ಲಿ ಭಾರತವು ಆಕ್ಷೇಪ
ಪಾತ್ರವನ್ನು ವಹಿಸಿತು. ಇದರ ಬಗ್ಗೆ ವ್ಯಾಪಕ ಅಸಮಾ
ವ್ಯಕ್ತವಾಯಿತು ಕೂಡಾ.

ವಿಷಾದದ ಸಂಗತಿ ಎಂದರೆ, ಅನೇಕ ಭಾರತೀಯ
ವಿಶೇಷವಾಗಿ ಮಧ್ಯಮ ವರ್ಗದ ಭಾರತೀಯರು, ನೇಪಾ
ವಿಚಾರಕ್ಕೆ ಬಂದಾಗ ತಾವು ಶ್ರೇಷ್ಠರು
ಮನೋಭಾವವನ್ನು ಹೊಂದಿರುತ್ತಾರೆ. ನೇಪಾಳಿ ಸ
ಮತ್ತು ಸಂಪ್ರದಾಯಗಳ ಬಗ್ಗೆ ಅವರಿಗಿರುವ ಅ
ಮತ್ತು ತಕ್ಕಮಟ್ಟಿನ ವರ್ಗ ಪಕ್ಷಪಾತ ಇದಕ್ಕೆ ಕಾ
ಇವರು ಮುಖಾಮುಖಿಯಾಗುವ ಬಹುತೇಕ ನೇಪಾ
ಬಡ ಕೂಲಿಕಾರರು. ನೇಪಾಳವು ಪುಟ್ಟ ಮತ್ತು
ದೇಶವಾಗಿರಬಹುದು. ಆದರೆ, ಅದರ ಜನತೆ
ಸಂಸ್ಕೃತಿ, ಅಸ್ಮಿತೆ ಮತ್ತು ಸ್ವಾಯತ್ತೆಯ ವಿಚಾರದಲ್ಲಿ ಅ
ಅಭಿಮಾನ ಹೊಂದಿದ್ದಾರೆ ಎನ್ನುವ ತಿಳಿವಳಿಕೆ ಅವರ

ನೇಪಾಳವು ತನ್ನ ಸಾಮಾನ್ಯ ಕಾಲಮಾನ
(ಸ್ಟಾಂಡರ್ಡ್ ಟೈಂ) ಗ್ರೀನ್‌ವಿಚ್ ಸರಾಸರಿ ಕಾಲಮಾನ
5.45 ಗಂಟೆ ಮುಂದಕ್ಕಿರಿಸಿಕೊಂಡಿದೆ. ಅದು ಭಾ
ಕಾಲಮಾನದೊಂದಿಗೆ 15 ನಿಮಿಷಗಳ ವ್ಯ
ಇರಿಸಿಕೊಂಡಿರುವುದಕ್ಕೆ ಮುಖ್ಯ ಕಾರಣ ಭೂಪ್ರ
ಕ್ಕಿಂತಲೂ ಹೆಚ್ಚಾಗಿ ಭಾರತದಿಂದ ಅದು ಕಾಪಾಡಿಕ
ಬಯಸುವ ಸಾಮಾಜಿಕ-ರಾಜಕೀಯ ಅಂತರ. ಇ
ಭಾರತೀಯರು ಒಪ್ಪಿಕೊಳ್ಳಬೇಕು ಮತ್ತು ಗೌರವಿಸಬೇ
ಆದರೆ ಅವರು ಹಾಗೆ ಮಾಡುವುದಿಲ್ಲ, ಇದು ಇ
ಅಸಮಾಧಾನವನ್ನು ಹುಟ್ಟುಹಾಕುತ್ತದೆ.

ಪಾಕಿಸ್ತಾನ ಮತ್ತು ಚೀನಾ ಹೊರತುಪಡಿಸಿ (
ಈ 'ಸ್ನೇಹೀ' ದೇಶಗಳಿಗಿಂತ ಬೇರೆಯೇ ವರ್ಗದಲ್ಲಿ ಬರು
ಇತರ ನೆರೆಹೊರೆಯ ದೇಶಗಳೊಂದಿಗೆ ಭಾರ
ಸಂಬಂಧಗಳು ಅಷ್ಟೇ ಅಸ್ವಸ್ಥರೂಪದಿಂದ ಕೂ
ಅಸಮಾನವಾಗಿವೆ ಮತ್ತು ಕೆಲವೊಮ್ಮೆ ಬಗುವಿ
ಕೂಡಿವೆ. ಬಾಂಗ್ಲಾ ದೇಶವನ್ನು ಸ್ವತಂತ್ರಗೊಳಿಸು
ಭಾರತವು ದೊಡ್ಡ ಮಟ್ಟದಲ್ಲಿ ಸಹಾಯಕ ಪಾತ್ರ
ವಹಿಸಿತೇನೋ ನಿಜ. ಆದರೆ, ಅದು ಮುಂದೆ ತ
ಆದ ಪ್ರಾಂತೀಯ ಅಜೆಂಡಾವನ್ನು ಅನುಸರಿಸಿತು. ಗ
ನದಿಗೆ ಫರಕ್ಕಾ ಅಣೆಕಟ್ಟೆ ನಿರ್ಮಿಸುವ ಮೂಲಕ ನದಿನ
ಹರಿವಿನ ವಿಚಾರದಲ್ಲಿ ಬಾಂಗ್ಲಾಕ್ಕೆ ಅನ್ಯಾಯ ಮಾಡಿ
ಮೇಲಣ ವಿಶ್ವಾಸವನ್ನು ಕ್ಷಿಪ್ರವಾಗಿ ಕಳೆದುಕೊಂಡಿತು

ಢಾಕ್ಕಾದೊಂದಿಗಿನ ಭೂ ಗಡಿ ಒಪ್ಪಂದಕ್ಕೆ
ಸೂಚಿಸಲು ಭಾರತವು 41 ವರ್ಷಗಳಷ್ಟು ದೀ
ಕಾಲವನ್ನು ತೆಗೆದುಕೊಂಡಿತು. ತೀಸ್ತಾ ನದಿನೀರು ಹಂ
ಒಪ್ಪಂದಕ್ಕೆ ಅದು ಇನ್ನೂ ಸಹಿ ಹಾಕಿಲ್ಲ, ಭಾರತ
ಪ್ರತಿಷ್ಠಿತರು ಸಾಕ್ಷರತೆ, ಆರೋಗ್ಯ ಮತ್ತು ಆಹಾರ ಭದ್ರ
ಕ್ಷೇತ್ರಗಳಲ್ಲಿ ಬಾಂಗ್ಲಾದೇಶದ ಇತ್ತೀಚಿನ ಸಾಧನೆಗ
ಗುರುತಿಸಲು ವಿಫಲರಾಗುತ್ತಾರೆ. ಅಲ್ಲದೆ, ಆ ದೇಶ
ಹಿಂದುಳಿದ, ತಮಗಿಂತ ಕೆಳಗಿರುವ ಒಂದು ದೇಶವೆಂ
ನಡೆಸಿಕೊಳ್ಳುತ್ತಾರೆ.

ಶ್ರೀಲಂಕಾ ಮತ್ತು ಮಾಲ್ದೀವ್ಸ್‌ಗಳಲ್ಲಿ ಭಾರತವು
ಹಸ್ತಕ್ಷೇಪ ಮಾಡಿದೆ ಮತ್ತು ರಾಜಕೀಯ ಅಸ್ಥಿ
ಕಾರಣವಾಗಿದೆ. ಆ ಮೂಲಕ ಅದು ತೊಡಕಿನಿಂದ ಕೂ
ಪರಿಸ್ಥಿತಿಯೊಂದನ್ನು ನಿರ್ಮಿಸಿತು. ಇದೇ ಪರಿಸ್ಥಿತಿ ಮ
ತಿರುಗುಬಾಣವಾಯಿತು. ಎಲ್‌ಟಿಟಿಇಯ ಪ್ರಕರಣ
ತೆಗೆದುಕೊಳ್ಳಿ. ಇದೇ ಎಲ್‌ಟಿಟಿಇಗೆ ಹಣಕಾಸು ನ
ನೀಡಿ, ಶಸ್ತ್ರಾಸ್ತ್ರ ಒದಗಿಸಿ ತರಬೇತಿ ನೀಡಿದ್ದು ಭಾ
ಮುಂದೆ ಎಲ್‌ಟಿಟಿಇ ಭಾರತದ ವಿರುದ್ಧವೇ ತಿರುಗಿ
ದುರಂತದಲ್ಲಿ ಕೊನೆಗೊಂಡ ಶಾಂತಿಪಾ
ಕಾರ್ಯಾಚರಣೆಗೆ ಭಾರತವನ್ನು ಎಳೆಯಿತು. ಅಂತಿಮ
ರಾಜೀವ್ ಗಾಂಧಿಯನ್ನು ಹತ್ಯೆ ಮಾಡಿತು. ತ

...ರ ವಿರುದ್ಧದ ರಾಜಪಕ್ಷೆ ಸರಕಾರ ನಡೆಸಿದ ಕ್ರೂರ ... ಕಾರ್ಯಾಚರಣೆಯ ಅತಿರೇಕದಲ್ಲೂ ಭಾರತ ...ನಾಯಿತು.

...ತಾನ್ ವಿಚಾರದಲ್ಲಿ ಮಾತ್ರ ಮಹಾಪ್ರಭುಶಾಹಿ ...ದಲೂ ಭಾರತವು ಒಂದು 'ಪರೋಕ್ಷ ರಕ್ಷಕ' ...ಬಂತೆ ಉಳಿದುಕೊಂಡುಬಂದಿದೆ. ಅದರೊಂದಿಗೆ ... ಸಂಬಂಧವನ್ನು ಹೊಂದಿದೆ. ಆದರೆ, ತನ್ನ ...ಖ್ಯೆಯ ಏಳನೇ ಒಂದರಷ್ಟಾಗುವ ಅಲ್ಪಸಂಖ್ಯಾತ ...ೀಯ ಗುಂಪುಗಳನ್ನು ಭೂತಾನ್ ಹೊರಹಾಕಿದಾಗ ... ತಡೆಯಲು ಭಾರತ ತನ್ನ ಪ್ರಭಾವವನ್ನು ಬಳಸಲೇ ...

...ಪಾಳ ಪರಿಹಾರ ಕಾರ್ಯಾಚರಣೆಯ ಪ್ರಕರಣವು ...ದು ಅಹಿತಕರ ಸತ್ಯವನ್ನೂ ಬಹಿರಂಗಪಡಿಸಿದೆ. ...ರೆಯ ದೇಶಗಳಲ್ಲಿ ಅನೇಕ ಭಾರತೀಯರ ...ಕೆಯು 'ಆಕ್ರಮಣಕಾರಿ ಗಂಡಸು ಗುಣದ್ದು', ...ಂಟತನದ್ದು', 'ಆಕ್ರಮಣಕಾರಿಯಾದುದು' ಮತ್ತು ...ರಾರ್ಹವೆನಿಸುವಷ್ಟು ಒರಟು' ಎನಿಸಿಕೊಂಡಿದೆ. ...ದೇಹಭಾಷೆಯು ಆಕ್ರಮಣಕಾರಿಯಾದುದು ಮತ್ತು ... ಬೀದಿ ನಡವಳಿಕೆಯು ಸಾಮಾನ್ಯವಾಗಿ ...ಗಿರುತ್ತದೆ.

...ರತ, ಅದರಲ್ಲೂ ಭಾರತದ ಮಧ್ಯಮವರ್ಗವು ...ಯ ಕಾದಂಬರಿಯೊಂದನ್ನು ಆಧರಿಸಿದ, ಮರ್ಲಿನ್ ...ೋ ಅಭಿನಯಿಸಿದ 'ದ ಅಗ್ಲಿ ಅಮೆರಿಕನ್' ಎಂಬ ...ರ ಪ್ರಸಿದ್ಧ ಸಿನಿಮಾದಲ್ಲಿ ಚಿತ್ರಿಸಲಾಗಿರುವ ರೀತಿಯಲ್ಲಿ ...ಕ್ಷಣೀಯವಾದ ಒಂದು ಕುಖ್ಯಾತಿಯನ್ನು ...ದ್ಯಂತ ಗಳಿಸುತ್ತಿದೆ.

... ಕಾದಂಬರಿಯಲ್ಲಿನ ಘಟನೆಗಳು ನಡೆಯುವುದು ...ದು ಏಷ್ಯಾದ ಒಂದು ಕಾಲ್ಪನಿಕ ರಾಷ್ಟ್ರದಲ್ಲಿ ...ಕ್ಷವಾಗಿ ವಿಯೆಟ್ನಾಮ್). ಅಮೆರಿಕನ್ ಅಧಿಕಾರಿಗಳ ...ಾಷೆ ಮತ್ತು ಸ್ಥಳೀಯ ಸಂಸ್ಕೃತಿಯನ್ನು ...ಮಾಡಿಕೊಳ್ಳುವಲ್ಲಿನ ಅವರ ವೈಫಲ್ಯದ ಕಾರಣ ...ಸಂ ವಿರುದ್ಧದ ಹೋರಾಟದಲ್ಲಿ ಅಮೆರಿಕ ...ವಿಸಿದ ಸೋಲನ್ನು ಅದು ವರ್ಣಿಸುತ್ತದೆ. ಆ ಏಷ್ಯನ್ ...ಲ್ಲಿ ಸದುದ್ದೇಶದಿಂದ ಕೂಡಿದ, ಹೊಸ ...ಧಿಕಾರಿಯೊಬ್ಬನ ತಪ್ಪು ತೀರ್ಮಾನ ಮತ್ತು ...ಾಚರಣೆಯನ್ನು ಶೀತಲ ಯುದ್ಧ ಎಂಬಂತೆ ನೋಡುವ ...ಗೀಳು ಹೇಗೆ ಒಂದು ರಾಜಕೀಯ ದುರಂತವನ್ನು ...ತ್ತದೆ ಎನ್ನುವುದನ್ನು ಆ ಸಿನಿಮಾ ತೋರಿಸುತ್ತದೆ. ...ಲ್ಲಿ ಉಲ್ಲೇಖಿಸಿದ ಹೋಲಿಕೆಯು ವಿಯೆಟ್ನಾಂ ಯುದ್ಧ ...ಗೊಂಡುದರ ಮತ್ತು ಆ ದೇಶದಿಂದ ಅಮೆರಿಕವು ...ಾನಕರ ರೀತಿಯಲ್ಲಿ ಹಿಂದೆ ಸರಿದುದರ (ಆದರೆ, ...ಕ್ಷ ನಾಗರಿಕರನ್ನು ಹತ್ಯೆ ಮಾಡಿ) 40ನೇ ...ಚರಣೆಯ ಸಂದರ್ಭದಲ್ಲೇ ಸಂಭವಿಸಿದೆ.

...ಭಿವೃದ್ಧಿ ಹೊಂದಿದ ಜಗತ್ತಿನಿಂದ ಇನ್ನೊಂದು ದೇಶಕ್ಕೆ ...ನೀಡುವ 'ಏರುದನಿಯ ಮತ್ತು ಪ್ರದರ್ಶನಪ್ರಿಯ' ...ಕ ಎಂಬುದನ್ನು ಉಲ್ಲೇಖಿಸಲು (ಈತನ ಉದ್ದೇಶ ...ದೇ ಇರಬಹುದು, ಆದರೆ ತನ್ನ ಅಹಂಕಾರ ಮತ್ತು ...ಮೆಯ ಭಾವನೆ ಮತ್ತು ಸಂವೇದನಾಹೀನ ಹಾಗೂ ...ರಿಕ ರೀತಿಯಲ್ಲಿ ವಡೆದುಕೊಳ್ಳುವ ಮೂಲಕ ...ನ್ನು ಆಹ್ವಾನಿಸುತ್ತಿರುತ್ತಾನೆ) 'ಹೇಯ ಅಮೆರಿಕನ್' ...ಮೇರಿಕನ್) ಎಂಬ ಪದ ತ್ವರಿತವಾಗಿ ಚಲಾವಣೆಗೆ ...

...ದೇಶಕ್ಕೆ ತೆರಳುವ ಅನೇಕ ಭಾರತೀಯರು ಅದರಲ್ಲೂ ...ಷವಾಗಿ ಹಣವಂತರು ಗಟ್ಟಿಯಾಗಿ ...ಾಡುವುದರಿಂದ, ತಮ್ಮ ಸೆಲ್ಯುಲರ್ ಫೋನ್‌ಗಳಲ್ಲಿ ...ನಿ ಹೊರಡಿಸುವ ರಿಂಗ್‌ಟೋನ್‌ಗಳನ್ನು ...ಸಿಕೊಳ್ಳುವುದರಿಂದ, ದೂರದಲ್ಲಿರುವ ಪರಸ್ಪರರು ...ಹಾಕಿ ಮಾತನಾಡುವುದರಿಂದ, ಧೂಮಪಾನ ನಿಷಿದ್ಧ ...ಗಳಲ್ಲಿ ಧೂಮಪಾನ ಮಾಡುವುದರಿಂದ ಮತ್ತು ...ಲ್ಲೋ ಅಥವಾ ತಮ್ಮ ಕೆಲಸದ ಸ್ಥಳದಲ್ಲೋ ...ವಂತೆ ಹೋದಲ್ಲೆಲ್ಲ ತ್ಯಾಜ್ಯ ಉಳಿಸಿಹೋಗುವುದರಿಂದ ... ಇಂತಹ ಹೆಸರು ಕೆಟ್ಟ ಗಳಿಸುತ್ತಿದ್ದಾರೆ. ಆಗ್ನೇಯ ...ಲ್ಲಿ ವಿಪರೀತ ಚೌಕಾಸಿ ಮಾಡುವದರಲ್ಲಿ ಈ ... ಮುಗಿದ ಬಳಿಕವೂ ರಿಯಾಯಿತಿಗಳನ್ನು ...ಸುವುದರಲ್ಲಿ ಇವರು ಕುಖ್ಯಾತಿ ಗಳಿಸಿದ್ದಾರೆ.

...ದು ಭಾರತದ 'ಮೃದು ಶಕ್ತಿ'ಯನ್ನು ...ಗೊಳಿಸುತ್ತದೆ ಅಥವಾ ಕನಿಷ್ಠಪಕ್ಷ ಅದಕ್ಕೊಂದು ...ರೂಪದ, ಅಹಿತಕರವಾದ ಆಯಾಮವನ್ನು ...ಗೊಳಿಸುತ್ತದೆ. 'ಹೇಯ ಭಾರತೀಯರ' ರಾಷ್ಟ್ರವು ... ಮೆಚ್ಚುಗೆಗೆ ಕಾರಣವಾಗದು ಮತ್ತು ಅದು ...ನ್ನು ದೂರ ಉಳಿಯುವಂತೆ ಮಾಡುತ್ತದೆ. ...ಯು ಒಂದು ಕ್ಷಣ ತಾಳ್ಮೆಯಿಂದ ಕುಳಿತು, ...ಕಾರ ತಪ್ಪಿ..., ಎಲ್ಲಿಗೆ ಒಯ್ಯುತ್ತದೆ ಎಂದು ...ಬೇಕು.

■ ಪ್ರಫುಲ್ ಬಿದ್ವಾಯಿ

[illegible] ಶ್ರೀನಿವಾಸ ಕಾರ್ಕಳ

'ಕ್ರಾಂತಿ ಇಲ್ಲದೆ ಜಾತಿ ವಿನಾಶವಿಲ್ಲ, ಜಾತಿ ವಿನಾಶವಿಲ್ಲದೆ ಕ್ರಾಂತಿ ಇಲ್ಲ'

ಸಂದರ್ಶನ

ಸಂದರ್ಶಕರು: ವಿಕಾಸ್ ಆರ್ ಮೌರ್ಯ

ಮೇಲಿನ ಅಂಬೇಡ್ಕರರ ಮಾತುಗಳನ್ನು ಧ್ಯೇಯವಾಗಿಟ್ಟುಕೊಂಡಿರುವ ಅವಿಭಜಿತ ಆಂಧ್ರಪ್ರದೇಶದ ಹೋರಾಟಗಾರರಾದ ದುದ್ದು ಪ್ರಭಾಕರ್ ಅವರು 1998 ರಿಂದ ಜಾತಿ ನಿರ್ಮೂಲನ ಹೋರಾಟ ಸಮಿತಿ (ಜಾತಿ ನಿರ್ಮೂಲನ ಹೋರಾಟ ಸಮಿತಿ) ಎಂಬ ಸಂಘಟನೆಯನ್ನು ಕಟ್ಟಿಕೊಂಡು ಜಾತಿವಿನಾಶದತ್ತ ಸಮಾನ ಮನಸ್ಕರನ್ನು ಒಂದುಗೂಡಿಸುತ್ತಿದ್ದಾರೆ. ಆಂಧ್ರಪ್ರದೇಶವನ್ನೇ ಬೆಚ್ಚಿ ಬೀಳಿಸಿದ್ದ ಕಾರಂಚೇಡು ದಲಿತರ ಮಾರಣಹೋಮಕ್ಕೆ ನ್ಯಾಯ ಸಿಗಲು ನಡೆಸಿದ ಹೋರಾಟದಲ್ಲಿ ಮುಂಚೂಣಿ ನಾಯಕರಾಗಿ ದುಡಿದಿದ್ದಾರೆ. ಅಂಬೇಡ್ಕರ್ ಮತ್ತು ಮಾರ್ಕ್ಸ್ ಐಡಿಯಾಲಜಿಗಳನ್ನು ಬೆಸೆಯಬೇಕೆಂಬ ಅದಮ್ಯ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ಭಾರತದಲ್ಲಿ ಜಾತಿ ಎಂಬುದೇ ಬಂಡವಾಳ ಎನ್ನುವ ಇವರು ಎಡಪಂಥೀಯರು ಮತ್ತು ಅಂಬೇಡ್ಕರ್‌ವಾದಿಗಳ ಬಗ್ಗೆ ತಮ್ಮದೇ ಆದ ವಿಶ್ಲೇಷಣೆಯನ್ನು ಹೊಂದಿದ್ದು ಇಬ್ಬರ ನ್ಯೂನತೆಗಳನ್ನು ನೇರ ನುಡಿಯಲ್ಲಿ ಟೀಕಿಸುತ್ತಾರೆ. ಇಂತಹ ವಿಚಾರವಾದಿಯ ಸಂದರ್ಶನ ಇಲ್ಲಿದೆ.

ಪ್ರಶ್ನೆ: ನಿಮ್ಮ ಹೋರಾಟದ ಹಾದಿಯ ಬಗ್ಗೆ ನಮಗೊಂದಿಷ್ಟು ಹೇಳಿ.

ಪ್ರಭಾಕರ್: ನಾನು ಪ್ರಕಾಶಂ ಜಿಲ್ಲೆಯವನು. ನನ್ನ



ಬಾಲ್ಯದ ಜೀವನ ಎಲ್ಲಾ ದಲಿತರಂತೆಯೇ ಇತ್ತು, ದಲಿತರ ಮೇಲಿನ ದೌರ್ಜನ್ಯಗಳನ್ನು ನೋಡಿ ಅಂಬೇಡ್ಕರ್ ಯುವಕ ಸಂಘ ಕಟ್ಟಿಕೊಂಡು ದೌರ್ಜನ್ಯದ ವಿರುದ್ಧ ಸಣ್ಣಪುಟ್ಟ ಧರಣಿ ಹೋರಾಟಗಳನ್ನು ಮಾಡಿಕೊಂಡು ನಮ್ಮವರನ್ನು ಎಚ್ಚರಿಸುತ್ತಿದ್ದೆವು. ಆದರೆ ಅದ್ಯಾವುದೂ ನನಗೆ ಸಮಾಧಾನ ತರುತ್ತಿರಲಿಲ್ಲ, ಅದಕ್ಕೆ ಕಾರಣ ನನ್ನ ಬಾಲ್ಯದ ಕಹಿ ಘಟನೆಗಳಿರಬಹುದು. ಒಮ್ಮೆ ನನ್ನ ಜೊತೆ ಓದುತ್ತಿದ್ದ ಬ್ರಾಹ್ಮಣ ಸ್ನೇಹಿತ ನೋಟ್ಸ್ ಕೊಡಲು ಮನೆಯ ಬಳಿ ಕರೆದುಕೊಂಡು ಹೋದ. ನಾನು ಅವನಿಗಾಗಿ ಕಾಯುತ್ತಾ ಅವರ ಮನೆಯ ಜಗುಲಿಯ ಮೇಲೆ ಕುಳಿತೆ. ಇದನ್ನು ಕಂಡ ಅವರ ತಂದೆ ಓಡಿಬಂದು ನನ್ನ ಹೊಟ್ಟೆಗೆ ಒದ್ದು ಕೆಡವಿದ. ಇದನ್ನು ಗಮನಿಸಿದ ಅವರ ಮನೆಯ ಹಿರಿಯ ತಾತ 'ಲೋ ಅವನು ಮುಟ್ಟಿಸಿಕೊಳ್ಳದವನು. ಹೊಡೆಯೋ ಹಾಗಿದ್ರೆ ಚಪ್ಪಲೀಲಿ ಹೊಡಿ' ಎಂದ. ಆಗ ನನ್ನ ಸ್ನೇಹಿತನ ತಂದೆ ನನ್ನನ್ನು ಚಪ್ಪಲಿಯಲ್ಲಿ ಹೊಡೆದು ಹೊರದಬ್ಬಿದ್ದರು. ಈ ಘಟನೆ ನನ್ನ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಬಹುಶಃ ನನ್ನ ಜಾತಿ ಪದ್ಧತಿಯ ವಿರುದ್ಧದ ಹೋರಾಟ ಇಲ್ಲಿಂದಲೇ ಆರಂಭವಾಗಿರಬೇಕು.

ಪ್ರಶ್ನೆ: ಆಂಧ್ರದ ದಲಿತರ ಮೇಲೆ ನಕ್ಸಲಿಸಂ ಪ್ರಭಾವ ಹೆಚ್ಚಿರುವಂತಿದೆ. ಇದಕ್ಕೆ ಕಾರಣ?

ಪ್ರಭಾಕರ್: ಹೌದು ಕರ್ನಾಟಕಕ್ಕೆ ಹೋಲಿಸಿಕೊಂಡರೆ ಇಲ್ಲಿ ಹೆಚ್ಚು ಪ್ರಭುತ್ವವೇ ಅದಕ್ಕೆ ಕಾರಣ. ಇಲ್ಲಿನ ದಲಿತರು ಕಾರಂಚೇಡು ದುರ್ಘಟನೆ ನಡೆಯುವವರೆಗೂ ನಮ್ಮ ಸರ್ಕಾರಗಳ ಮೇಲೆ ನಂಬಿಕೆ ಇಟ್ಟಿದ್ದರು. ಕಾರಂಚೇಡುವಿನ ಘಟನೆ ನಡೆದಾಗ ಏಳು ದಲಿತರನ್ನು ಕೊಂದ ಕಮ್ಮ ಜಾತಿಯವರಲ್ಲಿ ಒಬ್ಬನನ್ನೂ ಪೊಲೀಸರು ಬಂಧಿಸಲಿಲ್ಲ. ದಲಿತರು ಅದೆಷ್ಟೇ ಬೀದಿಗಿಳಿದು ಹೋರಾಟ ಮಾಡಿದರೂ ಒಬ್ಬ ಅಪರಾಧಿಯ ಮೇಲೂ ಎಫ್‌ಐಆರ್ ಬರೆಸಲು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ ಅಂದಿನ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಸಂಬಂಧಿ ಚೆಂಚು ರಾಮಯ್ಯ ಆ ಕೊಲೆಗಳ ಮುಖ್ಯ ರೂವಾರಿ. ನಾವು ಶಿಕ್ಷೆ ಆಗಲೆಂದು ರ್‍ಯಾಲಿ ಮಾಡುತ್ತಿದ್ದರೆ ಕಮ್ಮ ಜಾತಿಯ ಕೆಲವರು ದಲಿತರ ಹತ್ತಿರ ಬಂದು 'ನಿಮ್ಮವರನ್ನು ಅಲ್ಲಿ ಸಾಯಿಸಿದ್ದಕ್ಕೆ ಇಲ್ಲಿ ಬಂದು ರ್‍ಯಾಲಿ ಮಾಡುತ್ತಿದ್ದೀರಿ. ಇಲ್ಲಿ ಸಾಯಿಸಿದರೆ ಎಲ್ಲಿಗೆ ಹೋಗುತ್ತೀರಿ' ಎಂದು ಧಮಕಿ ಹಾಕಿದ್ದರು. ಇದಾದನಂತರ ರ್‍ಯಾಲಿಗಳು ತಣ್ಣಗಾದವು. ಆದರೆ ಚೆಂಚು ರಾಮಯ್ಯನನ್ನು ಅವನ ಮನೆಗೇ ನುಗ್ಗಿ ನಕ್ಸಲೈಟರು ಕೊಂದು ಹಾಕಿದರು. ಆಗ ಇಡೀ ಆಂಧ್ರದ ಹೊಲೆಮಾದಿಗರು ತಲೆ ಎತ್ತಿ ನಡೆಯುವಂತಾಯಿತು. ಎಷ್ಟರ ಮಟ್ಟಿಗೆಂದರೆ ಮೇಲ್ಜಾತಿಯವರಿಗೆ ದಲಿತರು 'ನಮ್ಮನ್ನ ಮುಟ್ಟಿದರೆ ನಿಮಗೆ ಚೆಂಚು ರಾಮಯ್ಯನಿಗಾದ ಗತಿಯೇ ಆಗ್ತದೆ ಗೊತ್ತಾಯ್ತು' ಎಂದು ಹೇಳುವಂತಾಯಿತು. ಇದಾದನಂತರವೇ ಆಂಧ್ರದ ದಲಿತರಿಗೆ ನಕ್ಸಲೈಟರ ಮೇಲೆ ನಂಬಿಕೆ ಬೆಳೆದದ್ದು, ಇದಕ್ಕೆ ಕಾರಣ ಆಳುವ ವರ್ಗವೇ ಅಲ್ಲವೇ? ಕನಿಷ್ಠ ಎಫ್‌ಐಆರ್ ಹಾಕಲು ಹಿಂದೂಮುಂದೂ ನೋಡುವ ಸರ್ಕಾರಕ್ಕಿಂತ ನ್ಯಾಯ ನೀಡಿದ ನಕ್ಸಲೈಟರು ಹತ್ತಿರವಾದರು.

ಪ್ರಶ್ನೆ: ಆಂಧ್ರದಲ್ಲಿ ಅಸ್ಪೃಶ್ಯತೆ ಎಷ್ಟರಮಟ್ಟಿಗೆ ಜೀವಂತವಿದೆ?

ಪ್ರಭಾಕರ್: ಇಡೀ ಭಾರತ ದೇಶದಲ್ಲಿ ಹೇಗಿದೆಯೋ ಹಾಗೆಯೇ ಇದೆ. ಹೋಟೆಲ್ಲುಗಳಲ್ಲಿ ಎರಡು ಲೋಟ, ಕಟಿಂಗ್ ಶಾಪುಗಳಲ್ಲಿ, ದೇವಸ್ಥಾನಗಳಲ್ಲಿ ಪ್ರವೇಶ ನಿಷೇಧ, ದಲಿತರೆಂಬ ಕಾರಣಕ್ಕಾಗಿ ದೌರ್ಜನ್ಯವೆಲ್ಲವಿದೆ. ಇದಿನ್ನು ಹೋಗಿಲ್ಲ. ಹೋಗುವುದಕ್ಕೆ ತಕ್ಕ ಹೋರಾಟ ನಡೆದಿಲ್ಲವಲ್ಲ?

ಪ್ರಶ್ನೆ: ಎಡಪಂಥೀಯರು ಜಾತಿ ಪ್ರಶ್ನೆಯನ್ನು ಎತ್ತಬೇಕೆಂದು ಬಲವಾಗಿ ಪ್ರತಿಪಾದಿಸುತ್ತಿದ್ದೀರಿ. ಇದರಿಂದ ಲಾಭವೇನು? ವರ್ಗ ಹೋರಾಟದಲ್ಲಿಯೂ ದಲಿತರಿಗೆ ಉಪಯೋಗವಾಗಿದೆಯಲ್ಲ?

ಪ್ರಭಾಕರ್: ವರ್ಗ ಹೋರಾಟದಿಂದ ದಲಿತರಿಗೆ ಉಪಯೋಗವಾಗಿದ್ದರೂ ಅದು ಅಸ್ಪೃಶ್ಯತೆಯನ್ನು ನಾಶ ಮಾಡಿಲ್ಲವಲ್ಲ. ಎಡಪಂಥೀಯರಲ್ಲಿ ನಾನು ಕೇಳುವ ಪ್ರಶ್ನೆ ಎಂದರೆ ನಿಮ್ಮ ಪಾರ್ಟಿಗಳ ಪ್ರಣಾಳಿಕೆಗಳಲ್ಲಿ ಜಾತಿ ನಿವಾರಣೆಗೆ ಯಾವುದಾದರೂ ಕಾರ್ಯಕ್ರಮ ಹಾಕಿಕೊಂಡು ಮುನ್ನಡೆದಿದ್ದೀರ? ದಲಿತರನ್ನು ಕ್ಷೌರಿಕರ ಅಂಗಡಿಗಳಿಗೆ ಬಿಡಿ, ಎರಡು ಲೋಟ ಪದ್ಧತಿ ರದ್ದು ಮಾಡಿ, ಪಂಚಾಯಿತಿ ಕಟ್ಟೆ ಮೇಲೆ ಕುಳಿತುಕೊಳ್ಳಲು ಬಿಡಿ ಎಂದು ಸವರ್ಣೀಯರಿಗೆ ಹೇಳಿದ್ದೀರಾ? ಇಲ್ಲವಲ್ಲ. ಮತ್ತೆ ಜಾತಿ ಸಂಬಂಧವಾಗಿ ನೀವು ಸೋತಿದ್ದೀರಿ. ಈ ದೇಶದ ಬುನಾದಿಯಾದ ಜಾತಿಯನ್ನೇ ಅರ್ಥಮಾಡಿಕೊಳ್ಳದೆ ಕ್ರಾಂತಿ ಮಾಡಲು ಹೊರಟಿದ್ದೀರಿ. ಮಾವೋ ಸಾಂಸ್ಕೃತಿಕ ಕ್ರಾಂತಿ ಮಾಡಿದ್ದು ಯಾಕೆ? ಫುಲೆಯವರಿಂದ ಹಿಡಿದು ಅಂಬೇಡ್ಕರರವರೆಗೂ ದಲಿತ ಸಂಬಂಧಿತ ದೌರ್ಜನ್ಯಗಳನ್ನು ದಲಿತರೇ ಕೇಳುತ್ತಾ ಬಂದರು. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಯಾಕೆ ಹುಟ್ಟಿಕೊಂಡಿತು. ದಲಿತರ ಸಮಸ್ಯೆಯನ್ನು ಮಿಕ್ಕ ಹೋರಾಟಗಳು ಪ್ರಶ್ನಿಸದೇ ಇದ್ದಾಗ. ದಲಿತರ ಸಮಸ್ಯೆಗಳನ್ನು ದಲಿತರೇ ಕೇಳಬೇಕೆ? ಇಲ್ಲಿ ದಲಿತರ ಮೇಲೆ ಶೋಷಣೆ ಜಾತಿ ಕಾರಣಕ್ಕಾಗಿ ಆಗುತ್ತಿದೆ. ವರ್ಗದ ಕಾರಣಕ್ಕಾಗಿ ಅಲ್ಲ, ಮಹಿಳೆಯರ ಪ್ರಶ್ನೆ ಬಂದಾಗ, ರೈತರ ಪ್ರಶ್ನೆ ಬಂದಾಗ, ಶ್ರಮಿಕರ ಪ್ರಶ್ನೆ ಬಂದಾಗ ಎಲ್ಲಾ ರಾಜಕೀಯ ಪಕ್ಷಗಳೂ ಅವರ ಪರ ನಿಲ್ಲುತ್ತೀರಿ. ಆದರೆ ದಲಿತರ ಮೇಲಿನ ದೌರ್ಜನ್ಯವನ್ನು ದಲಿತರಿಗೇ ಪ್ರಶ್ನಿಸಲು ಬಿಡುತ್ತೀರಿ. ಅದಕ್ಕಾಗಿಯೇ ಎಡಪಂಥೀಯರಿಗೆ ಹೇಳುತ್ತಿದ್ದೇನೆ ನೀವೂ ಜಾತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತಿದ್ದೀರಿ. ಇನ್ನು ಮುಂದೆಯಾದರೂ ಅದನ್ನು ತಿದ್ದಿಕೊಳ್ಳಿ ಎಂದು.

ಪ್ರಶ್ನೆ: ಅಂಬೇಡ್ಕರರನ್ನು ಮಾರ್ಕ್ಸ್‌ವಾದಿಗಳು ಒಳಗೊಳ್ಳಬೇಕೆಂದು ಹೇಳುತ್ತೀರಿ. ಅದು ಸಾಧ್ಯವಾ?

ಪ್ರಭಾಕರ್: ಏಕೆ ಸಾಧ್ಯವಾಗುವುದಿಲ್ಲ, ಭಾರತದ ಸಾಮಾಜಿಕ ಬುನಾದಿಯಾದ ಜಾತಿಯನ್ನು ಗ್ರಹಿಸುವಲ್ಲಿ ಸಫಲರಾದವರು ಅಂಬೇಡ್ಕರ್. ಎಡಪಂಥೀಯರು ಈಗ ಜಾತಿ ಎನ್ನುತ್ತಿದ್ದಾರೆ. ಆದರೆ ಅಂಬೇಡ್ಕರ್ 80 ವರ್ಷಗಳ ಹಿಂದೆಯೇ ಜಾತಿವಿನಾಶವಾಗಬೇಕೆಂದು ಬಯಸಿದ್ದರು. ಹಿಂದೂತ್ವವಾದಿಗಳು ಅಂಬೇಡ್ಕರರನ್ನು ಮುಸ್ಲಿಂ, ಕ್ರೈಸ್ತ ವಿರೋಧಿಯನ್ನಾಗಿಸಿ, ಹಿಂದೂವಾದಿಯನ್ನಾಗಿಸಲು ಹೊರಟಿದ್ದಾರೆ, ಜಾತಿವಾದಿಯಾಗಿಸಲು ಹೊರಟಿದ್ದಾರೆ. ಆದರೆ ಈ ಹಿಂದೆ ಇವರೇ ಅಂಬೇಡ್ಕರರನ್ನು ಹೀಯಾಳಿಸಿದ್ದರು. ಅವರನ್ನು ವೈಯಕ್ತಿಕವಾಗಿ ನಿಂದಿಸಿದರು. ಮೀಸಲಾತಿ ವಿಚಾರ ಬಂದಾಗ ಅಂಬೇಡ್ಕರರನ್ನು ವಿರೋಧಿಯಾಗಿಯೇ ಕಾಣುತ್ತಾರೆ. ಆದರೆ ಅಂಬೇಡ್ಕರರನ್ನು ಸೆಳೆದುಕೊಳ್ಳಲು ಹೊರಟಿರುವುದು ಏಕೆಂದರೆ ದಲಿತರು ಅವರಿಗೆ ಬೇಕಾಗಿದ್ದಾರೆ. ಅದರ ಫಲವಾಗಿಯೆ ಮಹಾರಾಷ್ಟ್ರದಲ್ಲಿ ಭೀಮಸೇನೆ-ಶಿವಸೇನೆ ಒಂದಾಗಿವೆ. ಅದಕ್ಕಾಗಿ ಎಡಪಂಥೀಯರಿಗೆ ಹೇಳುತ್ತಿದ್ದೇನೆ ಈ ದೇಶದಲ್ಲಿ ಅಂಬೇಡ್ಕರರನ್ನು 20 ಕೋಟಿ ಜನಸಂಖ್ಯೆ ಪೂಜಿಸುತ್ತಿದೆ. ಅವರ ವಿಮೋಚಕರಾಗಿದ್ದಾರೆ. ಬ್ರಿಟಿಷರ ಕಾಲದಲ್ಲಿಯೂ ಕಾರ್ಮಿಕ ಮಂತ್ರಿಯಾಗಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ನಿಮ್ಮಂತೆ ಸಮಸಮಾಜದ ಕನಸು ಕಂಡವರು ಅವರು. ಅವರನ್ನು ಒಳಗೊಳ್ಳದೆ ನಿಮ್ಮ ಸಮಸಮಾಜ ನಿರ್ಮಾಣವಾಗದು ಎಂದು. ಆದರೆ ಕಮ್ಯುನಿಸ್ಟರಿಗೆ ಇದು ಅರ್ಥವಾಗುತ್ತಿಲ್ಲ.

ಪ್ರಶ್ನೆ: ದಲಿತರ ವಿಮೋಚನೆಗೆ ರಾಜ್ಯಾಧಿಕಾರವೇ ಪರಿಹಾರ; ಬೀದಿ ಹೋರಾಟಗಳಲ್ಲ ಎಂದು ಹೇಳುವ ಅಂಬೇಡ್ಕರ್ ವಾದಿಗಳಿದ್ದಾರೆ. ಇದರ ಬಗ್ಗೆ ಏನಂತೀರಿ?

ಪ್ರಭಾಕರ್: ರಾಜ್ಯಾಧಿಕಾರ ಬೇಕು. ಅದಕ್ಕಾಗಿಯೇ ಎಲ್ಲ ಹೋರಾಟಗಳು ಪರಿತಪಿಸುವುದು. ಆದರೆ ಬೀದಿ ಹೋರಾಟಗಳಿಲ್ಲದೆ ಕೇವಲ ಚುನಾವಣೆಗಳಿಂದ ಅಂಬೇಡ್ಕರರ ಕನಸನ್ನು ನನಸು ಮಾಡುವುದು ಅಸಾಧ್ಯ. ಇದು ದಲಿತರಲ್ಲಿನ ಬಲಿತರು ಹೇಳುವ ಮಾತುಗಳು. ಎ.ಸಿ ರೂಮಿನಲ್ಲಿ ರೂಪುಗೊಂಡಿರುವ ಚಿಂತನೆ. ಇಂದಿಗೂ ದಲಿತರನ್ನು ಕಾಡುತ್ತಿರುವ ಹಸಿವು ಅವಮಾನವನ್ನು ಅವರ ಬಳಿ ತೆರಳಿ ನಾವೂ ಅನುಭವಿಸಿ ಸಂತೈಸಬೇಕಿದೆ. ದಲಿತರ ಕೇರಿಗಳಲ್ಲಿ ವಾಸ್ತವ್ಯ ಹೂಡಿ ಅವರ ಸಂಕಷ್ಟ ಅರಿಯಬೇಕಿದೆ. ಅವರಲ್ಲಿ ನಾವೂ ಒಬ್ಬರಾಗಬೇಕಿದೆ. ಆಗ ಮಾತ್ರ ಬಡ ದಲಿತರಿಗೆ ನಂಬಿಕೆ ಬಂದು ಓಟು ಹಾಕುತ್ತಾರೆ. ನಾಯಕರ ಬೆನ್ನೆಲುಬಾಗಿ ನಿಲ್ಲುತ್ತಾರೆ. ಅಂಬೇಡ್ಕರರೇ ಹೇಳಿದಂತೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಸಿಗದ ರಾಜಕೀಯ ಸಮಾನತೆ ವ್ಯರ್ಥ. ಅದಕ್ಕೆ ಸಾಮಾಜಿಕ ಸಮಾನತೆಗಾಗಿ ಬೀದಿ ಹೋರಾಟಗಳೂ ಬೇಕು. ಇದನ್ನು ಬಿಟ್ಟು ಮನೆಯಲ್ಲಿ ಕುಳಿತು ಅದು ಸರಿ ಇದು ಸರಿ ಎನ್ನುವವರನ್ನು ನಂಬಬಾರದು.

ಪ್ರಶ್ನೆ: ಛಿದ್ರಗೊಂಡಿರುವ ದಲಿತ ಸಂಘಟನೆಗಳ ಬಗ್ಗೆ ನಿಮ್ಮ ಅಭಿಪ್ರಾಯ?

ಪ್ರಭಾಕರ್: ದಲಿತ ಅಗ್ರ ನಾಯಕರು ಸ್ವಾರ್ಥಿಗಳಾಗಿದ್ದಾರೆ. ರಾಜಕೀಯ, ಆರ್ಥಿಕ ಪ್ರಯೋಜನಕ್ಕೋಸ್ಕರ ಪಕ್ಷಗಳಿಗೆ ತಮ್ಮನ್ನು ಮಾರಿಕೊಂಡಿದ್ದಾರೆ. ಭೀಮಸೇನೆಯ ರೀತಿ. ಕರ್ನಾಟಕದಲ್ಲಿ ನನಗೆ ಗೊತ್ತಿಲ್ಲ. ಆದರೆ ಆಂಧ್ರದಲ್ಲಿ ಬಹಳ ದಲಿತ ನಾಯಕರು ದಂಧೆಗಿಳಿದಿದ್ದಾರೆ. ಆದರೆ ದಲಿತರಿಗೆ ತಮ್ಮನ್ನು ಸಂತೈಸುವ ಜೀವಗಳು ಬೇಕು. ಅದಕ್ಕೆ ಅವರು ಕಾಂಗ್ರೆಸ್ಸಿನವರನ್ನು ನಂಬಿದರು, ಕಮ್ಯುನಿಸ್ಟರನ್ನು ನಂಬಿದರು, ದಲಿತ ನಾಯಕರನ್ನು ನಂಬಿದರು, ಎಲ್ಲಾ ಪಕ್ಷಗಳನ್ನು ನಂಬಿದರು. ಆದರೆ ಅವರೆಲ್ಲರೂ ಮೋಸ ಮಾಡಿದ್ದಾರೆ. ಕೇವಲ ಓಟ್ ಬ್ಯಾಂಕ್ ಮಾಡಿಕೊಂಡಿದ್ದಾರೆ. ನಾಯಿಗಿಂತ ನೀಚವಾಗಿ ನೋಡಿಕೊಂಡ ಜನಾಂಗವನ್ನು ಪ್ರೀತಿಸುವವರು ಬೇಕು. ನಿಜ ನಾಯಕತ್ವಕ್ಕೆ ಎಂದಿಗೂ ಬೆನ್ನೆಲುಬಾಗಿ ನಿಲ್ಲುವ ಜನ ದಲಿತರು. ಅದಕ್ಕೆ ಅಂಬೇಡ್ಕರರನ್ನು ಕೋಟಿಗಟ್ಟಲೆ ಜನ ನಂಬಿದ್ದು. ಒಂದು ಕಡೆ ಗಾಂಧೀಜಿ, ಮತ್ತೊಂದು ಕಡೆ ಮತೀಯ ಹಿಂದೂತ್ವವಾದಿಗಳು, ಇನ್ನೊಂದು ಕಡೆ ಕಾಂಗ್ರೆಸ್. ಹೀಗಿರುವಾಗ ದಲಿತರ ಪರ ನಿಂತ ಏಕೈಕ ವ್ಯಕ್ತಿ ಅಂಬೇಡ್ಕರ್. ಅದಕ್ಕೆ ಅವರು ಬೌದ್ಧ ಧರ್ಮ ಸ್ವೀಕರಿಸಿದಾಗ ಲಕ್ಷಜನ ಸ್ವೀಕರಿಸಿದರು. ಅಂತಹ ನಾಯಕತ್ವ ಈಗಲೂ ಬಂದರೆ ದಲಿತರು ಒಂದಾಗುತ್ತಾರೆ.

ಪ್ರಶ್ನೆ: ಜಾತಿ ವಿನಾಶದಲ್ಲಿ ಲೋಹಿಯಾವಾದಿಗಳನ್ನು, ಗಾಂಧಿವಾದಿಗಳನ್ನು ಸೇರಿಸಿಕೊಳ್ಳಬಹುದೇ?


ಪ್ರಭಾಕರ್: ನೋಡಿ, ನನಗೆ ಗಾಂಧಿವಾದದ ಬಗ್ಗೆ ನಂಬಿಕೆ ಇಲ್ಲ, ಅವರೊಬ್ಬರು ಮನುವಾದಿ. ವರ್ಣ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟವರು. ದಲಿತರನ್ನು ಹರಿಜನರೆಂದು ಕರೆದು ಅಂಬೇಡ್ಕರರ ಎದುರಿಗೆ ನಿಲ್ಲಿಸಿದವರು. ಅದಕ್ಕಾಗಿಯೇ 'ಗಾಂಧಿಗಳಿದ್ದಾರೆ ಎಚ್ಚರಿಕೆ' ಎಂದು ಅಂಬೇಡ್ಕರ್ ಹೇಳಿದ್ದು, ಆ ಕಾರಣಕ್ಕಾಗಿ ಇಂದಿನ ಅವಶ್ಯಕತೆ ಅಂಬೇಡ್ಕರ್‌ವಾದ ಮತ್ತು ಮಾರ್ಕ್ಸ್‌ವಾದ. ಅಂಬೇಡ್ಕರ್ ಚಿಂತನೆಯನ್ನು ಇಡೀ ವಿಶ್ವವೇ ಮಾನ್ಯ ಮಾಡುತ್ತಿದೆ. ಅದಕ್ಕಾಗಿಯೇ ಅರುಂಧತಿ ರಾಯ್ ಅಂಬೇಡ್ಕರರ ಪುಸ್ತಕಕ್ಕೆ ಪೀಠಿಕೆ ಬರೆದದ್ದು.

ಪ್ರಶ್ನೆ: ಜಾತಿವಿನಾಶ ಆಗುತ್ತದೆಯೇ?

ಪ್ರಭಾಕರ್: ಖಂಡಿತವಾಗಿ ಆಗುತ್ತದೆ. ಏಕೆಂದರೆ ಪ್ರಕೃತಿ ನಿಯಮದ ಪ್ರಕಾರ [illegible] ನಾಶವಾಗಿಯೇ ಆಗುತ್ತದೆ. ■

20ನೇ ಶತಮಾನದ ಅಪ್ರತಿಮ ಗಣಿತಜ್ಞ ಜಾನ್ ನ್ಯಾಶ್

ಅನುರಣನ




ಕಳೆದ ಮೇ 24ರಂದು ಅಮೆರಿಕೆಯ ನ್ಯೂಜೆರ್ಸಿಯಲ್ಲಿ ಕಾರು ಅಪಘಾತದಲ್ಲಿ ಕಳೆದ ಶತಮಾನದ ಶ್ರೇಷ್ಠ ಗಣಿತಶಾಸ್ತ್ರಜ್ಞರಾದ ಜಾನ್ ನ್ಯಾಶ್ ತೀರಿಕೊಂಡರು. ಅವರ ಬದುಕಿನ ಜತೆಗಾತಿ ಅವರ ಹೆಂಡತಿ ಅಲೀಸಿಯಾ ಕೂಡ ಅವರ ಜತೆಯಲ್ಲೇ ಮೃತರಾದರು. 1994ರ ಅರ್ಥಶಾಸ್ತ್ರದ ನೊಬೆಲ್ ಬಹುಮಾನವನ್ನು ತಮ್ಮ ಗೇಮ್ ಸಿದ್ಧಾಂತದ ಗಣೇತೀಯ ವಿವರಗಳಿಗೆ ಪಡೆದಿದ್ದರು. ಸಹಕಾರವಿಲ್ಲದ ಆಟ ಅಥವಾ ಪೈಪೋಟಿಗಳಲ್ಲಿ ಒಳಗೊಂಡವರ ಮನಸ್ಸನ್ನು ಗಣಿತದ ವಿವರಗಳಿಂದ ಚಕಿತಗೊಳಿಸಿದ್ದ ನ್ಯಾಶ್, ತಮ್ಮ ಅತಿ ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ಕೇವಲ 29ರಲ್ಲಿನ ಸಂಶೋಧನೆಗೆ ಅವರು ಈ ಪಾರಿತೋಷಕವನ್ನು ಪಡೆದಿದ್ದರು. ಗೇಮ್ ಸಿದ್ಧಾಂತದ ವಿವರಗಳನ್ನು ನಂತರ ನೋಡೋಣ. ನ್ಯಾಶ್ ಜತೆಗೇ ಅವರ ಹೆಂಡತಿಯೂ ಸಾವನ್ನಪ್ಪಿದ್ದು ಮಾತ್ರ ವಿಧಿಯಾಟವೇ! ಏಕೆಂದರೆ ವಿಪರೀತ ಗಣೇತೀಯ ಚಿಂತನೆಗಳಿಂದ ವಿಚಲಿತಗೊಂಡಿದ್ದ ಮನಸ್ಸಲ್ಲದೆ ಜತೆಗೆ ಸೀಝೋಫ್ರೇನಿಯಾ ಕೂಡ ಆಕ್ರಮಿಸಿಕೊಂಡಿದ್ದವರಿಗೆ ಬದುಕನ್ನು ಕೊಟ್ಟ ಮಹಾನ್ ಸ್ತ್ರೀ ಆಕೆ. ನ್ಯಾಶ್ ಅವರ ಸಹಜ ಬದುಕೇನಿದ್ದರೂ ಆಕೆಯಿಂದ ಎನ್ನುವಷ್ಟರಮಟ್ಟಿಗೆ ಆಕೆ ಅವರಿಗೆ ಜೊತೆಯಾಗಿದ್ದರು. ಅವರ ವಿಪರೀತ ಚಟುವಟಿಕೆ, ವಿಲಕ್ಷಣ ವ್ಯಕ್ತಿತ್ವ ಇತ್ಯಾದಿಗಳಿಂದ ರೋಸಿ ಬಿಡುಗಡೆಗೊಂಡಿದ್ದರೂ ಮತ್ತೆ ಬಂದು ಅವರನ್ನು ಸೇರಿಕೊಂಡವರು. ಮಾತ್ರವಲ್ಲ ಸಾವಿನಲ್ಲೂ ಅವರ ಜೊತೆಯಾದರು. ದಶಕಗಳಷ್ಟು ಕಾಲ ಆಸ್ಪತ್ರೆಯ ಒಳರೋಗಿಯಾಗಿದ್ದು, ವೈವಿಧ್ಯಮಯ ವರ್ತನೆಗಳಿಂದ ಹೊರಬಂದು ದೈನಂದಿನ ಬದುಕಿನಲ್ಲಿರಲು ನ್ಯಾಶ್ ಅವರಿಗೆ ಸಾಧ್ಯವಾಗಿದ್ದೇ ಅಲೀಸಿಯಾ ಅವರಿಂದ. ಕೊನೆ ಕ್ಷಣದವರೆಗೂ ಜೊತೆಯಾಗೇ ಇದ್ದರು.

ಇಡೀ ಜೀವನವನ್ನು ಅಷ್ಟೇಕೆ, ಇಡೀ ಜಗತ್ತನ್ನೇ ಸಂಖ್ಯೆಗಳ ಹಾಗೂ ಸೂತ್ರಗಳ ಮೂಲಕ ಕಾಣುತ್ತಿದ್ದ ಮಹಾನ್ ಗಣಿತಜ್ಞ ಜಾನ್ ನ್ಯಾಶ್. ಅಂಕಿ-ಸಂಖ್ಯೆಗಳ ಹಿಂದೋಡುವ ಮನುಷ್ಯರು ವಿರಳ. ನಮ್ಮಲ್ಲೇ ಬಹುತೇಕರು ಲೆಕ್ಕ ತಂದೊಡ್ಡುವ ಸಮಸ್ಯೆಗಳ ಒಲವು ತೋರಿಸಲು ಹಿಂದುಮುಂದು ನೋಡುತ್ತೇವಲ್ಲವೇ? ಗಣಿತವೆಂದರೆ ಅದೇನೋ ಅನೇಕ ಮಂದಿಗೆ ಭಯ. ಬೇರೆಯವರನ್ನು ಬಿಡಿ ಜೀವವಿಜ್ಞಾನದ ವಿದ್ಯಾರ್ಥಿಗಳಿಗೂ ಗಣಿತವೆಂದರೆ ಭಯವೇ? ಅದರಲ್ಲೂ ಜೀವವಿಜ್ಞಾನದ ಅನ್ವಯಗಳಾದ ಕೃಷಿ ಹಾಗೂ ವೈದ್ಯಕೀಯ ಕಲಿಕೆಯು ನಮ್ಮ ದೇಶದಲ್ಲಂತೂ ಗಣಿತದಿಂದ ಮಾರು ದೂರವೇ! ಗಣಿತವನ್ನು ಪ್ರೀತಿಸುವವರು ಮಾತ್ರ ಜಾಣರೆಂದೇ ಖ್ಯಾತಿ. ನಿಜವಾಗಲೂ ವಿಜ್ಞಾನದ ಸಹಜ ಸಂಗಾತಿ ಗಣಿತ. ಅದಕ್ಕೇ ಗಣಿತವನ್ನು ವಿಜ್ಞಾನದ ರಾಣಿಯೆಂದೇ ಕರೆಯುತ್ತಾರೆ. ಗಣಿತವನ್ನು ಭಯ ಮತ್ತು ಜಾಣತನದ ಸಂಕೇತವಾಗಿಸಿರುವುದು, ಕೇವಲ ನಮ್ಮ ಸಂಸ್ಕೃತಿಯಲ್ಲಷ್ಟೇ ಅಲ್ಲ, ಅದು ಜಗದ್ವ್ಯಾಪಿ. ಅಮೆರಿಕಾದ ಮುಖ್ಯ ನ್ಯಾಯಾಧೀಶರೊಮ್ಮೆ ಸಂದರ್ಶನದಲ್ಲಿ, ತಮ್ಮ ಗಣಿತದ ಭಯದಿಂದ ಕಾನೂನು ಕಲಿಕೆಗೆ ತೊಡಗಿದ್ದಾಗಿ ಹೇಳಿಕೊಂಡಿದ್ದರು. ನಮ್ಮಲ್ಲಂತೂ ಪರೀಕ್ಷಾ ಪ್ರಾಧಿಕಾರಗಳೂ ಸಹ ಗಣಿತದ ಪರೀಕ್ಷೆಗೆ ಸಾಕಷ್ಟು ಬಿಡುವು ಇರುವಂತೆಯೇ ವೇಳಾಪಟ್ಟಿ ಮಾಡುತ್ತವೆ.

ಗಣಿತವೆಂದರೆ ಕೇವಲ ಲೆಕ್ಕ ಮಾತ್ರವಲ್ಲ! ಅದೊಂದು ವಿಜ್ಞಾನದ ಸಂವಹನ ಭಾಷೆ. ನಮ್ಮ ಮಾಮೂಲಿಯ ಸಂವಹನದಲ್ಲಿ ಬಳಸುವ ಭಾಷೆಗೂ ಒಂದು ಮಿತಿಯಿದೆ, ಅನೇಕ ಸಂಗತಿಗಳನ್ನು ಭಾಷೆಯಲ್ಲಿ ಹೇಳಲಾಗದು. ಭಾಷೆ ಮಾಡಲಾಗದ್ದನ್ನು ಗಣಿತ ಮಾಡುತ್ತದೆ. ನಿಸರ್ಗದ ಅನೇಕ ಸತ್ಯದ ಹುಡುಕಾಟಗಳಲ್ಲಿ ವಿಜ್ಞಾನಕ್ಕೆ ನೆರವಾಗುವುದೇ ಗಣಿತ. ಆಗ ಅನೇಕ ಸಂಗತಿಗಳನ್ನು ಗಣೇತೀಯ ವಿವರಗಳಿಂದ ಹೇಳಲಾಗುತ್ತದೆ. ಸಂಖ್ಯೆಗಳು-ಸೂತ್ರಗಳು ಸಂವಹನ ಮಾಧ್ಯಮಗಳಾಗಿ ನೆರವಿಗೆ ಬರುತ್ತವೆ. ಗಣಿತವೇ ವಿಜ್ಞಾನದಲ್ಲಿ ನಿಜವಾದ ಸಂವಹನ ಭಾಷೆ. ಊಹೆಗೆ ನಿಲುಕದ ಅಳತೆಗಳನ್ನು ಗಣೇತೀಯವಾಗಿಯೇ ಮಾಡಲಾಗುತ್ತದೆ. ಗಣಿತವು ಆಕೃತಿಗಳ, ಅಳತೆಗಳ ಸಂಬಂಧಗಳನ್ನೂ ನಮ್ಮ ಊಹೆಯ ಮಿತಿಗಳನ್ನೂ ಮೀರಿ ಅನುಭವಿಸಲು ನೆರವಾಗಿದೆ. ಹೀಗೆ ಜಗತ್ತನ್ನು ಗಣೇತೀಯ ಸಂಬಂಧಗಳಲ್ಲಿ ವಿವರಿಸುತ್ತಾ, ಅದ್ವಿತೀಯ ಸಾಧನೆಯನ್ನು ಮಾಡಿದ 20ನೇ ಶತಮಾನದ ಅಪ್ರತಿಮ ಗಣಿತಜ್ಞ ಜಾನ್ ಫೋರ್ಬ್ಸ್ ನ್ಯಾಶ್.

ಜಾನ್ ನ್ಯಾಶ್ ಗಣಿತಕ್ಕೆ ಬಂದುದು ಆಕಸ್ಮಿಕವೆ! 1928ರ ಜೂನ್ 13 ರಂದು ವೆಸ್ಟ್ ವರ್ಜಿನಿಯಾದ ಬ್ಲೂಫೀಲ್ಡ್‌ಸಲ್ಲಿ ಇಂಜಿನಿಯರ್ ಮಗನಾಗಿ ಜನಿಸಿದರು. ಅಪ್ಪನಂತೆ ಜಾನ್ ನ್ಯಾಶ್ ಕೂಡ ಇಂಜಿನಿಯರ್ ಆಗಲಿ ಎಂದು ಕಲಿಕೆಗೆ ಸೇರಿದ್ದವರು. ಶಾಲೆಯಲ್ಲಿ ಅವರ ಅಪ್ರತಿಮ ಗಣಿತದ ಜಾಣತನವನ್ನು ಗಮನಿಸಿದ ಅವರ ಗುರುಗಳು ಗಣಿತಕ್ಕೆ ಕರೆತಂದರು. ಗಣಿತವೆಂದರೆ ಬದುಕಿನ ಉಸಿರಾಗುವಂತೆ ಕಾಡುತ್ತದೆ ಎಂದು ಯಾರೂ ಊಹಿಸಿರಲಾರರು. ಅಷ್ಟರ ಮಟ್ಟಿಗೆ ಸಂಖ್ಯಾ ಪ್ರಪಂಚ ಸೂತ್ರಗಳ ಮೂಲಕ ನ್ಯಾಶ್ ಅವರನ್ನು ಕಾಡಿತು. ಕಾಡುವುದೆಂದರೆ ನಿಜಕ್ಕೂ ವಿಚಿತ್ರವೇ! ಪ್ರತಿಯೊಂದರಲ್ಲಿ, ಹಕ್ಕಿಗಳ ಓಡಾಟದಲ್ಲಿ ಅಲ್ಲರಿದೆಂಗಳ ಹುಡುಕಾಟ, ನಿಸರ್ಗದ ಇತರೇ ಸಂಗತಿಗಳಲ್ಲಿ ಹೆಚ್ಚೂಕಡಿಮೆ ಮಾನವರ ಮನಸ್ಸುಗಳ ಅಳತೆಯಲ್ಲೂ ಗಣಿತವನ್ನು ಅರಸಿ ಹೋದವರು ಜಾನ್ ನ್ಯಾಶ್. ಇದೊಂದು ಸಾಧಾರಣವಾದ ಹುಡುಕಾಟವಾಗಿರಲಿಲ್ಲ, ಮನಸ್ಸನ್ನು ಸ್ತಿಮಿತಕ್ಕಿಡುವುದೇ ದೊಡ್ಡ ತೊಂದರೆಯಾಗುವಂತೆ ಹುಡುಕಾಟದಲ್ಲಿ ಮಗ್ನರಾದರು ಜಾನ್ ನ್ಯಾಶ್. ತುಂಬಾ ಸರಳವಾಗಿ ಅದೊಂದು "ಒಡೆದ ವ್ಯಕ್ತಿತ್ವ" -ಸ್ಪ್ಲಿಟ್ ಪರ್ಸನಾಲಿಟಿ- ಎನ್ನುವರು. ಆದರೆ ನ್ಯಾಶ್ ಅಷ್ಟೇ ನಿಖರವಾಗಿ ಗಣಿತವನ್ನೂ ಅರಗಿಸಿ ವಿವರಿಸಬಲ್ಲವರಾಗಿದ್ದುದು ವಿಚಿತ್ರವೆ! ಅವರ ಮನಸ್ಸನ್ನು ತೀವ್ರ ಚಟುವಟಿಕೆಗಳಿಂದ ಮುಕ್ತಿಮಾಡಲು ದೇಹಕ್ಕೆ ಶಕ್ತಿಯ ಕೊರತೆಯನ್ನು ಉಂಟುಮಾಡುವಂತೆ ಇನ್‌ಸುಲೀನ್ ಕೊಡುವಂತಹ ಚಿಕಿತ್ಸೆಯನ್ನು ನೀಡಬೇಕಾಯಿತು. ಜಾನ್‌ನ್ಯಾಶ್ ಸೀಝೋಫ್ರೇನಿಯಾದಿಂದ ದಶಕಗಳ ಕಾಲ ನರಳಿದವರು. ಬರಿ ನರಳಾಟ ಅಲ್ಲ ಅದನ್ನಿಟ್ಟುಕೊಂಡೆ ಬದುಕಿದವರು ಕೂಡ. ಅದರ ಜತೆಗಿದ್ದೇ ಗಣಿತವನ್ನು ಕಲಿಸಿದರು ಬೆಳೆಸಿದರು.

ಅಪಾರ ಗಣಿತದ ಚಾಣಾಕ್ಷತನ, ವಿಪರೀತ ವ್ಯಕ್ತಿತ್ವದ ಹೆಮ್ಮೆಯಿಂದ ಸದಾ ಮುಂಗೋಪಿತನದಿಂದ ಇರುತ್ತಿದ್ದ ನ್ಯಾಶ್ ಅಸಾಧಾರಣ ಬುದ್ಧಿವಂತಿಕೆಯ ತುಂಟ ವಿದ್ಯಾರ್ಥಿಯಾಗಿದ್ದರು. ತಮ್ಮ ಪದವಿ ಪರೀಕ್ಷೆಯ ತರುವಾಯ



ಪಿಎಚ್.ಡಿ. ಪದವಿಗಾಗಿ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವಾಗ ಇವರಿಗೆ ನೆರವಾದ ಇವರ ಗುರುಗಳು ಒಂದೇ ವಾಕ್ಯದ ಶಿಫಾರಸ್ಸು ಪತ್ರವನ್ನು ಕೊಟ್ಟಿದ್ದರು. ಅದು ಹೀಗಿತ್ತು: "ಈ ಮನುಷ್ಯ ಅಸಾಧಾರಣ ಮೇಧಾವಿ". ಪಿಎಚ್.ಡಿ ಮಾಡುವಾಗಲೂ ಅಷ್ಟೇ ವಿಪರೀತ ಚೇಷ್ಟೆ ಇತ್ಯಾದಿಗಳಿಂದ ಸಹಪಾಠಿಗಳಲ್ಲಿ, ವಿಶ್ವವಿದ್ಯಾಲಯದಲ್ಲಿ ಹೆಸರು ಮಾಡಿದ್ದರು. ಪಿಎಚ್.ಡಿ ಪಡೆದಾಗ ಅವರ ವಯಸ್ಸು ಕೇವಲ 23! ಅವರ ಕೇವಲ 29 ಪುಟಗಳ ಪ್ರಬಂಧಕ್ಕೆ ಡಾಕ್ಟರೇಟ್ ನೀಡಿ ಗೌರವಿಸಲಾಗಿತ್ತು, ಅದೇ ಪ್ರಬಂಧ ಜಗತ್ತಿನ ಬಹುತೇಕ ಪೈಪೋಟಿಗಳನ್ನು ಗಣಿತದ ಮೂಲಕ ನೋಡುವ ಕಿಟಕಿಯಾದದ್ದು ವಿಶೇಷ ಸಂಗತಿ. ಮುಂದೆ ಇದೇ ಅವರಿಗೆ ಅರ್ಥಶಾಸ್ತ್ರದಲ್ಲಿ ನೊಬೆಲ್ ಪುರಸ್ಕಾರಕ್ಕೆ ಪಾತ್ರರನ್ನಾಗಿಸಿತು.


ವಿಶೇಷವೆಂದರೆ ತಾವು ಬಳಲುತ್ತಿದ್ದ ಸೀಝೋಫ್ರೇನಿಯಾದಿಂದ ಹೊರಬಂದು ಮತ್ತೆ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ, ಪಾಠ ಪ್ರವಚನಗಳಲ್ಲಿ ಅವರು ತೊಡಗಿದ್ದು ಪವಾಡವೇ ಸರಿ. ಅದು ಸಾಧ್ಯವಾದದ್ದು ಹೆಂಡತಿ ಅಲೀಸಿಯಾರ ಜತನದಿಂದ. ಅಲ್ಲದೆ ತಮ್ಮ ಕಾಯಿಲೆಯ ಮೂಲಕವೂ ಸಂಶೋಧನೆಗೆ ವಸ್ತುವಾಗಿ ವಿಶೇಷ ವೈಜ್ಞಾನಿಕ ಪ್ರಬಂಧ ರಚಿಸುವಂತೆ ಆದದ್ದು ಇನ್ನೂ ವಿಶೇಷ ಸಂಗತಿ! ಜಾನ್ ನ್ಯಾಶ್-ಸೀಝೋಫ್ರೇನಿಯಾ ಮಾದರಿಯ ಅಧ್ಯಯನ ಮತ್ತು ಚಿಕಿತ್ಸೆ ಎಂಬ ಪ್ರಬಂಧ ಕೂಡ ವಿಜ್ಞಾನದ ಜಗತ್ತಿನಲ್ಲಿ ಖ್ಯಾತವಾಗಿದೆ. ಅಷ್ಟೇ ಅಲ್ಲ ಇಂತಹ ಕಾಯಿಲೆಯಿಂದ ಹೊರಬರುವ ಮಾರ್ಗವನ್ನೂ ತಂದು ಕೊಟ್ಟಿದೆ. ಎಲ್ಲಕ್ಕೂ ವಿಶೇಷವೆಂದರೆ ಕಾಯಿಲೆ ಇದೇ ಎಂಬುವುದನ್ನು ಒಪ್ಪುವ ಮನಸ್ಸು ಬೆಳೆಸಿಕೊಳ್ಳಬೇಕು. ಸಹಜವಾಗಿ ಸಮಗೇನೂ ಆಗಿಲ್ಲವೆಂಬಂತೆ ವರ್ತಿಸುವುದು ಸ್ವಾಭಾವಿಕ. ಆದರೆ ಒಪ್ಪಿಕೊಂಡು ಅದರ ಆಗುಹೋಗುಗಳ ನಿರ್ಧರಿಸುವುದು ಅಪೇಕ್ಷಣೀಯ. ಸೀರೆ?ೋಫ್ರೇನಿಯಾದಲ್ಲಂತೂ ಇದು ಮತ್ತೂ ಕಷ್ಟ. ಅದೇನೇ ಇರಲಿ ಗೇಮ್ ಸಿದ್ಧಾಂತದಂತಹ ವಿವರಣೆಯ ಮೂಲಕ ಮನಸ್ಸಿಗೆ ಲಗ್ಗೆ ಇಟ್ಟು ಗಣಿತದ ಭಾಷೆಯಿಂದ ಅದನ್ನು ಅಳೆಯುವ ಸಾಧನೆಯಿಂದ ತನ್ನ ಮನಸ್ಸನ್ನೇ ಕಳೆದುಕೊಂಡೂ ಸಹಜಸ್ಥಿತಿಗೆ ಮರಳಿದ್ದ ಮಹಾನ್ ಗಣಿತಜ್ಞರೊಬ್ಬರು ಇದ್ದರು ಎನ್ನುವುದು ದೊಡ್ಡ ಸುದ್ದಿಯೇ!

ಇನ್ನು ದೊಡ್ಡ ಸುದ್ದಿ ಏನು ಗೊತ್ತಾ? ಸಾಮಾನ್ಯವಾಗಿ ಅದೆಷ್ಟೇ ದೊಡ್ಡ ವ್ಯಕ್ತಿಯಾಗಿದ್ದರೂ ಬದುಕಿದ್ದಾಗಲೇ ಅವರ ಬಗ್ಗೆ ಡಾಕ್ಯುಮೆಂಟರಿ ಸಿನಿಮಾಗಳಿರಬಹುದು. ಆದರೆ ಒಂದು ಫೀಚರ್ ಸಿನಿಮಾ ಮಾಡುವುದೆಂದರೆ ನಿಜಕ್ಕೂ ಸುದ್ದಿಯೇ. ಬದುಕಿದ್ದವರೊಬ್ಬರ ಜೀವನವನ್ನಾಧರಿಸಿದ ಫೀಚರ್ ಸಿನಿಮಾ ಒಂದು ಜನಪ್ರಿಯವಾಗಿದ್ದಲ್ಲದೆ 2002ರ ಜಗತ್ತಿನ ಶ್ರೇಷ್ಠ ಚಿತ್ರವೆಂದು ಆಸ್ಕರ್ ಪಡೆಯಿತು. ಜಾನ್ ನ್ಯಾಶ್ ಬದುಕನ್ನು ಆಧರಿಸಿ ನಿರ್ಮಿಸಿದ "ದ ಬ್ಯುಟಿಫುಲ್ ಮೈಂಡ್" ಚಿತ್ರ ಚಲನಚಿತ್ರ ರಂಗದಲ್ಲಿ ಒಂದು ಇತಿಹಾಸವನ್ನು ನಿರ್ಮಿಸಿದೆ. ನಾಸರ್ ಸಿಲ್ವಿಯಾ ಬರೆದ ಜೀವನ ಚಿತ್ರಣವನ್ನು ಆಧರಿಸಿದ ಸಿನಿಮಾ ಇಂಟರ್‌ನೆಟ್‌ನಲ್ಲಿ ಲಭ್ಯವಿದೆ.

ಗೇಮ್ ಸಿದ್ಧಾಂತ ಹಾಗೂ ನ್ಯಾಶ್ ಇಕ್ವಿಲಿಬ್ರಿಯಂ!


ಗೇಮ್ ಸಿದ್ಧಾಂತದಲ್ಲಿ ನ್ಯಾಶ್ ಇಕ್ವಿಲಿಬ್ರಿಯಂ ಎನ್ನುವುದು ಎರಡು ಅಥವಾ ಅದಕ್ಕಿಂತಾ ಹೆಚ್ಚು ಜನರನ್ನು ಒಳಗೊಂಡ ಆಟದಲ್ಲಿನ ಸನ್ನಿವೇಶಗಳ ಪರಿಹಾರದ ಪರಿಕಲ್ಪನೆ. ಅಂದರೆ ಪ್ರತಿಯೊಬ್ಬರೂ ಒಂದೊಂದು ಸ್ಥಿರ ಸನ್ನಿವೇಶದಲ್ಲಿದ್ದು ಬೇರೆಲ್ಲರೂ ಬದಲಾವಣೆಯಿಂದ ಯಾವುದೇ ಲಾಭ ಪಡೆಯದಂತಹ ಸನ್ನಿವೇಶವನ್ನು ಒಳಗೊಂಡಿರುತ್ತಾರೆ. ಹಾಗಾಗಿ ಎಲ್ಲರೂ ಒಂದು ಗೊತ್ತಾದ ಸ್ಟ್ರಾಟಜಿಯನ್ನು ಬಳಸುತ್ತಾ ಲಾಭದ ಗುರಿ ಹೊಂದಿರುತ್ತಾರೆ. ತಮ್ಮ ಸ್ಟ್ರಾಟಜಿಯಲ್ಲಿ ಬದಲಾದರೆ ಎಲ್ಲಿ ಲಾಭಕ್ಕೆ ಧಕ್ಕೆಯಾಗುತ್ತದೋ ಎಂಬ ಭಯದಲ್ಲಿ ಆಟ ಅಥವಾ ವ್ಯವಹಾರದಲ್ಲಿ ತೊಡಗಿರುತ್ತಾರೆ. ಅದನ್ನು ಇನ್ನೂ ಸರಳವಾಗಿ ಹೇಳುವುದೆಂದರೆ ಅದೇಕೆ ಸಾಮಾನ್ಯವಾಗಿ ಬರಿ ಒಂದೇ ಬಗೆಯ ವಸ್ತುಗಳನ್ನು ಮಾರುವವರು ಒಟ್ಟಿಗೇ ಇರುತ್ತಾರೆ ಎನ್ನುವುದರಿಂದ ವಿವರಿಸಬಹುದು. ಉದಾಹರಣೆಗೆ ಬೆಂಗಳೂರಿನ ಚಿಕ್ಕಪೇಟೆ ಬಳೆಪೇಟೆಗಳಲ್ಲಿ ಬಟ್ಟೆ ಅಂಗಡಿಗಳು ಹೆಚ್ಚು! ಅದರಂತೆ ಇತರೇ ಊರುಗಳಲ್ಲೂ ಸಹ! ಅಷ್ಟೇಕೇ ಸಂತೆಗಳಲ್ಲೂ ನೋಡಿ ಒಬ್ಬ ಏನಾದರೂ ಒಂದನ್ನು ಮಾರುತ್ತಾ ಕುಳಿತಿದ್ದರೆ ಅದೇ ಬಗೆಯ ವಸ್ತುವನ್ನು ಮಾರಲು ಆತನ ಪಕ್ಕಕ್ಕೇ ಮತ್ತೊಬ್ಬ ಬರುತ್ತಾನೆ ಹಾಗೆಯೇ ಹಲವರು ಬರುತ್ತಾರೆ. ಒಂದೆಡೆಗೇ ಅದೇ ಬಗೆಯ ವಸ್ತುಗಳು ಸಿಗುತ್ತವೆ. ಇದೊಂದು ಗ್ರಾಹಕರನ್ನು ತಲುಪಲು ಸುಲಭ ಮಾರ್ಗ ಎನ್ನುವಂತಿರಬಹುದು ಆದರೆ ಅದರ ಜತೆಗೆ ಮಾರುವವರ ಅಂದರೆ ಸೈದ್ಧಾಂತಿಕವಾಗಿ ಪೈಪೋಟಿಯಲ್ಲಿರುವವರ ಅಥವಾ ಸಹಕಾರವಿಲ್ಲದವರ ಸ್ಟ್ರಾಟಜಿ ಅಥವಾ ಮನಸ್ಸಿನ ನಿರ್ಧಾರವನ್ನು ಒಳಗೊಂಡಿರುತ್ತದೆ.

ಅದರ ವ್ಯಾವಹಾರಿಕ ಅನ್ವಯಗಳಿದ್ದು ಅದನ್ನು ಸರಳವಾಗಿ ಹೀಗೆ ವಿವರಿಸಬಹುದು. ಒಂದು ಊರು ಸಮುದ್ರ ತೀರದಲ್ಲಿದೆ, ಒಂದು ಕಿ.ಮೀ ಉದ್ದದ ತೀರಕ್ಕೆ



ಜನ ಬರುತ್ತಿರುತ್ತಾರೆ ಎಂದುಕೊಳ್ಳಿ. ಅಲ್ಲಿ ನೀವು ಐಸ್‌ಕ್ರೀ
ಮಾರುವ ಉದ್ದೇಶ ಹೊಂದಿರುತ್ತೀರಿ. ಅದಕ್ಕೆ
ಐಸ್‌ಕ್ರೀಮ್ ಮಾರುವ ತಳ್ಳುಗಾಡಿಯನ್ನು ತರುತ್ತೀರಿ. ಅ
ಎಲ್ಲಿ ಇಟ್ಟುಕೊಂಡರೆ ಇಡೀ ತೀರದಲ್ಲಿ ಅಡ್ಡಾಡುವ ಜ
ಅನುಕೂಲವಾಗುವ ಸ್ಥಳದಲ್ಲಿ, ಅಂದರೆ ಸಹಜವಾಗಿ
ತಾನೆ? ಸರಿ ಸ್ವಲ್ಪ ದಿನಗಳು ಕಳೆದ ಮೇಲೆ ನಿಮ್ಮ
ಗೆಳೆಯ/ಗೆಳತಿ ತಾನೂ ಐಸ್‌ಕ್ರೀಮ್ ಅಲ್ಲೇ ಮಾರುವು
ಬರುತ್ತಾರೆ. ನಿಮ್ಮ ಸ್ನೇಹಿತರಲ್ಲವೇ. ಇಬ್ಬರ
ಒಪ್ಪಂದವಾಗುತ್ತದೆ. ಇಬ್ಬರೂ ಇಡೀ ತೀರದ ಜನ
ಹಂಚಿಕೊಂಡಂತೆ ಅರ್ಧ ಕಿ. ಮೀ ದೂರಕ್ಕೆ ನಿಲ್ಲಿ
ಒಬ್ಬರಲ್ಲ ಮತ್ತೊಬ್ಬರಿಗೆ ಅನುಮಾನ ಸಹಜವಾ
ಬರುತ್ತಿರುತ್ತದೆ. ಜತೆಗೆ ನಿಮ್ಮ ಗೆಳೆಯ/ಗೆಳತಿ ಸ್ವಲ್ಪ ನ
ಗ್ರಾಹಕರನ್ನು ಸೆಳೆಯಲು ನಿಮ್ಮ ಕಡೆಗೆ ಗಾಡಿಯ
ತಳ್ಳುತ್ತಾರೆ. ಆಗ ನೀವು ಅವರ ಕಡೆಗೆ ಒತ್ತಿಕೊಳ್ಳು
ಹೀಗೆ ಒಬ್ಬರನ್ನೊಬ್ಬರ ಪೈಪೋಟಿಯಲ್ಲಿ ಒತ್ತುತ್ತಾ ಇಬ್ಬ
ಕೊನೆಗೆ ಮಧ್ಯಕ್ಕೇ ಬರುತ್ತೀರಿ. ಹೀಗೆಯೇ ಹಲ
ಆಡುತ್ತಿದ್ದರೂ/ಮಾರುತ್ತಿದ್ದರೂ ಎಲ್ಲರೂ ಒಂದೇ
ಸೇರಿ ವ್ಯವಹರಿಸುತ್ತಾರೆ. ಪ್ರತಿಯೊಬ್ಬರಲ್ಲೂ ಸ್ವಲ್ಪ ಕದಲಿದ
ನಷ್ಟ ಖಂಡಿತಾ ಎಂಬ ಇಕ್ವಲಿಬ್ರಿಯಂ-ಸ್ಥಿರ ಪರಿಕಲ್ಪ
ಬಂದಿರುತ್ತೀರಿ. ಇದೇ ಸರಳವಾಗಿ ನ್ಯಾಶ್ ಇಕ್ವಲಿಬ್ರಿ
ವಿವರ. ಇದನ್ನು ಬಹು ದೊಡ್ಡ ಪೈಪೋಟಿಗಳಲ್ಲಿ ಅದ
ಜನರಿದ್ದಾರೆ? ಗ್ರಾಹಕರ ದೂರ ಎಷ್ಟೆಷ್ಟು? ಯಾವ ಬಗ
ಸಂಚಾರ ನಿರ್ಣಯಿಸುತ್ತದೆ? ಇತ್ಯಾದಿಗಳ ಮೂ
ಗಣೇತೀಯವಾಗಿ ಲೆಕ್ಕಾಚಾರ ಹಾಕಿ ಲಾಭದ ಏರಿಕೆಯ
ಮಾಡಬಹುದಾದ ಸಿದ್ಧಾಂತ ಗೇಮ್ ಸಿದ್ಧಾಂತ!
ಮನಸ್ಸನ್ನು ಗಣೇತೀಯವಾಗಿ ಅಳೆಯುವ, ಆ ಮೂ
ಪೈಪೋಟಿಯನ್ನು ಲಾಭದ ಕಡೆಗೆ ಒಯ್ಯುವ ಜಾಣತನ
ಜಾನ್(ಜಾಣ)ನ್ಯಾಶ್ ತಾರ್ಕಿಕವಾಗಿ ವಿವರಿಸಿದ್ದರು.

ಇದನ್ನು ಬಳಸಿ ಆಧುನಿಕ ಅರ್ಥಶಾಸ್ತ್ರೀಯ ವಿವರಗ
ಮುಖ್ಯವಾಗಿ ಷೇರು ವ್ಯವಹಾರಗಳಲ್ಲಿ ಮನುಷ್ಯರ ಮನ
ಭವಿಷ್ಯತ್ತಿನ ಲಾಭದ ಸ್ಥಿರತೆಯಲ್ಲಿ ಗಣಿತದ ಮೂ
ಅಳೆಯಲಾಗುತ್ತದೆ. ಇದರ ತಾರ್ಕಿಕ ವಿವರಗಳ ಬಳಕೆಯಿ
ಅರ್ಥಶಾಸ್ತ್ರವು ಗಣಿತಕ್ಕೆ ಹತ್ತಿರವಾಗುತ್ತಾ ಬೆಳೆಯಿ
ಮಾತ್ರವಲ್ಲ ಅದರಿಂದಾಗಿ ಅರ್ಥಶಾಸ್ತ್ರವು ವೈಜ್ಞಾ
ಗುರಿಗಳನ್ನು ಅಳೆಯಲು ಬಳಸುವ ಸಾಧನವಾಗಿ ಬೆಳೆಯಿ
ಸಹಜವಾಗಿ ಅರ್ಥಶಾಸ್ತ್ರದಲ್ಲಿ ನೊಬೆಲ್ ಬಹುಮಾನ ನ
ಅವರಿಗೆ ಒಲಿಯಿತು. ಅನೇಕ ಗಣಿತಶಾಸ್ತ್ರಜ್ಞರ ಪ್ರ
ಇದೊಂದು ಮಹತ್ತರ ಬೆಳವಣಿಗೆ ನಿಜ ಆದರೆ ಅ
ಗಣಿತದಲ್ಲಿ ನ್ಯಾಶ್ ಸಾಧನೆ ಇನ್ನೂ ಅದ್ವಿತೀಯ ಎ
ಹೇಳುತ್ತಾರೆ. ಯೂಕ್ಲೀಡಿಯನ್ ಗಣಿತದ ವಿವರಗ
ವಿಮರ್ಶೆಗೆ ಒಳಪಡಿಸಿದ್ದು, ಜ್ಯಾಮಿತಿಯ ಸಿದ್ಧಾಂತಗ
ಕುರಿತೂ ಅಲ್ಲದೆ ಜತೆಗೆ ಕಲನಶಾಸ್ತ್ರದಲ್ಲೂ ತಮ್ಮ
ತೋರಿಸಿದ್ದಾರೆ. ಗಣಿತದಲ್ಲಿ ಹಿಲ್‌ಬರ್ಟ್‌ರ ಹತ್ತೊಂಬತ್ತ
ಪ್ರಮೇಯ ಬಹುಕಾಲ ತಲೆಕೆಡಿಸಿತ್ತು, ಅದನ್ನು ಉತ್ತರಿ
ವಿವರಗಳನ್ನು 1956ರಲ್ಲೇ ನೀಡಿದ್ದು ನ್ಯಾಶ್ ಅವರ ವಿಶೇ
ಆಗಲೂ ಅವರ ಮನಸ್ಸು ಅನಾರೋಗ್ಯದಿಂದ ಇತ್ತೆಂಬ
ಗಮನಾರ್ಹ. ಆದರೆ ಅದರ ಖುಷಿ ಅವರಲ್ಲಿ ಉಳಿಯ
ಕಾರಣ ಒಂದು ತಿಂಗಳ ಮೊದಲಷ್ಟೇ ಅದನ್ನು ಇಟಲಿ
ಇನ್ನೋ ಗಿಯೊರ್ಗಿ ಬಿಡಿಸಿದ್ದರು. ಇದನ್ನು ಒಬ
ಬಿಡಿಸಿದ್ದಲ್ಲಿ ಗಣಿತ ಶ್ರೇಷ್ಠ ಪ್ರಶಸ್ತಿಯಾದ ಫೀಲ್ಡ್ ಮೆ
ಸಿಗುತ್ತಿತ್ತು ಎಂದು ಅನೇಕರ ಅನಿಸಿಕೆ. ಅದೇನೇ ಇ
ಅದನ್ನೂ ಮೀರಿ ಬದುಕಿದ್ದು ಜಾನ್ ನ್ಯಾಶ್ ಅ
ಅದ್ಭುತ ಸಾಧನೆ. ಅದಕ್ಕೆ ಜೊತೆಯಾದವರು ಅಲೀಸಿ
ಇಬ್ಬರೂ ಇಲ್ಲದ ಈ ಹೊತ್ತಿನಲ್ಲಿ ಇದೊಂದು
ನೆನಪು.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧನೆಂಬ ವೈದಿಕರ ದುಃಸ್ವಪ್ನ

...ಹಿಂದೂ ಧರ್ಮವೆಂದು ಕರೆಯಲಾಗುವ ಈ ಒಂದು ...ಕ ಚೌಕಟ್ಟಿಗೆ ಅನುಗುಣವಾಗುವಂತೆ ಸದ್ಯಕ್ಕೆ ...ರುವ ಗ್ರಂಥಗಳಾವುವೂ ಮೂಲರೂಪದಲ್ಲಿ ಉಳಿದಿಲ್ಲ, ...ವೂ ಕಾಲದಿಂದ ಕಾಲಕ್ಕೆ ಪರಿಷ್ಕೃತಗೊಳ್ಳುತ್ತಾ ...ರುವಂತವೇ ಆಗಿದೆ. ಅದು ಎಲ್ಲರಿಗೂ ಇರಬೇಕಾದ ...ಸಾಧಾರಣವಾಗಿ ಇರುವಂತಹ ತಿಳಿವಳಿಕೆ. ಆಯಾ ...ಘಟ್ಟದಲ್ಲಿ ಪ್ರಸ್ತುತವಾಗಿದ್ದ, ಗ್ರಾಸವಾಗುವಂತಹ ...ರಗಳೆಲ್ಲವೂ ಕೂಡ ಸೇರುತ್ತಾ ಬಂದಿದ್ದವು. ಇದಕ್ಕೆ ...ಗಳೂ ಹೊರತಲ್ಲ, ಉಪನಿಷತ್ತುಗಳೂ ಹೊರತಲ್ಲ, ...ಮಾಯಣ ಮತ್ತು ಮಹಾಭಾರತದಂತಹ ಕಾವ್ಯಗಳೂ ...ರತಲ್ಲ, ಅಷ್ಟೇ ಏಕೆ? ಹಿಂದೂ ಧರ್ಮಗ್ರಂಥವೆಂದು ...ರಾತುರವಾಗಿ ನಿರ್ಣಯಿಸಿಕೊಂಡಿರುವ ...ದ್ಗೀತೆಯೂ ಹೊರತಲ್ಲ.

...ತ್ಯಂತ ಪ್ರಾಚೀನ ಎನ್ನುವ ಋಗ್ವೇದದ ಆರಂಭಿಕ ...ಯುಗಳನ್ನು ನಂತರದ ದಿನಗಳಲ್ಲಿ ಸೇರಿಸಿದರೆ, ...ಪನಿಷತ್ತಿನಂತಹ ಗಂಭೀರವಾದ ಉಪನಿಷತ್ತು ...ಬದಲ್ಲಿ ಇದ್ದಂತಹ ತನ್ನ ವಿಷಯಗಳ ಜೊತೆಗೆ ...ಮಹಾತ್ಮೆಯಂತಹ ವಿಷಯಗಳನ್ನೆಲ್ಲ ನಂತರ ...ಕೊಂಡು ದೊಡ್ಡದಾಗಿ ಬೆಳೆದಿರುವುದು ಕಾಣಸಿಗುತ್ತದೆ. ...ಉಪನಿಷತ್ತುಗಳಂತೂ ತೀರಾ ಇತ್ತೀಚಿನವು. ...ಮಾಯಣವು ಆರ್ಯ ದ್ರಾವಿಡರ ಸಂಘರ್ಷವು ...ವಾಗುತ್ತಾ ಬಂದಂತೆ ನಾನಾರೂಪಗಳನ್ನು ತಾಳುತ್ತಾ ...ರೆ, ವಿವಿಧ ಭೌಗೋಳಿಕ ಸಂಸ್ಕೃತಿಗಳೆನ್ನೆಲ್ಲಾ ತನ್ನೊಳಗೆ ...ಕೊಂಡು ಜಯ ಎಂಬ ಸಣ್ಣ ದಾಯಾದಿಗಳ ಕಲಹದ ...ಮು ದೊಡ್ಡ ಮಹಾಭಾರತವಾಗಿ ಬೆಳೆಯಿತು. ...ಗಿಯೇ ಹಿಂದೂ ಸಂಸ್ಕೃತಿಗೆ ಒಂದು ಸಾಂಸ್ಥಿಕವಾದ


ಪರಂಪರೆಯಿಂದ ಬಂದಿರುವುದೇ ಆಗಿತ್ತು, ಮೋಸಸ್‌ನ ಕಾಲದಲ್ಲೂ ಈಜಿಪ್ಟಿನಲ್ಲಿ ಆಗ ಲಿಪಿಯು ಮೂಡತೊಡಗಿದ್ದು ಮಣ್ಣಿನ ಹಲಗೆಗಳ (ಟ್ಯಾಬ್ಲೆಟ್) ಮೇಲೆ. ನಂತರ ಚರ್ಮದ ಮತ್ತು ಬಟ್ಟೆಯ ಪದರಗಳ ಮೇಲೆ. ನಂತರ ಅವು ಸುರುಳಿಗಳೆಂದು (ಸ್ಕ್ರೋಲ್) ಅನಿಸಿಕೊಂಡವು. ವಿವಿಧ ಕಾಲಗಳಲ್ಲಿ ವಿವಿಧ ಬರಹಗಾರರಿಂದ, ವಿವಿಧ ಸ್ಥಳಗಳಲ್ಲಿ ಬರೆಯಲ್ಪಟ್ಟ ಅವೆಲ್ಲವೂ ಒಟ್ಟೊಟ್ಟಾಗಿ ನಂತರ ನಮಗೆ ಇಂದು ಸಮಗ್ರವಾಗಿ ದೊರಕಿರುವುದು. ಅರಾಮಿಕ್, ಹೀಬ್ರೂ ಭಾಷೆಗಳಲ್ಲಿದ್ದ ಆ ಹಳೆಯ ಶೈಲಿಯ ಬರಹಗಳು ನಾನಾ ಭಾಷೆಗಳಿಗೆ ಅನುವಾದಗಳಾಗುತ್ತಾ, ನಮಗೆ ತಿಳಿದಿರುವ ಭಾಷೆಯಲ್ಲಿ ಅನುವಾದಿತಗೊಂಡು ನಮ್ಮ ಅರಿವಿಗೆ ಮುಟ್ಟುವಷ್ಟರಲ್ಲಿ ಏನೇನೆಲ್ಲಾ ಬದಲಾವಣೆಗಳಾಗಿರುತ್ತವೆಯೋ! ಇಷ್ಟಕ್ಕೂ ಬೈಬಲ್ ಸಮಾಜದ ವಿವಿಧ ಸ್ತರಗಳಿಂದ ಬಂದಿರುವಂತಹ ಸುಮಾರು ನಲವತ್ತಕ್ಕೂ ಹೆಚ್ಚು ಜನ ರಚಿಸಿರಬಹುದೆಂದು ಗುರುತಿಸುವ ಯತ್ನವನ್ನು ಪಂಡಿತರು ಮಾಡುತ್ತಾರೆ. ಅದರಲ್ಲೂ ಈ ವಿವಿಧ ರಚನಕಾರರು ಬೆಸ್ತರು, ಬಿಡಾರ ನಿರ್ಮಾಣ ಮಾಡುವವರು, ವೈದ್ಯರು, ಕುರುಬರು, ರೈತರು, ಪಂಡಿತರು, ತತ್ವಜ್ಞಾನಿಗಳು, ರಾಜರು; ಹೀಗೆ ನಾನಾ ಬಗೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಗಳನ್ನು ಉಳ್ಳವರಾಗಿದ್ದಾರೆ. ಆದರೆ ಅವರೆಲ್ಲರ ಉದ್ದೇಶವೂ ಪೂರಕವಾಗಿದ್ದರಿಂದ ಅವುಗಳನ್ನೆಲ್ಲಾ ಒಟ್ಟುಗೂಳಿಸಿ ಸಮಗ್ರವಾಗಿ ಇಂದು ಸ್ವೀಕರಿಸಲಾಗಿದೆ. ಹಾಗಾಗಿಯೇ ವಿವರಣೆಗಳಲ್ಲೂ ವಿವಿಧ ಬಗೆಗಳು ಕಾಣುತ್ತವೆ.

ಹಾಗೆಯೇ, ಯೇಸುವು ತಾನು ಏನನ್ನೂ ಬರೆದಿಟ್ಟಿರಲಿಲ್ಲ, ಹೋಗಲಿ ಆತ ಸತ್ತ ನಂತರವೂ ಏನೂ ರಚಿತವಾದುದಲ್ಲ. ಜೆರೂಸಲೇಂನ ಜನರು ಆತನನ್ನು ನೇರವಾಗಿ ನೋಡಿದ್ದು, ಸಮಕಾಲೀನರಾಗಿದ್ದು ಅದನ್ನು ತಮ್ಮತಮ್ಮಲ್ಲಿಯೇ ಬರೆದು ಹರಡುವಂತಹ ಅಗತ್ಯವೇನೂ ಇರದೇ, ಬಾಯಿಂದ ಬಾಯಿಗೆ ಮಾತುಗಳಲ್ಲಿ ವಿನಿಮಯ

ಗ್ರಂಥವಾಗಿದೆ. ಈಚೆಗೆ ಬೌದ್ಧ ಧರ್ಮಕ್ಕೆ ಸಂಬಂಧ ಪಟ್ಟಂತೆ ಹಲವಾರು ಸಂಸ್ಕೃತ ಗ್ರಂಥಗಳು, ಮಹಾವಸ್ತುವೆಂಬ ಗ್ರಂಥವು ಪಾಲಿ ಮತ್ತು ಸಂಸ್ಕೃತ ಮಿಶ್ರಿತವಾಗಿದ್ದು, ನಂತರ ಅಶ್ವಘೋಷನ 'ಬುದ್ಧ ಚರಿತ' ಹಾಗೆಯೇ ಪಾಲಿಯ ಜಾತಕ ಕಥೆಗಳನ್ನೆಲ್ಲಾ ಆಧರಿಸಿಕೊಂಡು ಒಂದು ಬುದ್ಧನ ಜೀವನ, ಬೋಧನೆ ಮತ್ತು ಸಾಧನೆಯ ಪ್ರತಿಮೆಯನ್ನು ಕಟ್ಟಿಕೊಳ್ಳಬಹುದು. ಇಲ್ಲಿಯೂ ಕೂಡ ಸಮಾಜದ ಹಲವಾರು ಸ್ತರಗಳಿಂದ ಬಂದು ಸಂಘದ ಸದಸ್ಯರಾಗಿದ್ದು ಮತ್ತು ಬಿಡಿಬಿಡಿಯಾಗಿ ಕೃತಿಗಳನ್ನು ರಚಿಸಿರುವ ಕಾರಣದಿಂದ ಬುದ್ಧನನ್ನು ಹಲವಾರು ರೀತಿಗಳಲ್ಲಿ ಚಿತ್ರಿಸಲಾಗಿದೆ. ಇದೇ ಬುದ್ಧನ ಬೋಧನೆ, ಜೀವನ ಮತ್ತು ಸಾಧನೆ ಎಂದು ಏನನ್ನು ಹೇಳುವುದು? ಹೇಗೆ ಗುರುತಿಸುವುದು? ಯಾವುದೋ ಒಂದು ಕಾಲಘಟ್ಟದ ನಂತರ ದಾಖಲಿತವಾಗಿ ಬಹಳ ಪ್ರಚಲಿತಕ್ಕೆ ಬಂದು ಜನಪ್ರಿಯವಾಗಿರುವಂತಹ ಸ್ವರೂಪಗಳನ್ನೇ ಗಮನಿಸಿಕೊಂಡು, ಸಾಗಿಸಿಕೊಂಡು ಬಂದಿರುತ್ತೇವೆ.


ಒಲವು ನಿಲುವುಗಳ ವಾಲುವಿಕೆಗಳು


ವ್ಯಕ್ತಿಗತವಾದಂತಹ ಒಲವು, ನಿಲುವುಗಳು ಗಾಢವಾಗಿದ್ದಂತೆ ಕೃತಿಕಾರರ ಧೋರಣೆಯ ವಿಷಯಗಳೂ ಸಹಜವಾಗಿ ನೇರವಾಗಿ ಮೇಳೈಸಬಹುದು ಅಥವಾ ಸೂಚ್ಯವಾಗಿ ಧ್ವನಿಸಬಹುದು. ಹಾಗೆಯೇ ಓದುಗರೂ, ವಿವರಣಕಾರರೂ ಕೂಡ ತಮ್ಮ ಒಲವು, ನಿಲುವು, ಸಿದ್ಧಾಂತಗಳಿಗೆ ಅನುಗುಣವಾಗಿಯೇ ವಿಷಯಗಳನ್ನು ಮತ್ತು ಕೃತಿಯಲ್ಲಿನ ಧ್ವನಿಗಳನ್ನು ಆಯ್ಕೆ ಮಾಡುತ್ತಾರೆ ಅಥವಾ ತಮ್ಮದೇ ರೀತಿಯಲ್ಲಿ ವಿಶ್ಲೇಷಿಸುತ್ತಾರೆ. ಹಾಗಾಗಿಯೇ ಬುದ್ಧನ ಕಥೆಗಳಲ್ಲಿ ಬ್ರಹ್ಮ, ಇಂದ್ರಾದಿ ವೈದಿಕ ದೇವತೆಗಳೂ ನುಸುಳುತ್ತಾರೆ. ವೈದಿಕರ ವಿಷ್ಣುವಿನ ಅವತಾರಗಳಲ್ಲಿ ಬುದ್ಧನೂ ನುಸುಳುತ್ತಾನೆ.




ಮತ್ತು ಸಮಾಜದ ಕೃತಿಗಳಲ್ಲಿ ನಾನಾ ಬಗೆಯ ವೈವಿಧ್ಯತೆಗಳನ್ನು ಕಾಣುತ್ತಾ ಹೋಗುತ್ತೇವೆ. ಪರಸ್ಪರರ ಉಲ್ಲೇಖಗಳು, ಸಮರ್ಥನೆಗಳು, ನಿಂದನೆಗಳು ಇತ್ಯಾದಿಗಳೂ ಧಾಳಾಗಿ ಇರುತ್ತವೆ.

ಉಳುಮೆ ಮಾಡಿಕೊಂಡು, ಶೂದ್ರಾದಿ ಪಂಚಮರ ಕೆಲಸಗಳನ್ನು ಮಾಡಿಕೊಂಡಿದ್ದವರು, ಮೈ ತೊಳೆಯದವರು, ಪಶುಗಳನ್ನು ತೊಳೆದುಕೊಂಡಿದ್ದವರು ಒಂದು ದಿನ ಬುದ್ಧನಂತಹ ಕರುಣಾಮಯಿಯ ಸ್ವೀಕೃತಕ್ಕೆ ಒಳಗಾದವರು ತಮ್ಮ ಸ್ಥಾನವನ್ನು ಈಗಿಟ್ಟಿರುವ ಎಡೆಯಿಂದ ಬೇರೆಯಾಗಿಯೇ ನೋಡಿಕೊಳ್ಳಲು ಸಾಧ್ಯವಾಗಿತ್ತು. ಅವರಿಗೆ ನಾವು ಯಾವ ರೀತಿಯಲ್ಲಿ ತುಳಿತಕ್ಕೆ ಒಳಗಾಗಿದ್ದೇವೆ ಎಂದು ಅರಿವಾಗುವ ಬೆಳಕು ಮೂಡತೊಡಗಿತ್ತು. ಅವರ ಸೇವೆ ಮತ್ತು ಅಗತ್ಯಗಳನ್ನು ಬಿಡಲಾಗದ ಮೇಲ್ವರ್ಗದ ಜ್ಞಾನಮೂರ್ತಿಗಳು ಅವರನ್ನು ಮತ್ತೆಲ್ಲೋ ಹೋಗದಂತೆ ತಡೆದು ತಮ್ಮ ಬಳಿಯೇ ಇರಿಸಿಕೊಳ್ಳುವ ಅಗತ್ಯವೂ ಇತ್ತು. ಹಾಗಾಗಿ ಹೊಸ ಹೊಸ ಕಥೆಗಳನ್ನು ಮತ್ತೆ ಮತ್ತೆ ಹೊಸೆಯುವ ಅನಿವಾರ್ಯತೆಗಳು ಇದ್ದವು. ಹಾಗೆಯೇ ತಮ್ಮದೇ ಜನರಿಗೂ ತಾವು ಮಾಡುತ್ತಿರುವ ಮಾರ್ಪಾಟಿನ ವಿಷಯಗಳ ಅಗತ್ಯವನ್ನೂ ಹೇಳಬೇಕಾಗುತ್ತಿತ್ತು. ಹೀಗೆ ಎರಡೂ ಕಡೆ ಕೆಲಸ ಮಾಡುವ ಒತ್ತಡದಿಂದ ವೈದಿಕ







...ರ್ಮಿಕ ರೂಪವನ್ನು ಕೊಡಲು ಸಾಧ್ಯವೇ ಇಲ್ಲ. ...ಟ್ಟಿಕೊಳ್ಳುವವರೆಲ್ಲಾ ಹಿಂದೂಗಳು, ತಾಳಿ ಕಾಲುಂಗುರ ...ಕೊಳ್ಳುವವರೆಲ್ಲಾ ಹಿಂದೂಗಳು ಎಂಬ ಸಂಕುಚಿತ ...ತಗಳಿಂದ ಧಾರ್ಮಿಕತೆಯನ್ನು ಭದ್ರಗೊಳಿಸಲು ಈ ...ದಲ್ಲಿ ಎಂದಿಗೂ ಸಾಧ್ಯವೇ ಇಲ್ಲ. ಹಾಗಾಗಿಯೇ ...ನೇತ ವೈವಿಧ್ಯತೆಗಳಿಂದ ಕೂಡಿರುವ ಅನೇಕಾನೇಕ ...ದೂ ಗ್ರಂಥಗಳು ನಮಗೆ ಸಿಗುತ್ತವೆ. ಹಾಗೂ ಅವು ...ಗೂ ಒಂದೇ ಮಾತನ್ನು ಹೇಳಲಾಗದಷ್ಟು ...ರ್ಣವಾಗಿದೆ. ಇದರ ಅರ್ಥ ಅವುಗಳು ವ್ಯರ್ಥವೆಂದೋ ...ಪರ್ಜ್ಯವೆಂದೋ ಅಲ್ಲ. ನಮ್ಮ ಭಾರತದೇಶದ ...ಸ್ಕೃತಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ಸರಕುಗಳನ್ನು ...ಒದಗಿಸುತ್ತವೆ. ಗ್ರೀಕ್ ದೇಶದಲ್ಲಿ ಹುಟ್ಟಿರುವಷ್ಟು ...ಪುರಾಣಗಳು ಇನ್ನಾವ ದೇಶದಲ್ಲೂ ಅಷ್ಟೊಂದು ...ಕಾಲದಲ್ಲಿ ಹುಟ್ಟಿರಲೇ ಇಲ್ಲವೇನೋ. ಆದರೆ ಅವರು ...ನ್ನು ಬರಿದೇ ಉಲ್ಲೇಖಗಳಿಗೆ, ಪರಾಮರ್ಶೆಗೆ ...ಕೊಂಡು ಅಧ್ಯಯನ ಮಾಡುತ್ತಾರೆಯೇ ಹೊರತು, ...ಮೂಲತ್ವವಾದಿಗಳಂತೆ ಅದೇ ಸತ್ಯ, ಅದೇ ನಮ್ಮ ಸನಾತನ ...ರ್, ಅದನ್ನು ಉಳಿಸಬೇಕು ಎಂದು ಒಳಗೆ ಜಾಕಿ ...ವೇರ್ ಹಾಕಿಕೊಂಡು ಮೇಲೆ ಕಚ್ಚೆ ತೊಟ್ಟುಕೊಂಡು, ...ಯುಲ್ ಸೆಟ್ ಲೈಟ್ ಬಿಟ್ಟುಕೊಂಡು, ಸಿದಿಯಲ್ಲಿ ...ತ್ರಗಳನ್ನು ಹಾಕಿಕೊಂಡು ಪೂಜೆಗಳನ್ನು ...ಡಿಕೊಂಡಿರುವುದಿಲ್ಲ, ಆಗಿನ ಜನರ ಪರಿಕಲ್ಪನೆಗಳನ್ನು ...ಮರ್ಶೆ ಮಾಡುವ ಮೂಲಕ ಅವುಗಳನ್ನು ...ಮನಶೀಲವಾಗಿ ಗೌರವಿಸುತ್ತಾರೆ ಮತ್ತು ಈಗಿನ ನವೀನ ...ಗದ ವಿಕಾಸಕ್ಕೆ ನೇರವಾಗಿ ಒಳಗಾಗುತ್ತಾರೆ.

ಬರೆಯದ ಜ್ಞಾನಿಗಳು

...ತುಕಾರಾಮ್ ಮೊದಲಾದ ಸಂತರು ತಮ್ಮ ಧ್ವನಿ ... ಧೋರಣೆಗಳನ್ನು ಅಭಂಗಗಳಲ್ಲಿ ಬರೆದಿಟ್ಟಂತೆ, ...ಬಸವಣ್ಣನೇ ಮೊದಲಾದ ಶರಣರು ವಚನಗಳನ್ನು ...ಬರೆದಿಟ್ಟಂತೆ ಕ್ರಿಸ್ತನಾಗಲಿ, ಬುದ್ಧನಾಗಲಿ ತಮ್ಮ ...ಬೋಧನೆಗಳನ್ನು ಸ್ವತಃ ಬರೆದಿಡಲಿಲ್ಲ.

...ಬೈಬಲ್ಲಿನ ಹಳೆಯ ಒಡಂಬಡಿಕೆಯೂ ಗೀತೆ, ಕಥೆ ... ಕಾವ್ಯಗಳ ರೂಪದಲ್ಲಿ ಜನರ ಮೌಖಿಕ

ಮಾಡಿಕೊಳ್ಳುತ್ತಿದ್ದರು. ಪ್ರಾಯಶಃ ಅವರ ವ್ಯಾಪ್ತಿ ಪ್ರದೇಶಗಳಿಂದ ಹೊರಗೆ ಕಳುಹಿಸುವಂತಹ ಸಂದರ್ಭಗಳು ಒದಗಿದಾಗ ಬರೆಯತೊಡಗಿದರೆನ್ನಿಸುತ್ತದೆ. ಅದೇನೇ ಆಗಲಿ ಯೇಸುವು ಬದುಕಿರುವಾಗ ನೇರವಾಗಿಯೇ ಅವನ ಮಾತುಗಳನ್ನು ಕೇಳುತ್ತಿದ್ದ ಜನರು ಸರಿಯಾಗಿ ಅರ್ಥೈಸಿಕೊಳ್ಳದ ಜನರು, ಅವನು ಸತ್ತ ಮೇಲೆ ಇನ್ನೆಷ್ಟರಮಟ್ಟಿಗೆ ಅರಿವಿಗೆ ತಂದುಕೊಂಡರೋ ತಿಳಿಯದು. ಆದರೂ ಹಲವಾರು ಜನರು ಒಂದು ಬಗೆಯಾಗಿ ಹೇಳುವ ವಿಷಯಗಳನ್ನು ಕ್ರೋಢೀಕರಿಸಿ ಅವುಗಳಲ್ಲಿ ಹೊಟ್ಟನ್ನು ಹಾರಿಸಿ ಕಾಳುಗಳನ್ನು ಉಳಿಸಿಕೊಳ್ಳಬಹುದಾದ ಅವಕಾಶಗಳು ಇರುತ್ತವೆ. ಯೇಸುವಿನ ಬಗ್ಗೆ ಇರುವ ಕಥೆಗಳು, ಐತಿಹ್ಯಗಳು, ಆಗಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಕ್ಕೆ ಆತ ನೀಡಿರುವ ಪ್ರತಿಕ್ರಿಯೆಗಳು, ಸ್ಪಂದಿಸಿರುವ ರೀತಿನೀತಿಗಳು, ಹೇಳಲ್ಪಟ್ಟಿವೆ ಎಂದು ನಂಬಲಾದ ಬೋಧನೆಗಳು, ಆಗಿನ ಸಾಮಾಜಿಕ ನಡಾವಳಿಗಳು; ಇತ್ಯಾದಿಗಳನ್ನು ಪರಸ್ಪರ ತಾಳೆ ನೋಡುತ್ತಾ ಅಧ್ಯಯನ ಮಾಡಿದ್ದೇ ಆದರೆ ಜೀವನ, ಬೋಧನೆ ಮತ್ತು ಸಾಧನೆಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ.

ಹಾಗೆಯೇ ಬುದ್ಧನೂ ಸಹ ತಾನಾಗಿ ಏನನ್ನೂ ಬರೆದಿಟ್ಟಿಲ್ಲ, ಬೌದ್ಧ ಧರ್ಮಕ್ಕೆ ಸಂಬಂಧಪಟ್ಟಂತಹ ಯಾವ ಗ್ರಂಥವೂ ಬುದ್ಧನ ಕಾಲದಲ್ಲಿ ಬರೆಯಲ್ಪಟ್ಟಿದ್ದಲ್ಲ ಎಂದು ದೇವಿಪ್ರಸಾದ್ ಚಟ್ಟೋಪಾಧ್ಯಾಯ ತಮ್ಮ ಸಂಶೋಧನಾ ಆಧಾರದಲ್ಲಿ ಹೇಳುತ್ತಾರೆ. ಅತಿ ಪುರಾತನ ಬೌದ್ಧ ಸಾಹಿತ್ಯಗಳೆಂದರೆ ಉಪನ್ಯಾಸಗಳು, ಉಕ್ತಿಗಳು, ಗೀತೆಗಳು, ಕಥೆಗಳು, ನಡವಳಿಕೆ ನಿಯಮಗಳೇ ಮೊದಲಾದ ಸಣ್ಣಸಣ್ಣ ಸಂಗ್ರಹಗಳು. ಈ ಸಂಗ್ರಹಗಳು 'ಪಿಟಕ'ಗಳೆಂಬ ದೊಡ್ಡ ಸಂಕಲನದಲ್ಲಿ ಸೇರಿಕೊಂಡಿವೆ. ಅಂತಹ ಮೂರು ಸಂಕಲನಗಳಿಗೆ ತ್ರಿಪಿಟಕಗಳು ಎಂದು ಕರೆಯುವುದು. ಪಾಲಿ ಭಾಷೆಯಲ್ಲಿರುವ ಇವು ವಿನಯ ಪಿಟಕ, ಸುತ್ತಪಿಟಕ, ಇವುಗಳಲ್ಲಿ ನಿಕಾಯಗಳು ಎಂಬ ಭಾಗಗಳು ಮತ್ತು ಅಭಿದಮ್ಮ ಪಿಟಕ ಎಂದು ಗುರುತಿಸಲ್ಪಡುತ್ತವೆ.

ಬೌದ್ಧ ಬೋಧಕ ನಾಗಸೇನ ಮತ್ತು ಗ್ರೀಕ್ ದೊರೆ ಮಿಲಿಂದ (ಕ್ರಿಸ್ತಪೂರ್ವ 125-95ರ ಸುಮಾರು) ಇವರಿಬ್ಬರ ಪ್ರಶ್ನೋತ್ತರಗಳು 'ಮಿಲಿಂದ ಪಂಹ' ಕೂಡ ಬೌದ್ಧ ಧರ್ಮ

ಅದೇನೇ ಪೌರಾಣಿಕ ಕಥಾನಕಗಳು ಉತ್ಪ್ರೇಕ್ಷೆಗಳಿಂದ ವಿಜೃಂಭಿಸಿದರೂ ಗುಪ್ತಗಾಮಿನಿಯಾಗಿ ಒಂದು ಆಶಯ, ಹಾರೈಕೆ, ನಿಲುವುಗಳು ಹರಿಯುತ್ತಲೇ ಇರುತ್ತದೆ. ಇವುಗಳನ್ನು ಗುರುತಿಸುವಂತಹ ಪ್ರಜ್ಞೆಯನ್ನು ಹೊಂದುವುದೇ ಓದುಗನ ಅಥವಾ ಅಧ್ಯಯನಕಾರನ ಸವಾಲು.


ಹಿಂದೆ ತಮ್ಮ ತಮ್ಮ ಕಸುಬು ಮತ್ತು ಜೀವನ ನಿರ್ವಹಣೆಯಲ್ಲಿ ನಿರತರಾಗಿರುತ್ತಿದ್ದಂತಹ ಸಾಮಾನ್ಯ ಜನರು ತಮ್ಮ ಸಮಯವನ್ನು ಕಲಿಕೆಗಾಗಲಿ, ಅಧ್ಯಯನಕ್ಕಾಗಲಿ ಕೊಡಲು ಸಾಧ್ಯವಿರದಿದ್ದರಿಂದ ಅವರು ಧಾರ್ಮಿಕವಾದ ಅಥವಾ ಆಧ್ಯಾತ್ಮಿಕವಾದಂತಹ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಧಾರ್ಮಿಕ ವ್ಯಕ್ತಿಗಳ ಬಳಿಗೆ ಹೋಗುತ್ತಿದ್ದರು. ಅವರುಗಳೋ ಧರ್ಮದ ಆಳ ಮತ್ತು ಎತ್ತರಗಳನ್ನು ಏನೇನೂ ತಿಳಿಯದ ಪೂಜಾರಿಗಳೋ, ಪುರೋಹಿತರೋ, ಅಡಕಸಬಿ ತಂತ್ರಿಗಳೋ ಆಗಿರುತ್ತಿದ್ದರು. ಸುಮಾರು ಮೂರು ಸಾವಿರ ವರ್ಷಗಳ ಹಿಂದೆಯೇ ನಮ್ಮ ಭಾರತದಲ್ಲಿ ಬ್ರಾಹ್ಮಣರ ಪುರೋಹಿತಶಾಹಿ ವರ್ಗವು ಜ್ಞಾನವೇ ಶಕ್ತಿ ಮತ್ತು ಅಧಿಕಾರ ಎಂಬುದನ್ನು ಕಂಡುಕೊಂಡು ಬಿಟ್ಟಿತ್ತು, ಅದರಿಂದಾಗಿಯೇ ಇತರರಿಗೆ ಆ ಶಕ್ತಿ ಮತ್ತು ಅಧಿಕಾರವನ್ನು ಕೊಡಲು ಅದು ಎಂದಿಗೂ ಸಿದ್ಧವಿರಲಿಲ್ಲ.

ಇನ್ನು ಸಂತರು ಅಥವಾ ದಾರ್ಶನಿಕರು ಅವರ ವ್ಯಾವಹಾರಿಕ ಮತ್ತು ಲೌಕಿಕ ಜೀವನಕ್ಕೆ ಪುಷ್ಟಿ ಕೊಡದೇ ಬರಿದೇ ಅಲೌಕಿಕವೂ, ಮುಕ್ತವೂ, ಉದಾರವೂ ಆದಂತಹ ಮಾರ್ಗವನ್ನು ಸೂಚಿಸುತ್ತಿದ್ದರು. ಇದರಿಂದ ಸಾಮಾನ್ಯ ಜನರ ಸಿಟ್ಟು, ಸೆಡವು, ಮತ್ಸರ ಇತ್ಯಾದಿಗಳು ಉಪಶಮನಗೊಳ್ಳುತ್ತಿರಲಿಲ್ಲ. ಪ್ರತಿಕ್ರಿಯಾತ್ಮಕವಾಗಿ ಪ್ರಚೋದಿಸುತ್ತಿರಲಿಲ್ಲ. ತಮ್ಮದೇನೋ ಅದು ಅಭಿಮಾನದಲ್ಲಿ ಉನ್ನತಗೊಂಡು ಅವರ ಅಹಂಕಾರಕ್ಕೆ ಪೋಷಣೆ ಸಿಗುತ್ತಿರಲಿಲ್ಲ, ತಮ್ಮ ವಿರುದ್ಧವಿರುವವರನ್ನು ತಮಗಿಂತ ಕೆಳಗೆಸೆದು ತಮ್ಮ ವಿಜಯವನ್ನು ಸಾಧಿಸಲಾಗುತ್ತಿರಲಿಲ್ಲ. ಆದರೆ, ಪುರಾಣಗಳ ರಚನಾಕಾರರು ಇವರೆಲ್ಲರ ಆಶಯಗಳಿಗೆ ಸ್ಪಂದಿಸಿದರು. ಹೆಮ್ಮೆ, ಗೆಲುವು, ಸೋಲು ಇತ್ಯಾದಿಗಳನ್ನು ತಂದು ಅವರ ಭಾವನೆಗಳನ್ನು, ಉನ್ಮತ್ತತೆಗಳನ್ನು ರಸಪೂರ್ಣವಾಗಿಯೂ, ರಂಗುರಂಗಾಗಿಯೂ ಇರುವಂತೆ ನೋಡಿಕೊಂಡರು. ಹಾಗಾಗಿಯೇ ವಿವಿಧ ಧಾರ್ಮಿಕ ಸಂಸ್ಕೃತಿ

ಸಾಹಿತ್ಯದಲ್ಲಿ ವಿಪುಲವಾದಂತಹ ಪುರಾಣಗಳು ಹುಟ್ಟಿಕೊಂಡವು. ಅಂತಹ ಅಗತ್ಯಗಳಿಗೆ ಹೊಸೆದುಕೊಂಡಂತಹ ಪುರಾಣಗಳನ್ನೇ ಸಾಮಾನ್ಯ ಜನರಿಗೆ ಹೇಳುತ್ತಿದ್ದರೇ ಹೊರತು, ಉಪನಿಷತ್ತುಗಳ ಅಂತರ್ಯವನ್ನೇನೂ ದೇಗುಲದ ಅರ್ಚಕರು ಹೇಳುತ್ತಿರಲಿಲ್ಲ. ಅವರಿಗೆ ದಕ್ಷಿಣೆ, ದಾನಗಳನ್ನು ಕೊಡುವವನೂ ತಾನು ಆತ್ಮವೆಂದೋ, ಸಿಂಧುವಿನಲ್ಲಿ ಸೇರಲು ಸಾಮರ್ಥ್ಯವಿರುವ ಬಿಂದುವೆಂದೋ ತಿಳಿಯುವುದು ಬೇಡವಾಗಿತ್ತು. ಪುರೋಹಿತರ ಅಸ್ತಿತ್ವವೇ ಕಳೆದುಹೋಗಿ ಸಮಭಾವ ಬಂದು, ಅವರಿಗೆ ಅಡ್ಡಬಿದ್ದು ಅವರ ಉದರ ಪೋಷಣೆಯನ್ನು ಸಲಹುವಂತಹ ವ್ಯವಸ್ಥೆಯೇ ಕುಸಿದುಹೋಗುತ್ತಿತ್ತು. ಅದಕ್ಕೇ ಅವನು ಸ್ವರ್ಗಕ್ಕೆ ಒಯ್ಯುವ ಸಾಧನದ ಟಿಕೆಟ್ ಏಜೆಂಟಿನವನಂತೆ ವರ್ತಿಸುತ್ತಿದ್ದ. ಈಗಲೂ ಅದೇ ಏಜೆಂಟಾಗಿ ಉಳಿದಿದ್ದಾನೆ. ಉಪನಿಷತ್ತು, ದರ್ಶನ ಇತ್ಯಾದಿಗಳ ಅರ್ಥಗಳನ್ನೆಲ್ಲಾ ದುಬಾರಿಗೊಳಿಸಿ ಆಧ್ಯಾತ್ಮಿಕ ಜಿಜ್ಞಾಸುಗಳ ಪಾಲಿಗಿಟ್ಟ. ಅಷ್ಟೇ ಅಲ್ಲ ಹಾಗೆಯೇ ಬಡವರನ್ನು, ಕಸುಬುದಾರರನ್ನೂ, ಕೂಲಿಕಾರರನ್ನೂ ದೇವಸ್ಥಾನದಿಂದ ಹೊರಗಿಟ್ಟ. ಪುರೋಹಿತನಿಗೆ ಅವರು ಒಳಗೆ ಬಂದು ಆಗಬೇಕಾದ್ದು ಏನೂ ಇರಲಿಲ್ಲ. ನೀನು ಬಡವನಾಗಿರುವುದೂ ಕೂಡ ಪೂರ್ವ ಸಂಚಿತ ಕರ್ಮದಿಂದಲೇ ಎಂದು ಹೇಳುತ್ತಾ ಇಪ್ಪತ್ತೆರಡು ಕರ್ಮಗಳನ್ನು ತುಲನೆ ಮಾಡಿಕೊಳ್ಳಲು ಇರಿಸಿದ. ಅಷ್ಟೂ ಕರ್ಮಗಳನ್ನು ಒಂದೇ ಜನ್ಮದಲ್ಲಿ ತೀರಿಸಿಕೊಳ್ಳಲು ಯಾವ ಬಂಪರ್ ಆಫರ್‌ಗಳೂ ಇಲ್ಲದೇ ಭಾರತದಲ್ಲಿ ನಮ್ಮ ಮುಗುದ ಪೂರ್ವಜರು ನರಳಾಡುತ್ತಿದ್ದ ಸಮಯದಲ್ಲಿ ಬುದ್ಧ ಹುಟ್ಟಿದ.

ಶ್ರೀಮಂತಿಕೆಯಲ್ಲಿ ಪುರೋಹಿತರು ವೈದಿಕ ಧರ್ಮದ ನೆರಳಲ್ಲಿ ಮಜಾ ಮಾಡುತ್ತಿರುವಾಗ, ಅಧಿಕಾರ ಮತ್ತು ಸಂಪತ್ತುಗಳಿಂದ ಮೆರೆಯುತ್ತಿದ್ದಾಗ ಅವರ ಸೋಗಿನ ಆಚರಣೆಗಳನ್ನು ಬಯಲು ಮಾಡಲು ಬುದ್ಧ ಬಂದವನೇ ಅವರ ಬುಡವನ್ನೇ ಅಲುಗಾಡಿಸಿದ. ಬುಡಕಟ್ಟಿನ ಮೂಲದ ಬುದ್ಧನಿಗೆ ಶಿಷ್ಟತೆಯ ಸೋಗಿನ ಶೋಷಣೆ ಅರ್ಥವಾಗುವುದು ಏನೂ ಕಷ್ಟವಾಗಲಿಲ್ಲ. ಆಗಲೇ ಬುದ್ಧನ ಬೋಧನೆಗಳು ಸಾಮಾನ್ಯರಿಗೆ ಹತ್ತಿರದಾಗಿದ್ದು, ಬುದ್ಧನು ಪುರೋಹಿತ ತಂತ್ರಿಗಳ ದುಃಸ್ವಪ್ನವಾಗಿದ್ದು! ■

ಚಿತ್ರರಂಗದವರಿಗೆ ಉತ್ತರ ಕರ್ನಾಟಕದವರು, ಕರಾವಳಿಯ ಜನ ಯಾಕೆ ಬೇಕಿಲ್ಲ



ತಮ್ಮ ಮೇ 27 ರ ಸಂಚಿಕೆಯಲ್ಲಿ ವರದಿಯಾಗಿರುವಂತೆ ನೇಪಾಳದ ಭೂಕಂಪ ಸಂತ್ರಸ್ತರ ನೆರವಿಗೆ ಕನ್ನಡ ಚಿತ್ರರಂಗದವರು ದೊಡ್ಡ ದೇಣಿಗೆ ನೀಡಿರುವುದು ಮಾನವೀಯ ನೆಲೆಯಲ್ಲಿ ನಿಜಕ್ಕೂ ಶ್ಲಾಘನೀಯ. ಆದರೆ ನಾಲ್ಕೈದು ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ ಭೀಕರ ಬರಗಾಲ ಬಿದ್ದು ಪ್ರಾಣಿಗಳು ಸಾರಾಸಗಟಾಗಿ ಸತ್ತು ಮನುಷ್ಯರು ಗುಳೆ ಹೋಗಬೇಕಾಗಿ ಬಂತು. ಮರು ವರ್ಷವೇ ಅತಿವೃಷ್ಟಿಯಿಂದ ಮತ್ತೆ ಉತ್ತರ ಕರ್ನಾಟಕ ತತ್ತರಿಸಿತು. ಆದರೆ ಬೆಂಗಳೂರಿನಲ್ಲಿ ಸುಖವಾಗಿ ನೆಲೆಸಿರುವ ನಮ್ಮ ಕನ್ನಡ ಚಿತ್ರರಂಗದವರಿಂದ ತಮ್ಮದೇ ಕನ್ನಡಿಗರ ಸಂಕಷ್ಟಗಳಿಗೆ ಒಂಚೂರು ಬಾಯಿಮಾತಿನ ಸಹಾನುಭೂತಿಯೂ ಸಿಗಲಿಲ್ಲ. ಕೇವಲ ಕನ್ನಡ ಚಿತ್ರಗಳನ್ನು ಮುಗಿಬಿದ್ದು ನೋಡಿ ನಿರ್ಮಾಪಕರ ಜೇಬು ತುಂಬಿಸಲು ಮಾತ್ರ ಸ್ಯಾಂಡಲ್‌ವುಡ್ಡಿನವರಿಗೆ ಉತ್ತರ ಕರ್ನಾಟಕದವರು ಬೇಕು. ಆದರೆ ಅವರ ಸಂಕಷ್ಟಗಳಿಗೆ ಸ್ಪಂದಿಸಬೇಕು ಎಂಬ ಕನಿಷ್ಠ ಮಾನವೀಯತೆಯೂ ಸ್ಯಾಂಡಲ್‌ವುಡ್ಡಿನವರಲ್ಲಿ ಇಲ್ಲ. ದೂರದ ನೇಪಾಳದ ಸಂತ್ರಸ್ತರಿಗೆ ಸಹಾಯ ಮಾಡಿದರೆ ರಾಷ್ಟ್ರಮಟ್ಟದ ಪ್ರಚಾರ ಸಿಗುತ್ತದೆ. ಆದರೆ ನಮ್ಮದೇ ಕನ್ನಡಿಗರಿಗೆ ಸಹಾಯ ಮಾಡಿದರೆ ರಾಜ್ಯದ ಗಡಿಯಾಚೆ ಸ್ವಲ್ಪವೂ ಪ್ರಚಾರ ಸಿಗುವುದಿಲ್ಲ. ಅದಕ್ಕಾಗಿ ತಮ್ಮವರೇ ಆದ ಉತ್ತರ ಕರ್ನಾಟಕದವರ ಸಂಕಷ್ಟಗಳ ಗೊಡವೆಯೇ ಕನ್ನಡ ಸಿನಿಮಾರಂಗದವರಿಗೆ ಬೇಡವಾಗಿರುವಂತಿದೆ!

ಕರಾವಳಿಯಲ್ಲಿ ಕೋಸ್ಟಾಲ್‌ವುಡ್ ಎಂದು ಕರೆಯಲಾಗುವ ತುಳು ಭಾಷೆಯ ಸಿನಿಮಾಗಳು ಮೊದಲೆಲ್ಲಾ ನಷ್ಟದ ಬಾಬತ್ತೇ ಆಗಿದ್ದು ಕೇವಲ ಆಗರ್ಭ ಶ್ರೀಮಂತರು ಖಯಾಲಿಗಾಗಿ ಮಾತ್ರ ತುಳು ಸಿನಿಮಾ ತಯಾರಿಸುತ್ತಿದ್ದರು. ಈಗ ಎರಡು ವರ್ಷದಿಂದ ಆರ್ಥಿಕವಾಗಿ ತುಳು ಭಾಷಿಕ ಸಿನಿಮಾ ಲಾಭದಾಯಕವಾಗಿದ್ದು ವರ್ಷಕ್ಕೆ ಐದಾರು ತುಳು ಸಿನಿಮಾಗಳು ನಮ್ಮ ಕರಾವಳಿಯಲ್ಲಿ ತೆರೆ ಕಾಣುತ್ತಿವೆ. ಆದರೆ ಇವನ್ನೂ ಕನ್ನಡಕ್ಕೆ ಡಬ್ ಮಾಡಿ ಕರ್ನಾಟಕದಲ್ಲೆಲ್ಲಾ ಪ್ರದರ್ಶಿಸಲು ಕನ್ನಡ ಚಿತ್ರರಂಗದ ದೊಣ್ಣೆ ನಾಯಕರು ಬಿಡುತ್ತಿಲ್ಲ. ತೆಲುಗು-ತಮಿಳು-ಹಿಂದಿ-ಇಂಗ್ಲಿಷ್ ಈ ಭಾಷೆಗಳ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವುದನ್ನು ವಿರೋಧಿಸಿದಂತೆ ತುಳು ಚಿತ್ರಗಳನ್ನೂ ಕನ್ನಡಕ್ಕೆ ಡಬ್ ಮಾಡಲು ಕನ್ನಡ ಚಿತ್ರರಂಗದ ಸ್ಥಾಪಿತ ಹಿತಾಸಕ್ತಿಗಳು ಬಿಡುತ್ತಿಲ್ಲ. ಆದರೆ ತುಳು ಕರ್ನಾಟಕದ್ದೇ ಒಂದು ಭಾಷೆ. ಅದು ತಮಿಳು ತೆಲುಗಿನಂತೆ ಹೊರ ರಾಜ್ಯದ ಭಾಷೆಯಲ್ಲ. ಹಾಗಿರುವಾಗ ತುಳು ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡುವುದನ್ನು ವಿರೋಧಿಸುವುದಕ್ಕೆ ಕನ್ನಡ ಚಿತ್ರರಂಗದವರಿಗೆ ಯಾವುದೇ ನೈತಿಕ ಅಧಿಕಾರವಿಲ್ಲ. ಹಾಗಾಗಿ ಕರಾವಳಿಯ ಕೆಲವು ತುಳು ಸಂಘಟನೆಗಳು ಇದರ ವಿರುದ್ಧ ಸಿಡಿದೆದ್ದು ಕನ್ನಡಿಗರೊಳಗೆಯೇ ಇದು ಒಡಕು ಮೂಡಿಸುವ ಸಾಧ್ಯತೆಯಿದೆ. ಇನ್ನೊಂದು ಮುಖ್ಯ ವಿಷಯವೆಂದರೆ ಹಾಲಿವುಡ್ಡಿನ ಅದ್ಭುತ ಇಂಗ್ಲಿಷ್ ಚಿತ್ರಗಳನ್ನು ಕನ್ನಡದಲ್ಲಿ ನೋಡುವ ಅವಕಾಶ ಕನ್ನಡ ಚಿತ್ರರಂಗದವರ ಸಂಕುಚಿತ ಬುದ್ಧಿಯಿಂದಾಗಿ ತಾವು ಕಳೆದುಕೊಳ್ಳುತ್ತಿದ್ದೇವೆ ಎಂದು ಕರಾವಳಿಗರಿಗೆ ಅನಿಸುತ್ತಿದೆ. ಹಾಲಿವುಡ್ಡಿನ ಉತ್ತಮ ಇಂಗ್ಲಿಷ್ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವುದನ್ನು ಕರಾವಳಿಯವರು ಪೂರ್ಣವಾಗಿ ಬೆಂಬಲಿಸುತ್ತಾರೆ. ಇಂಗ್ಲಿಷ್ ಮಾಧ್ಯಮದಲ್ಲಿಯೇ ಕಲಿತಿರುವ ಭಾರತೀಯರಿಗೂ ಅಮೆರಿಕನ್ ಇಂಗ್ಲಿಷಿನ ಉಚ್ಚಾರ ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಆದುದರಿಂದ ಹಾಲಿವುಡ್ ಚಿತ್ರಗಳನ್ನು ಮೂಲ ಇಂಗ್ಲಿಷ್ ಸಂಭಾಷಣೆಯೊಂದಿಗೆ ನೋಡಿದರೆ ಪ್ರತಿಯೊಂದು ದೃಶ್ಯ ಮತ್ತು ಡೈಲಾಗಿನ ಪೂರ್ತಿ ಮಜಾ ಆಸ್ವಾದಿಸಲು ಆಗುವುದಿಲ್ಲ. ಅದನ್ನೇ ಕನ್ನಡಕ್ಕೆ ಡಬ್ ಮಾಡಿದರೆ ಎಲ್ಲಾ ಡೈಲಾಗ್ ಮತ್ತು ದೃಶ್ಯಗಳು ಸರಿಯಾಗಿ ಅರ್ಥವಾಗಿ ಒಂದು ಚಿತ್ರವನ್ನು ಪೂರ್ಣವಾಗಿ ಆಸ್ವಾದಿಸಬಹುದು ಎಂಬುದು ಕರಾವಳಿಯ ಕನ್ನಡಿಗರ ಅನಿಸಿಕೆ. ಹಾಗಾಗಿ ಹಾಲಿವುಡ್ ಇಂಗ್ಲಿಷ್ ಚಿತ್ರಗಳ ಕನ್ನಡ ಡಬ್ಬಿಂಗಿಗೆ ಕರಾವಳಿಯಲ್ಲಿ ಪೂರ್ಣ ಬೆಂಬಲವಿದೆ. ಇದೇ ರೀತಿಯ ಅಭಿಪ್ರಾಯ ಉತ್ತರ ಕರ್ನಾಟಕದ ಜನರದ್ದೂ ಆಗಿದೆ. ಕನ್ನಡ ಚಿತ್ರರಂಗದ ಸ್ಥಾಪಿತ ಹಿತಾಸಕ್ತಿಗಳು ಇದನ್ನು ಅರ್ಥಮಾಡಿಕೊಳ್ಳದಿದ್ದರೆ ಮುಂದೆ ಅವರಿಗೇ ಭಾರಿ ನಷ್ಟ ಕಾದಿದೆ. ಮುಂಬೈ ಪುಣೆ ಹಾಗೂ ಕೊಲ್ಲಿ ರಾಷ್ಟ್ರಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವ ಕರಾವಳಿಯಲ್ಲಿ ಈಗಾಗಲೇ ಕನ್ನಡ ಚಿತ್ರಗಳು ಮಾರುಕಟ್ಟೆ ಕಳೆದುಕೊಳ್ಳುತ್ತಿವೆ.

- ಹರೀಶ್ ಎಂ ರಾವ್, ಬೆಳಗಾವಿ

ನೇಪಾಳದ ಬಗ್ಗೆ ತಪ್ಪು ಕಲ್ಪನೆಗಳು

ನೇಪಾಳದಲ್ಲಿ ಭೂಕಂಪವಾದ ನಂತರ ಬೇರೆ ಬೇರೆ ಕ್ಷೇತ್ರದ ಜನರು ನೇಪಾಳಕ್ಕೆ ಹೋಗಿ ಮರಳಿ ಬಂದು ತಮಗೆ ಅನುಕೂಲ ಆಗುವಂತೆ ಕಾಲ್ಪನಿಕ ವಿಷಯಗಳನ್ನು ನಮ್ಮಲ್ಲಿಯ ಮಾಧ್ಯಮಗಳ ಮೂಲಕ ಹರಡುತ್ತಿದ್ದಾರೆ. ಇದೇ ವಾರ ಕನ್ನಡದ ಒಂದು ಕೇಸರಿ ಪತ್ರಿಕೆ ಪ್ರಕಟಿಸಿದ ಲೇಖನದಲ್ಲಿ ಹೇಳಿರುವುದೇನೆಂದರೆ - ನೇಪಾಳದ ದಲಿತರು ಭಾರತದ ದಲಿತರಿಗಿಂತ ಹೆಚ್ಚು ಸಂಸ್ಕಾರವಂತರಾಗಿದ್ದಾರೆ ಹಾಗೂ ಹಿಂದೂ ಧರ್ಮದ ಅಭಿಮಾನಿಗಳಾಗಿದ್ದಾರೆ, ಹಾಗಾಗಿ ಅವರು ಯಾವುದೇ ಕಾರಣಕ್ಕೂ ಗೋಮಾಂಸ ಮುಟ್ಟುವುದೇ ಇಲ್ಲ. ನಿಜವಾಗಿ ಕನ್ನಡ ದೈನಿಕದಲ್ಲಿ ಈ ಸುದ್ದಿ ಪ್ಲಾಂಟ್ ಮಾಡಿರುವ ಸಂಘಿಗಳ ಉದ್ದೇಶವೆಂದರೆ ಗೋಮಾಂಸ ತಿನ್ನುವ ಭಾರತೀಯ ದಲಿತರು ಸಂಸ್ಕಾರವಿಲ್ಲದ ಹಿಂದೂ-ದ್ರೋಹಿಗಳು ಎನ್ನುವುದೇ ಆಗಿದೆ. ಆಹಾರ ಪದ್ಧತಿಯ ಆಧಾರದ ಮೇಲೆ ಜನರನ್ನು ಮೇಲುಕೀಳು ಎಂದು ವಿಂಗಡಿಸಿ ಅವಮಾನಿಸುವ ಪರಿಪಾಠ ಕೇವಲ ಭಾರತ ಬಿಟ್ಟು ಜಗತ್ತಿನಲ್ಲಿ ಬೇರೆಲ್ಲಿಯೂ ಇಲ್ಲ.

ಮಂಗಳೂರಿನ ಬೈಕಂಪಾಡಿ ಇಂಡಸ್ಟ್ರಿಯ... ಎಸ್ಟೇಟಿನಲ್ಲಿ ನೂರಾರು ನೇಪಾಳಿ ಹಿಂದೂಗಳು ಕೆ... ಮಾಡುತ್ತಾರೆ. ಹಿಂದೂ ಧರ್ಮ ಇದ್ದಲ್ಲೆಲ್ಲಾ ಮೇಲುಕೀಳ... ಜಾತಿಭೇದ ಇರಲೇ ಬೇಕು ತಾನೇ. ಅಂತೆಯ... ಬೈಕಂಪಾಡಿಯ ನೇಪಾಳಿಗಳಲ್ಲಿ ಹಲವಾರು ಜಾತಿಗಳ... ಇವರಲ್ಲಿಯೇ ಒಬ್ಬ ದಲಿತ ನೇಪಾಳಿ ನವ... ಹೇಳಿದ್ದೇನೆಂದರೆ "ನೇಪಾಳದಲ್ಲಿ ದಲಿತರು ಮಾತ್ರವಲ್ಲ... ಇನ್ನೂ ಹಲವು ಹಿಂದುಳಿದ ಜಾತಿಯ ಹಿಂದೂಗ... ಗೋಮಾಂಸ ತಿನ್ನುತ್ತಾರೆ" ಎಂದು.

ಪ್ರತಿ ಐದು ವರ್ಷಕ್ಕೊಮ್ಮೆ ನೇಪಾಳದ ಬಾರಿಯಾರ... ಎಂಬಲ್ಲಿ ಐದು ಲಕ್ಷದಷ್ಟು ಕೋಣ, ಆಡು, ಕ... ಎತ್ತುಗಳನ್ನು ಗಧಿಮಾಯಿ ಎಂಬ ದೇವಿಯ ದೇವಸ್ಥಾ... ಎದುರಿನ ಬಯಲಲ್ಲಿ ನಿಲ್ಲಿಸಿ ಕೊಚ್ಚಿ ಕೊಚ್ಚಿ ಕೊಲ... ಘೋರ ಭೀಭತ್ಸ ದೃಶ್ಯ ಯೂ-ಟ್ಯೂಬ್ ಮತ್ತು ಗೂಗಲ್... ಈಗಲೂ ಲಭ್ಯವಿದೆ. 2014 ನವಂಬರ್ ಕೊನೆ... ವಾರದಲ್ಲಿ ನಡೆದ ಈ ಭೀಭತ್ಸ ಜಾತ್ರೆಯ ದ... ಇಂಟರ್ನೆಟ್ಟಿನಲ್ಲಿ ನೋಡುವಾಗ ಎದೆ ನಡುಗುತ್ತದೆ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂ...

ನಿಜವಾದ ಸ್ಟಾರ್‌ಗಳೆಂದರೆ ಇವರೇ...

24-05-2015ರಂದು ನಾನು ಚಾರ್ಮಾಡಿ ಘಾಟ್... ಮೂಲಕ ಮೂಡಿಗೆರೆಗೆ ಹೋಗುತ್ತಿದ್ದಾಗ ಅಲ್ಲಲ್ಲಿ ಯುವ... ಗುಂಪು ರಸ್ತೆಯ ಬದಿಯಲ್ಲಿ ಯಾತ್ರಿಕ ಮಹಾಶಯ... ತಿಂದುಂಡು ಕುಡಿದು ಬಿಸಾಡಿದ ಪ್ಲಾಸ್ಟಿಕ್ ಚೀಲಗ... ಖಾಲಿ ಬಾಟಲಿಗಳು (ಜೆಚ್ಚಾಗಿ ಒಡೆದ ಮ... ಬಾಟಲಿಗಳು) ಇನ್ನಿತರ ವಸ್ತುಗಳನ್ನು ಗೋಣಿಚೀಲ... ಸಂಗ್ರಹಿಸುತ್ತಾ ಸ್ವಚ್ಛಗೊಳಿಸುತ್ತಿದ್ದರು. ನನಗೂ ಇವರೊ... ಸೇರುವ ಎಂಬ ಮನಸ್ಸಾದರೂ ಮೂಡಿಗೆರೆಯಲ್ಲಿ ಸ್ನೇಹಿ... ಮದುವೆ ಇರುವುದರಿಂದ ಹೋಗಲೇಬೇಕಾಯಿತು. ನ... ಮದುವೆ ಮುಗಿಸಿ ಹಿಂತಿರುಗಿ ಬರುವಾಗ ರಸ್ತೆಯುದ... ಅಲ್ಲಲ್ಲಿ ಸಂಗ್ರಹಿಸಿದ್ದ ಸುಮಾರು 2 ಲೋಡಿನಷ್ಟು ಕ... ಬಾಟಲಿಗಳನ್ನು ಕಂಡು ಆಶ್ಚರ್ಯವೂ ಮತ್ತು ಆದ... ನಮ್ಮ ಯಾತ್ರಿಕ ಮಹಾಶಯರ ಬಗ್ಗೆ ನಿಜವಾಗಿ... ಅಸಹ್ಯವಾಯಿತು. ಇಂತಹ ಸುಂದರವಾದ ರುದ್ರರಮಣೀ... ದೃಶ್ಯಗಳನ್ನು ನಮಗೆ ದಯಪಾಲಿಸಿದ ಪ್ರಕೃತಿಗೆ ... ಮಾಡುವ ಘನಘೋರ ಅಪಚಾರವಲ್ಲವೇ? ಇಂತಹ ... ಮನಸ್ಸಿನವರು ಇನ್ನಾದರೂ ಇದನ್ನು ನಿಲ್ಲಿಸಲಿ. ಇದ... ಎಸೆದವರ ಮನೆಯ ಮುಂದೆ ತಂದು ಹಾಕಿದರೆ ಇವ... ಅರ್ಥವಾಗಬಹುದು.


ಇದನ್ನೆಲ್ಲಾ ಸ್ವಚ್ಛ ಮಾಡಿದ ತಂಡಗಳೊಂದಿಗೆ ಮಾತ... ವಿವರಗಳನ್ನು ಸಂಗ್ರಹಿಸಿದೆ. ವೀಕೆಂಡ್‌ಗಳಲ್ಲಿ ಮೋ... ಮಸ್ತಿ ಎಂದು ಕಾಲ ಕಳೆಯುವ ಯುವ ಸಮ... ತಿಂಗಳಿಗೊಮ್ಮೆಯಾದರೂ ಇಂತಹ ಸ್ವಚ್ಛತಾ ಆಂದೋ... ದಲ್ಲಿ ಭಾಗವಹಿಸಿದರೆ ಚೆನ್ನಾಗಿರುತ್ತಿತ್ತು. ಸ್ವಚ್ಛತಾ ಕಾ... ಸಂಯೋಜಕರಾದ ಸಹ್ಯಾದ್ರಿ ಸಂರಕ್ಷಣಾ ಸಂಚಯದೊ... ಭಾಗವಹಿಸಿದ ಅರಿವು ಸಂವಾದ ಕೇಂದ್ರ, ಸ್ವರೂಪ ಅಧ... ಕೇಂದ್ರ, ಯೂತ್ ಹಾಸ್ಟೆಲ್ ಅಸೋಸಿಯೇಶನ್ ... ಮಂಗಳೂರು, ರೋಟರಿ ಕ್ಲಬ್ ಬೆಳ್ತಂಗಡಿ, ಉ... ಗೆಳೆಯರ ಬಳಗ ಕಡಿರುದ್ಯಾವರ, ಮಲ್ನಾಡ್ ಯ... ಎಸೋಸಿಯೇಶನ್ ಸಕಲೇಶ್‌ಪುರ, ಉತ್ಸಾಹಿ ಯ... ವೃಂದ ಶಿಶಿಲ ಮತ್ತು ಭಾಗವಹಿಸಿದ ಇನ್ನಿತರ... ಸಾರ್ವಜನಿಕರ ಪರವಾಗಿ ಕೃತಜ್ಞತೆ ಅರ್ಪಿಸುತ್ತಿದ್ದೇ...

ಕಳೆದ ತಿಂಗಳು ಬಿಸಿಲೆ ಘಾಟಿಯಲ್ಲಿಯೂ ಈ... ಸ್ವಚ್ಛತಾ ಅಭಿಯಾನದಡಿಯಲ್ಲಿ ಕಾರ್ಯನಿರ್ವಹಿಸಿದೆ. ... ಡಂಭಾಚಾರಕ್ಕಾಗಿ ಸ್ವಚ್ಛತೆಯ ಅಲಂಕಾರಿಕ ಉಡುಪು... ಧರಿಸಿ ಮಾಧ್ಯಮಗಳಿಗೆ ಪೋಸ್ ಕೊಡುವ ರಾಜ... ಗಳಿಗಿಂತ ಯಾವುದೇ ಪ್ರಚಾರವನ್ನು ಬಯಸದ... ಯುವಕರಿಗೆ ಸರಕಾರ ಪ್ರೋತ್ಸಾಹಿಸಬೇಕು. ಅಲ್ಲದೆ ... ಇಲಾಖೆಯವರು ಅಲ್ಲಲ್ಲಿ ಇಂತಹ ಪ್ರವಾಸಿತಾ... ಕಸದ ತೊಟ್ಟಿಗಳನ್ನು ವಿರ್ಮಾಣ ಮಾಡಿದರೆ ಸ್ವಲ್ಪ... ಸಮಸ್ಯೆಗೆ ಪರಿಹಾರ ಸಿಗಬಹುದು.

- ಶಫಿ ಬಂಗಾದಿ, ಈ ಮೇಲ್ ಮ...

ಮಲ್ಲು ಪ್ರಣವಾನಂದನನ್ನು ಹೊರದಬ್ಬಬೇಕು

ಪ್ರಣವಾನಂದನೆಂಬ ಕಾವಿಧಾರಿ ಮಲೆಯಾಳಿ ... ರಾಣೇಬೆನ್ನೂರಿಗೆ ಹೋಗಿ ಗ್ರಾಮ ಪಂಚಾಯಿತಿ ಚು... ನಿಂತು ಗಿಮ್ಮಿಕ್ ಮಾಡುತ್ತಿರುವ ಸುದ್ದಿ... ಆಶ್ಚರ್ಯವಾಯಿತು. ನಿಜವಾಗಿ ಈ ಮಲೆಯಾಳಿ ಹ... ಕಾರ್ಮಿಕನಿಗೆ ಸರಿಯಾಗಿ ಕನ್ನಡವೇ ಬರು... ಮಲೆಯಾಳಿ ಉಚ್ಚಾರದಲ್ಲಿ ಅಲ್ಪ ಸ್ವಲ್ಪ ... ಮಾತನಾಡುತ್ತಾನೆ. ಇವನ ಸುತ್ತ ಕಾಸರಗೋಡಿನ... ಮಲೆಯಾಳಿ ರೌಡಿಗಳು ಯಾವಾಗಲೂ ಇರುತ್ತಾ...



ವೈದಿಕರು ಚೀನಾವನ್ನು ಸುಲಭವಾಗಿ ಹಿಂದಿಕ್ಕಬಹುದು!



ಮೊನ್ನೆಯ ಒಂದು ಧಾರ್ಮಿಕ ಸಭೆಯಲ್ಲಿ ಪೇಜಾವರ ಶ್ರೀಗಳು ಹೇಳಿದ್ದೇನೆಂದರೆ- 'ಈಗಲೂ ಪೃಥ್ವಿಯು ಆದಿಶೇಷನ ತಲೆಯ ಮೇಲೆಯೇ ನಿಂತಿದೆ'. ಇನ್ನೊಂದೆಡೆ ಇಸ್ಕಾನಿನ ಹರೇಕೃಷ್ಣನೊಬ್ಬ ಹೇಳಿದ್ದೇನೆಂದರೆ- 'ಮಾನವರು ಈರುಳ್ಳಿ ಬೆಳ್ಳುಳ್ಳಿ ತಿನ್ನಲೇಬಾರದು, ಯಾಕೆಂದರೆ ನಾವು ಈರುಳ್ಳಿ ಬೆಳ್ಳುಳ್ಳಿ ತಿನ್ನುವುದರಿಂದ ಆದಿಶೇಷನಿಗೆ ಅಲರ್ಜಿಯಾಗುತ್ತದೆ ಹಾಗೂ ಶೇಷನಾಗ ಸೀನಿದಾಗ ಅದು ಪ್ರಕೃತಿ ವಿಕೋಪಕ್ಕೆ ಕಾರಣವಾಗುತ್ತದೆ.'

ಇದರ ಅರ್ಥ ಈ ಸ್ವಾಮಿಗಳ ದೃಷ್ಟಿಯಲ್ಲಿ ಪೃಥ್ವಿ ಈಗಲೂ ಚಪ್ಪಟೆಯಾಗಿದ್ದು ಒಂದೇ ಕಡೆ ಸ್ಥಿರವಾಗಿ ನಿಂತಿದೆ, ಭೂಮಿಯ ಕೊನೆಗೆ ಆಳ ಪ್ರಪಾತವಿದೆ, ಪೃಥ್ವಿ-ಆಕಾಶ ಒಂದಾಗುವಲ್ಲಿ ದಿಗಂತ ಎಂಬ ಸ್ಥಳವೂ ಇದೆ ಹಾಗೂ ಭೂಮಿಯ ಕೆಳಗೆ ಪಾತಾಳವಿದ್ದು ಅಲ್ಲಿ ಶೇಷನಾಗ ಇದ್ದಾನೆ. ಮೇಲಾಗಿ ಸೂರ್ಯನೇ ಆದಿಶೇಷನಿಗೆ ಮತ್ತು ಭೂಮಿಗೆ ಸುತ್ತು ಬರುತ್ತಾನೆ! ಐನ್‌ಸ್ಟೈನ್‌ಗಿಂತಲೂ ದೊಡ್ಡ ವಿಜ್ಞಾನಿಯಾದ ಪೇಜಾವರ ಶ್ರೀ ಮತ್ತು ಹರೇಕೃಷ್ಣಗಳು ಹೇಳಿದ ಮೇಲೆ ಇದೆಲ್ಲಾ ನಿಜವಿರಲೇಬೇಕು. ಹಾಗಿರುವಾಗ ಆದಿಶೇಷನ ಸಂತತಿಯಾದ ನಾಗರಹಾವನ್ನು ದಿನಾಲೂ ತಿನ್ನುವ ಚೀನಿಯರ ಜೊತೆ ಅಚ್ಚ ಸನಾತನಿ ಮೋದಿಯವರು ದೊಡ್ಡ ದೊಡ್ಡ ವ್ಯಾಪಾರ ಒಪ್ಪಂದ ಮಾಡಿರುವುದು ನಾಗವಂಶಿ ಕರಾವಳಿಯವರ ದೃಷ್ಟಿಯಲ್ಲಿ ಘೋರ ಪಾಪವಲ್ಲವೇ? ಮೇಲಾಗಿ ನಮ್ಮ ಕರಾವಳಿಯ ಧನಿಕ ಶೂದ್ರರಂತೂ ಹಾವಿನ ಚಿತ್ರವುಳ್ಳ ಸ್ನೇಕ್ ಲ್ಯಾಡರ್ ರಂಗೋಲಿ ಹಾಕಿ ಅದಕ್ಕೆ ನಾಗಮಂಡಲ ಎಂಬ ಪೂಜೆ ಮಾಡಿ ಒಂದೇ ರಾತ್ರಿಗೆ 40-50 ಲಕ್ಷ ರೂಪಾಯಿ ಖರ್ಚು ಮಾಡಿ ನಾಗನ ಕೃಪೆಗೆ ಪಾತ್ರರಾಗುತ್ತಾರೆ (ನಾನೂ ಕರಾವಳಿಯವನೇ). ಹಾಗಾಗಿ ದಿನಾಲೂ ನಾಗರಹಾವು ತಿನ್ನುವ ಚೀನೀಯರು ತಯಾರಿಸಿದ ಯಾವುದೇ ವಸ್ತು ಕರಾವಳಿಯ ತುಳುವರು ಉಪಯೋಗಿಸಿದರೂ ಅಂತಹ ವರಿಗೆ ಘೋರ ನರಕ ಖಂಡಿತ ಎನ್ನಬಹುದು! ನಮ್ಮ ಕರಾವಳಿಯ ಸ್ವಾಮೀಜಿಗಳು ಹಾಗೂ ಇಸ್ಕಾನ್‌ನವರು ಚೀನಾ ದೇಶದಲ್ಲಿ ತಮ್ಮ ಶಾಖೆಗಳನ್ನು ತೆರೆದು ಅಲ್ಲಿಯವರು ಈರುಳ್ಳಿ, ಬೆಳ್ಳುಳ್ಳಿ ಹಾಗೂ ಆದಿಶೇಷನ ಮಕ್ಕಳ ಮಾಂಸ (ಕೋಬ್ರಾ ಫ್ರಾಯ್, ಕೋಬ್ರಾ ಚಿಲ್ಲಿ, ಕೋಬ್ರಾ ಮಂಚೂರಿ ಯನ್, ಕೋಬ್ರಾ ಬಿರಿಯಾನಿ ಇತ್ಯಾದಿ) ತಿನ್ನುವುದನ್ನು ನಿಲ್ಲಿಸುವಂತೆ ಮನವೊಲಿಸದಿದ್ದರೆ ಆದಿಶೇಷ ಮಾನಸಿಕ ಬ್ಯಾಲನ್ಸ್ ಕಳೆದುಕೊಂಡು ಪೃಥ್ವಿಯನ್ನು ತಲೆಯಿಂದ ಬೀಳಿಸಿ ಬಿಟ್ಟರೆ ಪ್ರಳಯವಾಗಿ ಬಿಡುವ ಅಪಾಯವಿದೆ ಜೋಕೆ!


ಮೋದಿಯವರು ಚೀನಾಕ್ಕೆ ಹೋಗುವಾಗ ಕತ್ತೆ ಉಚ್ಚೆಯಿಂದ ವಿಮಾನ ಹಾರಿಸುವುದು, ಪರಶುರಾಮನ ಕೊಡಲಿಯಿಂದ ಸಮುದ್ರದ ಹೂಳು ತೆಗೆಯುವುದು, ಗಾಳಿಯಿಂದ ಆಹಾರ ತಯಾರಿಸುವ ದ್ರೌಪದಿಯ ಅಕ್ಷಯಪಾತ್ರೆ, ಗಾಂಧಾರಿಯ ಒಂದೇ ಅಂಡಾಣುವನ್ನು ವೇದವ್ಯಾಸ ತರಕಾರಿಯಂತೆ ಕೊಚ್ಚಿ ಒಂದು ಭರಣಿಯೊಳಗೆ ಇಟ್ಟು ನೂರು ಪ್ರನಾಳಶಿಶುಗಳಿಗೆ ಜನ್ಮ ಕೊಡುವುದು, ನೂರು ವರ್ಷ ವಯಸ್ಸಿನ ಹಣ್ಣು ಹಣ್ಣು ಮುದುಕರು ಕುರುಕ್ಷೇತ್ರದಲ್ಲಿ ಹೊಡೆದಾಡುವಷ್ಟು ಶಕ್ತಿ ಕೊಡುವ ವಯಗ್ರಾ ಔಷಧಿ ತಯಾರಿಸುವುದು, ಶ್ರೀಕೃಷ್ಣ ಅಭಿಮನ್ಯುವಿಗೆ ಗರ್ಭದಲ್ಲಿಯೇ ಎಲ್ಲ ವಿದ್ಯೆ ಕಲಿಸಿದಂತೆ ಈಗಲೂ ತಾಯಿ ಗರ್ಭದಲ್ಲೇ ಮಗುವನ್ನು ಇಂಜಿನಿಯರ್/ಡಾಕ್ಟರ್/ಐಐಟಿ ಆಗಿಸಿಯೇ ಹೊರತರುವ ತಂತ್ರಜ್ಞಾನ, ಸಂಸ್ಕೃತ ಮಂತ್ರದಿಂದ ಬ್ರಹ್ಮಾಸ್ತ್ರ ಅಣುಬಾಂಬ್ ಕ್ಷಿಪಣಿ ಆಕ್ಟಿವೇಟ್ ಮಾಡುವುದು, ಆನೆ ಮತ್ತು ಮನುಷ್ಯನ ತಲೆಯ ಪ್ಲಾಸ್ಟಿಕ್ ಸರ್ಜರಿ, ಇಂತಹ ಎಲ್ಲಾ ಸನಾತನ ವಿಜ್ಞಾನ ಪ್ರತಿನಿಧಿಸುವವರನ್ನು ತಮ್ಮೊಟ್ಟಿಗೆ ಚೀನಾಕ್ಕೆ ಕರೆದುಕೊಂಡು ಹೋಗಬಹುದೆಂದು ನಾನು ಭಾವಿಸಿದ್ದೆ. ಆದರೆ ಇವರೆಲ್ಲಾ ಇಲ್ಲದಿರುವುದು ನಮಗೆ ಘೋರ ನಿರಾಶೆಯಾಗಿದೆ.

ಒಂದು ಪ್ರತಿಕ್ರಿಯೆ

ಬೌದ್ಧ ಧರ್ಮವು ಭಾರತದಿಂದ ಚೀನಾ ದೇಶಕ್ಕೆ ಹೋದಂತೆ ಮೋದಿಯವರ ಸನಾತನ ವಿಜ್ಞಾನವೂ ಚೀನಾಕ್ಕೆ ಹೋಗಿದ್ದರೆ ಚೀನಿಯರಿಗೆ ನಮ್ಮ ಸನಾತನ ವಿಜ್ಞಾನದಲ್ಲಿ ಬಹಳ ಆಸಕ್ತಿ ಹುಟ್ಟುತ್ತಿತ್ತು ಹಾಗೂ ಅದರ ಸಂಶೋಧನೆಗೆ ಚೀನಾದಿಂದ ಭಾರಿ ಬಂಡವಾಳ ಹರಿದುಬರುತ್ತಿತ್ತು! ಭಾರತ ನಿಜ ಅರ್ಥದಲ್ಲಿ ವಿಶ್ವಗುರು ಆಗುತ್ತಿತ್ತು.

ಅಷ್ಟಬಂಧ ಬ್ರಹ್ಮಕಲಶ ನಾಗಮಂಡಲ ಇವುಗಳಲ್ಲಿ ಅತ್ಯಂತ ಪರಿಣಿತರಾದ ನಮ್ಮ ಕರಾವಳಿಯ ವೈದಿಕರನ್ನು ಹಾಗೂ ಅವರ ಚೇಲಾಗಳಾದ ಬಂಟರನ್ನು ಚೀನಾಕ್ಕೆ ಕಳುಹಿಸಿ ಅಲ್ಲಿಯವರೂ ನಮ್ಮ ಕರಾವಳಿಯ ಶೂದ್ರರಂತೆ ಯಾವಾಗಲೂ ಅಷ್ಟಬಂಧ ಬ್ರಹ್ಮಕಲಶ ನಾಗಮಂಡಲ ಇವುಗಳಲ್ಲೇ ತಲ್ಲೀನರಾಗಿ ತಮ್ಮ ಉತ್ಪಾದಕತೆಯನ್ನು ನಿರ್ಲಕ್ಷಿಸುವಂತೆ ನಮ್ಮ ವೈದಿಕರು ಪ್ಲಾನ್ ಮಾಡಿದರೆ ಚೀನಾ ದೇಶದ ಜನರ ಕ್ಷಮತೆ-ದಕ್ಷತೆ ನಾಶವಾಗುತ್ತದೆ. ಚೀನಾದವರು ವೈದಿಕ ವಿಧಿಗಳಲ್ಲೇ ಕಾಲ ಕಳೆದು ಅವರ ಉತ್ಪಾದಕತೆ ಕುಂಠಿತವಾದರೆ ಅವರ ಉತ್ಪನ್ನಗಳು ದುಬಾರಿಯಾಗುತ್ತವೆ. ಆಗ ಅವರು ತಮ್ಮ ಅಗ್ಗದ ವಸ್ತುಗಳನ್ನು ನಮ್ಮ ದೇಶದೊಳಗೆ ಡಂಪ್ ಮಾಡುವುದು ಕಡಿಮೆಯಾಗಿ ನಮ್ಮ ಮೋದಿಯವರ ಮೇಕ್ ಇನ್ ಇಂಡಿಯಾ ಯೋಜನೆಗೆ ಭಾರಿ ಇಂಬು ಸಿಗುತ್ತದೆ ಹಾಗೂ ನಮ್ಮ ದೇಶೀ ವಸ್ತುಗಳಿಗೆ ಡಿಮಾಂಡ್ ಬಹಳ ಹೆಚ್ಚಿ ಭಾರತವು ಸ್ವಾವಲಂಬಿಯಾಗುತ್ತದೆ. ಹೀಗೆ ನಮ್ಮ ಕರಾವಳಿಯ ವೈದಿಕ-ಬಂಟರ ಸಹಾಯದಿಂದ ಜಾಗತಿಕ ಮಟ್ಟದಲ್ಲಿ ನಾವು ಚೀನಾವನ್ನು ಸುಲಭವಾಗಿ ಹಿಂದಿಕ್ಕಬಹುದು!

- ಜೆ. ರವಿಕಿರಣ ರೈ, ಮೈಸೂರು



ಚಲಚಿತ್ರಗಳಲ್ಲಿ ಸಣ್ಣಪುಟ್ಟ ಪಡ್ಡೆಯ ಪಾತ್ರ ಮಾಡುತ್ತಿದ್ದವನೊಬ್ಬ ಕನ್ನಡ ಟಿವಿಗಳಿಂದಾಗಿ ಕಾಳಿಸ್ವಾಮಿಯಾಗಿ ಅವತರಿಸಿದ. ಕನ್ನಡ ಸಿನಿಮಾಗಳಲ್ಲಿ ಸಣ್ಣಪುಟ್ಟ ಹಾಸ್ಯ ಪಾತ್ರ ಮಾಡುತ್ತಿದ್ದ ನರೇಂದ್ರ ಶರ್ಮ ಟಿವಿಯಿಂದಾಗಿ ಬ್ರಹ್ಮಾಂಡ ಸ್ವಾಮಿಯಾಗಿ ಅವತಾರವೆತ್ತಿದ. ಈಗ ಮಲ್ಲು ಪ್ರಣವಾನಂದನೂ ಮಂಗಳೂರು ಹಾಗೂ ಬೆಂಗಳೂರಿನಲ್ಲಿ ಆಗಾಗ ಪತ್ರಿಕಾಗೋಷ್ಠಿ ಕರೆದು ಕೋಮು ಪ್ರಚೋದಕ ಹೇಳಿಕೆ ಕೊಟ್ಟು ಹಿಂದೂತ್ವ ಸ್ವಾಮಿ ಎಂದು ಅವತಾರವೆತ್ತಲು ಓಡುತ್ತಿದ್ದಾನೆ. ಕರ್ನಾಟಕದಲ್ಲಿ ಸ್ವಾಮಿಗಳಾಗುವುದು ಅತಿ ಸುಲಭ. ಹಾಗಾಗಿ ಈ ಪ್ರಣವಮಲ್ಲು ಕರ್ನಾಟಕದಲ್ಲಿ ಭದ್ರವಾಗಿ ಬೇರೂರುವ ಮೊದಲೇ ಅವನನ್ನು ಕೇರಳಕ್ಕೆ ಓಡಿಸುವುದು ಉಚಿತ.

ಈ ಸಾರಿಯ ಪಂಚಾಯತ್ ಚುನಾವಣೆಯಲ್ಲಿ ಎಂತೆಂತಹ ಮೂರ್ಖ ಗಂಡಸರು ಹಾಗೂ ಪೆದ್ದ ಹೆಂಗಸರು ನಿಂತಿದ್ದಾರೆಂದರೆ ಅವರು ಆರಿಸಿ ಬಂದರೆ ಪಂಚಾಯತರಾಜ್ ವ್ಯವಸ್ಥೆ ಗಬ್ಬೆದ್ದುಹೋಗುವ ಸಾಧ್ಯತೆಯೇ ಹೆಚ್ಚು. ಉದಾಹರಣೆಗೆ- ತನ್ನ ಮನೆಯ ಹೊರಹೋಗಿ ಹಳ್ಳಿಯ ಸಂತೆಯಲ್ಲಿ ತರಕಾರಿ ಕೊಳ್ಳಲು ಸಹ ಗೊತ್ತಿಲ್ಲದ ನನ್ನ ಸಂಬಂಧದ ಒಬ್ಬ ಪೆದ್ದ ಹೆಂಗಸು ಮೊನ್ನೆ ಹಳ್ಳಿಯಿಂದ ಫೋನ್ ಮಾಡಿ ನನಗೆ ಕೇಳುತ್ತಾಳೆ- ಅಣ್ಣಾ ಬಿಜೆಪಿಯವರಿಗೆ ಸರಿಯಾದ ಮಹಿಳಾ ಅಭ್ಯರ್ಥಿ ಸಿಗದ್ದರಿಂದ ಅವರು ನನಗೆ ಟಿಕೆಟ್ ಕೊಡಲು ಬಂದಿದ್ದಾರೆ, ನಾನು ನಿಂತು ಗೆದ್ದರೆ ನನ್ನ ಸೀರೆ ಬಂಗಾರಕ್ಕಾದರೂ ನಾಲ್ಕು ಕಾಸು ಮಾಡಿಕೊಳ್ಳಲು ಚಾನ್ಸ್ ಸಿಗಬಹುದೇ ಅಣ್ಣಾ?!

ಕರ್ನಾಟಕದ ಒಳಭಾಗದಲ್ಲಿ ಅನೇಕ ಹಳ್ಳಿಗಳಲ್ಲಿ ದೇವಸ್ಥಾನ ಕಟ್ಟಲು ಒಪ್ಪಿದ ಧನಿಕರು ಪಂಚಾಯತ್ ಸದಸ್ಯರಾಗಿ ಅವಿರೋಧ ಆಯ್ಕೆಯಾಗಿ ಬರುವ ಹರಾಜು ವ್ಯವಸ್ಥೆ ಹಳ್ಳಿಯ ಪಾಳೇಗಾರರು ಮಾಡಿರುವುದು ನಿಜಕ್ಕೂ ಪ್ರಜಾಪ್ರಭುತ್ವ ವ್ಯವಸ್ಥೆಯ ದೊಡ್ಡ ಸೋಲು. ರಾಜಕೀಯದೊಟ್ಟಿಗೆ ಮಾನವೀಯ ದೂರದೃಷ್ಟಿಯ ಬದಲು ದೇವರು ಧರ್ಮ ಮತ್ತು ಕಂದಾಚಾರ ಮೇಳೈಸಿರುವುದರ ದುಷ್ಪರಿಣಾಮವಿದು. ದೇವಾಲಯಗಳ ಬದಲು ಹಳ್ಳಿಗಳ ಅಭಿವೃದ್ಧಿಗೆ ನಿಜವಾಗಿ ಬೇಕಾಗಿರುವ ಶಾಲಾ ಕಟ್ಟಡ, ಸಮುದಾಯ ಭವನ, ಕುಡಿಯುವ ನೀರು, ರಸ್ತೆ ಶೌಚಾಲಯ ಇವನ್ನೆಲ್ಲ ಪಂಚಾಯತ್ ವ್ಯವಸ್ಥೆಯ ಮೂಲಕ ಸರಕಾರದಿಂದ ಅಧಿಕೃತವಾಗಿ ಪಡೆದುಕೊಂಡು ಹಳ್ಳಿಯ ನಿಜ ಅಭಿವೃದ್ಧಿ ಮಾಡಲು ಸಾಧ್ಯ ಎಂದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 67 ವರ್ಷವಾದರೂ ನಮ್ಮ ಹಳ್ಳಿಗರಿಗೆ ಇನ್ನೂ ಅರ್ಥವಾಗದಿರುವುದು ದೊಡ್ಡ ದುರಂತ.

ಇಡೀ ವಿಶ್ವವೇ ಕಣ್ಣೀರು ಮಿಡಿದ ನೇಪಾಳದ ಭೂಕಂಪ ದುರಂತದ ವಿಷಯದಲ್ಲೂ ನಮ್ಮ ಬೂಸಿ ಬಸ್ಯ ಮೋದಿಯು ವ್ಯಕ್ತಿಗತ ಪ್ರಚಾರ ಪಡೆಯಲು ಹವಣಿಸಿದ್ದರಿಂದಾಗಿಯೇ ನೇಪಾಳ ಸರಕಾರ ಭಾರತದ ಮೀಡಿಯಾದವರನ್ನೆಲ್ಲ ಒದ್ದು ಓಡಿಸಿದ್ದು. ಇದು ಪರೋಕ್ಷವಾಗಿ ಪ್ರಚಾರಪ್ರಿಯ ಮೋದಿಯ ಬೆನ್ನಿಗೆ ನೇಪಾಳ ಕೊಟ್ಟ ಚಾಟಿ ಏಟು. ಏಪ್ರಿಲ್ 25 ಕ್ಕೆ ನೇಪಾಳದಲ್ಲಿ ಭೂಕಂಪವಾಗಿದ್ದು ಥೈಲ್ಯಾಂಡ್ ಪ್ರವಾಸದಲ್ಲಿದ್ದ ನೇಪಾಳದ ಪ್ರಧಾನಿ ಸುಶೀಲ್ ಕೊಯಿರಾಲಾಗೆ ಗೊತ್ತೇ ಇರಲಿಲ್ಲ, ಅದನ್ನು ಮೊಟ್ಟ ಮೊದಲು ಕೊಯಿರಾಲಾಗೆ ತಿಳಿಸಿದ್ದು ಮೋದಿಯವರೇ ಎಂದು ಮೀಡಿಯಾದಲ್ಲಿ ಬೂಸಿ ಬಸ್ಯನ ಪಬ್ಲಿಸಿಟಿ ಏಜಂಟರು ಮೊದಲ ದಿನವೇ ಸುಳ್ಳು ಸುದ್ದಿ ಪ್ಲಾಂಟ್ ಮಾಡಿದ್ದರು. ಆದರೆ ನಿಜಸಂಗತಿ ಏನೆಂದರೆ ನೇಪಾಳದ ರಾಷ್ಟ್ರಪತಿ ರಾಮ್ ಭರನ್ ಯಾದವರೇ ಈ ದುರಂತದ ಸುದ್ದಿ ಥೈಲ್ಯಾಂಡಿನಲ್ಲಿದ್ದ ಕೊಯಿರಾಲಾರಿಗೆ ಫೋನಿನಲ್ಲಿ ತಿಳಿಸಿ ತಕ್ಷಣ ವಾಪಸು ಬರುವಂತೆ ಹೇಳಿದ್ದರು. ನೇಪಾಳದವರ ಕಣ್ಣೀರ ಕೊಳದಲ್ಲಿ ಮೀನು ಹಿಡಿಯುವ ಮೋದಿಯವರ ಈ ಪರಿ ಅಸಹ್ಯ ಹುಟ್ಟಿಸುತ್ತದೆ.


- ರಾಮಕೃಷ್ಣ ಎ ಶಿಲ್ಪಿ, ಬೆಂಗಳೂರು

ಪಿ.ಸೂ. : ನಿಮ್ಮ ಅನಿಸಿಕೆಗಳನ್ನು ankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಕನ್ನಡದಲ್ಲಿ ಮತ್ತು ಚುಟುಕಾಗಿ SMS ಕಳುಹಿಸಬಹುದು.

ಶರಣ್

ಮೊದಲು ವಿಲನ್ ಆಮೇಲೆ ಕಾಮೆಡಿಯನ್ ಈಗ ಹೀರೋ

ಹಲವಾರು ವರ್ಷಗಳ ಕಾಲ ಹಾಸ್ಯನಟನಾಗಿ ಚಿಕ್ಕಪುಟ್ಟ ಪಾತ್ರಗಳಿಗೂ ಜೀವ ತುಂಬುತ್ತಿದ್ದ ಶರಣ್ ಈಗ ಹೀರೋ ಪಟ್ಟವನ್ನು ಗಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರನ್ನು ಮಾತನಾಡಿಸಿದಾಗ ಅವರು ಮನಬಿಚ್ಚಿ ಪ್ರತಿಕ್ರಿಯಿಸಿದರು.



ಪತ್ರಿಕೆ: ನೀವು ಚಿತ್ರರಂಗಕ್ಕೆ ಕಾಲಿಟ್ಟು ಸುಮಾರು ಹದಿನೈದು ವರ್ಷಗಳೇ ಆದವು. ಆದರೀಗ ನೀವು ಹೀರೋ ಪಟ್ಟಕ್ಕೆ ಏರಿದ್ದೀರಿ. ಅದರ ಬಗ್ಗೆ ಹೇಗನ್ನಿಸುತ್ತದೆ?

ಶರಣ್: ನಾನು ಹೀರೋ ಆಗುತ್ತೇನೆ ಎನ್ನುವುದಿರಲಿ, ನಟನಾಗುತ್ತೇನೆ ಎಂದೂ ನಾನು ನಿರೀಕ್ಷಿಸಿಯೇ ಇರಲಿಲ್ಲ. ನಟನಾಗಿ ನನ್ನ ಶುರುವಾತಿಯೇ ಆಕಸ್ಮಿಕ. ನಿಜ ಹೇಳಬೇಕೆಂದರೆ ನನಗೆ ಈ ಚಿತ್ರರಂಗಕ್ಕೆ ಬರುವ ಬಗ್ಗೆ ಆಸಕ್ತಿಯೇ ಇರಲಿಲ್ಲ. ನನ್ನದು ತುಂಬಾ ಸಂಕೋಚದ ಸ್ವಭಾವವಾದ್ದರಿಂದ ಇಲ್ಲಿನ ಎಲ್ಲರ ಜೊತೆಯೂ ಚೆನ್ನಾಗಿರುವುದು ನನಗೆ ಕಷ್ಟ ಅನ್ನಿಸಿದ್ದರಿಂದ ಮತ್ತು ಚಿತ್ರರಂಗದಲ್ಲಿ ತುಂಬಾ ಲಕ್ ಬೇಕಾಗುತ್ತಾದ್ದರಿಂದ ಈ ಲೋಕದ ಜೊತೆಗೆ ಸಂಬಂಧವೇ ಬೇಡ ಎಂದು ದೂರವಿದ್ದೆ.

ಹೊಟ್ಟೆಪಾಡಿಗೆ ನಾನು ಏನೇನೋ ಮಾಡಿಕೊಂಡಿದ್ದವನು. ನಾನು ಕೆಲಕಾಲ ಆಟೋ ಓಡಿಸುತ್ತಿದ್ದೆ ಲಾರಿ ಕ್ಲೀನರ್ ಆಗೂ ಕೆಲಸ ಮಾಡಿದ್ದೆ, ಕೃಷಿಕನೂ ಆಗಿದ್ದೆ ಆಗೀಗ ಆರ್ಕೆಸ್ಟ್ರಾ ತಂಡಗಳಲ್ಲಿ ಹಾಡುತ್ತಿದ್ದೆ. ಕೊನೆಗೆ ಒಂದು ನಿರ್ದಿಷ್ಟ ಕೆಲಸ ಬೇಕು ಅನ್ನಿಸಿ ಕಂಪ್ಯೂಟರ್ ಡಿಪ್ಲೊಮಾ ಸೇರಿದೆ. ಅದಕ್ಕೆ ಮುಖ್ಯ ಕಾರಣ ಅವರು ಟ್ರೈನಿಂಗ್ ಮುಗಿದನಂತರ ಎಲ್ಲಾದರೊಂದು ಕಡೆ ಪ್ಲೇಸ್‌ಮೆಂಟ್ ಕೊಡಿಸುತ್ತೇವೆ ಎಂದದ್ದು.

ಅಷ್ಟು ಹೊತ್ತಿಗೆ ನನ್ನ ಸಹೋದರಿ ಶೃತಿ ದೊಡ್ಡ ಸ್ಟಾರ್ ಆಗಿದ್ದರು. ಆದರೂ ಅದ್ಯಾಕೋ ನನಗೂ ಚಿತ್ರರಂಗಕ್ಕೂ ಕೂಡಿ ಬರುವುದಿಲ್ಲ ಎಂದು ನನಗೆ ಅನ್ನಿಸುತ್ತಿತ್ತು.

1999ರಲ್ಲಿ ನನ್ನ ಹಲವು ಮಿತ್ರರು ಸೀರಿಯಲ್ ಒಂದನ್ನು ಪ್ರಾರಂಭಿಸಿದರು. ಅದರಲ್ಲಿ ನಾನು ನಟಿಸಬೇಕು ಅಂದರು. ಆದರೆ ಕೈಗೆ ಕಾಸು ಬೇಕಲ್ಲ ಏನು ಮಾಡುವುದು? ಮೊದಲ ಛಾನ್ಸ್‌ಗೆ ಸಂಭಾವನೆ ಎಷ್ಟು ಕೊಡ್ತೀರಿ ಅಂತ ಕೇಳುವುದಕ್ಕಾಗುವುದಿಲ್ಲ, ಅದಕ್ಕೆ ನಾನು ಮ್ಯಾನೇಜರ್ ಅವರಿಗೆ ಫೋನ್ ಮಾಡಿ 'ಸಾರ್, ಇದು ಹೇಗೆ?' ಅಂತ ಕೇಳಿದೆ. ನನ್ನ ಪರಿಸ್ಥಿತಿ ಅವರಿಗೆ ಅರ್ಥವಾಯಿತು. 'ಪುಕ್ಕಟೆ ಕೆಲಸ ಮಾಡಿಸಿಕೊಳ್ಳುವುದಿಲ್ಲ' ಎಂದು ಭರವಸೆ ನೀಡಿದರು. ಆದರೆ ಅದು ಮೆಗಾ ಧಾರಾವಾಹಿ ಆಗಿತ್ತು. ಕಂಪ್ಯೂಟರ್ ಕ್ಲಾಸ್ ಇದ್ದದ್ದರಿಂದ ಹಲವು ದಿನಗಳ ಮಟ್ಟಿಗೆ ಮಾತ್ರ ಶೂಟಿಂಗ್ ಹೋಗಲು ನನಗೆ ಸಾಧ್ಯವಿತ್ತು. ಅದನ್ನು ವಿವರಿಸಿದಾಗ ಮ್ಯಾನೇಜರ್ 'ನಿನ್ನದು ಚಿಕ್ಕ ಪಾತ್ರ, ತುಂಬಾ ದಿನ ಮುಂದುವರೆಯುವುದಿಲ್ಲ, ಬಾ' ಎಂದರು. ಆ ಧಾರಾವಾಹಿಯ ಹೆಸರು 'ಮನೆತನ'. ನಾನು ನಟಿಸಿದ ಟ್ರ್ಯಾಕ್ ಮೂರು ತಿಂಗಳ ಕಾಲ ಪ್ರಸಾರವಾಯಿತು. ಆಮೇಲೆ ನಾನು ಸುಮ್ಮನಾದೆ. ಆದರೆ ಜನಕ್ಕೆ ನನ್ನ ಪಾತ್ರ ಇಷ್ಟವಾಗಿತ್ತು. ಅವರಲ್ಲಿ ತುಂಬಾ ಜನ ದೂರದರ್ಶನ ಕೇಂದ್ರಕ್ಕೆ ಪತ್ರ ಬರೆದು ನನ್ನ ಪಾತ್ರವನ್ನು ವಾಪಸ್ ತರುವಂತೆ ಒತ್ತಾಯಿಸಿದ್ದರು. ಆಗ ನನಗೆ ಮತ್ತೆ ಆ ಧಾರಾವಾಹಿಯಿಂದ ಕರೆ ಬಂತು. ಮತ್ತೆ ಹೋಗಿ ನಟಿಸಿದೆ.

ಆ ನನ್ನ ಎರಡನೆ ಇನ್ನಿಂಗ್ಸ್ ನನ್ನ ಬದುಕಿನ ಹಾದಿಯನ್ನೇ ಬದಲಾಯಿಸಿತು. ನನ್ನ ಪಾತ್ರವನ್ನು ಜನ ಮೆಚ್ಚಿದ್ದು ನಾನು ಆತ್ಮಾವಲೋಕನ ಮಾಡಿಕೊಳ್ಳುವಂತೆ ಮಾಡಿತು. 'ಯಾವುದು ನನ್ನನ್ನು ಕರೆಯುತ್ತಿದೆಯೋ ಅದನ್ನು ನಾನು ಬಿಟ್ಟುಹೋಗುತ್ತಿದ್ದೇನೆ, ಯಾವುದು ನನನ್ನು ಕರೆಯುತ್ತಿಲ್ಲವೋ ಅದನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದೇನೆ' ಅನ್ನಿಸಿತು. ಅಷ್ಟು ಹೊತ್ತಿಗೆ ನನಗೆ ಬೇರೆ ಧಾರಾವಾಹಿಗಳಿಂದಲೂ ಕರೆಗಳು ಬರಲಾರಂಭಿಸಿದವು. ಹೀಗೆ ಒಂದು ವರ್ಷ ವಿವಿಧ ಸೀರಿಯಲ್‌ಗಳಲ್ಲಿ ನಟಿಸಿದೆ.

ಪತ್ರಿಕೆ: ಚಿತ್ರರಂಗಕ್ಕೆ ಎಂಟ್ರಿ ಆಗಿದ್ದು ಹೇಗೆ?

ಶರಣ್: ನೀವು ನಂಬುತ್ತೀರೋ ಇಲ್ಲವೋ, ಯಾಕೆ ಅಂದರೆ ನಾನು ಸೀರಿಯಲ್‌ಗಳಲ್ಲಿ ನಟಿಸಿದ್ದು ವಿಲನ್ ಆಗಿ! ನಾನು ಕಾಮೆಡಿಯನ್ ಆಗಿ ಒಂದೇ ಒಂದು ಸೀರಿಯಲ್‌ನಲ್ಲಿ ನಟಿಸಿದ್ದು, ಆದರೆ ಅದೇ ಹಿರಿಯ ನಿರ್ದೇಶಕರಾದ ಸಿದ್ದಲಿಂಗಯ್ಯನವರ ಗಮನವನ್ನು ಸೆಳೆದಿತ್ತು.

ಆಗಿನ್ನೂ ಮೊಬೈಲ್‌ಗಳು ಇರದಿದ್ದ ಕಾಲ. ಒಂದು ದಿನ ನಮ್ಮ ಲ್ಯಾಂಡ್ ಲೈನಿಗೆ ಫೋನ್ ಬಂತು. ನಾನೇ ಅದನ್ನು ಸ್ವೀಕರಿಸಿದೆ. ಅತ್ತ ಕಡೆ ಇದ್ದವರು "ಸಿದ್ದಲಿಂಗಯ್ಯನವರು ಮಾತನಾಡಬೇಕಂತೆ" ಎಂದರು. ನಾನು ಸಹಜವಾಗಿಯೇ ಅದು ಶೃತಿ ಅವರಿಗೆ ಬಂದಿರುವ ಕರೆ ಎಂದು ನಿರ್ಧರಿಸಿ "ನಾನು ಶೃತಿ ಅವರ ಸಹೋದರ. ಒಂದು ನಿಮಿಷ, ಅವರನ್ನು ಕರೆಯುತ್ತೇನೆ" ಅಂದೆ. ಅದಕ್ಕೆ ಅವರು "ಇಲ್ಲಪ್ಪ ನಿನ್ನ ಜೊತೆನೇ ಸಿದ್ದಲಿಂಗಯ್ಯನವರು ಮಾತನಾಡಬೇಕಂತೆ" ಅಂದರು. ನನಗೆ ಅದನ್ನು ಕೇಳಿ ಶಾಕ್ ಆಯಿತು.

ಮಾರನೆ ದಿನ ಅವರನ್ನು ಭೇಟಿ ಆಗುತ್ತಿದ್ದಂತೆ ಅವರು "ನನ್ನ ಸಿನಿಮಾದಲ್ಲಿ ಪಾರ್ಟ್ ಮಾಡ್ತೀಯಾ? ಆದರೆ ಹೀರೋ ಪಾತ್ರ ಅಲ್ಲ ಮರಿ" ಅಂದರು. ಅಷ್ಟು ದೊಡ್ಡ ನಿರ್ದೇಶಕರು ನನ್ನನ್ನು ಕರೆದದ್ದೇ ನನ್ನ ಪುಣ್ಯ ಇನ್ನು ಹೀರೋ ಪಾತ್ರ ನಿರೀಕ್ಷಿಸುವುದು ಎಷ್ಟು ಸರಿ. "ನೀವು ಯಾವ ಪಾತ್ರ ಕೊಟ್ಟರೂ ಮಾಡುತ್ತೇನೆ" ಅಂದೆ. ಅದು ಕಾಮಿಡಿ ಪಾತ್ರವಾದರೂ ದೊಡ್ಡ ಪಾತ್ರವೇ ಆಗಿತ್ತು. ಅವರ ನಿರ್ದೇಶನದ 'ಪ್ರೇಮ, ಪ್ರೇಮ, ಪ್ರೇಮ' ಮುಖಾಂತರ ಚಿತ್ರರಂಗಕ್ಕೆ ಬಂದೆ.

ಪತ್ರಿಕೆ: ಒಟ್ಟು ಎಷ್ಟು ಚಿತ್ರಗಳಲ್ಲಿ ಕಾಮೆಡಿಯನ್ ಆಗಿ ಕೆಲಸ ಮಾಡಿದ್ದೀರಿ?

ಶರಣ್: 99 ಸಿನಿಮಾಗಳಲ್ಲಿ ಕಾಮೆಡಿಯನ್ ಆಗಿದ್ದೀನಿ. ನನ್ನ ನೂರನೆ ಚಿತ್ರದಿಂದ ಹೀರೋ ಆಗಿದ್ದೀನಿ.



ಪತ್ರಿಕೆ: ಇಷ್ಟು ದಿನ ಹೀರೋ ಆಗಲು ಕಾಯಬೇಕಾಯಿತಲ್ಲ ಅಂತ ಬೇಸರವೇನಾದರೂ ಇದೆಯೇ?

ಉತ್ತರ: ನಾನು ನಟ ಆಗುತ್ತೇನೆ ಎನ್ನುವ ನಿರೀಕ್ಷೆಯೇ ಇರದಿದ್ದರಿಂದ ಇನ್ನು ಹೀರೋ ಆಗುವ ಆಸೆಯಾದರೂ ಎಲ್ಲಿಂದ ಬರಬೇಕು. ನನಗನ್ನಿಸುತ್ತೆ, ಜೀವನದಲ್ಲಿ ಯಾವುದನ್ನೂ ನಿರೀಕ್ಷಿಸುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ನನಗೆ ಸಿಕ್ಕ ಅವಕಾಶಗಳನ್ನು ನನ್ನ ಕೈಲಾದಮಟ್ಟಿಗೆ ನಿಭಾಯಿಸುತ್ತಾ ಬಂದಿದ್ದೇನೆ. ನನ್ನಲ್ಲಿ ಭರವಸೆ ಇಟ್ಟು ಕರೆದ ನಿರ್ದೇಶಕರಿಗೆ ನಿರಾಶೆ ಮಾಡಬಾರದು ಎಂದು ಶ್ರಮಿಸಿದ್ದೇನೆ, ಅಷ್ಟೇ.

ಪತ್ರಿಕೆ: ಯಶಸ್ವೀ ಹಾಸ್ಯ ನಟನಾಗಿದ್ದಾಗ ನಿಮ್ಮಲ್ಲೂ ಹೀರೋ ಆಗುವ ಪ್ರತಿಭೆ ಇದೆ ಎನ್ನುವುದನ್ನು ಯಾರೂ ಗುರುತಿಸಲಿಲ್ಲ ಎಂದು ಅನ್ನಿಸಲಿಲ್ಲವೇ?

ಶರಣ್: ನನ್ನಲ್ಲೂ ಪ್ರತಿಭೆ ಇದೆ ಅನ್ನಿಸುವುದರ ಬದಲಾಗಿ ನನಗೆ ಸಿಕ್ಕ ಯಶಸ್ಸು ಫ್ಲೂಕ್ ಅಂತ ಅನ್ನಿಸಿದ್ದೇ ಹೆಚ್ಚು!

ಪತ್ರಿಕೆ: ನೀವು ಹೀರೋ ಆಗಲು ನಿರ್ಧರಿಸಿದ್ದು ಯಾಕೆ?

ಶರಣ್: ಅದೂ ಅನಿರೀಕ್ಷಿತವೇ. 'ರ್‍ಯಾಂಬೋ' ನಾನೇ ನಿರ್ಮಿಸಿದ ಸಿನಿಮಾ. ಆದರೆ ನಾನೇ ಹೀರೋ ಆಗಬೇಕೆಂದು ನಾನು ಅದನ್ನು ಶುರು ಮಾಡಲಿಲ್ಲ. 'ರ್‍ಯಾಂಬೋ' ಒಂದು ಹಂದಿ ಮರಿ ಕುರಿತ ಸಿನಿಮಾ. ಅದರಲ್ಲಿ ಹಂದಿಯ ಮಾಲೀಕ ಅದಕ್ಕೆ ಟ್ರೈನಿಂಗ್ ಕೊಟ್ಟು ಹಂದಿಯನ್ನು ವಾಹನಗಳಿಗೆ ಡಿಕ್ಕಿ ಹೊಡೆಸುತ್ತಿರುತ್ತಾನೆ. ನಮ್ಮ ಸಮಾಜದಲ್ಲಿ ಹಂದಿ ತಾಕಿದ ವಾಹನಕ್ಕೆ ಅಪಶಕುನ ತಾಕಿತು ಎಂಬ ನಂಬಿಕೆ ಇದೆ. ಆದ್ದರಿಂದ ಹಂದಿಯ ಮಾಲೀಕ ಅಂತಹ ವಾಹನಗಳನ್ನು ಕಡಿಮೆ ಬೆಲೆಗೆ ಖರೀದಿಸಿ ಆಮೇಲೆ ಅದನ್ನು ಬೇರೆಯವರಿಗೆ ಮಾರಿ ಹಣ ಸಂಪಾದಿಸುತ್ತಿರುತ್ತಾನೆ. ಅದೊಂದು ಕಾಮಿಡಿ ಚಿತ್ರ ಮಾತ್ರವಲ್ಲ ಬೇರೆ ಸಿನಿಮಾಗಳಲ್ಲಿ ಇರುವಂತೆ ಹೀರೋಯಿಸಮ್ ಇರುವ ಸಿನಿಮಾವಲ್ಲ, ಅಷ್ಟೇ ಅಲ್ಲ ಕ್ಲೈಮ್ಯಾಕ್ಸ್‌ನಲ್ಲೂ ಹೀರೋ ಇರುವುದೇ ಇಲ್ಲ. ಇಂತಹ ಚಿತ್ರಕ್ಕೆ ಯಾರು ಹೀರೋ ಎಂಬ ವಿಷಯ ಬಂತು. ಬೇರೇ ಹೀರೋಗಳು ಅದನ್ನು ಒಪ್ಪುವ ಸಾಧ್ಯತೆ ಇರಲಿಲ್ಲ. ಆಗ ನನ್ನ ತಂಡದವರು "ನೀವೇ ಈ ಪಾತ್ರ ಮಾಡಿ" ಅಂದರು.

ಒಂದು ವಾರ ಯೋಚಿಸಲು ಸಮಯ ಕೊಡಿ ಅಂದೆ. ಯಾಕೆ ಅಂದರೆ ಇದು ನನ್ನ ಹೊಟ್ಟೆಪಾಡನ್ನು ನಿರ್ಧರಿಸುವಂತಹದ್ದಾಗಿತ್ತು. ಚಿತ್ರರಂಗವನ್ನು ಬಿಟ್ಟರೆ ನನಗೆ ಬೇರೆ ಆದಾಯದ ಮೂಲಗಳಿಲ್ಲ. ನಾನು ಹೀರೋ ಪಾತ್ರ ಮಾಡಿದ ನಂತರ ಯಾರೂ ನನ್ನನ್ನು ಕ್ಯಾರೆಕ್ಟರ್ ಪಾತ್ರಗಳಿಗೆ ಕರೆಯದೆ ಇದ್ದರೆ ಏನು ಗತಿ ಅಂತ ಯೋಚನೆ ಆಯಿತು. ಹಾಗೆ ಕರೆಯದೆ ಇದ್ದರೆ ನಾನೇ ನನ್ನ ವೃತ್ತಿ ಬದುಕನ್ನು ನಾಶ ಮಾಡಿಕೊಂಡಂತಾಗುತ್ತಿತ್ತು. ಈ ಎಲ್ಲ ಕಾರಣಗಳಿಗೆ ಕೊನೆಗೆ ನಾನು ನನ್ನ ತಂಡಕ್ಕೆ "ಆಗಲ್ಲ" ಎಂದೆ.

ಆದರೆ ಅವರು ಸುಮ್ಮನಾಗಲಿಲ್ಲ, ಕತೆ ತುಂಬಾ ಚೆನ್ನಾಗಿದ್ದರಿಂದ ಈ ಸಿನಿಮಾ ಮಾಡಲೇ ಬೇಕು ಎಂದು ಒತ್ತಾಯಿಸಿದರು. ಕೊನೆಗೂ ನನ್ನ ಮನಸ್ಸನ್ನು ಬದಲಾಯಿಸಿದರು. ನಾನು ಇಷ್ಟು ವರ್ಷಗಳ ಕಾಲ ದುಡಿದದ್ದನ್ನೆಲ್ಲ ಆ ಸಿನಿಮಾಗೆ ಸುರಿದೆ. ಅದಕ್ಕಾಗಿ ನನ್ನ ಮನೆಯನ್ನೂ ಅಡ ಇಟ್ಟೆ. ಸಿನಿಮಾ ನಿರ್ಮಾಣ ನನಗೆ ಹೊಸದಾಗಿದ್ದರಿಂದ ಮತ್ತು ನನ್ನ ಮೇಲೆ ಜವಾಬ್ದಾರಿ ಹೆಚ್ಚಾಗಿದ್ದರಿಂದ ಬೇರೆ ಸಿನಿಮಾಗಳಲ್ಲಿ ನಟಿಸುವುದನ್ನು ನಿಲ್ಲಿಸಿದೆ. 'ರ್‍ಯಾಂಬೋ' ಮುಗಿಯುವುದಕ್ಕೆ ಎರಡು ವರ್ಷ ಹಿಡಿಯಿತು. ಸದ್ಯ ಅದು ನನ್ನ ಕೈ ಬಿಡಲಿಲ್ಲ, ಹಿಟ್ ಆಯಿತು!

ಪತ್ರಿಕೆ: ಅದಾದ ಮೇಲೆ ನೀವು ಇನ್ನೂ ನಾಲ್ಕು ಸಿನಿಮಾಗಳಲ್ಲಿ ಹೀರೋ ಆಗಿ ನಟಿಸಿದ್ದೀರಿ. ಅದರ ಬಗ್ಗೆ ಹೇಗನ್ನಿಸುತ್ತೆ?

ಶರಣ್: ಕಾಮೆಡಿಯನ್ ಆಗಿ ಎಷ್ಟು ಎಂಜಾಯ್ ಮಾಡುತ್ತಿದ್ದೇನೋ, ಈಗ ಕಾಮಿಕ್ ಹೀರೋ ಆಗಿಯೂ ಅಷ್ಟೇ ಎಂಜಾಯ್ ಮಾಡುತ್ತಿದ್ದೇನೆ.

ಪತ್ರಿಕೆ: ನಿಮಗೆ ಇಷ್ಟವಾದ ಪಾತ್ರ ಯಾವುದು?

ಶರಣ್: 'ಜಯಲಲಿತಾ' ಸಿನಿಮಾ. ಅದರಲ್ಲಿ ನಾನು ಮಹಿಳೆಯಾಗಿ ನಟಿಸಿದೆ. ಅಂತಹ ಅವಕಾಶ ನಟರಿಗೆ ಸಿಗುವುದೇ ಕಷ್ಟ. ನನಗೆ ಸಿಕ್ಕಿದ್ದು ನನ್ನ ಅದೃಷ್ಟ. ಈ ಹಿಂದೆ ಒಂದೇ ಸಮಯದಲ್ಲಿ ಎಂಟೆಂಟು ಸಿನಿಮಾಗಳನ್ನು ನಿಭಾಯಿಸುತ್ತಿದ್ದೆ. ಆದರೆ 'ರ್‍ಯಾಂಬೋ'ಗೆ ಎರಡು ವರ್ಷ ಮತ್ತು 'ಜಯಲಲಿತಾ'ಗೆ ಒಂದು ವರ್ಷವನ್ನೇ ಮೀಸಲಿಡಬೇಕಾಯಿತು.

ಪತ್ರಿಕೆ: ನಿಮ್ಮ ಮುಂದಿನ ಚಿತ್ರ 'ಬುಲೆಟ್ ಬಸ್ಯ' ಅದೂ ಕಾಮಿಡಿ ಚಿತ್ರವೇ?

ಶರಣ್: ಹೌದು. ಆದರೆ ಎಲ್ಲಾ ಸಿನಿಮಾಗಳೂ ಒಂದೇ ತರಹ ಇರಬಾರದು, ಜೊತೆಗೆ ಜನ ಇಷ್ಟಪಟ್ಟಿದ್ದನ್ನೂ ಬಿಡಲೂಬಾರದು ಎಂಬ ಸೂತ್ರವನ್ನು ಅನುಸರಿಸಲು ಯತ್ನಿಸುತ್ತಿದ್ದೇನೆ.

ಪತ್ರಿಕೆ: ಹೀರೋ ಆದನಂತರ ಶರಣ್ ತಮ್ಮ ಸಂಭಾವನೆಯನ್ನು ಎರಡು ಕೋಟಿ ರೂಪಾಯಿಗಳಿಗೆ ಏರಿಸಿದ್ದಾರೆ ಎಂಬ ಮಾತು ಗಾಂಧಿನಗರದಿಂದ ಕೇಳಿಬರುತ್ತಿದೆಯಲ್ಲಾ?

ಶರಣ್: ಅಯ್ಯೋ, ಅದು ಅರ್ಥಕ್ಕೆ ಅರ್ಥವೂ ಸತ್ಯವಲ್ಲ. ನಾನು ಅಷ್ಟೊಂದು ಮೊತ್ತ ಕೇಳುತ್ತಿದ್ದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ಹೀರೋ ಆಗಿ ಬರೀ ಐದು ಚಿತ್ರಗಳನ್ನು ಪೂರೈಸಿರುವ ನಾನು ಅದು ಹೇಗೆ ಅಷ್ಟೊಂದು ಸಂಭಾವನೆಯನ್ನು ಕೇಳಲು ಸಾಧ್ಯ? ಜೊತೆಗೆ ನಾನು ದುಡ್ಡಿನ ಹಿಂದೆ ಹೋಗುತ್ತಿಲ್ಲ, ಬದಲಾಗಿ ಒಳ್ಳೆಯ ಕಾನ್ಸೆಪ್ಟ್ ಮತ್ತು ಕತೆಗಳ ಹಿಂದೆ ಹೋಗುತ್ತಿದ್ದೇನೆ.

ಪತ್ರಿಕೆ: ಎನಿವೇ ಬೆಸ್ಟ್ ಆಫ್ ಲಕ್ ಶರಣ್.

ಶರಣ್: ತುಂಬಾ ಥ್ಯಾಂಕ್ಸ್!

ಸಂದರ್ಶಕರು: ಸಾವಂತ್ರಿ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 10-06-2015 RNI No. KARKAN200

ಮಾಯವಾಗಿದ್ದ ರಮ್ಯಾ ಟ್ವಿಟರ್‌ನಲ್ಲಿ ಪ್ರತ್ಯಕ್ಷ



ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಿಂದ ಸ್ಪರ್ಧಿಸಿ ಸೋತ ಬಳಿಕ ರಾಜಕೀಯ ಮತ್ತು ಸಿನಿಮಾ - ಎರಡೂ ಕ್ಷೇತ್ರಗಳಿಂದಲೂ ದೂರವಾಗಿ ಅಜ್ಞಾತವಾಸದಲ್ಲಿದ್ದ ಮೋಹಕ ತಾರೆ ರಮ್ಯಾ ಈಗ ಟ್ವಿಟರ್‌ನಲ್ಲಿ ಪ್ರತ್ಯಕ್ಷವಾಗಿದ್ದಾರೆ. ಆದರೆ ಈಗಲೂ ರಮ್ಯಾ ಎಲ್ಲಿದ್ದಾರೆ, ಹೇಗಿದ್ದಾರೆ ಎನ್ನುವುದು ಮಾತ್ರ ಗೌಪ್ಯವಾಗಿಯೇ ಉಳಿದಿದೆ.

ಮೊನ್ನೆ ಪ್ರಧಾನಿ ಮೋದಿ ಚೀನಾಗೆ ಭೇಟಿ ನೀಡಿದ ಹಿನ್ನೆಲೆಯಲ್ಲಿ ರಮ್ಯಾ ಟ್ವಿಟರ್‌ನಲ್ಲಿ ವಿಮರ್ಶಕಿಯಾಗಿ ಅವತಾರವೆತ್ತಿದ್ದಾರೆ. ಮೋದಿಯ ಒಂದು ವರ್ಷದ ಆಡಳಿತ ವೈಖರಿಯನ್ನು ಖಂಡಿಸಿ ಸಾಲುಸಾಲು ಟ್ವೀಟ್ ಸಂದೇಶ ರವಾನಿಸಿದ್ದಾರೆ ರಮ್ಯಾ. ಅವರು ಟ್ವೀಟ್ ಮಾಡಿದ ಹಲವು ಸಾಲುಗಳು ಹೀಗಿವೆ: "ಭಾರತದಲ್ಲಿ ಬುದ್ಧಿ, ಜಾಣ್ಮೆ, ಶಕ್ತಿ ಎಲ್ಲಾ ಇದೆ. ನಾವು ಸ್ವಾವಲಂಬಿಗಳಾಗಬಹುದು. ನಮಗೆ ಉತ್ತಮ ರಾಜನೀತಿಯ ಅವಶ್ಯಕತೆಯಿದೆ. ನೀವು ಮೇಕ್ ಇನ್ ಇಂಡಿಯಾಗಾಗಿ ಮೇಡ್ ಇನ್ ಇಂಡಿಯಾ ನಾಶ ಮಾಡುತ್ತಿದ್ದೀರಾ. ಚೀನೀಯರ ಜೊತೆ ಉತ್ತಮ ಸಂಬಂಧಕ್ಕಾಗಿ ಮೋದಿಯವರು ನಮ್ಮ ರೈತರು ತಲೆತಗ್ಗಿಸುವಂತೆ ಮಾಡಿದ್ದಾರೆ. ಮೇಕ್ ಇನ್ ಇಂಡಿಯಾದಿಂದ ಚೀನಾ ಉತ್ಪನ್ನಗಳಿಗೆ ಇನ್ನಷ್ಟು ಅನುಕೂಲವಾಗಲಿದೆ. ಆದಾಯ ಸುಂಕ ಕಡಿತಗೊಳಿಸಲಾಗಿದೆ. ಇದರಿಂದ ಚೀನಾದ ಉತ್ಪನ್ನಗಳ ಬೆಲೆ ಭಾರತದ ಉತ್ಪನ್ನಗಳ ಬೆಲೆಗಿಂತ ಕಮ್ಮಿಯಾಗುವುದಿಲ್ಲವೇ? ದೂರದೃಷ್ಟಿ ಇಲ್ಲದ ನಿಮ್ಮ ಯೋಜನೆಗಳು ಮುಂದಿನ ದಿನಗಳಲ್ಲಿ ರೈತರ ಮತ್ತು ಕೈಗಾರಿಕೆಯ ಸಂರಕ್ಷಣೆಗೆ ಮಾರಕವಾಗಲಿದೆ."

ಪರವಾಗಿಲ್ಲ ರಮ್ಯಾ ಅವರೇ? ಬಹಳಷ್ಟು ಕಾಂಗ್ರೆಸ್ ನಾಯಕರಿಗಿಂತ ನಿಮಗೇ ಹೆಚ್ಚಿನ ಅರಿವು ಇದ್ದಂತಿದೆ. ಕೀಪ್ ಇಟ್ ಅಪ್!



ದಾಖಲೆ ಬೆಲೆಗೆ 'ಬಾಹುಬಲಿ' ಆಡಿಯೋ ರೈಟ್ಸ್

ಎಂಪಿ 3 ಬಂದಾಗ ಧ್ವನಿಸುರುಳಿ ಮೂಲೆ ಗುಂಪಾಯಿತು, ಆನಂತರ ಅಂತರ್ಜಾಲ, ಡೌನ್‌ಲೋಡ್ ವ್ಯವಸ್ಥೆ ಬಂದಾಗ ಎಂಪಿ 3 ಕಾಣೆಯಾಯಿತು. ಇಂತಹ ಬೆಳವಣಿಗೆಯಿಂದ ಈಗ ಆಡಿಯೋ ಹಕ್ಕುಗಳಿಗೆ ಅಂತಹ ಬೆಲೆಯಿಲ್ಲ ಎನ್ನುವ ಮಾತಿದೆ. ಆದರೆ ಅಪರೂಪದ ದೊಡ್ಡ ದೊಡ್ಡ ಚಿತ್ರಗಳ ಆಡಿಯೋ ಹಕ್ಕಿಗೆ ಇವತ್ತಿಗೂ ಬೆಲೆಯಿದೆ ಎಂಬುದನ್ನು ಒಂದು ಪ್ರಕರಣ ಸಾಬೀತುಪಡಿಸಿದೆ.

ಇದು ಕನ್ನಡ ಚಿತ್ರೋದ್ಯಮಕ್ಕೆ ಸಂಬಂಧಪಟ್ಟ ವಿಚಾರವಲ್ಲ. ಆದರೆ ಕರ್ನಾಟಕ ಮೂಲದ ಎಸ್.ಎಸ್.ರಾಜಮೌಳಿ ನಿರ್ದೇಶನದ ಮತ್ತು ಕಿಚ್ಚ ಸುದೀಪ್ ನಟಿಸಿರುವ ಬಹುನಿರೀಕ್ಷಿತ 'ಬಾಹುಬಲಿ' ಎಂಬ ದ್ವಿಭಾಷಾ ಚಿತ್ರಕ್ಕೆ ಸಂಬಂಧಿಸಿದ್ದು, ಮತ್ತು ಕನ್ನಡದ ಪ್ರತಿಷ್ಠಿತ ಆಡಿಯೋ ಸಂಸ್ಥೆ ಲಹರಿ ರೆಕಾರ್ಡಿಂಗ್ ದಕ್ಷಿಣ ಭಾರತದ ಆಡಿಯೋ ರೈಟ್ಸ್ ಖರೀದಿ ವಿಚಾರದಲ್ಲಿ ಹೊಸ ದಾಖಲೆ ಬರೆದಿರುವುದರಿಂದಲೂ ಇದು ಮುಖ್ಯವಾಗುತ್ತದೆ.

ಈ ಚಿತ್ರದ ಆಡಿಯೋ ರೈಟ್ಸನ್ನು ಲಹರಿ ರೆಕಾರ್ಡಿಂಗ್ ಸಂಸ್ಥೆ ದಾಖಲೆ ಮೊತ್ತಕ್ಕೆ ತನ್ನದಾಗಿಸಿಕೊಂಡಿದೆ. ಈ ಹಿಂದೆ ಮಹೇಶ್ ಬಾಬು ಅಭಿನಯದ 'ನೇನೊಕ್ಕಡಿನೇ' ಚಿತ್ರದ ಆಡಿಯೋ ರೈಟ್ಸನ್ನು ಲಹರಿ ಸಂಸ್ಥೆ ಒಂದು ಕೋಟಿ ರೂಪಾಯಿಗೆ ತನ್ನದಾಗಿಸಿಕೊಂಡಿತ್ತು, ಅಲ್ಲದೇ, ಅಲ್ಲು ಅರ್ಜುನ್ ಅಭಿನಯದ 'ರೇಸ್ ಗುರ್ರಂ' ಚಿತ್ರದ ರೈಟ್ಸನ್ನು 75 ಲಕ್ಷಕ್ಕೆ ಖರೀದಿಸಿತ್ತು, ಆದರೆ ಈ ಬಾರಿ ಲಹರಿ ಸಂಸ್ಥೆ ಸುಮಾರು ಮೂರುವರೆ ಕೋಟಿ ರೂಪಾಯಿಗಳಿಗೆ 'ಬಾಹುಬಲಿ' ಆಡಿಯೋ ಹಕ್ಕುಗಳನ್ನು ತನ್ನದಾಗಿಸಿಕೊಂಡಿದೆ.



ಇದಕ್ಕೆ ಸಂಬಂಧಿಸಿದಂತೆ ಲಹರಿ ಸಂಸ್ಥೆಯ ಮುಖ್ಯಸ್ಥ ವೇಲು ಅವರು "ಬಾಹುಬಲಿ ಚಿತ್ರದ ಆಡಿಯೋ ರೈಟ್ಸ್ ಖರೀದಿಸಲು ಇತರೆ ಸಂಸ್ಥೆಗಳು ತೀವ್ರ ಪೈಪೋಟಿ ನಡೆಸಿದ್ದವು. ಭಾರೀ ಕ್ರೇಜ್ ಹುಟ್ಟುಹಾಕಿರುವ ದ್ವಿಭಾಷಾ ಚಿತ್ರವೊಂದರ ಆಡಿಯೋ ಖರೀದಿಸಿದ್ದು ನಮ್ಮ ಸಂಸ್ಥೆಗೂ ಒಂದು ಹೆಮ್ಮೆ" ಎಂದು ಸಂತೋಷ ವ್ಯಕ್ತಪಡಿಸಿದ್ದಾರೆ.

ಇದೇ ಚಿತ್ರದ ಉಪಗ್ರಹ ಪ್ರಸಾರದ ಹಕ್ಕುಗಳನ್ನು ಮಾ ಟಿವಿ ಇಪ್ಪತ್ತೈದು ಕೋಟಿಗೆ ತನ್ನದಾಗಿಸಿಕೊಂಡಿದೆ. ಎಂ.ಎಂ. ಕೀರವಾಣಿ ಈ ಚಿತ್ರಕ್ಕೆ ಸಂಗೀತ ನೀಡಿದ್ದು ಚಿತ್ರದ ಆಡಿಯೋ ಬಿಡುಗಡೆ ಸಮಾರಂಭ ಇದೇ ಭಾನುವಾರ (ಮೇ 31) ಹೈದರಾಬಾದಿನಲ್ಲಿ ಅದ್ದೂರಿಯಾಗಿ ನಡೆಯಲಿದೆ.

ಕಿರಿಕ್ ಚಂದನ್

'ಪ್ಯಾಟೆ ಮಂದಿ ಕಾಡಿಗೆ ಬಂದ್ರು' ಎಂಬ ರಿಯಾಲಿಟಿ ಶೋ ಮೂಲಕ ಕಿರುತೆರೆಗೆ ಎಂಟ್ರಿ ಕೊಟ್ಟು ಆನಂತರ ಜೀ ವಾಹಿನಿಯ 'ರಾಧ ಕಲ್ಯಾಣ' ಧಾರಾವಾಹಿಯ ಮೂಲಕ ಕಿರುತೆರೆಯ ಸ್ಟಾರ್ ಎನಿಸಿಕೊಂಡ ನಟ ಚಂದನ್ ಮತ್ತೊಮ್ಮೆ ತನ್ನ ಹಳೇ ಚಾಳಿಯನ್ನು ಶುರು ಹಚ್ಚಿಕೊಂಡಿದ್ದಾನೆ.

ವಿಷಯ ಏನಪ್ಪ ಅಂದರೆ ಇತ್ತೀಚೆಗೆ ನಿರ್ದೇಶಕರೊಬ್ಬರು ಸಿನಿಮಾ ಮಾಡಬೇಕು ಎಂದು ಚಂದನ್ ಬಳಿ ಹೋದರಂತೆ. ಆಗ ಚಂದನ್ ದುರಹಂಕಾರದಿಂದ ವರ್ತಿಸಿ "ಏನ್ರಿ ದರ್ಶನ್, ಸುದೀಪ್, ಯಶ್ ನನ್ನ ಮುಂದೆ ಏನೇನೂ ಅಲ್ಲಾ, ಅವರು ನನ್ನಷ್ಟು ಸುಂದರವಾಗಿದ್ದಾರಾ? ಪ್ರತಿ ದಿನ ಇಬ್ಬರು, ಮೂವರು ನಿರ್ದೇಶಕರು ನನ್ನ ಕಾಲ್‌ಶೀಟ್ ಕೇಳಿಕೊಂಡು ಬರುತ್ತಾರೆ. ನಾನು ಕೇಳಿದಷ್ಟು ಹಣ ಕೊಡುತ್ತಾರೆ, ನಾನು ಕೂಡ ದೊಡ್ಡ ಸ್ಟಾರ್ ಎಂಬುದನ್ನು ಮರೆಯಬೇಡಿ" ಎಂದು ಹೇಳಿ ಕಳುಹಿಸಿದನಂತೆ.



ಚಂದನ್ ಮಾತು ಕೇಳಿ ನಿರ್ದೇಶಕರು ದಂಗಾಗಿಹೋದರಂತೆ. ಚಿತ್ರರಂಗದಲ್ಲಿ ಇನ್ನೂ ಬೆಳೆಯುತ್ತಿರುವ ಈ ಹುಡುಗ ಈಗಲೇ ದೊಡ್ಡ ಸ್ಟಾರ್‌ಗಳ ಬಗ್ಗೆ ಮಾತನಾಡುವುದು ಎಷ್ಟು ಸರಿ? ಇಷ್ಟೇ ಅಲ್ಲದೇ ಚಂದನ್ ಶೂಟಿಂಗ್ ಸೆಟ್‌ನಲ್ಲಿ ಸ್ಟಾರ್ ನಟನಂತೆ ಧಿಮಾಕು ತೋರಿಸ್ತಾನೆ, ಡೈರೆಕ್ಟರ್ ಶಾಟ್‌ಗೆ ಕರೆದ್ರೂ ರೆಡಿಯಾಗಿ ಬರೋಕೆ ತುಂಬಾ ಸಮಯ ತೆಗೆದುಕೊಳ್ತಾನೆ, ಇನ್ನು ಅಸಿಸ್ಟೆಂಟ್, ಅಸೋಸಿಯೇಟ್ ಡೈರೆಕ್ಟರ್‌ಗಳಿಗೆ ಆತ ಕೊಡುವ ಮರ್ಯಾದೆ ಅಷ್ಟಕಷ್ಟೇ ಅಂತಿದ್ದಾರೆ ಚಂದನ್ ಜೊತೆ ಕೆಲಸ ಮಾಡಿದ ಜನ.

'ರಾಧ ಕಲ್ಯಾಣ' ಧಾರಾವಾಹಿಯ ಚಿತ್ರೀಕರಣಕ್ಕೆ ಸರಿಯಾದ ಸಮಯಕ್ಕೆ ಬರದೇ ಇರುವುದು, ಧಾರಾವಾಹಿ ಜನಪ್ರಿಯವಾಗಿರುವುದಕ್ಕೆ ತಾನೇ ಕಾರಣ ಎಂದು ಭ್ರಮಿಸಿ ತನಗೆ ಇಷ್ಟ ಬಂದಾಗ ಚಿತ್ರೀಕರಣಕ್ಕೆ ಬರುತ್ತೇನೆ ಎಂದು ಹೇಳಿ ನಿರ್ಮಾಪಕರೊಂದಿಗೆ ಕಿರಿಕ್ ಮಾಡಿಕೊಂಡಿದ್ದು, ಆ ಕಾರಣಕ್ಕೆ ಧಾರಾವಾಹಿಯಿಂದ ಹೊರ ಬಿದ್ದದ್ದು ಎಲ್ಲರಿಗೂ ಗೊತ್ತಿದೆ. ಆಮೇಲೆ ಎಲ್ಲೂ ಅವಕಾಶವಿಲ್ಲದೇ ಚಾನೆಲ್ ಅವರನ್ನು ಕಾಡಿಬೇಡಿ ಮಿಲನ ಪ್ರಕಾಶ್ ನಿರ್ಮಾಣದ ಧಾರಾವಾಹಿ 'ಲಕ್ಷ್ಮೀ ಬಾರಮ್ಮ'ದಲ್ಲಿ ಅವಕಾಶ ಗಿಟ್ಟಿಸಿಕೊ... ಅದೂ ಜನಪ್ರಿಯವಾಗುತ್ತಿದ್ದಂತೆ ಮತ್ತೆ ಹಳೇ ಚಾಳಿಯನ್ನು ಶುರುಹಚ್ಚಿಕೊ... ಕಡೆಗೆ ಪ್ರಕಾಶ್‌ರಿಂದಲೂ ಹೊರದಬ್ಬಿಸಿಕೊಂಡದ್ದೂ ಎಲ್ಲರಿಗೂ ಗೊ...

ಈಗ ಹಿರಿತೆರೆಯಲ್ಲಿ ಕಣ್ಣುಬಿಡಲು ಪ್ರಯತ್ನಿಸುತ್ತಿರುವಾಗಲೇ ... ರಂಪ ಮಾಡಿಕೊಳ್ಳುತ್ತಿರುವುದು ತನಗೇ ಒಳ್ಳೆಯದಲ್ಲ ಎಂದು ಬ... ಆದಷ್ಟು ಬೇಗ ಅರಿತರೆ ಆತನಿಗೇ ಕ್ಷೇಮ.

ದರ್ಶನ್-ಅರ್ಜುನ್ ಜಂಜಾ...

ನಟ ದರ್ಶನ್ ಸಾರ್ವಜನಿಕವಾಗಿ ಎಂದೂ ಕಾರಣವಿಲ್ಲದೆ ಯಾರ ಬ... ದೂರುವುದಿಲ್ಲ, 'ಐರಾವತ' ಚಿತ್ರದ ಬಗ್ಗೆ ಅಲ್ಲಲ್ಲಿ ವಿವಾದಗಳು ಶುರುವಾದ... ದರ್ಶನ್ ಪ್ರತಿಕ್ರಿಯಿಸದೆ ಸುಮ್ಮನಿದ್ದ ಕಲಾವಿದ. ಆದರೀಗ ಅವರೂ 'ಐರ... ಸಿನಿಮಾದ ನಿರ್ದೇಶಕ ಅರ್ಜುನ್ ವಿರುದ್ಧ ಬಾಯಿಬಿಟ್ಟಿದ್ದಾರೆ.

ಅರ್ಜುನ್ ಬಗ್ಗೆ ತಮ್ಮ ಅಸಮಾಧಾನವನ್ನು ಹೊರಹಾಕಿರುವ ದ... "ನನ್ನನ್ನು ಜೂನಿಯರ್ ನಟನ ಮಟ್ಟಕ್ಕೆ ಇಳಿಸಲಾಗಿದೆ. ನಿರ್ದೇಶಕರಿಗೆ ವ್ಯ... ಇಲ್ಲ, ಒಂದು ಕಮಿಟ್‌ಮೆಂಟ್ ಇಲ್ಲ, ತುಂಬಾ ದುರಹಂಕಾರಿಯಾದ ವ... ಅರ್ಜುನ್. ನಾನು, ನಮ್ಮ ನಿರ್ಮಾಪಕರು ನಿಜಕ್ಕೂ ಬಲಿಪಶುಗಳಾಗಿ... ಯಾವುದನ್ನೂ ಪ್ಲಾನ್ ಮಾಡದೆ ಅಂದುಕೊಂಡಹಾಗೆ ಚಿತ್ರಿಸದೆ ಬ... ಏರುತ್ತಲೇ ಇದೆ. ಸ್ಲೋವೇನಿಯದಲ್ಲಿ ಹಾಡಿನ ಚಿತ್ರೀಕರಣಕ್ಕೆ ಯೋ... ಹಾಕಿಕೊಳ್ಳಲಾಗಿತ್ತು. ಆದರೆ ನಾಯಕಿಯ ಡೇಟ್ಸ್ ಇಲ್ಲದ ಕಾರಣ ಅದು ಮುಂದಕ್ಕೆ ಹೋಗಿದೆ. ಅದರಲ್ಲಿ ಆಕೆಯದೇನೂ ತಪ್ಪಿಲ್ಲ. ಅನಾಮತ್ತು ಒಂದು ವರ್ಷ ಅವರು ಡೇಟ್ಸ್ ಕೊಟ್ಟಿದ್ದರು. ಆದರೆ ನಿರ್ದೇಶಕರು ಚಿತ್ರೀಕರಣ ಮಾಡುತ್ತಲೇ ಇದ್ದರೇ ಹೇಗೆ..?



ಆಕೆಯ ಸಂಭಾವನೆಗಿಂತ ಆಕೆಯ ಖರ್ಚೇ ಜಾಸ್ತಿಯಾಗಿದೆ. ಅನಂತ... ಅವರ ಚಿತ್ರೀಕರಣಕ್ಕೆ ಹತ್ತು ದಿನಗಳನ್ನು ಪಡೆದಿದ್ದರೂ ಅದನ್ನು ಮೂ... ದಿನಕ್ಕೆ ಏರಿಸಲಾಯಿತು. ಎಷ್ಟೋ ದಿನ ಕಲಾವಿದರನ್ನು ಕರೆಸಿ ಚಿತ್ರೀ... ಮಾಡದೆ ಸುಮ್ಮನೆ ಹಣ ಕೊಟ್ಟು ಕಳುಹಿಸಲಾಗಿದೆ. ಇನ್ನೂ ಹ... ಅವರಿಂದ ಇಂಟ್ರೊಡಕ್ಷನ್ ಹಾಡನ್ನು ಅರ್ಜುನ್ ಪಡೆದಿಲ್ಲ ಎಂಬುದು ... ವೃತ್ತಿಪರತೆಯನ್ನು ತೋರಿಸುತ್ತದೆ" ಎಂದಿದ್ದಾರೆ.

"ಸಂದೇಶ್ ನಾಗರಾಜ್ ನನ್ನ ಸ್ನೇಹಿತರು. ಹಾಗಾಗಿ ... ತಡೆದುಕೊಂಡಿದ್ದೇವೆ. ಇಲ್ಲವಾದಲ್ಲಿ ಈ ಪ್ರಾಜೆಕ್ಟನ್ನು ನಿಲ್ಲಿಸಿಬಿಡುವ ಸ... ಇತ್ತು" ಎಂದು ಹೇಳುತ್ತಾರೆ ದರ್ಶನ್. ಈ ಚಿತ್ರ ಮುಗಿಯಲಿಕ್ಕೆ ... ಮೂರು ಹಾಡು ಮತ್ತು ಒಂದು ಹೊಡೆದಾಟದ ಚಿತ್ರೀಕರಣ ಬಾಕಿ ...

ದರ್ಶನ್ ಹೇಳಿಕೆಗೆ ಸ್ಪಷ್ಟೀಕರಣ ನೀಡಿರುವ ಅರ್ಜುನ್ "ಚಿ... ನನ್ನಿಂದ ತಡವಾಗಿಲ್ಲ, ಯಾಕೆ ಈ ರೀತಿ ಸುದ್ದಿ ಹಬ್ಬಿಸುತ್ತಿದ್ದಾರೋ ... ಗೊತ್ತಿಲ್ಲ, ಚಿತ್ರದ ಮುಹೂರ್ತ ನಡೆದ ಆರು ತಿಂಗಳ ನಂತರ ಚಿತ್ರೀ... ಪ್ರಾರಂಭವಾಯಿತು. ಹತ್ತು ತಿಂಗಳ ಚಿತ್ರೀಕರಣದಲ್ಲಿ 45 ಭಾನುವಾರ ... 25 ದಿನ ಕಾರ್ಮಿಕರ ಒಕ್ಕೂಟದ ಪ್ರತಿಭಟನೆ ಇತ್ತು, 70 ದಿನ ಅದರಲ್ಲಿ... ಎಗರಿ ಹೋಗಿದೆ. ದರ್ಶನ್ ಅವರು ಹತ್ತು ದಿನ 'ಅಂಬರೀಶ' ... ಕಾಲ್‌ಶೀಟ್ ನೀಡಿದ್ದರು, 20 ದಿನ ವಿದೇಶ ಪ್ರವಾಸ ಮಾಡಿದ್ದಾರೆ. ಹ... ಒಟ್ಟು ಮೂವತ್ತು ದಿನ ಅಲ್ಲಿ ಕಳೆದುಹೋಗಿದೆ. ಒಟ್ಟಾರೆಯಾಗಿ ಹೆಚ್ಚುಕ... ನಾಲ್ಕು ತಿಂಗಳು ಹೀಗೆ ಕಳೆದುಹೋಗಿದೆ. ನಾನು ನೂರಿಪ್ಪತ್ತು ದಿನ ಚಿತ್ರೀ... ಮಾಡಿದ್ದೇನೆ ಮತ್ತದನ್ನು ಮೊದಲೇ ನಿರ್ಮಾಪಕರಿಗೆ ಹೇಳಿದ್ದೆ ಕೂಡ. ... ಸುಮ್ಮನೆ ನನ್ನ ಮೇಲೆ ಆರೋಪಗಳನ್ನು ಮಾಡುತ್ತಿದ್ದಾರೆ" ಎಂ... ಅವಲತ್ತುಕೊಂಡಿದ್ದಾರೆ.

ಹಾಗೆ ನೋಡಿದರೆ ಅರ್ಜುನ್ ನಿರ್ದೇಶಿಸಿದ ಎಲ್ಲಾ ಸಿನಿಮ... ನಿರ್ಮಾಪಕರದೂ ಇದೆ ಸಮಸ್ಯೆಯಾದ್ದರಿಂದ ಇಲ್ಲಿ ಅರ್ಜುನ್ ಅವರ ಮಾ... ಎಷ್ಟು ನಂಬಬೇಕು ಎಂಬುದು ಅವರವರ ವಿವೇಚನೆಗೆ ಬಿಟ್ಟದ್ದಾಗಿದೆ.

ಸಿನಿಮಾ ಮಾತ್ರ ಬೇಗ ಹೊರಗೆ ಬರಲಿ ಎಂಬುದು ದರ್ಶನ್ ಅಭಿಮಾನಿಗಳ ಆಶೆ.

ಸಿನಿಮಾ ಸು...
ಕಾರ್ತಿಕ್ ಸಿ....

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com